ಶುಕ್ರವಾರ, ಅಕ್ಟೋಬರ್ 31, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 300 | ಪುಟ 14
prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಜಾಗೃತಿ ಓಟ’
ಮಿದುಳಿನ ಕ್ಯಾನ್ಸರ್‌ನಿಂದ ಬಳಲುತ್ತಿರುವ ಇಂಗ್ಲೆಂಡ್‌ನ ಜಾಕ್‌ಫೈಂಟ್ ಅವರು ಕಾಶ್ಮೀರದಿಂದ ಕನ್ಯಾಕುಮಾರಿಗೆ ‘ಜಾಗೃತಿ ಓಟ’ ನಡೆಸುತ್ತಿದ್ದು, ಗುರುವಾರ ಬೆಂಗಳೂರಿಗೆ ತಲುಪಿದ್ದಾರೆ

ಸಿಜೆಐ ನೇಮಕ
ನ್ಯಾಯಮೂರ್ತಿ ಸೂರ್ಯ ಕಾಂತ್ ಅವರನ್ನು ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸಲಾಗಿದೆ

ಸೆನ್ಸೆಕ್ಸ್ 84,404 | ನಿಫ್ಟಿ 25,877 | $/₹ 88.69 | ಚಿನ್ನ (Std. 10g) ₹1,24,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,55,500 (ಬೆಂಗಳೂರು)

ಅಂತ್ಯ ಸಂಸ್ಕಾರಕ್ಕೆ ಅಡಿಗಡಿಗೂ ಲಂಚ

ಬೆಂಗಳೂರು: ಪುತ್ರಿಯ ಮೃತದೇಹ ಸಾಗಿಸಲು ಹಾಗೂ ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟ ಸಂಕಷ್ಟ ಹಾಗೂ ಆಂಬುಲೆನ್ಸ್ ಚಾಲಕ, ಪೊಲೀಸರು, ಸ್ಮಶಾನದ ಸಿಬ್ಬಂದಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳಿಂದ ಅನುಭವಿಸಿದ ನೋವು ಹಾಗೂ ಸಿಬ್ಬಂದಿ ಹಣಕ್ಕೆ ಬೇಡಿಕೆಯಿಟ್ಟ ಬಗೆಯನ್ನು ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಸಿಎಫ್‌ಒ ಕೆ.ಶಿವಕುಮಾರ್ ಅವರು ‘ಲಿಂಕ್ಡ್‌ಇನ್’ನಲ್ಲಿ ಎಳೆಎಳೆಯಾಗಿ ತೆರೆದಿಟ್ಟಿದ್ದಾರೆ.

ವಿವರ ▸6

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹಾನಿ: ₹1,545 ಕೋಟಿಗೆ ಮೊರೆ

ಮಳೆ, ಪ್ರವಾಹದಿಂದ ನಷ್ಟ
• ಕೇಂದ್ರದ ನೆರವು ಕೋರಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಎಚ್‌.ಕೆ.ಪಾಟೀಲ

ಬೆಂಗಳೂರು: ಈ ಬಾರಿಯ ನೈರುತ್ಯ ಮುಂಗಾರು ವೇಳೆ ಮಳೆ ಮತ್ತು ಪ್ರವಾಹದಿಂದಾಗಿ ಮೂಲಸೌಕರ್ಯಕ್ಕೆ ಭಾರಿ ಪ್ರಮಾಣದ ಹಾನಿಯಾಗಿದ್ದು, ಅವುಗಳ ಪುನರ್ ನಿರ್ಮಾಣಕ್ಕಾಗಿ ಕೇಂದ್ರದಿಂದ ₹1,545 ಕೋಟಿ ಆರ್ಥಿಕ ನೆರವು ಕೇಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.



ಮೂಲಸೌಕರ್ಯಗಳ ಪುನರ್‌ನಿರ್ಮಾಣಕ್ಕಾಗಿ ಇದೇ ಮೊದಲ ಬಾರಿ ಕೇಂದ್ರದಿಂದ ಆರ್ಥಿಕ ನೆರವಿಗೆ ಮನವಿ ಮಾಡಲಾಗುತ್ತಿದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮಳೆ ಮತ್ತು ಪ್ರವಾಹದಿಂದಾಗಿ ರಸ್ತೆ, ಸೇತುವೆಗಳು, ಚೆಕ್‌ಡ್ಯಾಂ, ಕಟ್ಟಡಗಳು ಹಾನಿಗೀಡಾಗಿವೆ. ಇದರ ಮೌಲ್ಯ ₹5,000 ಕೋಟಿ ಆಗುತ್ತದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ (ಎನ್‌ಡಿಆರ್‌ಎಫ್) ಮಾನದಂಡದಡಿ ₹1,545 ಕೋಟಿ ಆರ್ಥಿಕ ನೆರವು ಕೇಳಲು ತೀರ್ಮಾನಿಸಿದ್ದೇವೆ. ಬೆಳೆ ಹಾನಿಗೆ ಪರಿಹಾರ ನೀಡುವಂತೆ ಈಗಾಗಲೇ ಪ್ರತ್ಯೇಕ ಮನವಿ ಸಲ್ಲಿಸಲಾಗಿದೆ. ಬೆಳೆ ಹಾನಿಯ ಪ್ರಮಾಣದ ಬಗ್ಗೆ ಕೇಂದ್ರ ಮತ್ತು ರಾಜ್ಯದ ಜಂಟಿ ಸಮೀಕ್ಷೆ ನಡೆದಿದೆ. 14.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. ಪರಿಹಾರಕ್ಕಾಗಿ ₹1,543 ಕೋಟಿ ಅಗತ್ಯವಿದೆ’ ಎಂದು ಅವರು ವಿವರಿಸಿದರು.

‘ಎನ್‌ಡಿಆರ್‌ಎಫ್‌ನ ಚೇತರಿಕೆ ಮತ್ತು ಪುನರ್‌ನಿರ್ಮಾಣ ಗವಾಕ್ಷಿ ಅಡಿ (ಪಿಡಿಎನ್‌ಎ) ಜಿಲ್ಲಾ ಮತ್ತು ವಿಭಾಗವಾರು ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಮೌಲ್ಯಮಾಪನ ನಡೆಸಲಾಗಿದೆ. ಶೀಘ್ರದಲ್ಲೇ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಪುನರ್‌ನಿರ್ಮಾಣ ಮತ್ತು ಪುನರ್‌ವಸತಿ (ಆರ್ ಆ್ಯಂಡ್ ಆರ್) ನಿಧಿಗಳನ್ನು ಅನುಮೋದಿಸಿದ ನಂತರ, ನಿರ್ದಿಷ್ಟಪಡಿಸಿದ ವೆಚ್ಚ ಹಂಚಿಕೆ ಮಾದರಿಗೆ ಅನುಗುಣವಾಗಿ ರಾಜ್ಯ ನಿಧಿಯಿಂದ ಪುನರ್‌ನಿರ್ಮಾಣ ಮತ್ತು ಪುನರ್‌ವಸತಿ ವೆಚ್ಚವನ್ನು ಹಂಚಿಕೊಳ್ಳಲು ತೀರ್ಮಾನಿಸಲಾಗಿದೆ’ ಎಂದು ಪಾಟೀಲ ತಿಳಿಸಿದರು. ▸6

ಸಂಪುಟ ಸಭೆಯಲ್ಲಿ ಮಾತಿನ ಚಕಮಕಿ



‘ಪರಿಶಿಷ್ಟ ಜಾತಿ ವಿಶೇಷ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯ (ಎಸ್‌ಸಿಎಸ್‌ಪಿ–ಟಿಎಸ್‌ಪಿ) ಅನುದಾನವನ್ನು ಸಮರ್ಪಕವಾಗಿ ಹಂಚಿಕೆ ಮಾಡುತ್ತಿಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರು ಸಂಪುಟ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ವಿಷಯ ಪ್ರಸ್ತಾಪ ಆದಾಗ, ಗಂಗಾ ಕಲ್ಯಾಣ ಯೋಜನೆ ಅನುಷ್ಠಾನ ಅನಗತ್ಯವಾಗಿ ವಿಳಂಬವಾಗುತ್ತಿದೆ ಎಂದು ಮಹದೇವಪ್ಪ ಹೇಳಿದರು. ಅದಕ್ಕೆ ಪ್ರತಿಕ್ರಿಯಿಸಿದ ಇಂಧನ ಸಚಿವ ಕೆ.ಜೆ.ಜಾರ್ಜ್, ‘ಯೋಜನಾ ವೆಚ್ಚ ಜಾಸ್ತಿ ಆಗುತ್ತಿದ್ದು, ಇಲಾಖೆಯ ಮೇಲೆ ಹೊರೆ ಆಗುತ್ತಿದೆ’ ಎಂದು ತಿರುಗೇಟು ನೀಡಿದರು.

‘ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಕೆ ಆಗುತ್ತಿದೆಯಲ್ಲವೇ? ಆದರೂ ಹೇಗೆ ಹೊರೆ ಆಗುತ್ತದೆ’ ಎಂಬ ವಿಷಯದ ಕಡೆಗೆ ಚರ್ಚೆ ಹೊರಳಿದ್ದರಿಂದಾಗಿ, ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯಿತು ಎಂದು ಗೊತ್ತಾಗಿದೆ.

ನೋಂದಣಿ ಸೇವೆಗೆ ‘ಕಾವೇರಿ ಐಟಿ ಸೆಲ್’

ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ‘ಕಾವೇರಿ ಐಟಿ ಸೆಲ್’ ಹೆಸರಿನ ಇನ್–ಹೌಸ್ ತಾಂತ್ರಿಕ ಅಭಿವೃದ್ಧಿ ವಿಭಾಗವನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಐಟಿ ಸೆಲ್ ಅನ್ನು ಹೊರಗುತ್ತಿಗೆ ಮೂಲಕ ನಿರ್ವಹಣೆ ಮಾಡಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಐಟಿ ಸೆಲ್ ಸ್ಥಾಪನೆಗೆ ₹69.13 ಕೋಟಿ ವೆಚ್ಚವಾಗಲಿದೆ. ಈಗ ನೋಂದಣಿ ಸೇವೆಗಳಿಗೆ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (ಸಿಎಸ್‌ಜಿ) ಸಂಸ್ಥೆ ಅಭಿವೃದ್ಧಿಪಡಿಸಿ ನಿರ್ವಹಿಸುತ್ತಿರುವ ಕಾವೇರಿ–2.0 ತಂತ್ರಾಂಶವನ್ನು ಅವಲಂಬಿಸಲಾಗಿದೆ. ಕಾವೇರಿ–2.0 ತಂತ್ರಾಂಶದ ನಿರಂತರ ಅಭಿವೃದ್ಧಿ, ನಿರ್ವಹಣೆ ಮತ್ತು ಬಲವರ್ಧನೆಗೆ ‘ಇನ್ ಹೌಸ್ ಕಾವೇರಿ ಐಟಿ ಸೆಲ್’ ಸ್ಥಾಪಿಸುವ ಅಗತ್ಯವಿದೆ ಎಂದು ಅವರು ಹೇಳಿದರು. ▸6

70 ಸಾಧಕರಿಗೆ ರಾಜ್ಯೋತ್ಸವ ಗರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಮಾಜವಾದಿ ಹೋರಾಟಗಾರ ಕೋಣಂದೂರು ಲಿಂಗಪ್ಪ, ಪೌರಕಾರ್ಮಿಕ ಮಹಿಳೆ ಫಕೀರಿ, 103 ವರ್ಷದ ಸೂಲಗಿತ್ತಿ ಈರಮ್ಮ, ನಟ ಪ್ರಕಾಶ್ ರಾಜ್, ಸಾಹಿತಿಗಳಾದ ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ಯಕ್ಷಗಾನ ಕ್ಷೇತ್ರದ ಕೆ.ಪಿ. ಹೆಗಡೆ ಹಾಗೂ ಏರ್ ಮಾರ್ಷಲ್ ಫಿಲಿಪ್ ರಾಜಕುಮಾರ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 70 ಸಾಧಕರು 2025-26ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿಗೆ ಅರ್ಹರಾದವರ ಪಟ್ಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಗುರುವಾರ ಪ್ರಕಟಿಸಿದರು.

ಚೌಡಿಕೆ ವಾದಕ ಬಸಪ್ಪ ಭರಮಪ್ಪ ಚೌಡ್ಕಿ, ಡೊಳ್ಳು ಕಲಾವಿದ ಬಿ. ಟಾಕಪ್ಪ ಕಣ್ಣೂರು, ದೈವಾರಾಧನೆಯ ಹಾಡುಗಳಲ್ಲಿ ಪ್ರಸಿದ್ಧರಾದ ಸಿಂಧು ಗುಜರನ್, ನಂದಿಧ್ವಜ ಕಲಾವಿದ ಎಲ್. ಮಹಾದೇವಪ್ಪ ಉಡಿಗಾಲ, ಕಥೆಗಾರ ತುಂಬಾಡಿ ರಾಮಯ್ಯ, ಭರತನಾಟ್ಯ ನಟುವಾಂಗ ಕಲಾವಿದ ಕೆ. ರಾಮಮೂರ್ತಿ ರಾವ್, ನಟಿ ವಿಜಯಲಕ್ಷ್ಮಿ ಸಿಂಗ್, ನಟ ನಿರ್ದೇಶಕ ಮೈಮ್ ರಮೇಶ್, ಶಿಕ್ಷಣ ಕ್ಷೇತ್ರದಿಂದ ಎಂ.ಆರ್. ಜಯರಾಮ್ ಅವರೂ ಪಟ್ಟಿಯಲ್ಲಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದವರಲ್ಲಿ 13 ಮಂದಿ ಮಹಿಳಾ ಸಾಧಕರಿದ್ದಾರೆ. ಪ್ರಶಸ್ತಿಯು ₹5 ಲಕ್ಷ ನಗದು, 25 ಗ್ರಾಂ ಚಿನ್ನ ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ನ. 1ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

‘ರಾಜ್ಯೋತ್ಸವ ಪ್ರಶಸ್ತಿಗೆ ಪ್ರತಿ ವರ್ಷ ಅರ್ಜಿ ಆಹ್ವಾನಿಸಲಾಗುತ್ತಿತ್ತು. ಆದರೆ, ಈ ಬಾರಿ ಅರ್ಜಿ ಆಹ್ವಾನಿಸಿಲ್ಲ. ಆಯ್ಕೆ ಸಮಿತಿ ಅರ್ಹ ಸಾಧಕರನ್ನು ಗುರುತಿಸಿದೆ. ಮೊದಲ ಬಾರಿಗೆ ಅರ್ಜಿ ಕರೆಯದೆ ಒಟ್ಟು 70 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪೈಕಿ ಕೆಲವರು ಸ್ವಯಂ ಮನವಿ ನೀಡಿದ್ದರು. ಅಂಥವರು ಪ್ರಶಸ್ತಿಗೆ ಅರ್ಹರಿದ್ದ ಕಾರಣ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದು ತಂಗಡಗಿ ತಿಳಿಸಿದರು. ▸6

ಉಮಾಶ್ರೀಗೆ ರಾಜಕುಮಾರ್ ಪ್ರಶಸ್ತಿ

ಬೆಂಗಳೂರು: ರಾಜ್ಯ ಸರ್ಕಾರವು 2019ನೇ ಸಾಲಿನ ಚಲನಚಿತ್ರ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಚಲನಚಿತ್ರ ರಂಗದಲ್ಲಿನ ಜೀವಮಾನ ಸಾಧನೆಗೆ ನೀಡಲಾಗುವ ‘ಡಾ.ರಾಜಕುಮಾರ್ ಪ್ರಶಸ್ತಿ’ಗೆ ಹಿರಿಯ ನಟಿ ಉಮಾಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ. ▸6

ಫೈನಲ್‌ಗೆ ಭಾರತ

ನವಿ ಮುಂಬೈ: ಜೆಮಿಮಾ ರಾಡ್ರಿಗಸ್ (ಔಟಾಗದೇ 127;134ಎ) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (89;88ಎ) ಅವರ ಬ್ಯಾಟಿಂಗ್ ನೆರವಿನಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ನವಿ ಮುಂಬೈನಲ್ಲಿ ಗುರುವಾರ ನಡೆದ ಎರಡನೇ ಸೆಮಿಫೈನಲ್‌ನಲ್ಲಿ ಏಳು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿ ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಫೈನಲ್ ಪ್ರವೇಶಿಸಿತು. ಭಾರತ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

- ಮಹಿಳಾ ಏಕದಿನ ಕ್ರಿಕೆಟ್‌ನಲ್ಲಿ ವಿಶ್ವದಾಖಲೆ ಮೊತ್ತ ಚೇಸ್ ಮಾಡಿದ ಹರ್ಮನ್‌ಪ್ರೀತ್ ಬಳಗ
- 2005 ಮತ್ತು 2017ರ ಬಳಿಕ ಮೂರನೇ ಬಾರಿ ಫೈನಲ್‌ಗೆ ಭಾರತ ತಂಡ

- ಆಸ್ಟ್ರೇಲಿಯಾ: 49.5 ಓವರ್‌ಗಳಲ್ಲಿ 338
- ಭಾರತ : 48.3 ಓವರ್‌ಗಳಲ್ಲಿ 5 ಕ್ಕೆ 341
- ಫಲಿತಾಂಶ: ಭಾರತಕ್ಕೆ 5 ವಿಕೆಟ್‌ಗಳ ಜಯ

▸12

ಧರ್ಮಸ್ಥಳ: ಎಸ್‌ಐಟಿಗೆ ಮಧ್ಯಂತರ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳದ ಆಜುಬಾಜಿನ ಸ್ಥಳಗಳಲ್ಲಿ ನೂರಾರು ಅನಾಮಧೇಯ ಹೆಣ್ಣು ಮಕ್ಕಳ ಮೃತ ದೇಹಗಳನ್ನು ಕಾನೂನುಬಾಹಿರ-ವಾಗಿ ದಫನ್ ಮಾಡಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸುತ್ತಿದ್ದ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನಮ್ಮ ವಿರುದ್ಧ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಜೆಎಂಎಫ್‌ಸಿ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆಯನ್ನು ಸಮಾಪ್ತಿಗೊಳಿಸಲು ಆದೇಶಿಸಬೇಕು’ ಎಂದು ಕೋರಿ ಗಿರೀಶ್ ಮಟ್ಟೆಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಟಿ.ಜಯಂತ್ ಮತ್ತು ವಿಠ್ಠಲ ಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ವಿಡಿಯೊ ಮುಖಾಂತರ ಹಾಜರಾದ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್. ಬಾಲಕೃಷ್ಣನ್ ಹಾಗೂ ದೀಪಕ್ ಖೋಸ್ಲಾ, ‘ಅರ್ಜಿದಾರರ ವಿರುದ್ಧದ ಆರೋಪಗಳು ಸಂಜ್ಞೇಯ ಅಪರಾಧಗಳ ವ್ಯಾಪ್ತಿಗೆ ಒಳಪಡುವುದಿಲ್ಲ. ಇವರು ಆರೋಪಿಗಳೂ ಅಲ್ಲ, ಸಾಕ್ಷಿಗಳೂ ಅಲ್ಲ. ಈಗಾಗಲೇ 9 ಬಾರಿ ಪೊಲೀಸ್ ನೋಟಿಸ್ ಜಾರಿಗೊಳಿಸಿ ವಿಚಾರಣೆ ನಡೆಸಲಾಗಿದೆ. ಎಸ್‌ಐಟಿಯ ಮುಖ್ಯ ತನಿಖಾಧಿಕಾರಿ ಇದೇ 24ರಂದು ವಾಟ್ಸ್ ಆ್ಯಪ್ ಮಾಧ್ಯಮದ ಮುಖಾಂತರ ಅರ್ಜಿದಾರರಿಗೆ ಬಿಎನ್‌ಎಸ್‌ಎಸ್ ಕಲಂ 35(3) ಅಡಿಯಲ್ಲಿ ನೋಟಿಸ್ ಜಾರಿಗೊಳಿಸಿದ್ದಾರೆ’ ಎಂದು ಆಕ್ಷೇಪಿಸಿದರು. ▸5

ಪೊಲೀಸ್ ನೋಟಿಸ್ ಪ್ರಶ್ನಿಸಿದ ಅರ್ಜಿ



ಮುಂದುವರಿದ ತನಿಖೆಯ ಅನುಸಾರ ಅರ್ಜಿದಾರರ ವಿರುದ್ಧ ಭಾರತೀಯ ನ್ಯಾಯ ಸಂಹಿತಾ–2023ರ ಕಲಂ 211(ಎ), 336, 230, 231, 229, 227, 228, 240, 236, 233 ಮತ್ತು 248ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಸಂಬಂಧ ಎಸ್‌ಐಟಿ ಮುಖ್ಯ ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅರ್ಜಿದಾರರಿಗೆ ನೋಟಿಸ್ ಜಾರಿಗೊಳಿಸಿದ್ದರು. ▸5

ಇಷ್ಟೊಂದು ಪೊಲೀಸ್ ನೋಟಿಸ್ ಏಕೆ ಕೊಟ್ಟಿದ್ದೀರಾ? ಪ್ರತಿದಿನಾ ಒಂದೊಂದು ನೋಟಿಸ್ ನೀಡಿರುವುದು ಏಕೆ?
ನ್ಯಾಯಮೂರ್ತಿ ಮೊಹಮ್ಮದ್ ನವಾಜ್

ಚಿತ್ತಾಪುರ: ನ.5ರಂದು ಪುನಃ ಶಾಂತಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ನಡೆಸಲು ಉದ್ದೇಶಿಸಿರುವ ಪಥಸಂಚಲ-ನಕ್ಕೆ ಅನುಮತಿ ನೀಡುವ ಸಂಬಂಧ ನವೆಂಬರ್ 5ರಂದು ಮತ್ತೊಮ್ಮೆ ಶಾಂತಿ ಸಭೆ ನಡೆಸಿ ನಿರ್ಧಾರ ಕೈಗೊಳ್ಳಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಪಥಸಂಚಲನಕ್ಕೆ ಅನುಮತಿ ನಿರಾಕರಿಸಿದ್ದ ತಹಶೀಲ್ದಾರ್ ಕ್ರಮ ಪ್ರಶ್ನಿಸಿ ಪಥಸಂಚಲನದ ಸಂಚಾಲಕರೂ ಆದ ಚಿಂಚೋಳಿಯ ಹಿರಿಯ ನಾಗರಿಕ ಅಶೋಕ್ ಪಾಟೀಲ್ (70) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ (ಕಲಬುರಗಿ) ಗುರುವಾರ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ನವೆಂಬರ್ 5ರಂದು ಸಂಜೆ 5 ಗಂಟೆಗೆ ಹೈಕೋರ್ಟ್‌ನ ಬೆಂಗಳೂರು ಪ್ರಧಾನ ಪೀಠದಲ್ಲಿರುವ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಪುನಃ ಶಾಂತಿ ಸಭೆ ನಡೆಸಬೇಕು. ಈ ಸಭೆಗೆ ಸಂಬಂಧಿಸಿದ ಅರ್ಜಿದಾರರು ಮತ್ತು ಅವರ ಪರ ವಕೀಲರು ಭಾಗವಹಿಸಬೇಕು’ ಎಂದು ಆದೇಶಿಸಿ ವಿಚಾರಣೆಯನ್ನು ನವೆಂಬರ್ 7ಕ್ಕೆ ಮುಂದೂಡಿತು.

ಕೆ.ಶಶಿಕಿರಣ್ ಶೆಟ್ಟಿ ವಾದ: ಹೈಕೋರ್ಟ್ ಆದೇಶದಂತೆ ಸಭೆ ಆಯೋಜಿಸಲಾಗಿತ್ತು. ಆದರೆ, ಅರ್ಜಿದಾರರೇ ಗೈರಾಗಿದ್ದರು. ಹಾಗಾಗಿ, ಏನೂ ತೀರ್ಮಾನ ಕೈಗೊಳ್ಳಲು ಆಗಿಲ್ಲ. ಸಭೆಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಆದರೆ, ಅರ್ಜಿದಾರರು ಸಹಕಾರ ನೀಡದೆ ಇದೀಗ ಕೇಂದ್ರ ಸರ್ಕಾರವನ್ನೂ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಮಾಡಲು ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಅವರ ನಡೆ ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ. ರಾಜ್ಯ ಸರ್ಕಾರ ಈ ಪ್ರಕರಣಕ್ಕೆ ಅಂತಿಮ ಪರಿಹಾರ ಕಂಡುಕೊಳ್ಳಲು ತವಕಿಸುತ್ತಿದೆ. ಅಗತ್ಯವಿದ್ದಲ್ಲಿ ಮತ್ತೊಂದು ದಿನ ಸಭೆ ಆಯೋಜಿಸಲಾಗುವುದು.

ಅರುಣ್ ಶ್ಯಾಮ್ ಪ್ರತಿವಾದ: ಅಕ್ಟೋಬರ್ 24ರಂದು ನಡೆದ ಸಭೆಗೆ ಅನುಮತಿ ಕೋರಿರುವ ಅರ್ಜಿದಾರರ ಪ್ರತಿನಿಧಿ ಹಾಜರಾಗಿದ್ದರು. ಅರ್ಜಿದಾರರ ಸಂಬಂಧಿಯ ಸಾವು ಸಂಭವಿಸಿದ್ದ ಕಾರಣ ಅವರು ಸಭೆಗೆ ಹಾಜರಾಗಿಲ್ಲ. ಸೀಮಿತ ಅವಧಿಯಲ್ಲಿಯೇ ಪಥಸಂಚಲನ ನಡೆಸಲು ಅನುಮತಿ ಬೇಕಾಗಿದೆ. ಇತರೆ ಸಂಘಟನೆಗಳು ರ್‍ಯಾಲಿ ನಡೆಸುವುದಕ್ಕೆ ನಮಗೆ ಯಾವುದೇ ಆಕ್ಷೇಪಣೆ ಇಲ್ಲ.

ನ್ಯಾಯಪೀಠ ಹೇಳಿದ್ದು: ಶಾಂತಿಯುತ ಪರಿಹಾರಕ್ಕಾಗಿ ಸಭೆ ನಡೆಸಿ ಹಾಜರಾಗಿ ಎಂದು ಸೂಚಿಸಲಾಗಿತ್ತು. ಅರ್ಜಿ ಸಲ್ಲಿಸಿದವರೇ ಸಭೆಗೆ ಹಾಜರಾಗಬೇಕಿತ್ತು. ಅವರ ಬದಲಾಗಿ ಇತರರು ಹಾಜರಾಗಿ ಹೇಳಿಕೆ ನೀಡುವುದು ಸರಿಯಾಗುವುದಿಲ್ಲ. ಗೊಂದಲ ಪರಿಹರಿಸುವುದು ನ್ಯಾಯಾಲಯದ ಉದ್ದೇಶವಾಗಿದೆ.



ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ರಾಜ್ಯೋತ್ಸವ ಕಾರ್ಯಕ್ರಮ 1,700 ಮಕ್ಕಳು ಭಾಗಿ

ಬೆಂಗಳೂರು: ರಾಜಧಾನಿಯಲ್ಲಿ ನಡೆಯಲಿರುವ ಕನ್ನಡ ರಾಜ್ಯೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಯ 700 ಮಕ್ಕಳೂ ಸೇರಿ 1,700 ಶಾಲಾ ಮಕ್ಕಳು ಭಾಗಿಯಾಗುತ್ತಿದ್ದಾರೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ನ.1ರಂದು ನಡೆಯುವ ಕನ್ನಡ ರಾಜ್ಯೋತ್ಸವ ಸಮಾರಂಭದ ಸಿದ್ಧತೆಗಳನ್ನು ಗುರುವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿಭಿನ್ನವಾಗಿ ರೂಪಿಸಲಾಗಿದೆ. ಹಿಂದಿನ ವರ್ಷ 1,100 ಮಕ್ಕಳು ಭಾಗಿಯಾಗಿದ್ದರು. ಈ ಬಾರಿ 1,700 ಮಕ್ಕಳು ಭಾಗವಹಿಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿರುವರು. ಮುಖ್ಯಮಂತ್ರಿ ಅವರು ಶಾಲಾ ಶಿಕ್ಷಣ ಇಲಾಖೆಯ ಹಲವು ವಿಶೇಷ ಕಾರ್ಯಕ್ರಮವನ್ನು ಘೋಷಣೆ ಮಾಡುವರು' ಎಂದರು.

ಸರ್ಕಾರಿ ಶಾಲೆಗಳಲ್ಲಿ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದರಿಂದ ಶಿಕ್ಷಕರು ಪರಿಹಾರ ಬೋಧನಾ ತರಗತಿಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗಿದೆ. ನ.14ರಂದು ಮಕ್ಕಳ ದಿನಾಚರಣೆಯ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅಂದು ಶಾಲೆಗಳ ಪ್ರವೇಶ ಪ್ರಚಾರಕ್ಕೆ ಚಾಲನೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ವಿಚಕ್ಷಣ ಜಾಗೃತಿ ಸಪ್ತಾಹ

ಬೆಂಗಳೂರು: ವಿಚಕ್ಷಣ ಜಾಗೃತಿ ಸಪ್ತಾಹ ಅಂಗವಾಗಿ ಕೆನರಾ ಬ್ಯಾಂಕ್ ವತಿಯಿಂದ ವಾಕಥಾನ್ ಆಯೋಜಿಸಲಾಗಿತ್ತು.

ಬಸವನಗುಡಿಯ ನೆಟ್ಟಕಲ್ಲಪ್ಪ ವೃತ್ತದ ದ್ವಾರಕನಾಥ ಭವನದ ಬಳಿ ಬೆಳಿಗ್ಗೆ 7 ಗಂಟೆಗೆ ವಾಕಥಾನ್‌ಗೆ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಸತ್ಯನಾರಾಯಣ ರಾಜು ಚಾಲನೆ ನೀಡಿದರು. ಕೇಂದ್ರ ಕಚೇರಿ ಮತ್ತು ಇತರ ಶಾಖೆಗಳ ಅಧಿಕಾರಿಗಳು, ಉದ್ಯೋಗಿಗಳು 3 ಕಿಲೋ ಮೀಟರ್ ವಾಕಥಾನ್‌ನಲ್ಲಿ ಭಾಗವಹಿಸಿ, ಸಾರ್ವಜನಿಕ ಸೇವೆಯಲ್ಲಿ ಸಮಗ್ರತೆಯ ಸಂದೇಶ ರವಾನಿಸಿದರು.

'ಹೆಣ್ಣುಮಕ್ಕಳಿಗೆ ಬದುಕು ಕೊಟ್ಟ ಸೇವಾಶ್ರಮ'

ಜಾತಿ, ಮತ, ಪಂಥವಿಲ್ಲದೆ ಆಸರೆ ನೀಡಿದ ಆಶ್ರಮ: ಕೇಂದ್ರ ಸಚಿವ ವಿ.ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾ ವಿಚಾರದಲ್ಲಿ ಸುಮಂಗಲಿ ಸೇವಾಶ್ರಮ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತದೆ. ಜಾತಿ, ಮತ, ಪಂಥವಿಲ್ಲದೆ ಹೆಣ್ಣುಮಕ್ಕಳ ಕಣ್ಣೀರು ಒರೆಸಿ, ಆಸರೆ ನೀಡಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದಲ್ಲಿ ಗುರುವಾರ ನಡೆದ ಸುಮಂಗಲಿ ಸೇವಾಶ್ರಮದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ಮತ್ತು ಕಾಂತಮ್ಮ ಅವರ ಸೇವೆಗೆ ಬೆಲೆಕಟ್ಟಲಾಗದು. ದುರ್ಬಲರಿಗೆ ಆಸರೆ ನೀಡಿ ಅಕ್ಕರೆ ತೋರಿದ್ದಾರೆ. ಆದಿವಾಸಿಗಳ ಹೆಣ್ಣುಮಕ್ಕಳಿಗೂ ಬದುಕು ಕಟ್ಟಿಕೊಟ್ಟಿದ್ದಾರೆ. ಅಲ್ಲದೇ ಎಚ್‌ಐವಿ ಪೀಡಿತ ಮಕ್ಕಳಿಗಾಗಿಯೇ ದೂರ ದೃಷ್ಟಿಯೋಜನೆಯನ್ನು ಸೇವಾಶ್ರಮದವರು ರೂಪಿಸಿದ್ದಾರೆ ಎಂದು ಶ್ಲಾಘಿಸಿದರು.

'ಕೇಂದ್ರ ಸರ್ಕಾರ ಪದ್ಮಭೂಷಣ, ಪದ್ಮವಿಭೂಷಣ, ಪದ್ಮಶ್ರೀ ಸೇರಿದಂತೆ ಹಲವು ಪ್ರಶಸ್ತಿಗಳನ್ನು ನೀಡುತ್ತಿದೆ. ಇಂತಹ ಅತ್ಯುನ್ನತ ಪ್ರಶಸ್ತಿಗಳಿಗೆ ಸುಮಂಗಲಿ ಸೇವಾಶ್ರಮ ಅರ್ಹವಾಗಿದೆ. ಈ ಹಿಂದೆ ಶಿಫಾರಸುಗಳಿಗೆ ಪ್ರಶಸ್ತಿಗಳನ್ನು ನೀಡಲಾಗುತ್ತಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಸಾಧಕರನ್ನು ಹುಡುಕಿ, ಗುರುತಿಸಿ ಪ್ರಶಸ್ತಿ ನೀಡುವ ಪದ್ಧತಿ ಆರಂಭಿಸಿದ್ದಾರೆ. ಅತ್ಯುನ್ನತ ಪ್ರಶಸ್ತಿ ಈ ಸಂಸ್ಥೆಗೆ ಬರಲಿ' ಎಂದು ಆಶಿಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ನೋವಿನಲ್ಲಿದ್ದವರ ರಕ್ಷಣೆಗೆ ಧಾವಿಸಿ ನೋವು ನಿವಾರಿಸುವುದೇ ನಿಜವಾದ ಧರ್ಮ. ಪರಿತ್ಯಕ್ತರು, ಅಬಲೆಯರು, ನಿರಾಶ್ರಿತರು ಹಾಗೂ ಮಹಿಳೆಯರಿಗೆ ಆಶ್ರಯ ಒದಗಿಸಿ, ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ ನೀಡುವ ಮೂಲಕ ಸ್ವಾವಲಂಬಿ ಬದುಕು ರೂಪಿಸುವ ಕೆಲಸವನ್ನು ಸೇವಾಶ್ರಮ ಮಾಡುತ್ತಿದೆ' ಎಂದು ನುಡಿದರು.

ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, 'ಮೈಕೋ ಸಂಸ್ಥೆಯ ಉದ್ಯೋಗ ತೊರೆದು, ಅನಾಥ ಮಕ್ಕಳ ಸೇವೆಗೆ ಸುಶೀಲಮ್ಮ ತೊಡಗಿಸಿಕೊಂಡರು. ಈಗಾಗಲೇ ಅವರ ಆಸರೆಯಲ್ಲಿ ಬೆಳೆದ ಮಕ್ಕಳು ವೈದ್ಯರಾಗಿದ್ದಾರೆ. ವಕೀಲರಾಗಿದ್ದಾರೆ, ವಿದೇಶಗಳಲ್ಲಿ ಕೂಡ ನೆಲಸಿದ್ದಾರೆ. ಕನ್ನಡ ನಾಡಿನ ಮದರ್ ತೇರೆಸಾ' ಎಂದು ಬಣ್ಣಿಸಿದರು.

ಅನೇಕ ಹೆಣ್ಣುಮಕ್ಕಳಿಗೆ ಸುಶೀಲಮ್ಮ ಅವರು ತಾಯಿಯಾಗಿದ್ದಾರೆ. ನಮ್ಮ ಮಠಕ್ಕೆ ಆಸರೆ ಕೇಳಿ ಬಂದ ಹೆಣ್ಣುಮಕ್ಕಳನ್ನು ಸುಮಂಗಲಿ ಸೇವಾಶ್ರಮಕ್ಕೆ ಕಳಿಸಿಕೊಟ್ಟ ನಿದರ್ಶನಗಳಿವೆ. ಅನಾಥ ಮಕ್ಕಳ ಪಾಲಿಗೆ ಈ ಆಶ್ರಮ ಕಾಮಧೇನು ಎಂದು ಶ್ಲಾಘಿಸಿದರು.

ರಾಜ್ಯಸಭಾ ಸದಸ್ಯ ಕೆ.ನಾರಾಯಣ ಅವರು ಯೋಗ ಪುಸ್ತಕ ಬಿಡುಗಡೆ ಮಾಡಿದರು. ಸಾಹಿತಿ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಬೀದರ್ ಭಾಲ್ಕಿ ಮಠದ ಬಸವಲಿಂಗ ಪಟ್ಟದೇವರು ಸ್ವಾಮೀಜಿ, ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಮಾಜಿ ಸಚಿವರಾದ ಲೀಲಾದೇವಿ ಆರ್ ಪ್ರಸಾದ್, ರಾಣಿ ಸತೀಶ್, ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್, ಗೀತಾಂಜಲಿ ಸಂಸ್ಥೆ ಕಾರ್ಯದರ್ಶಿ ಬಿ.ಟಿ.ಮುನಿಯಪ್ಪ ಮಾತನಾಡಿದರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಕಾರ್ಯಕ್ರಮ ನಿರೂಪಿಸಿದರು.



ಸುಮಂಗಲಿ ಸೇವಾ ಆಶ್ರಮದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಸುಮಂಗಲಿ ಸೇವಾ ಆಶ್ರಮದ ಕಾರ್ಯದರ್ಶಿ ಎಂ. ಕಾಂತಮ್ಮ ಮತ್ತು ಅಧ್ಯಕ್ಷೆ ಎಸ್‌.ಜಿ ಸುಶೀಲಮ್ಮ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.(ನಿಂತವರು ಎಡದಿಂದ) ಬೇಲಿಮಠದ ಶಿವರುದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಸುತ್ತೂರು ವೀರಸಿಂಹಾಸನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ವೃಕ್ಷ ಸಂರಕ್ಷಣೆಗೆ ಸಹಾಯ ಮಾಡಿ'

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: 'ಸ್ವಚ್ಛ ಗಾಳಿ ನೀಡುವ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿಯಲು ಅವಕಾಶ ಕೊಡಬೇಡಿ. ವೃಕ್ಷ ಸಂರಕ್ಷಣೆ ಹಾಗೂ ಸಂವರ್ಧನೆಗೆ ನಿಮ್ಮ ಕೈಯಲ್ಲಿ ಆದ ಸಹಾಯ ಮಾಡಿ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಪರಮೇಶ್ವರಪ್ಪ ಅವರ 'ಆಳ ಬೇರು ಮರ ಅಮರ ನಿಸರ್ಗದ ವರ' ಆತ್ಮಕಥೆಯನ್ನು ಗುರುವಾರ ಇಲ್ಲಿ ಜನಾರ್ಪಣೆ ಮಾಡಿ ಮಾತನಾಡಿದರು.

'ಆಮ್ಲಜನಕ ಪ್ರತಿಯೊಬ್ಬರ ಬದುಕಿಗೆ ಬೇಕೇಬೇಕು. ಅದರ ಮಹತ್ವ ತಿಳಿದಿದ್ದು ಕೋವಿಡ್ ಕಾಲದಲ್ಲಿ. ಸಕಾಲಕ್ಕೆ ಆಮ್ಲಜನಕ ದೊರಕದೇ ಲಕ್ಷಾಂತರ ಮಂದಿ ಸಾವಿಗೀಡಾದರು. ಮರಗಳು ಪ್ರಾಕೃತಿಕವಾಗಿಯೇ ನಿತ್ಯ ಆಮ್ಲಜನಕ ನೀಡುವುದರಿಂದ ವೃಕ್ಷಗಳಿಗೆ ಸದಾ ಕೃತಜ್ಞರಾಗಿರಬೇಕು' ಎಂದು ತಿಳಿಸಿದರು.

'ಅಮೆಜಾನ್ ಮಳೆ ಕಾಡುಗಳನ್ನು ಆಮ್ಲಜನಕದ ಕಣಜ ಎಂದು ಕರೆಯುತ್ತಾರೆ. ಜಗತ್ತಿನ ಶೇ 20ರಷ್ಟು ಆಮ್ಲಜನಕವನ್ನು ಅಮೆಜಾನ್ ಕಾಡುಗಳು ಪೂರೈಸುತ್ತವೆ. ನಿತ್ಯಹರಿದ್ವರ್ಣದ ಕಾಡುಗಳು, ಪಶ್ಚಿಮ ಘಟ್ಟಗಳೂ ಆಮ್ಲಜನಕದ ಆಗರವಾಗಿರುವುದರಿಂದ ಮುಂದಿನ ಪೀಳಿಗೆಗಳಿಗೆ ಇವುಗಳನ್ನು ಸಂರಕ್ಷಿಸಬೇಕು' ಎಂದು ಹೇಳಿದರು.

'ಮಾನವ -ವನ್ಯಜೀವಿ ಸಂಘರ್ಷ ಇಂದಿನ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ. ಸಹಬಾಳ್ವೆಯ ಬಗ್ಗೆ ಜನಜಾಗೃತಿ ಮೂಡಿಸಲೇಬೇಕಿದೆ. ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಅಧಿಕಾರಿಗಳು, ಸಿಬ್ಬಂದಿಯಲ್ಲಿ ತುಡಿತ ಇರಲೇಬೇಕಾಗುತ್ತದೆ. ಎಸ್. ಪರಮೇಶ್ವರಪ್ಪ ಅವರು ಭೌತಿಕವಾಗಿ ನಮ್ಮ ಜತೆಗಿಲ್ಲದೇ ಇದ್ದರೂ ಅವರ ಬದುಕು ಮಾದರಿ' ಎಂದು ಹೇಳಿದರು.

ಪರಿಸರ ತಜ್ಞರಾದ ಸುರೇಶ್ ಹೆಬ್ಳೀಕರ್, ಉಲ್ಲಾಸ್ ಕಾರಂತ್, ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ನಿವೃತ್ತ ಅಧಿಕಾರಿ ಆರ್.ಎಂ. ಪಾಲಣ್ಣ ಮತ್ತಿತರರು ಭಾಗವಹಿಸಿದ್ದರು.

ನ.3ರಿಂದ ವೆಂಕಟಪ್ಪ ಚಿತ್ರಶಾಲೆ ಸಾರ್ವಜನಿಕ ಪ್ರದರ್ಶನಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೆಂಕಟಪ್ಪ ಚಿತ್ರಶಾಲೆಯು ನ.3ರಿಂದ ಕಲಾವಿದರು ಮತ್ತು ಸಾರ್ವಜನಿಕರ ಕಲಾ ಪ್ರದರ್ಶನಕ್ಕೆ ಮುಕ್ತವಾಗಲಿದೆ.

ಕಟ್ಟಡ ನವೀಕರಣದ ಕಾರಣ ವೆಂಕಟಪ್ಪ ಚಿತ್ರಶಾಲೆಯಲ್ಲಿ ಕಲಾ ಪ್ರದರ್ಶನಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಕಟ್ಟಡವನ್ನು ನವೀಕರಣಗೊಳಿಸಲಾಗಿದೆ. ಈ ಚಿತ್ರಶಾಲೆಯ ಒಂದು ಸುಸಜ್ಜಿತ ಸಭಾಂಗಣ, ಪ್ರತ್ಯೇಕ ಮೂರು ಗ್ಯಾಲರಿಗಳು ಮತ್ತು ಚಿತ್ರಶಾಲೆಯ ಹೊರಾಂಗಣ ಸ್ಥಳಗಳನ್ನು ಬಾಡಿಗೆಗೆ ನೀಡಲಾಗುತ್ತದೆ ಎಂದು ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಬಗ್ಗೆ ಸಿದ್ಧತೆ ನಡೆಯುತ್ತಿದ್ದು, ಸದ್ಯದಲ್ಲಿಯೇ ಅಂತಿಮಗೊಳ್ಳಲಿದೆ. ಅಲ್ಲಿಯವರೆಗೆ ಆಸಕ್ತ ಕಲಾವಿದರು, ಸಾರ್ವಜನಿಕರು ಹಾಗೂ ಖಾಸಗಿ ಕಾರ್ಪೊರೇಟ್ ಸಂಸ್ಥೆಗಳು ವೆಂಕಟಪ್ಪ ಚಿತ್ರಶಾಲೆಗೆ ಭೇಟಿ ನೀಡಿ, ಗ್ಯಾಲರಿಗಳನ್ನು ಕಾಯ್ದಿರಿಸಬಹುದು ಎಂದು ಹೇಳಿದ್ದಾರೆ.

ವಿವರಕ್ಕೆ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಎಲ್.ಗೌಡ (ಮೊ. ಸಂಖ್ಯೆ 8105001151), ಕ್ಯೂರೇಟರ್ ಸುಮಿತ್ರ (ಮೊ.ಸಂಖ್ಯೆ 903608358) ಅಥವಾ ಇಮೇಲ್ ವಿಳಾಸ asstdirectorgovtmuseum@gmail.com ಮೂಲಕವೂ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ವೆಂಕಟಪ್ಪ ಚಿತ್ರಶಾಲೆ

ಸುದ್ದಿ 2 ನಿಮಿಷ

ತಾಂತ್ರಿಕ ಸಮಸ್ಯೆ ಮೆಟ್ರೊ ಸಂಚಾರ ವ್ಯತ್ಯಯ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಸಂಚರಿಸುವ ರೈಲಿನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಗುರುವಾರ ಬೆಳಿಗ್ಗೆ 9.15ರಿಂದ 11 ಗಂಟೆವರೆಗೆ ಸಂಚಾರ ವ್ಯತ್ಯಯ ಉಂಟಾಯಿತು.

ವಿಜಯನಗರ ಮತ್ತು ಹೊಸಹಳ್ಳಿ ನಡುವಿನ ವಿಭಾಗದಲ್ಲಿ ಸಂಚರಿಸುತ್ತಿದ್ದ ರೈಲಿನಲ್ಲಿ ತಾಂತ್ರಿಕ ಸಮಸ್ಯೆ ಉಂಟಾದಾಗ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ಚಲ್ಲಘಟ್ಟದವರೆಗೆ ತಾತ್ಕಾಲಿಕವಾಗಿ ರೈಲು ಸಂಚಾರ ಸ್ಥಗಿತಗೊಂಡಿತು.

ಬೆಳಿಗ್ಗೆ 10.15ಕ್ಕೆ ಮೈಸೂರು ರಸ್ತೆವರೆಗೆ ಸಂಚಾರ ಆರಂಭವಾಯಿತು. ಮೈಸೂರು ರಸ್ತೆಯಿಂದ ಚಲ್ಲಘಟ್ಟಕ್ಕೆ ಬೆಳಿಗ್ಗೆ 11ರ ನಂತರ ಸಂಚಾರ ಶುರುವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕಚೇರಿಗೆ, ಕೆಲಸಗಳಿಗೆ ಜನರು ಸಂಚರಿಸುವ, ಹೆಚ್ಚು ದಟ್ಟಣೆ ಇರುವ ಅವಧಿ ಇದಾಗಿದ್ದರಿಂದ ಸಾರ್ವಜನಿಕರು ಪರದಾಡುವಂತಾಯಿತು. ಹಲವರು ಕಾದು ಆ ನಂತರ ಆಟೊ, ಬಸ್‌ಗಳಲ್ಲಿ ಸಾಗಿದರು. ಇದರಿಂದ ರಸ್ತೆಯಲ್ಲಿಯೂ ದಟ್ಟಣೆ ಉಂಟಾಯಿತು.

ಮೆಟ್ರೊದಲ್ಲಿ ಅಂಗಾಂಗ ಸಾಗಾಟ

ಬೆಂಗಳೂರು: ನಮ್ಮ ಮೆಟ್ರೊ ರೈಲಿನಲ್ಲಿ ಶ್ವಾಸಕೋಶ ಮತ್ತು ಹೃದಯವನ್ನು ಗುರುವಾರ ಸಾಗಿಸಲಾಯಿತು.

ದಾನವಾಗಿ ಪಡೆಯಲಾಗಿದ್ದ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯೊಬ್ಬರ ಶ್ವಾಸಕೋಶ ಮತ್ತು ಹೃದಯವನ್ನು ಯಶವಂತಪುರದ ಸ್ಪರ್ಶ್ ಆಸ್ಪತ್ರೆಯಿಂದ ಸಾಗಿಸಬೇಕಿತ್ತು. ಬೆಳಿಗ್ಗೆ 9.34ಕ್ಕೆ ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದಿಂದ ಹೃದಯದ ಪೆಟ್ಟಿಗೆ ಹೊತ್ತ ತಂಡ, 17 ನಿಲ್ದಾಣಗಳನ್ನು ದಾಟಿ 10.15ಕ್ಕೆ ಬನಶಂಕರಿ ಮೆಟ್ರೊ ನಿಲ್ದಾಣಕ್ಕೆ ತಲುಪಿತು. ಹೃದಯವನ್ನು ಅಲ್ಲಿಂದ ಆಂಬುಲೆನ್ಸ್ ಮೂಲಕ ಆಸ್ಟರ್ ಆರ್‌ವಿ ಆಸ್ಪತ್ರೆಗೆ ಸಾಗಿಸಲಾಯಿತು.

ಶ್ವಾಸಕೋಶದ ಪೆಟ್ಟಿಗೆ ಹೊತ್ತ ತಂಡವು 10.05ಕ್ಕೆ ಗೊರಗುಂಟೆಪಾಳ್ಯದಿಂದ ನಾರಾಯಣ ಹೆಲ್ತ್ ಸಿಟಿಗೆ ಹೊರಟಿತು. ಸುಮಾರು 33 ಕಿ.ಮೀ. ದೂರವನ್ನು 68 ನಿಮಿಷಗಳಲ್ಲಿ ಕ್ರಮಿಸಿ ಶ್ವಾಸಕೋಶವನ್ನು ತಲುಪಿಸಲಾಯಿತು. ಮಧ್ಯೆ 31 ನಿಲ್ದಾಣಗಳನ್ನು ದಾಟಲಾಗಿತ್ತು. ಬೊಮ್ಮಸಂದ್ರ ಮೆಟ್ರೊ ನಿಲ್ದಾಣದಿಂದ ನಾರಾಯಣ ಹೆಲ್ತ್ ಸಿಟಿಗೆ ಆಂಬುಲೆನ್ಸ್ ಮೂಲಕ ಅಂಗಾಂಗ ಸಾಗಿಸಲಾಯಿತು.

ಆಸ್ಪತ್ರೆಗಳಿಗೆ ತ್ವರಿತವಾಗಿ ಹಾಗೂ ಸುರಕ್ಷಿತವಾಗಿ ತಲುಪಿಸುವಲ್ಲಿ ಸಹಕರಿಸಿದ ಆಸ್ಪತ್ರೆಯ ವೈದ್ಯಕೀಯ ತಂಡಕ್ಕೆ ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯ ಆಡಳಿತ ಮಂಡಳಿ ಅಭಿನಂದಿಸಿದೆ.

ಸುರಂಗ ರಸ್ತೆ ಬೇಡವೆನ್ನಲು ಈತ ಯಾರು?: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆ ಹುಡುಗ ಇನ್ನೂ ಎಳಸು. ಆತನಿಗೆ ಅನುಭವವಿಲ್ಲ. ಗೌರವ ಕೊಟ್ಟು ಕರೆದು ಮಾತನಾಡಿದರೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾನೆ' ಎಂದು ಸಂಸದ ತೇಜಸ್ವಿಸೂರ್ಯ ವಿರುದ್ಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಸುರಂಗ ರಸ್ತೆ ಬೇಡ ಎಂದು ಹೇಳುವುದಕ್ಕೆ ತೇಜಸ್ವಿ ಸೂರ್ಯ ಯಾರು? ಈ ದೇಶದಲ್ಲಿ, ಪ್ರಪಂಚದಲ್ಲಿ ಸುರಂಗ ರಸ್ತೆಗಳೇ ಬೇಡ ಎಂದು ಅವನು ಕೇಂದ್ರ ಸಚಿವನಾದ ಮೇಲೆ ಲೋಕಸಭೆಯಲ್ಲಿ ತೀರ್ಮಾನಿಸಲಿ' ಎಂದು ಕಿಡಿಕಾರಿದರು.

'ತಂತ್ರಜ್ಞರ ಅಭಿಪ್ರಾಯ ಪಡೆದು ಸುರಂಗ ರಸ್ತೆ ಯೋಜನೆ ಮಾಡಬೇಕಿತ್ತು' ಎನ್ನುವ ಹೇಳಿಕೆ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಶಿವಕುಮಾರ್, 'ಗೌರವ ಕೊಟ್ಟು ನನ್ನ ಜೊತೆ ಮಾತನಾಡಲು ಅವಕಾಶ ನೀಡಿದರೆ ಏನೇನೊ ಮಾತನಾಡುತ್ತಿದ್ದಾನೆ. ಅವನಿಗೆ ಪ್ರಪಂಚ ಹೇಗಿದೆ ಎಂದೇ ಗೊತ್ತಿಲ್ಲ' ಎಂದರು.

ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ?: 'ಹುಡುಗನ ಬಳಿ ಕಾರು ಇಲ್ಲದಿದ್ದರೆ ಹೆಣ್ಣು ನೀಡುವುದಿಲ್ಲ ಎಂದಿದ್ದೆ. ಅದನ್ನೇ ಹಿಡಿದುಕೊಂಡು ಮಾತನಾಡುತ್ತಿದ್ದಾರೆ. ಈತ ಏಕೆ ಕಾರಲ್ಲಿ ಓಡಾಡುತ್ತಿದ್ದಾನೆ? ಆತ, ಆತನ ಕುಟುಂಬ ಸದಸ್ಯರು ಮೆಟ್ರೊ, ಸರ್ಕಾರಿ ಬಸ್ ಬಳಸಲಿ. ಅವನ ಪಕ್ಷದ ಶಾಸಕರು ಮೆಟ್ರೊ, ಆಟೊ ರಿಕ್ಷಾ, ಸಾರ್ವಜನಿಕ ಸಾರಿಗೆಗಳಲ್ಲಿ ಓಡಾಡಲಿ. ಬೆಂಗಳೂರಿನಲ್ಲಿ 1.30 ಕೋಟಿಗೂ ಹೆಚ್ಚು ವಾಹನಗಳಿವೆ ಎಂಬುದನ್ನು ಆತ ಅರ್ಥ ಮಾಡಿಕೊಳ್ಳಬೇಕು. ಅವರಿಗೆಲ್ಲ ವಾಹನ ಬಳಸಬೇಡಿ ಎಂದು ಹೇಳಲು ಆಗುತ್ತದೆಯೇ' ಎಂದರು.

DIAGEO India

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಕರ್ನಾಟಕ, ಭಾರತ. ಫೋನ್: +91 80 2221 0705; ಫ್ಯಾಕ್ಸ್: +91 80 2224 5253;
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com

30ನೇ ಸೆಪ್ಟಂಬರ್ 2025ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಕೊನೆಗೊಂಡ (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶಗಳ ವಿವರಣೆ

ಕಂಪನಿಯ ನಿರ್ದೇಶಕರ ಮಂಡಳಿಯು, ಅಕ್ಟೋಬರ್ 30, 2025 ರಂದು ನಡೆದ ಸಭೆಯಲ್ಲಿ, ಸೆಪ್ಟೆಂಬರ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಲೆಕ್ಕಪರಿಶೋಧನೆ ಮಾಡದ ಹಣಕಾಸು ಫಲಿತಾಂಶಗಳನ್ನು (ಪ್ರತ್ಯೇಕಿತ ಮತ್ತು ಕ್ರೋಢೀಕೃತ) ಇತರ ವಿಷಯಗಳ ನಡುವೆ ಅನುಮೋದಿಸಿದೆ.

ಭಾರತದ ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015ರ ನಿಯಮ 33 ರೊಂದಿಗೆ ಓದಲಾದ ನಿಯಮ 47 ಪ್ರಕಾರ, ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರು ಹೊರಡಿಸಿದ ಸೀಮಿತ ಪರಿಶೀಲನಾ ವರದಿಯೊಂದಿಗೆ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://www.diageoindia.com/pdf-viewer.aspx?gid=307336661&src=%2F%7E%2Fmedia%2FFiles%2FD%2FDiageo-V2%2FDiageo-India%2Finvestors%2Fproduction-library%2Fintimation-of-unaudited-financial-results-for-the-quarter-and-half-year-ended-30th+September-2025.pdf ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ ಮತ್ತು ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

ಇದನ್ನು ಸ್ಟಾಕ್ ಎಕ್ಸ್ಚೇಂಜ್‌ಗಳ ವೆಬ್‌ಸೈಟ್, ಅಂದರೆ BSE ಲಿಮಿಟೆಡ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಸಹ ಲಭ್ಯವಾಗುವಂತೆ ಮಾಡಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
ಸಹಿ/-
ಪ್ರವೀಣ್ ಸೋಮೇಶ್ವರ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
DIN: 01802656

ಸ್ಥಳ : ಬೆಂಗಳೂರು
ದಿನಾಂಕ : 30ನೇ ಅಕ್ಟೋಬರ್ 2025

ಏಕಲವ್ಯ ಮಾದರಿ ವಸತಿ ಶಾಲೆ ಬಜ್ಜನಹಳ್ಳಿ, ತಾ-ಕೊರಟಗೆರೆ, ಜಿಲ್ಲೆ ತುಮಕೂರು ವಾಕ್-ಇನ್-ಇಂಟರ್ವ್ಯೂ

EMRS ಬಜ್ಜನಹಳ್ಳಿಯಲ್ಲಿ ಅತಿಥಿ/ಅರೆಕಾಲಿಕ ಶುಶ್ರೂಷಕಿ (Female Staff Nurse), ಹುದ್ದೆಗೆ ಅರ್ಹ ಅಭ್ಯರ್ಥಿಗಳು ವಾಕ್-ಇನ್-ಇಂಟರ್ವ್ಯೂಗೆ ಹಾಜರಾಗಲು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಬಯೋಡೇಟಾ, ಮೂಲ ಪ್ರಮಾಣಪತ್ರಗಳು, ಎಲ್ಲಾ ಪ್ರಮಾಣಪತ್ರಗಳ ಒಂದು ಸೆಟ್ ನಕಲು ಪ್ರತಿಗಳು ಮತ್ತು ಎರಡು ಛಾಯಾಚಿತ್ರಗಳನ್ನು ವಾಕ್-ಇನ್-ಇಂಟರ್ವ್ಯೂ ಸಮಯದಲ್ಲಿ ತರಬೇಕು.

ಅಗತ್ಯ ಅರ್ಹತೆ: EMRS ನೇಮಕಾತಿ ನಿಯಮಗಳು NESTS ಪ್ರಕಾರ, https://drive.google.com/file/d/1NF3rRqsfOhrSiUWvw9NLh7P3hbkPLBga/view?usp=drivesdk

ಸಂಭಾವನೆ: ಆಪ್ತ ಸಮಾಲೋಚಕರು (Counsellors); 35,400/–, ಶುಶ್ರೂಷಕಿ (Staff Nurse) 29,200/– NESTS/KESTS ನಿರ್ದೇಶನದ ಪ್ರಕಾರ ನೀಡಲಾಗುವುದು. ಇದು ತಾತ್ಕಾಲಿಕ ನಿಯೋಜನೆಯಾಗಿದೆ.

ಸ್ಥಳ ಮತ್ತು ದಿನಾಂಕ ಮತ್ತು ಸಮಯ: EMRS ಬಜ್ಜನಹಳ್ಳಿ, 06/11/2025 ಬೆಳಿಗ್ಗೆ 9.00 A.M

Sd/- **Principal**
EMRS Bajjanahalli

SEBI

भारतीय प्रतिभूति और विनिमय बोर्ड
ಭಾರತದ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿ

ನೇಮಕಾತಿ – 2025

ಜನರಲ್, ಲೀಗಲ್, ಮಾಹಿತಿ ತಂತ್ರಜ್ಞಾನ, ಸಂಶೋಧನೆ, ಇಂಜಿನಿಯರಿಂಗ್ (ಇಲೆಕ್ಟ್ರಿಕಲ್), ಇಂಜಿನಿಯರಿಂಗ್ (ಸಿವಿಲ್) ಮತ್ತು ಅಧಿಕೃತ ಭಾಷಾ ವಿಭಾಗಳಲ್ಲಿನ – ಆಫೀಸರ್ ಗ್ರೇಡ್ ಎ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೆಕ್ಯೂರಿಟೀಸ್‌ನಲ್ಲಿ ಹೂಡಿಕೆ ಮಾಡುವ ಹೂಡಿಕೆದಾರರ ಹಿತಾಸಕ್ತಿ ಸಂರಕ್ಷಣೆಗಾಗಿ, ಸೆಕ್ಯೂರಿಟೀಸ್ ಮಾರುಕಟ್ಟೆಯ ಅಭಿವೃದ್ಧಿಯ ಉತ್ತೇಜನ ಹಾಗೂ ನಿಯಂತ್ರಣಕ್ಕಾಗಿ, ಸಂಸತ್ ಕಾಯ್ದೆಯ ಮುಖಾಂತರ ಭಾರತದ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿ (ಸೆಬಿ) ಎಂಬ ಶಾಸನಬದ್ಧ ಅಂಗಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದೀಗ, ಸದರಿ ಸೆಬಿ ಸಂಸ್ಥೆಯು, ಜನರಲ್, ಲೀಗಲ್, ಮಾಹಿತಿ ತಂತ್ರಜ್ಞಾನ, ಸಂಶೋಧನೆ, ಇಂಜಿನಿಯರಿಂಗ್ (ಇಲೆಕ್ಟ್ರಿಕಲ್), ಇಂಜಿನಿಯರಿಂಗ್ (ಸಿವಿಲ್) ಮತ್ತು ಅಧಿಕೃತ ಭಾಷಾ ವಿಭಾಗಳಲ್ಲಿನ – ಆಫೀಸರ್ ಗ್ರೇಡ್ ಎ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅಕ್ಟೋಬರ್ 30, 2025 ರಿಂದ ನವಂಬರ್ 28, 2025 ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಬಹುದು.

ವಿವರವಾದ ಜಾಹೀರಾತಿಗಾಗಿ ಮತ್ತು ಆನ್‌ಲೈನ್ ಅರ್ಜಿ ನಮೂನೆಗಾಗಿ ದಯವಿಟ್ಟು ಭೇಟಿ ಕೊಡಿ: https://www.sebi.gov.in/sebiweb/about/AboutAction.do?doVacancies=yes

CBC 15204/11/0175/2526

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಬೆಂಗಳೂರು ದಕ್ಷಿಣ ವಿಭಾಗ, ಸಂಚಾರ ಶಾಖೆ, ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ಬೆಂಗಳೂರು ದಕ್ಷಿಣ ಜಿಲ್ಲೆ–562159.

ಸಂ: ಕ.ರಾ.ಸಾ/ಬೆಂದವಿ/ಸಂ.ವಾ/1307/1308/1309/1310/2025–26 ದಿನಾಂಕ: 25.10.2025

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 05 & 06/2025–26 & ಸಂಧಾನ ಪ್ರಕಟಣೆ ಸಂಖ್ಯೆ: 07 & 08/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ದಕ್ಷಿಣ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ ಐಜೂರು ವೃತ್ತ, ಬೆಂಗಳೂರು ದಕ್ಷಿಣ ಜಿಲ್ಲೆ ಇವರು, ಬೆಂಗಳೂರು ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ಮಾಗಡಿ ಹಾಗೂ ದೊಡ್ಡಮರಳವಾಡಿ ಬಸ್ ನಿಲ್ದಾಣ/ಬಸ್ ಘಟಕಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ/ದ್ವಿಚಕ್ರ ಹಾಗೂ ಕಾರುಗಳ ನಿಲುಗಡೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ಬೆಂಗಳೂರು ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿನಾಂಕ: 18.11.2025 ರಂದು 15:00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: 28.10.2025 ರಿಂದ ದಿನಾಂಕ: 17.11.2025ರ 15:00 ಗಂಟೆಗಳವರೆಗೆ ಪಡೆಯಬಹುದು. ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಹಾರೋಹಳ್ಳಿ, ಚನ್ನಪಟ್ಟಣ, ಮಾಗಡಿ, ಸಾತನೂರು ಹಾಗೂ ಆನೇಕಲ್ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಹಾಗೂ ಮಾಗಡಿ ಬಸ್ ನಿಲ್ದಾಣ ಹೋರ್ಡಿಂಗ್ಸ್/ಗ್ಲೋಸೈನ್ ಫಲಕಗಳಿಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ: 24.11.2025 ರಂದು 11:00 ಗಂಟೆಗೆ ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 29.10.2025 ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 18.11.2025 ರಂದು 17:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ ಸಂಸ್ಥೆ ಬೆಂಗಳೂರು ದಕ್ಷಿಣ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ಬೆಂಗಳೂರು ದಕ್ಷಿಣ ಜಿಲ್ಲೆ–562159 ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಬೆಂಗಳೂರು ದಕ್ಷಿಣ ವಿಭಾಗ

ವಾಸಾಸಂಇ/ವಾಪ್ರ/3418/ಸ್ಪ್ಯಾನ್/2024–25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1643/2025–26/ ದಿನಾಂಕ:28.10.2025

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: 13/2025–26/ದಿನಾಂಕ: 18.10.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 07 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಅದರಲ್ಲಿ 02 ವಿಶೇಷ ಘಟಕ ಯೋಜನೆ ಹಾಗೂ 01 ಗಿರಿಜನ ಉಪ–ಯೋಜನೆ ಅಡಿ ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿರುತ್ತದೆ. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp.karnataka.gov.in** ನಲ್ಲಿ **ದಿನಾಂಕ:29.10.2025 ರಿಂದ ಪಡೆಯಬಹುದು (Download).** ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ **(Upload) ದಿನಾಂಕ: 07.11.2025 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.11.2025ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯುಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:334/ಕೆಎಸ್‌ಎಂಸಿಎ/2025–26

ಕಸ ಸುರಿದು ಅರಿವಿನ ಪಾಠ

ತ್ಯಾಜ್ಯ ಎಸೆಯುವವರಿಗೆ ದಂಡ ಬಿಎಸ್‌ಡಬ್ಲ್ಯುಎಂಎಲ್‌ನಿಂದ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನ ಹಬ್ಬ, ಕೆರೆ ಹಬ್ಬ, ನಮ್ಮೂರ ಹಬ್ಬ, ಬೆಂಗಳೂರು ಹಬ್ಬದಂತಹ ಹೈಟೆಕ್ ಹಬ್ಬಗಳನ್ನು ಕಂಡಿದ್ದ ನಗರದಲ್ಲಿ, 'ಕಸ ಸುರಿಯುವ ಹಬ್ಬ'ವನ್ನು ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ಮನೆಗಳ ಮುಂದೆ ಗುರುವಾರ ಆಚರಿಸಲಾಯಿತು.

ರಸ್ತೆ ಅಥವಾ ಖಾಲಿ ನಿವೇಶನಗಳಲ್ಲಿ ನಿಯಮಿತವಾಗಿ ತ್ಯಾಜ್ಯ ಎಸೆಯುತ್ತಿದ್ದ ನಾಗರಿಕರ ಮನೆ ಮುಂದೆ ತ್ಯಾಜ್ಯ ಸುರಿದು, ನೀವು ಎಸೆದ ಕಸದ ಸಮಸ್ಯೆ ಹೇಗಿರುತ್ತದೆ ಎಂಬ ಅರಿವು ನಿಮಗಾಯಿತೇ? ಎಂದು ಅರಿವು ಮೂಡಿಸಿ, ದಂಡ ವಿಧಿಸಿ ಮುಂದೆಂದೂ ಹೀಗೆ ಎಲ್ಲೆಂದರಲ್ಲಿ ಕಸ ಬಿಸಾಡಬೇಡಿ ಎಂದು ಎಚ್ಚರಿಸಲಾಯಿತು.

ರಸ್ತೆ ಹಾಗೂ ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ಎಸೆಯುವವರನ್ನು ಗುರುತಿಸಿ, ಅವರ ಮನೆ ಮುಂದೆ ತ್ಯಾಜ್ಯ ಹಾಕುವ, 'ಕಸ ಸುರಿಯುವ ಹಬ್ಬ' ಅಭಿಯಾನವನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಆರಂಭಿಸಿದೆ.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದೂ ನಗರ ಪಾಲಿಕೆಗಳಲ್ಲಿ ಬೆಳಿಗ್ಗೆ ಆಟೊ ಟಿಪ್ಪರ್‌ಗಳಲ್ಲಿ ಮನೆಗಳಿಂದ ಕಸ ಸಂಗ್ರಹಿಸಲಾಗುತ್ತಿದೆ. ಆದರೂ ಕೆಲ ಸಾರ್ವಜನಿಕರು ಕಸವನ್ನು ರಸ್ತೆ ಬದಿ, ಪಾದಚಾರಿ ಮಾರ್ಗ ಹಾಗೂ ಖಾಲಿ ಜಾಗಗಳಲ್ಲಿ ಎಸೆಯುತ್ತಿದ್ದಾರೆ. ಅದನ್ನು ವಿಡಿಯೊ ಹಾಗೂ ಚಿತ್ರ ದಾಖಲೆ ಮಾಡಿಕೊಳ್ಳಲಾಗಿದೆ. ಇಂತಹ ಸಾವಿರಾರು ಜನರ ಮಾಹಿತಿ ನಮ್ಮಲ್ಲಿದೆ. ಅಭಿಯಾನದ ಮೊದಲ ದಿನ 218 ಮನೆಗಳ ಮುಂದೆ ಕಸ ಸುರಿದು ₹2.80 ಲಕ್ಷ ದಂಡ ವಿಧಿಸಲಾಗಿದೆ. ಈ ಪ್ರಕ್ರಿಯೆ ಮುಂದುವರಿಯಲಿದೆ' ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ತಿಳಿಸಿದರು.

ರಸ್ತೆ ಬದಿ ಕಸ ಸುರಿಯುವುದರಿಂದ ನಗರ ನೈರ್ಮಲ್ಯ ಹಾಳಾಗುತ್ತಿದೆ. ಇಂತಹ ಪ್ರಕರಣಗಳನ್ನು ತಪ್ಪಿಸುವ ಉದ್ದೇಶದಿಂದ 'ಕಸ ಸುರಿಯುವ ಹಬ್ಬ' ಎಂಬ ವಿನೂತನ ಜಾಗೃತಿ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

'ಆಟೊ ಟಿಪ್ಪರ್‌ಗಳಿಗೆ ಕಸ ಕೊಡದೆ ರಾತ್ರಿ ವೇಳೆ ರಸ್ತೆ ಬದಿ ಹಾಗೂ ಇನ್ನಿತರ ಕಡೆ ಕಸ ಎಸೆಯುತ್ತಾರೆ. ಬೇರೆಯವರ ಮನೆ ಮುಂದೆ/ರಸ್ತೆಗಳಲ್ಲಿ ಕಸ ಬಿದ್ದಾಗ ಹೇಗೆ ಅನ್ನಿಸುತ್ತದೆ ಎಂದು ಮನವರಿಕೆ ಮಾಡಿಕೊಡುವ ಸಲುವಾಗಿ ಅವರ ಮನೆ ಮುಂದೆಯೇ ಕಸ ಸುರಿಯಲಾಯಿತು. ತದನಂತರ ಕಸವನ್ನು ತೆರವುಗೊಳಿಸಲಾಗಿದೆ. ಬೆಂಗಳೂರು ನಗರದ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಲು ದಯವಿಟ್ಟು ಸಹಕರಿಸಿ, ಆಟೊ ಟಿಪ್ಪರ್ ಬಂದಾಗ ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ಕಸವನ್ನು ನೀಡಬೇಕು' ಎಂದು ಮನವಿ ಮಾಡಿದರು.

ರಸ್ತೆ ಬದಿ ಸೇರಿದಂತೆ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ನಿಲ್ಲಿಸಬೇಕು. ನಗರ ಪಾಲಿಕೆ ವತಿಯಿಂದ ಮನೆ ಮನೆಗೆ ಬರುವ ಆಟೊ ಟಿಪ್ಪರ್‌ಗಳಿಗೇ ಕಸವನ್ನು ಒಣ ಕಸ ಮತ್ತು ಹಸಿ ಕಸವನ್ನಾಗಿ ಬೇರ್ಪಡಿಸಿ ನಿಗದಿತ ಸಮಯದಲ್ಲಿ ಕಸವನ್ನು ನೀಡುವಂತೆ ಐದೂ ನಗರ ಪಾಲಿಕೆಗಳ ಹಲವು ಪ್ರದೇಶಗಳಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

65 ಕಸ ಕಿಯೋಸ್ಕ್: ರಸ್ತೆ ಬದಿ ಕಸ ಬಿಸಾಡುವುದನ್ನು ನಿಯಂತ್ರಿಸುವ ಸಲುವಾಗಿ ನಗರದಾದ್ಯಂತ ಸುಮಾರು 65 ಕಸ ಕಿಯೋಸ್ಕ್‌ಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಸ್ವಚ್ಛ ಬೆಂಗಳೂರಿನ ನಿರ್ಮಾಣಕ್ಕೆ ಇದು ಸಹಕಾರಿಯಾಗಲಿದೆ ಎಂದು ಕರೀಗೌಡ ಹೇಳಿದರು.

'ಕಸ ಕಿಯೋಸ್ಕ್‌ನಿಂದ ಸ್ಥಳೀಯವಾಗಿ ಬ್ಲ್ಯಾಕ್‌ಸ್ಪಾಟ್‌ಗಳ ನಿರ್ಮೂಲನೆ, ತ್ಯಾಜ್ಯ ದುರ್ವಾಸನೆ ಸೇರಿದಂತೆ ಇತರ ಸಮಸ್ಯೆಗಳನ್ನು ನಿಯಂತ್ರಿಸಬಹುದಾಗಿದೆ. ಪ್ರತಿ ಕಸ ಕಿಯೋಸ್ಕ್‌ನಲ್ಲಿ 100 ಲೀಟರ್ ಸಾಮರ್ಥ್ಯದ ನಾಲ್ಕು ಸಂಗ್ರಹಣಾ ಬಿನ್‌ಗಳನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ನಿಗದಿಪಡಿಸಿದ ಸಮಯದಲ್ಲಿ ತಮ್ಮ ಬೇರ್ಪಡಿಸಿದ ಕಸವನ್ನು ಯಾವುದೇ ಶುಲ್ಕವಿಲ್ಲದೆ ಈ ಕಿಯೋಸ್ಕ್‌ಗಳಿಗೆ ಉಚಿತವಾಗಿ ನೀಡಬಹುದಾಗಿದೆ' ಎಂದರು.

ತಮಟೆಗೆ ಸದ್ಯಕ್ಕೆ ವಿರಾಮ!

'ರಸ್ತೆ–ಬೀದಿ, ಖಾಲಿ ನಿವೇಶನಗಳಲ್ಲಿ ಕಸ ಬಿಸಾಡುವವರ ಮನೆ ಮುಂದೆ ತ್ಯಾಜ್ಯ ಸುರಿದು, ತಮಟೆ ಹೊಡೆಯುವ ಅಭಿಯಾನ ನಡೆಸಲು ಯೋಜಿಸಲಾಗಿತ್ತು. ನಾಗರಿಕರಿಗೆ ತೀರಾ ಮುಜುಗರವಾಗುವುದನ್ನು ತಪ್ಪಿಸಲು ಸದ್ಯಕ್ಕೆ ಅವರ ಮನೆ ಮುಂದೆ ಕಸ ಸುರಿಯಲಾಗುತ್ತಿದೆ. ಎಚ್ಚೆತ್ತುಕೊಳ್ಳದೆ ಮತ್ತೆ ತ್ಯಾಜ್ಯ ಬಿಸಾಡುವುದನ್ನು ಮುಂದುವರಿಸಿದರೆ ತಮಟೆಯನ್ನೂ ಹೊಡೆಯಲಾಗುತ್ತದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

ರಸ್ತೆಗಳಲ್ಲಿ ತ್ಯಾಜ್ಯ ಎಸೆಯುತ್ತಿದ್ದ ನಾಗರಿಕರ ಮನೆಗಳ ಮುಂದೆ ಬಿಎಸ್‌ಡಬ್ಲ್ಯುಎಂಎಲ್ ಸಿಬ್ಬಂದಿ ಕಸ ಸುರಿದು ಮತ್ತೊಮ್ಮೆ ಹಾಗೆ ಮಾಡದಂತೆ ಅರಿವು ಮೂಡಿಸಿದರು

ಸಂಗ್ರಹಕ್ಕೆ ಬಾರದಿದ್ದರೆ ದೂರು ನೀಡಿ

'ಮನೆಗಳು ಹಾಗೂ ವಾಣಿಜ್ಯ ಕಟ್ಟಡಗಳಿಂದ ತ್ಯಾಜ್ಯ ಸಂಗ್ರಹವಾಗುತ್ತಿಲ್ಲವಾದರೆ ಚಿತ್ರಸಹಿತ ಬಿಎಸ್‌ಡಬ್ಲ್ಯುಎಂಎಲ್ ಸ್ಥಾಪಿಸಿರುವ ಪ್ರತ್ಯೇಕ ವಾಟ್ಸ್‌ಆ್ಯಪ್‌ಗೆ 9448197197 ನಾಗರಿಕರು ಸಂದೇಶ ಕಳುಹಿಸಬಹುದು. ದೂರು ಸ್ವೀಕರಿಸಿದ ಬಳಿಕ, ಸಂಬಂಧಪಟ್ಟ ಅಧಿಕಾರಿಗಳು ನಿಗದಿತ ಅವಧಿಯಲ್ಲಿ ತ್ಯಾಜ್ಯ ಅಥವಾ ಕಸ ವಿಲೇವಾರಿ ಮಾಡಿ ಸಮಸ್ಯೆ ಬಗೆಹರಿಸಲಿದ್ದಾರೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ತಿಳಿಸಿದೆ.

8 ತಿಂಗಳಿಂದ ವೇತನ ಪಾವತಿಸಿಲ್ಲ

• ಆರ್. ಮಂಜುನಾಥ್

ಬೆಂಗಳೂರು: ರಸ್ತೆಯಲ್ಲಿ ತ್ಯಾಜ್ಯ ಹಾಕುವವರ ಮನೆ ಮುಂದೆ ಕಸ ಸುರಿದು ಅರಿವು ಮೂಡಿಸುತ್ತಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ತ್ಯಾಜ್ಯ ನಿರ್ವಹಣೆ ಮಾಡುತ್ತಿರುವ ಕಿರಿಯ ಆರೋಗ್ಯಾಧಿಕಾರಿಗಳಿಗೆ (ಜೆಎಚ್‌ಐ) ಎಂಟು ತಿಂಗಳಿಂದ ವೇತನ ಪಾವತಿಸದೆ ಸಂಕಷ್ಟಕ್ಕೆ ದೂಡಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವ್ಯಾಪ್ತಿಗೆ ಬರುವ ಜೆಎಚ್‌ಐಗಳನ್ನು ಘನತ್ಯಾಜ್ಯ ಪರಿವೀಕ್ಷಕರು (ಎಸ್‌ಡಬ್ಲ್ಯುಐ) ಎಂದೂ ಕರೆಯಲಾಗುತ್ತದೆ. ಬಿಬಿಎಂಪಿ–ಜಿಬಿಎ ಎಂಬ ಗೊಂದಲದಲ್ಲಿರುವ ಅಧಿಕಾರಿಗಳ ನಿರ್ಲಕ್ಷ್ಯದಿಂದ ತ್ಯಾಜ್ಯ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಜೆಎಚ್‌ಐಗಳಿಗೆ 2025ರ ಫೆಬ್ರುವರಿಯಿಂದ ವೇತನ ಪಾವತಿಸಿಲ್ಲ.

ಜೆಎಚ್‌ಐಗಳನ್ನು ಗುತ್ತಿಗೆ ಆಧಾರದಲ್ಲಿ ಏಜೆನ್ಸಿಗಳ ಮೂಲಕ ಬಿಬಿಎಂಪಿ ಪಡೆದುಕೊಳ್ಳುತ್ತಿತ್ತು. ಹೊಸ ಏಜೆನ್ಸಿಯನ್ನು ನೇಮಕ ಮಾಡುವ ಸಂದರ್ಭದಲ್ಲಿ ಉಂಟಾಗಿರುವ ಗೊಂದಲವನ್ನು ಎಂಟು ತಿಂಗಳಾದರೂ ಪರಿಹರಿಸಲು ಜಿಬಿಎ ಅಧಿಕಾರಿಗಳು ಮುಂದಾಗಿಲ್ಲ.

'ಬಿಬಿಎಂಪಿ ಇದ್ದಾಗ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸಲಾಗುತ್ತಿತ್ತು. ನಂತರ ಹೊಸ ಏಜೆನ್ಸಿಗೆ ಅವಕಾಶ ನೀಡಲಾಯಿತು. ಕೆಲವು ಕಡೆ ವಾರ್ಡ್‌ಗೊಬ್ಬರು ಜೆಎಚ್‌ಐ ಸಾಕು ಎಂಬ ಆದೇಶ ಹೊರಬಿತ್ತು. ಅದಾದ ಮೇಲೆ ಅದನ್ನೂ ಪರಿಷ್ಕರಿಸಿ ಹಳೆಯ ಸಂಖ್ಯೆಯ ಜೆಎಚ್‌ಐಗಳನ್ನೇ ಉಳಿಸಿಕೊಳ್ಳಲು ನಿರ್ಧರಿಸಲಾಯಿತು. ಆದರೆ, ಇದಕ್ಕಾಗಿ ಕಡತ ಪ್ರಕ್ರಿಯೆಗಳು ಪೂರ್ಣಗೊಳ್ಳದೆ ವೇತನ ದೊರೆತಿಲ್ಲ. ಇದರ ಬಗ್ಗೆ ಆರು ತಿಂಗಳಿಂದ ಹೋರಾಟ ಮಾಡುತ್ತಿದ್ದರೂ, ಪ್ರಯೋಜನವಾಗಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಜೆಎಚ್‌ಐಗಳು ಹೇಳಿದರು.

'ಹಲವು ವರ್ಷಗಳಿಂದ ಏಜೆನ್ಸಿಗಳ ಮೂಲಕವೇ ಕೆಲಸ ಮಾಡುತ್ತಿದ್ದೇವೆ. ಅವರಿಂದಲೇ ವೇತನ ಪಾವತಿಯಾಗುತ್ತಿದೆ. ಆದರೆ, ಫೆಬ್ರುವರಿಯಿಂದ ಸಮಸ್ಯೆ ಪ್ರಾರಂಭವಾಗಿದೆ. ಏಜೆನ್ಸಿ ಬದಲಾವಣೆ ಮಾಡಿದರು. ಬಿಬಿಎಂಪಿ ವಲಯದಿಂದ ಅವರಿಗೆ ಹಣ ಪಾವತಿಸಲಿಲ್ಲ. ಪ್ರಕ್ರಿಯೆ ನಡೆಯುತ್ತಿದೆ ಎಂದು ಕಾಲ ತಳ್ಳಿದರು. ನಂತರ, ಜಿಬಿಎ ರಚನೆಯಾಗಿ, ನಗರ ಪಾಲಿಕೆಗಳಾದವು. ಅವುಗಳಿಗೆ ಕಡತಗಳನ್ನು ವಿಲೇವಾರಿ ಮಾಡಿಲ್ಲ. ಹೀಗಾಗಿ, ನಗರ ಪಾಲಿಕೆಗಳಿಂದಲೂ ವೇತನ ಬಿಡುಗಡೆ ಮಾಡಲು ಸಾಧ್ಯವಾಗುತ್ತಿಲ್ಲ. ನಗರ ಪಾಲಿಕೆ ಆಯುಕ್ತರು, ಜಿಬಿಎ ಹಿರಿಯ ಅಧಿಕಾರಿಗಳು ಮನಸ್ಸು ಮಾಡಿದರೆ ಒಂದು ದಿನದಲ್ಲಿ ವೇತನ ಪಾವತಿ ಮಾಡಬಹುದು' ಎಂದರು.

> **ವೇತನ ಬಿಡುಗಡೆಗೆ ನಗರ ಪಾಲಿಕೆಗಳ ಆಯುಕ್ತರ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು**
> **ಸುರಳ್ಕರ್ ವಿಕಾಸ್ ಕಿಶೋರ್,** ಜಿಬಿಎಯ ಆರೋಗ್ಯ–ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತ

ಪ್ರಸನ್ನ ಕಲಾಕೃತಿಗಳ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ಯಾಲರಿ 4ರಲ್ಲಿ ಹಮ್ಮಿಕೊಂಡಿರುವ ರಂಗಕರ್ಮಿ ಪ್ರಸನ್ನ ಅವರ ಕಲಾಕೃತಿಗಳ ಪ್ರದರ್ಶನಕ್ಕೆ ಗುರುವಾರ ಚಾಲನೆ ದೊರೆಯಿತು.

'ನಾಟಕವು ಬದುಕಿನೊಳಗೋ ಬದುಕು ನಾಟಕದೊಳಗೋ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಈ ಪ್ರದರ್ಶನದಲ್ಲಿ ಅವರು ರಚಿಸಿದ 78 ಕಲಾಕೃತಿಗಳನ್ನು ಇರಿಸಲಾಗಿದೆ. ಕಲಾ ವಿಮರ್ಶಕ ರವೀಂದ್ರ ತ್ರಿಪಾಠಿ ಅವರು ಈ ಪ್ರದರ್ಶನ ಉದ್ಘಾಟಿಸಿ, ಕಲಾಕೃತಿಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಪ್ಪು–ಬಿಳುಪಿನ ಕಲಾಕೃತಿಗಳು ಪ್ರಭುತ್ವ ಮತ್ತು ಮನುಷ್ಯನ ನಡುವಿನ ಸಂಘರ್ಷ, ನಿಸರ್ಗದ ಜತೆಗೆ ಸಹಬಾಳ್ವೆ ಹಾಗೂ ಸಂಘರ್ಷದಂತಹ ವಿಷಯಗಳನ್ನು ಕೇಂದ್ರೀಕರಿಸಿವೆ. 13x19 ಇಂಚು ಅಳತೆಯ ಈ ಕಲಾಕೃತಿಗಳಿಗೆ ಕನಿಷ್ಠ ಬೆಲೆ ₹7 ಸಾವಿರ ನಿಗದಿಪಡಿಸಲಾಗಿದೆ.

'ರಂಗಭೂಮಿಯ ಗಾಢವಾದ ಪ್ರಭಾವ ಈ ಚಿತ್ರಗಳ ಮೇಲಿದೆ. ಈ ಚಿತ್ರಗಳನ್ನು ಬಿಡಿಸುವಾಗ ಪಾತ್ರಗಳಾಗಿ ಗ್ರಹಿಸಿ, ಪಾತ್ರ ಪಾತ್ರಗಳ ನಡುವಿನ ಘರ್ಷಣೆ, ತಿಕ್ಕಾಟ, ಪ್ರೀತಿ ಎಲ್ಲವನ್ನೂ ತಂದಿದ್ದೇನೆ. ಈ ಕಲಾಕೃತಿಗಳ ಮಾರಾಟದಿಂದ ಬರುವ ಎಲ್ಲ ಹಣವನ್ನು ಮೈಸೂರಿನ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಗೆ ನೀಡುತ್ತಿದ್ದೇನೆ. ವಿವಿಧ ರಾಜ್ಯಗಳಲ್ಲಿಯೂ ಈ ಪ್ರದರ್ಶನ ನಡೆಯಲಿದೆ' ಎಂದು ಪ್ರಸನ್ನ ಹೇಳಿದರು.

'ಕಲಾಕೃತಿಗಳಿಗೆ ನಿಗದಿ ಪಡಿಸಿದಕ್ಕಿಂತ ಹೆಚ್ಚಿನ ಹಣವನ್ನು ದೇಣಿಗೆ ರೂಪದಲ್ಲಿ ನೀಡಬಹುದಾಗಿದೆ. ಮಕ್ಕಳ ರಂಗ ಶಿಕ್ಷಣಕ್ಕೆ ಆ ಹಣ ಸಹಕಾರಿಯಾಗಲಿದೆ' ಎಂದರು.

ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್, ಸಾಹಿತಿ ಹಂಪ ನಾಗರಾಜಯ್ಯ, ಲೇಖಕ ಅರುಣ್ ರಾಮನ್, ದೂರದರ್ಶನ ಚಂದನದ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ ಉಪಸ್ಥಿತರಿದ್ದರು.

ಈ ಪ್ರದರ್ಶನವು ಚಿತ್ರಕಲಾ ಪರಿಷತ್ತಿನ ಗ್ಯಾಲರಿ 4ರಲ್ಲಿ ನ.2ರವರೆಗೆ ಬೆಳಿಗ್ಗೆ 10.30ರಿಂದ ಸಂಜೆ 7.30ರವರೆಗೆ ನಡೆಯಲಿದೆ.

ಪ್ರಸನ್ನ ಅವರು ತಮ್ಮ ಕಲಾಕೃತಿಗಳ ಬಗ್ಗೆ ವಿವರಿಸಿದರು. (ಎಡದಿಂದ) ಎಚ್.ಎನ್. ಆರತಿ, ಅರುಣ್ ರಾಮನ್, ಹಂಪ ನಾಗರಾಜಯ್ಯ, ರವೀಂದ್ರ ತ್ರಿಪಾಠಿ, ಪ.ಸ. ಕುಮಾರ್ ಅವರು ಕಲಾಕೃತಿಗಳನ್ನು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

Karnataka Golf Association
No.1 Golf Avenue, Kodihalli, Bengaluru -560008. Tel: 08040090044/41
Website : www.kga.in Email: mem@kga.in

TENDER NOTICE

Sealed tenders are invited from reputed and experienced contractors/manufacturers for Design, Supply, Installation, Testing & Commissioning of Mono Pole Type Golf Netting System at the KGA Driving Range, Bangalore.

Eligibility:
Firms with proven experience in golf/sports netting projects, ISO 9001 certification, and at least two similar completed works above 100 ft height.

Tender Documents:
The tender document can be collected from the KGA Office, and sealed tender for the "**Golf Netting System (Mono Pole Type)**" should be submitted on or before **05.00PM, Monday 10.11.2025** at the following address.

The Hon. Secretary,
Karnataka Golf Association, No.1, Golf Avenue, Kodihalli, Bangalore – 560 008.
For more information: Contact
L. Kumar Phinehas, Purchase department,
Ph: **90361 27668 / 080-40090019**
Email: **purchase1@kga**

Sd/-
Madhur Sood
Hon. Secretary
Date: 30.10.2025

ನಗರದಲ್ಲಿ ಇಂದು

'ಪ್ರೆಸಿಡೆನ್ಸಿ ಲೀಗಲ್ ಇಂಡಸ್ಟ್ರಿ ಇಂಟರ್‌ಫೇಸ್' ಶೃಂಗ–2025: ಆಯೋಜನೆ ಮತ್ತು ಸ್ಥಳ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ರಾಜಾನುಕುಂಟೆ, ಯಲಹಂಕ, ಬೆಳಿಗ್ಗೆ 9.30ರಿಂದ

'ಸಂಸ್ಕೃತಿ ಸಂಗಮ–2025' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ಬಸವರಾಜ ಎಸ್. ಬೊಮ್ಮಾಯಿ, ಉದ್ಘಾಟನೆ ಮತ್ತು ಸ್ಮರಣ ಸಂಚಿಕೆ ಬಿಡುಗಡೆ: ಜಿ. ಪರಮೇಶ್ವರ, ಅಧ್ಯಕ್ಷತೆ: ಪುರಷೋತ್ತಮ ಬಿಳಿಮಲೆ, ಅತಿಥಿ: ಕೆ.ವಿ. ನಾಗರಾಜಮೂರ್ತಿ, ಪ್ರಶಸ್ತಿ ಸ್ವೀಕರಿಸುವವರು: ರಾಮನಗರದ ಕರ್ನಾಟಕ ಜಾನಪದ ಪರಿಷತ್ತು, ರಂಜಾನ್ ದರ್ಗಾ, ಕಾ.ತ. ಚಿಕ್ಕಣ್ಣ, ಶ್ರೀನಿವಾಸ್ ಜಿ. ಕಪ್ಪಣ್ಣ, ಕಸ್ತೂರಿ ಶಂಕರ್, ಆಯೋಜನೆ: ಡಾ.ಸಿ. ಸೋಮಶೇಖರ–ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ನಿರಂಜನ ಶತಮಾನ ಸಮಾರೋಪ ವಿಚಾರಸಂಕಿರಣ, ನಿರಂಜನ ಮರು ಓದು ಸರಣಿ ಬಿಡುಗಡೆ: ಭಾಗವಹಿಸುವವರು: ತೇಜಸ್ವಿನಿ ನಿರಂಜನ, ರಾಜೇಂದ್ರ ಚೆನ್ನಿ, ಎನ್. ಗಾಯತ್ರಿ, ಎಚ್. ದಂಡಪ್ಪ, ಎಂ.ಜಿ. ಹೆಗಡೆ, ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಆಯೋಜನೆ: ಕ್ರಿಯಾ ಮಾಧ್ಯಮ, ಜನ ಶಿಕ್ಷಣ ಟ್ರಸ್ಟ್, ಸ್ಥಳ: ಸೌಹಾರ್ದ, ಮೊದಲನೇ ಮಹಡಿ, ಸಿಎಸ್‌ಐ ಕಾಂಪೌಂಡ್, ಸುಬ್ಬಯ್ಯ ಸರ್ಕಲ್ ಬಳಿ, ಮಿಷನ್ ರಸ್ತೆ, ಬೆಳಿಗ್ಗೆ 10.30

ನಿರಂಜನ

ಎಐಟಿಯುಸಿ ಸಂಸ್ಥಾಪನಾ ದಿನಾಚರಣೆ: ಭಾಗವಹಿಸುವವರು: ಅಮರ್‌ಜೀತ್ ಕೌರ್, ಎಚ್.ವಿ. ಅನಂತ ಸುಬ್ಬರಾವ್, ಸಿದ್ದನಗೌಡ ಪಾಟೀಲ, ಬಾಬು ಮ್ಯಾಥ್ಯೂ, ವಿಜಯಭಾಸ್ಕರ್ ಡಿ.ಎ., ಎಂ. ದೀಪಕ್, ಎಚ್.ಆರ್. ಶೇಷಾದ್ರಿ, ಆಯೋಜನೆ: ಎಐಟಿಯುಸಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಸಮೂಹ ಗಾಯನ, ಗೀತ ಗಾಯನ ಶಿಬಿರ: ಉದ್ಘಾಟನೆ: ಎಂ.ಆರ್. ಸತ್ಯನಾರಾಯಣ, ಅಧ್ಯಕ್ಷತೆ: ವನಜಾಕ್ಷಿ ಆರ್. ಹಳ್ಳಿಯವರ, ಅತಿಥಿ: ಆರ್. ಚಂದ್ರಶೇಖರ್, ಪ್ರಾಸ್ತಾವಿಕ ನುಡಿ: ಬಂಡ್ಲಹಳ್ಳಿ ವಿಜಯಕುಮಾರ್, ಈ. ಬಸವರಾಜು, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಹಾಲಕ್ಷ್ಮಿಪುರ, ಬೆಳಿಗ್ಗೆ 10.30

ಸಮುದಾಯ ಸಂಪರ್ಕ: ಡಾ. ಮಂಜುಳಾ, ಆಯೋಜನೆ: ನಿಮ್ಹಾನ್ಸ್, ಸ್ಥಳ: ಲಾಲ್‌ಬಾಗ್ ಉದ್ಯಾನ, ಬೆಳಿಗ್ಗೆ 11

'ನಮ್ಮ ಸರ್ಕಾರ, ನಮ್ಮ ರಿಪೋರ್ಟ್ ಕಾರ್ಡ್' ರಾಜ್ಯ ಸರ್ಕಾರದ ಎರಡು ವರ್ಷಗಳ ನಾಗರಿಕ ವಿಮರ್ಶೆ: ಅಧ್ಯಕ್ಷತೆ: ಟಿ.ಆರ್. ರಘುನಂದನ್, ಭಾಗವಹಿಸುವವರು: ಶಿವಸುಂದರ್, ವಿನೋದ್ ವ್ಯಾಸಲು, ಸತ್ಯಪ್ರಕಾಶ್ ಇ., ಅಶೋಕ್ ಕೆ.ಎಂ. ಗೌಡ, ಎಚ್.ಎನ್. ದೇವರಾಜು, ಆಯೋಜನೆ: ಸಿವಿಕ್, ಸ್ಥಳ: ಹೋಟೆಲ್ ಪರಾಗ್, ರಾಜಭವನ ರಸ್ತೆ, ಮಧ್ಯಾಹ್ನ 2.30

ರಹಮಾನ್ ಖಾನ್ ಸ್ಮಾರಕ 'ಕನ್ನಡ ಕಟ್ಟಾಳು ಮತ್ತು ನಿಸ್ಸೀಮ್ ಕನ್ನಡತಿ' ಪ್ರಶಸ್ತಿ ಪ್ರದಾನ, ಜಾನಪದ ಜಂಗಮ ಎಸ್.ಕೆ. ಕರೀಂಖಾನ್ ನೆನಪು: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಸ್ಮರಣ ಸಂಚಿಕೆ ಬಿಡುಗಡೆ: ಸಂತೋಷ ಹಾನಗಲ್, ಆಶಯ ನುಡಿ: ಎ.ಎಸ್. ನಾಗರಾಜಸ್ವಾಮಿ, ಪ್ರಶಸ್ತಿ ಸ್ವೀಕರಿಸುವವರು: ಬಿ.ಎಂ. ನಾರಾಯಣಸ್ವಾಮಿ, ಜಯಲಕ್ಷ್ಮಿ ಪಾಟೀಲ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 4.30

ನೃತ್ಯ ಪರಂಪರಾ ಉತ್ಸವ–2025: ಸನ್ಮಾನಿತರು: ಪಿ. ವೆಂಕಟರಮಣ, ಅನುರಾಧ ವೆಂಕಟರಮಣ, ಕುಚಿಪುಡಿ ನೃತ್ಯ ಪ್ರದರ್ಶನ: ಸಂಯುಕ್ತ ಮತ್ತಾ, ಸೌಮ್ಯ, ಸ್ನೇಹಾ ಶಶಿಕುಮಾರ್, ಸ್ಮೃತಿ ವಿಷ್ಣು, ಆರತಿ ಶಂಕರ್, ಅತಿಥಿಗಳು: ಶುಭಾ ಧನಂಜಯ, ಜಯಂತಿ ಈಶ್ವರಪುತಿ, ಆಯೋಜನೆ: ಕುಚಿಪುಡಿ ಪರಂಪರಾ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

32ನೇ ವಾರ್ಷಿಕ ಸಂಗೀತೋತ್ಸವ: ಗಾಯನ: ವಿಘ್ನೇಶ್ ಈಶ್ವರ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಬಿ. ಶಿವರಾಮನ್, ಘಟ: ಗಿರಿಧರ್ ಉಡುಪ, ಆಯೋಜನೆ: ನಾದಸುರಭಿ, ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಆವರಣ, ಕೋರಮಂಗಲ, ಸಂಜೆ 6

ಸರ್ದಾರ ವಲ್ಲಭಭಾಯ್ ಪಟೇಲ್ ಜನ್ಮದಿನ: ಭಾಗವಹಿಸುವವರು: ರಮೇಶ ದೊಡ್ಡಪುರ, ಎಲ್. ವೆಂಕಟಪ್ಪ, ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಆವರಣ, ಕೆಂಪೇಗೌಡನಗರ, ಸಂಜೆ 6

FURNITURE WAREHOUSE SALE
DIVISION OF SME TRADING
121/3 - 121/8, Near Alanoville Villa, Kannur Village & Post Bengaluru East, Bengaluru - 560077.
LOCATE US
SOFAS | BEDS | DINING | OFFICE | OUTDOOR | RECLINER | HOME DECOR & MORE

4 DAYS BIGGEST SALE

FREE DELIVERY | FREE INSTALLATION | PAY IN EASY INSTALLMENTS AT NO EXTRA COST | HDFC BANK We understand your world | BAJAJ FINSERV | EMI
+91 9663697348 / 9742522839

BANGALORE INTERNATIONAL CENTRE
Azim Premji University

ಕೃಷ್ಣೆಯಿಂದ ಕಾವೇರಿವರೆಗೆ | Krishna to Kaveri

Programme Schedule

DAY 1 | 1 NOV 2025

10 - 10:50 AM	ಉದ್ಘಾಟನೆ | Inauguration | *Ground Floor Foyer*
	ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಎಂ.ಸಿ. ರಮೇಶ್ ಅವರಿಂದ | By Nagathihalli Chandrashekhar & M C Ramesh
	ಪೂಜಾ ಕುಣಿತ, ಸೋಮನ ಕುಣಿತ, ಧ್ವಜಾರೋಹಣ ಮತ್ತು ನಾಡಗೀತೆ | Pooja Kunitha, Somana Kunitha, Flag Hoisting & the State Anthem
11 AM – 12:30 PM	ಮುಂಜಾನೆಯ ರಾಗಗಳು | Morning Melodies | *Auditorium*
11 AM – 12:30 PM	ಶ್ರೇಷ್ಠ ಕಥೆಯ ಹುಡುಕಾಟ | The Great Story Hunt | *Library*
12 PM – 1:30 PM	ಕನ್ನಡ ಗೊತ್ತಿಲ್ಲ | Kannada Gottilla | *Boardroom*
2 PM – 3:30 PM	ಸುತ್ತ ಮುತ್ತ ಗೊತ್ತಾ ? | Sutta Mutta Gotta? | *Hall 1*
3 PM – 4 PM	ಮಧ್ಯಾಹ್ನದ ಮಾಯಾಲೋಕ | An Afternoon of Magic | *Library*
3 PM – 4 PM	ಕನ್ನಡ ಗೊತ್ತಿಲ್ಲ | Kannada Gottilla | *Boardroom*
4 PM – 5:30 PM	ಬೀಸೋ ಹಾಡ - ಶ್ರಮಿಕರ ಗೀತೆಗಳು | Beeso Haada - Songs of Labour | *Amphitheatre*
5:30 PM – 6:45 PM	ಪ್ರತಿಬಿಂಬ - #13, ಶ್ರೀಮಾತ, ಸಾಧನಕೇರಿ, ಧಾರವಾಡ | Prathibimba - #13, Srimata, Sadhanakeri, Dharwad | *Auditorium*
7:30 PM – 9 PM	ನೂರು ವರ್ಷಗಳ ಸಂಭ್ರಮ! | 100 Years of Grooving! | *Auditorium*

DAY 2 | 2 NOV 2025

7:30 AM – 9 AM	ಕರ್ನಾಟಕದಲ್ಲಿ ಯೋಗ: ಪರಿಕಲ್ಪನೆಗಳು ಮತ್ತು ಪರಂಪರೆ | Yoga in Karnataka: Concepts and Traditions | *Terrace*
10 AM – 11 AM	ಕೃಷ್ಣಾ ಮತ್ತು ಕಾವೇರಿ ನದಿ ತೀರದ ಹಾಡುಗಳು | Songs from the Banks of Krishna and Kaveri | *Amphitheatre*
11 AM – 12:30 PM	ಹಂಪಿಯ ಕಾಣೆಯಾದ ಕಲ್ಲು ಗಳು | The Missing Rocks of Hampi | *Library*
11:30 AM – 1 PM	ಕನ್ನಡ ಚಿತ್ರರಂಗದ ಸ್ವರ್ಣಯುಗ | The Golden Era of Kannada Cinema | *Auditorium*
2 PM – 3:30 PM	ಡಿಜಿಟಲ್ ಕನ್ನಡ ಅಕ್ಷರಶೈಲಿ | Digital Kannada Fonts | *Library*
3 PM – 4:30 PM	ಇಳಿದು ಬಾ ತಾಯಿ | Ilidu Baa Taaye | *Auditorium*
3 PM – 4:30 PM	ಚಿತ್ತಾರ - ಮಕ್ಕಳಿಗಾಗಿ ಜಾನಪದ ಕಲೆ | Chittara Folk Art for Kids | *Library*
5 PM – 6:30 PM	ಡಿಜಿಟಲ್ ಕನ್ನಡ ಅಕ್ಷರಶೈಲಿ | Digital Kannada Fonts | *Boardroom*
5:30 PM – 7 PM	ಕೃಷ್ಣೆ - ಕಾವೇರಿಯರ ಹರಿವಿನ ಬೆರಗು | Wondrous Flow of Krishna and Kaveri | *Amphitheatre*
7:30 PM – 9 PM	ವಾಸು ದೀಕ್ಷಿತ್ ಕಲೆಕ್ಟಿವ್ | Vasu Dixit Collective | *Auditorium*

ಎರಡೂ ದಿನಗಳು | ON BOTH DAYS
ಸ್ಮಾರಕಗಳ ಪ್ರದರ್ಶನಗಳು / Exhibitions of Monuments
ವಚನಕಾರ್ತಿಯರು ಮತ್ತು ವನ್ಯಜೀವಿಗಳ ಕುರಿತ ಪ್ರದರ್ಶನಗಳು / Exhibitions on Women Vachana Poets and Wildlife
ಕಲಾ ಪ್ರದರ್ಶನ / Art Showcase
ಪುಸ್ತಕ ಮೂಲೆ / Book Corner
ಸಾಂಪ್ರದಾಯಿಕ ಆಟಗಳು / Traditional Board Games
ಕರ್ನಾಟಕದ ಸುತ್ತ ಸಂಸ್ಕೃತಿ-ಶೋಧಕ ಬೇಟೆ / Scavenger Hunt through Karnataka

Date & Time: 1 Nov 2025, **10** AM to **9** PM
2 Nov 2025, **7:30** AM to **9** PM
Venue: Bangalore International Centre
7, 4th Main Road, Domlur II Stage Bangalore 560071
All events are free and open to public
The festival is bilingual (Kannada and English)
For registration: www.bangaloreinternationalcentre.org

ದಿನಾಂಕ ಮತ್ತು ಸಮಯ: ನವೆಂಬರ್ 1, 2025 ರಂದು ಬೆಳಗ್ಗೆ **10** ರಿಂದ ರಾತ್ರಿ **9** ರವರೆಗೆ
ನವೆಂಬರ್ 2, 2025 ರಂದು ಬೆಳಗ್ಗೆ **7:30** ರಿಂದ ರಾತ್ರಿ **9** ರವರೆಗೆ
ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ,
7, 4ನೇ ಮುಖ್ಯ ರಸ್ತೆ, ದೊಮ್ಮಲೂರು 2ನೇ ಹಂತ ಬೆಂಗಳೂರು 560071
ಎಲ್ಲ ಕಾರ್ಯಕ್ರಮಗಳು ಉಚಿತವಾಗಿದ್ದು, ಸಾರ್ವಜನಿಕರಿಗೆ ಮುಕ್ತ ಪ್ರವೇಶವನ್ನು ಕಲ್ಪಿಸಲಾಗಿದೆ. ಈ ಹಬ್ಬವು ಎರಡು ಭಾಷೆಗಳಲ್ಲಿ (ಕನ್ನಡ ಮತ್ತು ಇಂಗ್ಲಿಷ್) ನಡೆಯಲಿದೆ.
ನೋಂದಣಿಗಾಗಿ: www.bangaloreinternationalcentre.org

ಸಾರ್ವೆ ಕುಸಿದು ಕಾರ್ಮಿಕ ಸಾವು ಮೂವರಿಗೆ ಗಾಯ

ಬೆಂಗಳೂರು: ಮಹದೇವಪುರ ಮುಖ್ಯರಸ್ತೆಯಲ್ಲಿ ನಾಲ್ಕು ಅಂತಸ್ತಿನ ಕಟ್ಟಡದ ದುರಸ್ತಿ ವೇಳೆ ಸಾರ್ವೆ ಕುಸಿದು ಬಿದ್ದು ಕಾರ್ಮಿಕರೊಬ್ಬರು ಮೃತಪಟ್ಟಿದ್ದಾರೆ.

ಹಾವೇರಿಯ ಯುಸೂಫ್ ಪಠಿಫ್ (35) ಮೃತ ಕಾರ್ಮಿಕ. ತನುಜಾ, ಆಕಾಶ್ ಸೇರಿ ಮೂವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಬ್ದುಲ್ ವಾಜೀದ್ ಅವರಿಗೆ ಸೇರಿದ ಕಟ್ಟಡದಲ್ಲಿ ದುರಸ್ತಿ ಕಾರ್ಯ ನಡೆಸಲಾಗುತ್ತಿತ್ತು. ಗುರುವಾರ ಸಂಜೆ ಏಕಾಏಕಿ ಸಾರ್ವೆ ಕುಸಿದ್ದಿದ್ದರಿಂದ ಕೆಳಕ್ಕೆ ಬಿದ್ದ ಪಠಿಫ್ ಅವರು ಗಂಭೀರವಾಗಿ ಗಾಯಗೊಂಡಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಕಟ್ಟಡದ ಮಾಲೀಕರ ನಿರ್ಲಕ್ಷ್ಯ ಘಟನೆಗೆ ಕಾರಣವಾಗಿದ್ದು, ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.

ಘಟನಾ ಸ್ಥಳಕ್ಕೆ ವೈಟ್‌ಫೀಲ್ಡ್ ಡಿಸಿಪಿ ಕೆ.ಪರಶುರಾಮ್ ಅವರು ಭೇಟಿ ನೀಡಿ ಪರಿಶೀಲಿಸಿದರು. ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಗುಣಮಟ್ಟದ ಜೇನುತುಪ್ಪ ಉತ್ಪಾದಿಸಿ’

ಜೇನು ಕೃಷಿ-ಉತ್ತಮ ಭವಿಷ್ಯಕ್ಕಾಗಿ ಆಹಾರ ಕಾರ್ಯಾಗಾರದಲ್ಲಿ ಪಾಟೀಲ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಂತರರಾಷ್ಟ್ರೀಯ ಮಾರುಕಟ್ಟೆಗೆ ತಕ್ಕಂತೆ ಗುಣಮಟ್ಟದ ಜೇನುತುಪ್ಪ ಉತ್ಪಾದಿಸಬೇಕು’ ಎಂದು ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಎ.ಬಿ. ಪಾಟೀಲ ಸಲಹೆ ನೀಡಿದರು.

ವಿಶ್ವ ಆಹಾರ ದಿನಾಚರಣೆ ಅಂಗವಾಗಿ ಕೃಷಿ ತಂತ್ರಜ್ಞರ ಸಂಸ್ಥೆ ಗುರುವಾರ ಆಯೋಜಿಸಿದ್ದ ‘ಜೇನು ಕೃಷಿ- ಉತ್ತಮ ಭವಿಷ್ಯಕ್ಕಾಗಿ ಆರೋಗ್ಯಕರ ಆಹಾರ’ ಕುರಿತ ತಾಂತ್ರಿಕ ಕಾರ್ಯಾಗಾರ ಮತ್ತು ವಸ್ತು ಪ್ರದರ್ಶನದಲ್ಲಿ ಅವರು ಮಾತನಾಡಿದರು.

‘ರಾಜ್ಯದಲ್ಲಿ 50 ಸಾವಿರ ರೈತರು ಜೇನು ಕೃಷಿ ಮಾಡುತ್ತಿದ್ದು, ವಾರ್ಷಿಕ ಒಂದು ಸಾವಿರ ಟನ್ ಜೇನುತುಪ್ಪ ಉತ್ಪಾದನೆ ಆಗುತ್ತಿದೆ. ಆದರೆ, ಗುಣಮಟ್ಟದ ಹಾಗೂ ಸಾವಯವ ಜೇನುತುಪ್ಪದ ಉತ್ಪಾದನೆ ಆಗುತ್ತಿಲ್ಲ. ಇದರಿಂದ ಜೇನು ಕೃಷಿಕರು ಬೇರೆ ಪ್ರದೇಶಗಳಿಗೆ ರಫ್ತು ಮಾಡಲು ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಜೇನು ಕೃಷಿಕರು ಹಾಗೂ ಜೇನು ಖರೀದಿದಾರರನ್ನು ಸಂಪರ್ಕಿಸಲು ಒಂದು ವೇದಿಕೆ ಕಲ್ಪಿಸುವ ಅವಶ್ಯಕತೆ ಇದೆ’ ಎಂದರು.

‘ಅಂತರರಾಷ್ಟ್ರೀಯ ಗುಣಮಟ್ಟದ ಸಾವಯವ ಜೇನುತುಪ್ಪದ ಉತ್ಪಾದನೆ ಹಾಗೂ ಪ್ರಮಾಣೀಕರಿಸುವ ವಿಷಯಗಳನ್ನು ಮಂಡನೆ ಮಾಡುವುದಲ್ಲದೇ, ಜೇನು ಕೃಷಿಕರಿಗೆ ಸೂಕ್ತ ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆ ಒದಗಿಸಲು ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಕೆಪೆಕ್ ಅಧಿಕಾರಿಗಳು ಭಾಗವಹಿಸಿದ್ದು, ಜೇನುಕೃಷಿಗೆ ಸಂಬಂಧಿಸಿದಂತೆ ಸರ್ಕಾರದ ಯೋಜನೆ ಕುರಿತು ಮಾಹಿತಿ ಹಂಚಿಕೊಳ್ಳಲಿದ್ದಾರೆ’ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಎಸ್. ನಂದಾ ಮಾತನಾಡಿ, ‘ತೋಟಗಾರಿಕೆ ಇಲಾಖೆ ರಾಜ್ಯದಲ್ಲಿ ಉತ್ಪಾದಿಸುವ ಜೇನುತುಪ್ಪವನ್ನು ‘ಝೇಂಕಾರ’ ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡಲಾಗುತ್ತಿದೆ. ಜೇನುಕೃಷಿಗೆ ಸಂಬಂಧಿಸಿದಂತೆ ಆಸಕ್ತ ರೈತರಿಗೆ ತರಬೇತಿ ನೀಡಲಾಗುತ್ತದೆ. ರಾಜ್ಯದಲ್ಲಿ ಹನಿ ಪಾರ್ಕ್ ನಿರ್ಮಿಸುವ ಉದ್ದೇಶ ಇದೆ’ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಜೇನು ಕೃಷಿಕ ಎಸ್.ಎಂ. ಶಾಂತವೀರಯ್ಯ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೇನು ಕೃಷಿಕರಾದ ಶಿರಸಿಯ ಮಧುಕೇಶ್ವರ ಹೆಗಡೆ, ಬೆಂಗಳೂರಿನ ಅಪ್ಪಾರ್ ಬಿ.ವಿ., ಚಿಕ್ಕಮಗಳೂರಿನ ಚಂದ್ರಶೇಖರ್ ಬಿ.ಆರ್., ಬೆಂಗಳೂರಿನ ಗೀತಾ ಎಂ., ದಕ್ಷಿಣ ಕನ್ನಡದ ಎಂ. ಪ್ರಜ್ವಲ್ ಅವರನ್ನು ಸನ್ಮಾನಿಸಲಾಯಿತು.

ಮುಖ್ಯಾಂಶಗಳು
- ಸಾವಯವ ಜೇನುತುಪ್ಪ ಉತ್ಪಾದನೆ ಇಲ್ಲ
- ಕೃಷಿಕರು- ಖರೀದಿದಾರರ ನಡುವೆ ವೇದಿಕೆ ಅಗತ್ಯ

ಕಾರ್ಯಕ್ರಮದಲ್ಲಿ ಎಸ್.ಎಂ. ವೀರಯ್ಯ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್. ನಂದಾ, ಎ.ಬಿ. ಪಾಟೀಲ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಡೀನ್ ಮೋಹನ್ ನಾಯಕ್ ಗ್ಲೋಬಲ್ ಗ್ರೀನ್ ಗ್ರೋತ್ ಸಿಎಂಡಿ ಚಂದ್ರಶೇಖರ್ ಎಂ. ಬಿರಾದಾರ್, ರೇನ್ ಫಾರೆಸ್ಟ್ ಅಲೈಯನ್ಸ್‌ನ ಸುಬ್ಬಾ ರೆಡ್ಡಿಕೊಂಡ, ಐಎಎಫ್‌ಟಿ ಅಧ್ಯಕ್ಷ ಎನ್.ಡಿ. ತಿವಾರಿ ಮತ್ತು ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

‘ಕಿರು ಆಹಾರ ಉದ್ಯಮ: ₹15 ಲಕ್ಷ ಸಹಾಯಧನ’

‘ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ಯೋಜನೆಯಡಿ ಕಿರು ಆಹಾರ ಉದ್ಯಮ ಸ್ಥಾಪಿಸಲು ₹15 ಲಕ್ಷ ಸಹಾಯಧನ ನೀಡಲಾಗುತ್ತದೆ. ಇದನ್ನು ಬಳಸಿಕೊಂಡು ಜೇನುತುಪ್ಪದ ಬ್ರ್ಯಾಂಡಿಂಗ್, ಪ್ಯಾಕೇಜಿಂಗ್ ಹಾಗೂ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಬಹುದು’ ಎಂದು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ (ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಸಲಹೆ ನೀಡಿದರು.

‘ನಮ್ಮ ದೇಶದಲ್ಲಿ ಜೇನುತುಪ್ಪಕ್ಕೆ ಹೆಚ್ಚು ಪ್ರಾಮುಖ್ಯವಿದೆ. ಜೇನು ಕೃಷಿ ಮಾಡಲು ತಾಳ್ಮೆ ಬೇಕು. ಜೇನು ಕೃಷಿ ಈಗ ಒಂದು ಉದ್ಯಮ ಆಗಿದೆ. ಜೇನು ಕೃಷಿ ಮಾಡಲು ತರಬೇತಿ ಪಡೆದು, ಯಶಸ್ವಿ ಆಗಬೇಕು’ ಎಂದರು.

ಸುದ್ದಿ 2 ನಿಮಿಷ

ಅಭಿಮಾನಿಗಳಿಂದ ತೊಂದರೆ: ನಟ ಧ್ರುವ ಸರ್ಜಾ ವಿರುದ್ಧ ದೂರು

ಬೆಂಗಳೂರು: ‘ನಟ ಧ್ರುವ ಸರ್ಜಾ ಅವರ ಅಭಿಮಾನಿಗಳಿಂದ ತೊಂದರೆ ಆಗುತ್ತಿದೆ’ ಎಂದು ಆರೋಪಿಸಿ ಶಾಸ್ತ್ರಿನಗರದ ನಿವಾಸಿ ಮನೋಜ್ ಅವರು ದೂರು ನೀಡಿದ್ದು, ಈ ಸಂಬಂಧ ಬನಶಂಕರಿ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ.

‘ಮನೋಜ್ ಅವರು ನೀಡಿದ ದೂರು ಆಧರಿಸಿ ಗಂಭೀರವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ಸೂಚನೆ ಮೇರೆಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ?: ‘ನಮ್ಮ ಮನೆಯ ಪಕ್ಕದಲ್ಲಿ ನಟ ಧ್ರುವ ಸರ್ಜಾ ಅವರು ನೆಲೆಸಿದ್ದಾರೆ. ಅವರ ವ್ಯವಸ್ಥಾಪಕ, ಚಾಲಕ ಹಾಗೂ ನಟನ ಅಭಿಮಾನಿಗಳು ನಮ್ಮ ಮನೆಯ ಎದುರಿನ ರಸ್ತೆಯಲ್ಲಿ ಅಡ್ಡಲಾಗಿ ವಾಹನಗಳನ್ನು ನಿಲ್ಲಿಸಿ ತೊಂದರೆ ನೀಡುತ್ತಿದ್ದಾರೆ. ಅವರ ಅಭಿಮಾನಿಗಳು ಧೂಮಪಾನ ಮಾಡುವುದು ಹಾಗೂ ಉಗುಳುವುದನ್ನು ಮಾಡುತ್ತಿದ್ದಾರೆ’ ಎಂದು ಮನೋಜ್ ದೂರು ನೀಡಿದ್ದಾರೆ.

ಬೈಕ್ ತಾಗಿದ ವಿಚಾರಕ್ಕೆ ಗಲಾಟೆ: ಟೆಕಿ ಮೇಲೆ ಹಲ್ಲೆ

ಬೆಂಗಳೂರು: ಜೆ.ಪಿ. ನಗರದ ಆರನೇ ಹಂತದಲ್ಲಿ ಬೈಕ್ ತಾಗಿದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಟೆಕಿ ಮೇಲೆ ಇಬ್ಬರು ಅಪರಿಚಿತರು ಹಲ್ಲೆ ನಡೆಸಿ ಪರಾರಿ ಆಗಿದ್ದಾರೆ.

ಹಲ್ಲೆಗೆ ಒಳಗಾಗಿರುವ ಟೆಕಿ ಪ್ರತೀಕ್ ಅವರು ಪುಟ್ಟೇನಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಹಲ್ಲೆ ನಡೆಸಿದ ಆರೋಪಿಗಳ ಪತ್ತೆ ಕಾರ್ಯ ಮುಂದುವರಿಸಿದ್ದಾರೆ.

ಹುಳಿಮಾವು ನಿವಾಸಿ ಪ್ರತೀಕ್ ಅವರು ಬುಧವಾರ ಬೆಳಿಗ್ಗೆ ಬೈಕ್‌ನಲ್ಲಿ ಕಚೇರಿಗೆ ತೆರಳುತ್ತಿದ್ದರು. ಜೆ.ಪಿ. ನಗರ ಆರನೇ ಹಂತದ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಇಬ್ಬರು ಅಪರಿಚಿತರು ಪ್ರತೀಕ್ ಅವರ ಬೈಕ್‌ಗೆ ದಾರಿ ಬಿಡಲಿಲ್ಲ. ಪ್ರತೀಕ್ ಅವರೇ ಬೈಕ್ ಅನ್ನು ನಿಧಾನವಾಗಿ ಮುಂದಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಆಗ ಬೈಕ್ ಆಕಸ್ಮಿಕವಾಗಿ ಅಪರಿಚಿತರಿಗೆ ತಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್ ತಾಗಿದ್ದರಿಂದ ಕೆರಳಿದ ಆರೋಪಿಗಳು ಬೈಕ್ ಕೀ ಕಿತ್ತುಕೊಂಡು ವಾಗ್ವಾದ ನಡೆಸಿದ್ದರು. ಇದಕ್ಕೆ ಪ್ರತಿಯಾಗಿ ಪ್ರತೀಕ್, ಅಪರಿಚಿತರನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದರು. ಇದರಿಂದ ಕೋಪಗೊಂಡ ಆರೋಪಿಗಳು ಮರದ ತುಂಡಿನಿಂದ ಪ್ರತೀಕ್ ಅವರ ತಲೆಗೆ ಹೊಡೆದು ಪರಾರಿ ಆಗಿದ್ದಾರೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿ ಪರಿಶೀಲಿಸಿ ಆರೋಪಿಗಳ ಪತ್ತೆ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನಿಯಮ ಉಲ್ಲಂಘನೆ: 63 ಬಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಮತ್ತು ಹೊರವಲಯಗಳಲ್ಲಿ ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತರ (ಪ್ರವರ್ತನ ದಕ್ಷಿಣ) ನೇತೃತ್ವದಲ್ಲಿ 12 ತಂಡಗಳು ಕಾರ್ಯಾಚರಣೆ ನಡೆಸಿ 380ಕ್ಕೂ ಅಧಿಕ ಬಸ್‌ಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿವೆ. 63 ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಬಸ್‌ಗಳಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಬೆಂಕಿ ನಂದಿಸುವ ಸಾಧನ, ತುರ್ತು ನಿರ್ಗಮನ ವ್ಯವಸ್ಥೆ ಸೇರಿದಂತೆ ಪ್ರಯಾಣಿಕರ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳನ್ನು ತಂಡವು ಪರಿಶೀಲನೆ ನಡಸಿತು. ಈ ಸಂದರ್ಭದಲ್ಲಿ ತೆರಿಗೆ ಪಾವತಿಸದೇ ಇರುವ ವಾಹನಗಳು, ರಹದಾರಿ ಉಲ್ಲಂಘಿಸಿರುವ ವಾಹನಗಳು ಪತ್ತೆಯಾದವು.

ದೇವನಹಳ್ಳಿ, ಅತ್ತಿಬೆಲೆ ಪ್ರದೇಶಗಳಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ. ಜಪ್ತಿ ಮಾಡಿದ ಬಸ್‌ಗಳಲ್ಲಿ ಇದ್ದ ಪ್ರಯಾಣಿಕರನ್ನು ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಮತ್ತು ಬೇರೆ ಖಾಸಗಿ ಬಸ್‌ಗಳಲ್ಲಿ ಕಳುಹಿಸಿಕೊಡಲಾಯಿತು. ಬಸ್‌ಗಳಲ್ಲಿ ಅನಧಿಕೃತವಾಗಿ ಸರಕು ಸಾಗಾಟ ಮಾಡದಂತೆ ಜಾಗೃತಿ ಮೂಡಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಾಸಗಿ ಬಸ್‌ಗಳನ್ನು ಸಾರಿಗೆ ಅಧಿಕಾರಿಗಳು ತಪಾಸಣೆ ನಡೆಸಿದರು

‘ಸುಳ್ಳು ಆರೋಪ ಹೊರಿಸಿ ಹಲ್ಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರದ ಜೋಳದ ವ್ಯಾಪಾರಿ ರಾಮಕೃಷ್ಣ ಅವರು ಸುಳ್ಳು ಆರೋಪ ಹೊರಿಸಿ ಪೊಲೀಸರಿಗೆ ದೂರು ನೀಡಿ ಬಂಧಿಸುವಂತೆ ಮಾಡಿದ್ದಾರೆ. ಠಾಣೆಯಲ್ಲಿ ಪೊಲೀಸರೊಂದಿಗೆ ರಾಮಕೃಷ್ಣ ಅವರೂ ಹಲ್ಲೆ ನಡೆಸಿದ್ದಾರೆ ಎಂದು ಮೆಕ್ಕೆ ಜೋಳದ ವ್ಯಾಪಾರಿ ಅಕ್ಬರ್ ಪಾಷಾ ದೂರಿದರು.

‘ರಾಮಕೃಷ್ಣ ಹಾಗೂ ಅವರ ತಮ್ಮ ಲಕ್ಷ್ಮೀಪತಿ ನಡುವೆ ವೈಮನಸ್ಸು ಇದೆ. ನಾನು ರಾಮಕೃಷ್ಣ ಅವರೊಂದಿಗೆ ಯಾವುದೇ ವ್ಯವಹಾರ ನಡೆಸಿಲ್ಲ. ಬೇಕಿದ್ದರೆ ಸಿ.ಸಿ.ಟಿ.ವಿ ಕ್ಯಾಮೆರಾ, ನನ್ನ ಬ್ಯಾಂಕ್ ಖಾತೆ, ನನ್ನ ಇಬ್ಬರು ಪತ್ನಿಯರ, ಮಕ್ಕಳ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಿ ಎಂದ ಅವರು, ‘ನಾನು ಸುಮಾರು ₹1.85 ಕೋಟಿ ನೀಡುವುದು ಬಾಕಿ ಇದೆ ಎಂದು ಸುಳ್ಳು ದೂರು ನೀಡಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಅಳಲು ತೋಡಿಕೊಂಡರು.

‘ನನ್ನ ತಮ್ಮ ಸದ್ದಾಂ ನಾಸೀರ್ ಮತ್ತು ರಾಮಕೃಷ್ಣರ ನಡುವೆ ವ್ಯವಹಾರ ಇದೆ. ಅವರು ಎಷ್ಟು ಹಣ ಕೊಡಲು ಬಾಕಿ ಇದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಹಾಗೂ ರಾಮಕೃಷ್ಣರ ತಮ್ಮ ಲಕ್ಷ್ಮೀಪತಿ ನಡುವೆ ವ್ಯವಹಾರ ಇದೆ. ರಾಮಕೃಷ್ಣಗೆ ಅವರ ತಮ್ಮನೊಂದಿಗೆ ಸರಿ ಇಲ್ಲ ಎನ್ನುವ ಕಾರಣಕ್ಕೆ ನನ್ನ ಮೇಲೆ ಆರೋಪ ಹೊರಿಸಿದ್ದಾರೆ’ ಎಂದು ಹೇಳಿದರು.

‘ರಾಮಕೃಷ್ಣ ನೇಪಾಳದಿಂದ ತಂದ ಕಳಪೆ ಗುಣಮಟ್ಟದ ಹಾಗೂ ಕಳ್ಳ ಸಾಗಣೆಯಿಂದ ತರಿಸಿದ್ದ ಜೋಳ ಖರೀದಿಸಿ, ತೆಲಂಗಾಣದಲ್ಲಿ ಮಾರುವಂತೆ ನನ್ನ ಹಾಗೂ ನನ್ನ ಸಹೋದರರ ಮೇಲೆ ಒತ್ತಡ ಹಾಕುತ್ತಿದ್ದರು. ಅದಕ್ಕೆ ನಾನು ಒಪ್ಪಿಲ್ಲ’ ಎಂದರು.

‘ಪೊಲೀಸರು ಕರೆದುಕೊಂಡು ಹೋಗಿ ನನಗೆ ಚಿತ್ರಹಿಂಸೆ ನೀಡಿದ್ದಾರೆ. ನನ್ನ ಸಹೋದರಿಯರು ಹೈದರಾಬಾದ್‌ನಲ್ಲಿರುವ ಅಕ್ಬರ್ ಅವರ ಮೂಲಕ ಸಚಿವ ಜಮೀರ್ ಅಹಮ್ಮದ್ ಬಳಿ ಸಹಾಯಕ್ಕೆ ಮನವಿ ಮಾಡಿದ್ದರು. ಆದರೆ, ವಂಚನೆ ಮಾಡಿದವರ ಪರವಾಗಿ ಸಚಿವರು ಇದ್ದಾರೆ ಎಂದು ರಾಮಕೃಷ್ಣ ಸುಳ್ಳು ಹಬ್ಬಿಸಿದ್ದಾರೆ’ ಎಂದು ತಿಳಿಸಿದರು.

‘ಈ ಪ್ರಕರಣದ ತನಿಖೆ ನಡೆಸಲಿ. ನನ್ನ ತಪ್ಪು ಇದ್ದರೆ ಗಲ್ಲಿಗೇರಿಸಲಿ. ಇಲ್ಲದೇ ಇದ್ದರೆ ಪೊಲೀಸರು ಮತ್ತು ರಾಮಕೃಷ್ಣ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our clients are desirous of entering into a development agreement in respect of property of (i) the land bearing **Survey No. 55/6A1** admeasuring 33 Guntas and (ii) the land bearing Survey No. 55/7 admeasuring 3 Acres 12 Guntas (including 1 Acre 25 Guntas of A Kharab), both situated at Gubbalala Village, Uttarahalli Hobli, Bengaluru South Taluk, which is owned by **Mr. V.S Chandrashekar**. The land parcel for which we are investigating the title is described in the schedule below and shall hereinafter be referred to as the "Schedule Properties."

If any person has any right, title, interest, claim, or demand in relation to the Schedule Properties or any part thereof, or has executed any transactions or documents (whether registered or unregistered) with the owners or their predecessors in title, having the effect of creating an encumbrance thereon, they are hereby called upon to submit their statements, objections, or claims in writing, along with supporting documentary evidence, to the undersigned within **fifteen (15) days** from the date of publication of this notice.
If no such objections are received within the said period, it shall be conclusively presumed that no person has any right, title, interest, claim, demand, charge, or encumbrance whatsoever over the Schedule Property or any part thereof, and we shall proceed to issue our opinion confirming that the owners have clear and marketable title to the Schedule Property.

SCHEDULE PROPERTIES

a. All that piece and parcel of immoveable property being the land bearing **Survey No. 55/6A1** admeasuring 33 Guntas situated at Gubbalala Village, Uttarahalli Hobli, Bengaluru South Taluk and bounded as follows:
East by : Land bearing Survey No. 61; **West by :**Remaining portion of land bearing **Survey No.55/6A1** belonging to Chartered Beverly; **North by :** Land belonging to Chartered Beverly bearing **Survey No. 55/6A1**; and **South by :** Land bearing Survey No. 55/7 belonging to Mr. **V.S. Chandrashekar.**

b. All that piece and parcel of immoveable property being the land bearing **Survey No. 55/7** admeasuring 3 Acres 12 Guntas (including 1 Acre 25 Guntas of A Kharab)situated at Gubbalala Village, Uttarahalli Hobli, Bengaluru South Taluk and bounded as follows:
East by: Road and land bearing Survey No. 61;**West by :** Road **North by :** Land bearing Survey No. 55/6A1; and **South by:** Land bearing **Survey No. 56**.

Gerald Manoharan,
Partner, JSA, Advocates,
18th Floor, SKAV 909, No. 9/1, Residency Road, Richmond Circle, Bengaluru – 560 001.
Ph : **080-43503600 / 43503610,**
E-mail : gerald@jsalaw.com
Place: Bangalore Date: 31/10/2025

JOB OPPORTUNITIES

General

WANTED OFFICE ASSISTANT (Male), Bommanahalli, Bangalore. Mail your resume to: starsilks@gmail.com

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

Teachers/ Professors

WANTED TRAINED lady teachers for English science for Primary Highschool Maitri English school Udayanagar Bengaluru16 8892949404

RENTAL PROPERTIES

Accommodation Available

Commercial

FOR RENT Independent Corner Building Suitable for Showroom Space @Jayanagar 4th Block 100Ft Road of 10,000Sqft. With Basement/ Ground/1st/2nd/3rd &4th Floor Each Floor 2400Sqft. With Lift,Parking,DG Power Suitable for Jewellary/Textile/ Saree Etc. Call- 9901453477

560 SQFT East facing Shop for Rent, BSK 3rd stage near Ring Road, prime location. 9686722226.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

FOR RENT Independent Corner Building Suitable for Showroom Space @BSK II STAGE, Wide Roads of 15,000Sqft. With Stilt,Ground, 1st/2nd/3rd/4th Terrace Each Floor 3000 Sqft With Lift,Parking,DG Power Suitable for Jewellary/Textile/ Saree/Hospital,Etc. Call-9901453477

FOR RENT Independent Building Suitable for Showroom Space @Kanakapura Road, J.P.NAGAR Metro Signal Near Piller No-74 of 2500-6000 Sqft. Ground Floor with Parking, DG Power Suitable for Automobile/Jewellary/ Textile/Saree, Etc. Call-9901453477

REAL ESTATE SELLING

House

Basaveshwaranagar

BANGALORE BASVESHWARNAGAR, Near Navarathna Jewellers 4 Bed, 4 Bath, 2 Hall, Kitchen and car parking duplex house for immediate sale. Rs. 3.60 Crores. Negotiable. Contact:- Suresh Owner:- 9448130702, 9148821881.

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

EDUCATION SUCCESS

ಮಂಜುನಾಥ ಜೆ. ಅವರಿಗೆ ಪಿಎಚ್.ಡಿ. ಪದವಿ

ಬೆಂಗಳೂರು ನಗರದ ಕೆ.ಎಲ್.ಇ. ಎಸ್. ನಿಜಲಿಂಗಪ್ಪ ಕಾಲೇಜಿನಲ್ಲಿ ಮುಖ್ಯ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ಮಂಜುನಾಥ ಜೆ. ಅವರಿಗೆ ತುಮಕೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಿಂದ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗಿದೆ. ತುಮಕೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಬಿ.ಟಿ. ಸಂಪತ್ ಕುಮಾರ್ ಅವರ ಮಾರ್ಗದರ್ಶನದಲ್ಲಿ **"ICT Literacy Competencies among Postgraduate Students of Library and Information Science in South Indian Universities: A Study"** ಎಂಬ ವಿಷಯದ ಮಹಾಪ್ರಬಂಧಕ್ಕಾಗಿ ಅವರಿಗೆ ಡಾಕ್ಟರೇಟ್ ಪದವಿ ಲಭಿಸಿದೆ. ಮಂಜುನಾಥ ಜೆ ಅವರು ಮೂಲತಃ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಪಾಲವ್ವನಹಳ್ಳಿ ಗ್ರಾಮದ ಶ್ರೀಮತಿ ಲೋಕಮಾತ ಮತ್ತು ದಿ|| ಜೆ.ಆರ್. ಗಂಗಾಧರಪ್ಪರವರ ಪುತ್ರರಾಗಿದ್ದಾರೆ.

Mysore

MYSORE DISTRICT ILAVALA HOBLI 30x40 Site Sale, 18 Lakhs, E-Katha "Sun City Homes" Excellent Property Buyers Contact: 9844603127

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

PERSONAL

Change of Name

I, GANGARAJU. H.S, Residing at Bengaluru have changed my name as H.S. GANGAIAH, vide affidavit dated 29/10/2025 before Notary K.S. Bammappanavar, Bengaluru

I, ARUN Shankrappa Gulagalajambagi S/o Shankrappa Gangappa Gulagalajambagi R/o B12-103, Alur BDA Villa Phase 2, Type 3, Alur, Bengaluru -562123 have changed my name from Arun Shankrappa Gulagalajambagi to Arun Gulagalajambagi vide Affidavit no. 20044 dated 28/10/2025.

GIREESHA E. Kyathagondanahalli, Yadalagatta, Chitradurga-577522, have changed my name to GIRISH E. vide affidavit dated- 28/10/2025

Lost

MISSING ORIGINAL Possession certificate bearing PR NO. 146/82-83 dated 12.7.1982 issued by BDA for site No. 68, in BSK 3rd stage, 3rd phase, 6th block to Sri M.L. Narayana Sastry. Phone No. 9980120044

₹5 ಕೋಟಿ ಆಸ್ತಿ ಬರೆದಿದ್ದ ಮನೆಗೆ ಕನ್ನ

ಕೇರ್ ಟೇಕರ್ ಬಂಧನ, ಜೆ.ಪಿ. ನಗರ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮಂಗಳಾ

ಬೆಂಗಳೂರು: ಕೇರ್ ಟೇಕರ್ ಹೆಸರಿಗೆ ₹5 ಕೋಟಿ ಮೌಲ್ಯದ ಆಸ್ತಿ ಬರೆದಿಟ್ಟು ಮಗಳಂತೆ ನೋಡಿಕೊಂಡಿದ್ದ ಮಾಲೀಕರ ಮನೆಗೆ ಕನ್ನ ಹಾಕಿದ್ದ ಮಹಿಳೆಯನ್ನು ಜೆ.ಪಿ. ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಂಗಳಾ (32) ಬಂಧಿತೆ.

ಆರೋಪಿಯಿಂದ 450 ಗ್ರಾಂ ಚಿನ್ನಾಭರಣ ಹಾಗೂ ಮೂರು ಕೆ.ಜಿ ಬೆಳ್ಳಿ ಸಾಮಗ್ರಿ ವಶಕ್ಕೆ ಪಡೆಯಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪಾರ್ಟಿ, ಬಾಯ್‌ಫ್ರೆಂಡ್, ಆನ್‌ಲೈನ್ ಬೆಟ್ಟಿಂಗ್ ಸಹವಾಸದಿಂದ ಮಾಲೀಕರ ಮನೆಯಲ್ಲಿ ಮಂಗಳಾ ಅವರು ಚಿನ್ನಾಭರಣ ಕಳ್ಳತನ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಜೆ.ಪಿ.ನಗರದ ಎರಡನೇ ಹಂತದ ನಿವಾಸಿ ಆಶಾ ಜಾಧವ್ ಅವರು ತಮ್ಮ ತಾಯಿಯನ್ನು ನೋಡಿಕೊಳ್ಳಲು 15 ವರ್ಷದ ಹಿಂದೆ ಮಂಗಳಾ ಅವರನ್ನು ಕೇರ್ ಟೇಕರ್ ಆಗಿ ನೇಮಿಸಿಕೊಂಡಿದ್ದರು. ವಯೋಸಹಜ ಆರೋಗ್ಯ ಸಮಸ್ಯೆಯಿಂದ ಹಾಸಿಗೆ ಹಿಡಿದಿದ್ದ ಆಶಾ ಅವರ ತಾಯಿಯನ್ನು ಮಂಗಳಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

ಆಶಾ ಜಾಧವ್ (58) ಅವರ ಪತಿ ಕೆಲವು ತಿಂಗಳ ಹಿಂದೆ ಮೃತಪಟ್ಟಿದ್ದರು. ದಂಪತಿಗೆ ಮಕ್ಕಳು ಇರಲಿಲ್ಲ. ಜೆ.ಪಿ. ನಗರದಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಹೊಂದಿದ್ದ ಆಶಾ ಅವರು ಮಂಗಳಾ ಅವರನ್ನೇ ಮಗಳಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೇ ₹5 ಕೋಟಿ ಮೌಲ್ಯದ ಮನೆ ಸೇರಿ ಇತರೆ ಆಸ್ತಿಯನ್ನೂ ಮಂಗಳಾ ಅವರ ಹೆಸರಿಗೆ ಬರೆದಿದ್ದರು ಎಂದು ಮೂಲಗಳು ಹೇಳಿವೆ.

‘ಆರೋಪಿಗೆ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ಆಡುವ ಅಭ್ಯಾಸವಿತ್ತು. ಅಲ್ಲದೇ ಮೋಜು–ಮಸ್ತಿಗೆ ಎಂದು ಪಬ್‌ಗೂ ತೆರಳುತ್ತಿದ್ದರು. ಬಾಯ್‌ಫ್ರೆಂಡ್‌ಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದರು. ಅದಕ್ಕಾಗಿ ಸಾಲ ಮಾಡಿದ್ದರು. ₹40 ಲಕ್ಷ ಸಾಲವನ್ನು ಆಶಾ ಅವರೇ ತೀರಿಸಿದ್ದರು. ಅದಾದ ಮೇಲೂ ಬೆಟ್ಟಿಂಗ್ ಆಡುವುದನ್ನು ಆರೋಪಿ ಬಿಟ್ಟಿರಲಿಲ್ಲ. ತಮ್ಮ ಹೆಸರಿಗೆ ಬರೆದಿದ್ದ ಮನೆಯನ್ನೂ ಆರೋಪಿ ಮಾರಾಟ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸಾಲ ತೀರಿಸುವ ಉದ್ದೇಶದಿಂದ ಮನೆಯಲ್ಲಿದ್ದ ಚಿನ್ನಾಭರಣವನ್ನು ಮಂಗಳಾ ಕಳವು ಮಾಡಿ ಕೀಯನ್ನು ನಿರ್ಜನ ಪ್ರದೇಶದಲ್ಲಿ ಎಸೆದಿದ್ದರು. ಕೀ ಕಳೆದಿರಬಹುದು ಎಂದು ಭಾವಿಸಿದ್ದ ಆಶಾ ಅವರು ದೀಪಾವಳಿ ಸಂದರ್ಭದಲ್ಲಿ ನಕಲಿ ಕೀ ಮೂಲಕ ಬೀರು ತೆಗೆಸಿದಾಗ 450 ಗ್ರಾಂ ಚಿನ್ನ ಹಾಗೂ 3 ಕೆ.ಜಿ ಬೆಳ್ಳಿ ಕಳ್ಳತನವಾಗಿರುವುದು ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಅಪರಿಚಿತರು ಮನೆಗೆ ನುಗ್ಗಿ ಕಳ್ಳತನ ಮಾಡಿರಬಹುದೆಂದು ಭಾವಿಸಿ ಜೆ.ಪಿ.ನಗರ ಠಾಣೆಗೆ ಆಶಾ ಅವರು ದೂರು ನೀಡಿದ್ದರು. ತನಿಖೆ ವೇಳೆ ಅನುಮಾನಗೊಂಡ ಪೊಲೀಸರು ಮಂಗಳಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಆಗ ಮಂಗಳಾ ಚಿನ್ನಾಭರಣ ಕಳ್ಳತನ ಮಾಡಿರುವುದು ಗೊತ್ತಾಗಿತ್ತು’ ಎಂದು ಮೂಲಗಳು ಹೇಳಿವೆ.

ವಿದೇಶದಲ್ಲಿ ಜನ್ಮದಿನ ಆಚರಣೆ

‘ಮಂಗಳಾ ಅವರನ್ನು ವಿದೇಶಕ್ಕೆ ಕರೆದೊಯ್ದು ಅಲ್ಲಿ ಜನ್ಮದಿನವನ್ನು ಆಚರಣೆ ಮಾಡಲಾಗಿತ್ತು. ಹುಡುಗನನ್ನು ನೋಡಿ ಮದುವೆ ಮಾಡಿಸುವ ಯೋಜನೆಯನ್ನೂ ಆಶಾ ಹೊಂದಿದ್ದರು’ ಎಂದು ಮೂಲಗಳು ಹೇಳಿವೆ

ಅಪರಾಧ ಸುದ್ದಿ

ಉದ್ಯಮದಲ್ಲಿ ನಷ್ಟ: ತಂದೆ, ಮಗ ಆತ್ಮಹತ್ಯೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮದಲ್ಲಿ ನಷ್ಟಕ್ಕೆ ಒಳಗಾಗಿ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದು, ಆ ಪೈಕಿ ತಂದೆ ಹಾಗೂ ಮಗ ಮೃತಪಟ್ಟಿರುವ ಘಟನೆ ದೇವನಹಳ್ಳಿ ತಾಲ್ಲೂಕಿನ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಹೆಗ್ಗನಹಳ್ಳಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ತಂದೆ ಕುಮಾರಪ್ಪ (60) ಹಾಗೂ ಅವರ ಪುತ್ರ ಅರುಣ್ ಕುಮಾರ್ (30) ಮೃತಪಟ್ಟಿದ್ದಾರೆ. ಕುಮಾರಪ್ಪ ಅವರ ಪತ್ನಿ ರಮಾ (55) ಹಾಗೂ ಅಕ್ಷಯ್ ಕುಮಾರ್ (25) ಅವರ ಸ್ಥಿತಿ ಗಂಭೀರವಾಗಿದ್ದು, ಹೆಬ್ಬಾಳದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅರುಣ್ ನೇಣು ಹಾಕಿಕೊಂಡಿದ್ದರೆ, ಉಳಿದ ಮೂವರು ವಿಷ ಕುಡಿದಿದ್ದರು ಎಂದು ಪೊಲೀಸರು ಹೇಳಿದರು. ಸ್ಥಳಕ್ಕೆ ಚಿಕ್ಕಜಾಲ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಮರಣೋತ್ತರ ಪರೀಕ್ಷೆ ನಡೆಸಲು ಮೃತದೇಹಗಳನ್ನು ಆಸ್ಪತ್ರೆಗೆ ರವಾನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕುಮಾರಪ್ಪ ಅವರು ದೇವನಹಳ್ಳಿ ತಾಲ್ಲೂಕಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದರು. ಉದ್ಯಮದಲ್ಲಿ ನಷ್ಟಕ್ಕೆ ಒಳಗಾಗಿದ್ದರು. ಸಾಲಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ ಎಂದು ಮೂಲಗಳು ಹೇಳಿವೆ.

ಘಟನೆ ನಡೆದ ಮನೆಯಲ್ಲಿ ಮದ್ಯದ ಹಾಗೂ ವಿಷದ ಬಾಟಲಿಗಳು ಪತ್ತೆಯಾಗಿವೆ. ಅವುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕುಮಾರಪ್ಪ

ಅರುಣ್ ಕುಮಾರ್

ಗಾಂಧಿನಗರ ಕ್ಷೇತ್ರದಲ್ಲಿ ಮತಗಳ ಮರು ಎಣಿಕೆ ಕೋರಿ ಸಲ್ಲಿಸಿದ್ದ ಅರ್ಜಿ

ಸಚಿವ ಗುಂಡೂರಾವ್ ವಿರುದ್ಧದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿನಿಧಿಸುವ ಗಾಂಧಿನಗರ ಕ್ಷೇತ್ರದಲ್ಲಿ ಮತಗಳ ಮರು ಎಣಿಕೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ಮರು ಮತ ಎಣಿಕೆ ಕೋರಿ ಕ್ಷೇತ್ರದ ಮತದಾರರಾದ ಕೆ.ಎಸ್.ಸುರೇಶ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

2023ರಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಗಾಂಧಿನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡೂರಾವ್ ಆಯ್ಕೆಯಾಗಿದ್ದರು. ಅವರ ಪ್ರತಿಸ್ಪರ್ಧಿ ಬಿಜೆಪಿಯ ಸಪ್ತಗಿರಿ ಗೌಡ 105 ಮತಗಳಿಂದ ಪರಾಭವಗೊಂಡಿದ್ದರು. ಹಾಗಾಗಿ ಪುನಃ ಮತ ಎಣಿಕೆ ಮಾಡಬೇಕು. ಈಗಾಗಲೇ ಘೋಷಿಸಿರುವ ಫಲಿತಾಂಶವನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ದಿನೇಶ್ ಗುಂಡೂರಾವ್ ಪರ ಹೈಕೋರ್ಟ್ ವಕೀಲ ಬಿಪಿನ್ ಹೆಗ್ಡೆ ವಾದ ಮಂಡಿಸಿದ್ದರು.

ಚನ್ನಕೇಶವ ಟಿಂಗರಿಕರ್ ಅರ್ಜಿ ಪುರಸ್ಕೃತ

ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಸಾಕ್ಷಿಯೊಬ್ಬರ ಮೇಲೆ ಪ್ರಭಾವ ಬೀರಲು ಯತ್ನಿಸಿದ ಆರೋಪದಡಿ 19ನೇ ಆರೋಪಿ ಚನ್ನಕೇಶವ ಬಿ.ಟಿಂಗರಿಕರ್‌ಗೆ ಜಾಮೀನು ರದ್ದುಪಡಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಚನ್ನಕೇಶವ ಬಿ.ಟಿಂಗರಿಕರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರು ಪ್ರಭಾವ ಬೀರಿದ್ದಾರೆ ಎನ್ನಲಾದ ಸಾಕ್ಷಿಯ ಹೇಳಿಕೆ ದಾಖಲು ಪ್ರಕ್ರಿಯೆ ಮುಕ್ತಾಯವಾಗಿದೆ. ಇದರಿಂದ ಅರ್ಜಿದಾರ ಆರೋಪಿಗೆ ಜಾಮೀನು ಮಂಜೂರು ಮಾಡಿದ್ದ ಆದೇಶ ರದ್ದುಪಡಿಸಿ 2025ರ ಸೆಪ್ಟೆಂಬರ್ 15ರಂದು ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯ ಹೊರಡಿಸಿರುವ ತೀರ್ಪನ್ನು ರದ್ದುಪಡಿಸಲಾಗಿದೆ. ಹಿಂದಿನ ಜಾಮೀನು ಮಂಜೂರಾತಿ ಆದೇಶದಲ್ಲಿ ವಿಧಿಸಲಾಗಿರುವ ಷರತ್ತುಗಳ ಮೇಲೆ ಅರ್ಜಿದಾರರನ್ನು ಜಾಮೀನು ಮೇಲೆ ಬಿಡುಗಡೆ ಮಾಡಬೇಕು. ಅರ್ಜಿದಾರರು ಜಾಮೀನು ಷರತ್ತುಗಳ ಉಲ್ಲಂಘನೆ ಮಾಡಿದರೆ, ಜಾಮೀನು ರದ್ದತಿಗಾಗಿ ಪ್ರಾಸಿಕ್ಯೂಷನ್ (ಪ್ರಕರಣದ ತನಿಖೆ ನಡೆಸಿರುವ ಸಿಬಿಐ) ಮತ್ತೆ ಕೋರಬಹುದು’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಸ್ತೆ: ₹2,296 ಕೋಟಿ ಅನುಮೋದನೆ

ಅಲ್ಪಾವಧಿ ಟೆಂಡರ್ ಮೂಲಕ ಕಾಮಗಾರಿ
• ಸಚಿವ ಸಂಪುಟದಲ್ಲಿ ಯೋಜನೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳಲ್ಲಿರುವ ಮುಖ್ಯ–ಉಪ ಮುಖ್ಯ ರಸ್ತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಕ್ರಮವಾಗಿ ₹1,241.57 ಕೋಟಿ ಮತ್ತು ₹1,055 ಕೋಟಿ ಮೊತ್ತದ ಕ್ರಿಯಾಯೋಜನೆಗಳಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.

ನಗರ ಪಾಲಿಕೆಗಳ ವಿವಿಧ ವಾರ್ಡ್ ರಸ್ತೆ, ಚರಂಡಿ ಅಭಿವೃದ್ಧಿ, ನಿರ್ವಹಣೆ ಮತ್ತು ಮೂಲಸೌಕರ್ಯಗಳ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ. 2025–26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ₹1,055 ಕೋಟಿ ಅನುದಾನ ಒದಗಿಸಲು ಸಮ್ಮತಿಸಲಾಗಿದೆ.

ಈ ಕಾಮಗಾರಿಗಳನ್ನು ₹10 ಕೋಟಿಗೆ ಕಡಿಮೆ ಇರದಂತೆ ಪ್ಯಾಕೇಜ್ ಮಾಡಿ, ಕೆಟಿಪಿಪಿ ಕಾಯ್ದೆಯಂತೆ ಅಲ್ಪಾವಧಿ ಟೆಂಡರ್ ಕೈಗೊಂಡು ಕಾಮಗಾರಿ ನಡೆಸಬೇಕು. ಈ ಕಾಮಗಾರಿಗಳು ದೀರ್ಘಾವಧಿ ಬಾಳಿಕೆಯುಳ್ಳ ಆಸ್ತಿ ಸೃಜನೆ ಸ್ವರೂಪದ್ದಾಗಿದ್ದು, ಉತ್ತಮ ಗುಣಮಟ್ಟ ಕಾಯ್ದುಕೊಳ್ಳಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ದಿಷ್ಟ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಬೇಕು ಎಂದು ಸೂಚಿಸಲಾಗಿದೆ.

₹900 ಕೋಟಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಪ್ರಕಾರ, ಕಾಮಗಾರಿಗಳನ್ನು ಗುರುತಿಸಿ, ಅನುಷ್ಠಾನಗೊಳಿಸುವುದು ಜಿಬಿಎ ಮುಖ್ಯ ಆಯುಕ್ತರ ಜವಾಬ್ದಾರಿಯಾಗಿದೆ. ಬೆಂಗಳೂರಿನ ಸಮಗ್ರ ಅಭಿವೃದ್ಧಿಗಾಗಿ ಆಯ್ಕೆಯಾದ ರಸ್ತೆ, ಚರಂಡಿ, ಉದ್ಯಾನ ಸೇರಿದಂತೆ ಮೂಲಸೌಕರ್ಯ ಕಾಮಗಾರಿಗಳಾಗಿರುವುದರಿಂದ ಎಸ್‌ಸಿಎಸ್‌ಪಿ–ಟಿಎಸ್‌ಪಿ ಕಾಯ್ದೆ ಪ್ರಕಾರ ಕಾಮಗಾರಿಯನ್ನು ವಿಂಗಡಿಸಬೇಕು ಎಂದು ಹೇಳಲಾಗಿದೆ.

ಮೂಲಸೌಕರ್ಯ: ವಿಶೇಷ ಮೂಲಸೌಕರ್ಯ ಬಂಡವಾಳ ಬೆಂಬಲ ಯೋಜನೆಯಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿನ ಮುಖ್ಯ–ಉಪ ಮುಖ್ಯ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ₹1,241.57 ಕೋಟಿ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸಚಿವ ಎಚ್‌.ಕೆ. ಪಾಟೀಲ ವಿವರ ನೀಡಿದರು.

ಆಯಾ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ವಾರ್ಡ್‌ವಾರು ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದ್ದು, ಕ್ಷೇತ್ರಗಳ ಮಿತಿ ₹25 ಕೋಟಿ ಮತ್ತು ₹50 ಕೋಟಿಯಾಗಿದೆ. ಶಿವಾಜಿನಗರ ವಿಧಾನಸಭೆ ಕ್ಷೇತ್ರ ಹೊರತುಪಡಿಸಿ ಕಾಂಗ್ರೆಸ್ ಶಾಸಕರ ವಿಧಾನಸಭೆ ಕ್ಷೇತ್ರಕ್ಕೆ ತಲಾ ₹50 ಕೋಟಿಯಾಗಿದ್ದರೆ, ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಪದ್ಮನಾಭನಗರ ಕ್ಷೇತ್ರ (₹50 ಕೋಟಿ) ಹೊರತುಪಡಿಸಿ, ಬಿಜೆಪಿ ಶಾಸಕರ ಕ್ಷೇತ್ರಕ್ಕೆ ತಲಾ ₹25 ಕೋಟಿ ಮೊತ್ತದ ಕಾಮಗಾರಿ ಕ್ರಿಯಾಯೋಜನೆಯಲ್ಲಿದೆ.

ಯಾವ ವಿಧಾನಸಭೆ ಕ್ಷೇತ್ರಕ್ಕೆ ಎಷ್ಟು? (₹ಕೋಟಿಗಳಲ್ಲಿ)

ಕ್ಷೇತ್ರ	ರಸ್ತೆಗೆ ಡಾಂಬರು	ವಾರ್ಡ್ ಅಭಿವೃದ್ಧಿ	ಒಟ್ಟು
ಮಹದೇವಪುರ	138.50	25	188.50
ಬ್ಯಾಟರಾಯನಪುರ	70	50	120
ಯಶವಂತಪುರ	113	0	113
ಬೆಂಗಳೂರು ದಕ್ಷಿಣ	85.65	25	110.65
ಚಿಕ್ಕಪೇಟೆ	56.20	50	106.20
ಬೊಮ್ಮನಹಳ್ಳಿ	81.10	25	106.1
ಕೆ.ಆರ್. ಪುರ	77.68	25	102.68
ಶಾಂತಿನಗರ	42.45	50	92.45
ಸರ್ವಜ್ಞನಗರ	40.95	50	90.95
ವಿಜಯನಗರ	37.83	50	87.83
ಪದ್ಮನಾಭನಗರ	34.48	50	84.48
ಬಿಟಿಎಂ ಲೇಔಟ್	23.50	50	83.50
ರಾಜರಾಜೇಶ್ವರಿ ನಗರ	57	25	82
ಗೋವಿಂದರಾಜನಗರ	24.88	50	74.88
ಜಯನಗರ	47.80	25	72.80
ಹೆಬ್ಬಾಳ	17.31	50	67.31
ದಾಸರಹಳ್ಳಿ	41.45	25	66.45
ಸಿ.ವಿ. ರಾಮನ್ ನಗರ	40.90	25	65.90
ಚಾಮರಾಜಪೇಟೆ	11.50	50	61.50
ಪುಲಕೇಶಿನಗರ	10.10	50	60.10
ಮಲ್ಲೇಶ್ವರ	34.36	25	59.36
ಗಾಂಧಿನಗರ	7.60	50	57.60
ಯಲಹಂಕ	30.01	25	55.01
ಮಹಾಲಕ್ಷ್ಮಿ ಲೇಔಟ್	30	25	55
ಶಿವಾಜಿನಗರ	50	0	50
ರಾಜಾಜಿನಗರ	17.75	25	42.75
ಬಸವನಗುಡಿ	16.54	25	41.54
ಆನೇಕಲ್	2	0	2

ವಾರ್ಡ್ ಅಭಿವೃದ್ಧಿ ಕಾಮಗಾರಿಗಳು

₹200 ಕೋಟಿ	ಕೇಂದ್ರ ನಗರ ಪಾಲಿಕೆ
₹50 ಕೋಟಿ	ಪೂರ್ವ ನಗರ ಪಾಲಿಕೆ
₹267.25 ಕೋಟಿ	ಪಶ್ಚಿಮ ನಗರ ಪಾಲಿಕೆ
₹238 ಕೋಟಿ	ದಕ್ಷಿಣ ನಗರ ಪಾಲಿಕೆ
₹144.75 ಕೋಟಿ	ಉತ್ತರ ನಗರ ಪಾಲಿಕೆ

ರಸ್ತೆಗಳ ಮೇಲ್ಮೈ ಪದರ ಡಾಂಬರೀಕರಣ

₹208.65 ಕೋಟಿ	ಕೇಂದ್ರ ನಗರ ಪಾಲಿಕೆ
₹192.18 ಕೋಟಿ	ಪೂರ್ವ ನಗರ ಪಾಲಿಕೆ
₹334.62 ಕೋಟಿ	ಪಶ್ಚಿಮ ನಗರ ಪಾಲಿಕೆ
₹211.12 ಕೋಟಿ	ದಕ್ಷಿಣ ನಗರ ಪಾಲಿಕೆ
₹295 ಕೋಟಿ	ಉತ್ತರ ನಗರ ಪಾಲಿಕೆ

‘ಕಾನೂನು ಜಾರಿ ಸರ್ಕಾರದ ಹೊಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾನೂನುಗಳನ್ನು ರಚಿಸುವುದು ಮಾತ್ರವಲ್ಲ, ಅವು ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾನೂನು ಮತ್ತು ಸಂಸದೀಯ ಸುಧಾರಣಾ ಮಂಡಳಿಯು ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ನೂರು ಕಾನೂನುಗಳು– ನೂರು ಅಭಿಮತಗಳು’ ಪುಸ್ತಕದ ಮೂರು ಸಂಪುಟಗಳನ್ನು ಜನಾರ್ಪಣೆ ಮಾಡಿ ಅವರು ಮಾತನಾಡಿದರು.

‘ಜನರಿಗೆ ಒಳ್ಳೆಯದಾಗಬೇಕು ಅವರ ಸಮಸ್ಯೆ ಬಗೆಹರಿಯಬೇಕು ಎಂಬ ಉದ್ದೇಶದಿಂದ ಕಾನೂನುಗಳನ್ನು ರಚಿಸುತ್ತೇವೆ. ಅವು ಪರಿಣಾಕಾರಿಯಾಗಿ ಜಾರಿಯಾದರೆ ಮಾತ್ರ ಉಪಯೋಗವಾಗುತ್ತದೆ. ನಮ್ಮ ಹಿಂದಿನ ಸರ್ಕಾರದಲ್ಲಿ ಮೌಢ್ಯಗಳ ಪ್ರತಿಬಂಧಕ ಕಾಯ್ದೆ ಜಾರಿಗೆ ತಂದೆವು. ಆದರೆ ಅದು ಪರಿಣಾಮಕಾರಿಯಾಗಿ ಜಾರಿಯಾಗಲಿಲ್ಲ’ ಎಂದರು.

‘ವಿದ್ಯಾವಂತರೇ ಮೌಢ್ಯಗಳ ಆಚರಣೆಯಲ್ಲಿ ತೊಡಗಿದ್ದರಿಂದ ಆ ಕಾಯ್ದೆಯ ಉದ್ದೇಶ ಈಡೇರಲಿಲ್ಲ. ಬಸವಣ್ಣ 12ನೆಯ ಶತಮಾನದಲ್ಲೇ ಜಾತಿ ಹೋಗಬೇಕು ಎಂದಿದ್ದರು. ಅದಾಗಿ 850 ವರ್ಷಗಳಾದರೂ ಜಾತಿ ಹೋಗಿಲ್ಲ. ವಿದ್ಯಾವಂತರೇ ಜಾತಿಯ ಪ್ರತಿಪಾದಕರು. ಈ ಪರಿಸ್ಥಿತಿ ಬದಲಾಗದೆ ಕಾನೂನುಗಳನ್ನು ರೂಪಿಸಿದರೆ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ’ ಎಂದರು.

‘ನಮ್ಮ ಸರ್ಕಾರ ಬಂದ ಎರಡು ವರ್ಷಗಳ ಅವಧಿಯಲ್ಲಿ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರ ನೇತೃತ್ವದಲ್ಲಿ ನೂರು ಕಾನೂನುಗಳನ್ನು ರಚಿಸಿದ್ದೇವೆ. ಅವು ಜಾರಿಯಾಗಬೇಕು ಎಂಬ ಉದ್ದೇಶದಿಂದ ಕಾನೂನು ತಜ್ಞರು, ನಿವೃತ್ತ ನ್ಯಾಯಮೂರ್ತಿಗಳಿಂದ ಅಭಿಪ್ರಾಯ ಕೇಳಿದ್ದೆವು. ಅವು ಸಂವಿಧಾನ ಬದ್ಧವೇ ಎಂಬುದನ್ನು ಪರಿಶೀಲಿಸಿದ್ದೆವು. ಈಗ ಪುಸ್ತಕಗಳನ್ನು ಬಿಡುಗಡೆ ಮಾಡುತ್ತಿದ್ದೇವೆ’ ಎಂದರು.

‘ಜಾತಿ, ಆರ್ಥಿಕ, ಸಾಮಾಜಿಕ, ರಾಜಕೀಯ ಅಸಮಾನತೆ ಇದೆ. ಇವನ್ನು ತೊಲಗಿಸದೇ ಇದ್ದರೆ, ಅಸಮಾನತೆಯಿಂದ ನೊಂದ ಜನರು ಈ ವ್ಯವಸ್ಥೆಯನ್ನೇ ಧ್ವಂಸ ಮಾಡಬಹುದು ಎಂದು ಬಿ.ಆರ್‌.ಅಂಬೇಡ್ಕರ್ ಅವರು ಅಭಿಪ್ರಾಯಪಟ್ಟಿದ್ದರು. ಈ ಅಸಮಾನತೆಗಳನ್ನು ಹೋಗಲಾಡಿಸಲು ಕಾನೂನುಗಳನ್ನು ರಚಿಸಿದ್ದೇವೆ’ ಎಂದು ವಿವರಿಸಿದರು.

‘ಸಂಡೆ–ಮಂಡೆ ಲಾಯರ್’

ಸಿದ್ದರಾಮಯ್ಯ

‘ನಾನು ಕಾನೂನು ಪದವಿಯನ್ನು ಸರಿಯಾಗಿ ಓದಲಿಲ್ಲ, ವಕೀಲಿಕೆಯನ್ನೂ ಸರಿಯಾಗಿ ಮಾಡಲಿಲ್ಲ. ನನ್ನ ಕಾನೂನು ಅಧ್ಯಯನ ಅರ್ಧ ಕಾಲೇಜಿನಲ್ಲಿ, ಅರ್ಧ ರಾಜಕೀಯ ಕ್ಷೇತ್ರದಲ್ಲಿ ನಡೆಯುತ್ತಿತ್ತು. ಆಗಾಗ್ಗೆ ಕೋರ್ಟ್‌ಗೆ ಹೋಗುತ್ತಿದ್ದೆ. ಅಂತಹ ವಕೀಲರನ್ನು ನಮ್ಮ ಕಡೆ ಸಂಡೆ–ಮಂಡೆ ಲಾಯರ್ ಎನ್ನುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ವಕೀಲಿಕೆ ಮಾತ್ರ ಅಲ್ಲ. ಕಾನೂನು ಕಾಲೇಜಿನಲ್ಲಿ ಪಾಠವನ್ನೂ ಮಾಡುತ್ತಿದ್ದೆ. ಅದು ಎಷ್ಟರಮಟ್ಟಿಗೆ ಪಾಠ ಮಾಡುತ್ತಿದ್ದೆನೋ ಗೊತ್ತಿಲ್ಲ. ಆದರೆ ಚೆನ್ನಾಗಿ ಪಾಠ ಮಾಡುತ್ತೀಯ ಎಂದು ಕೆಲವರು ಹೇಳುತ್ತಿದ್ದರು’ ಎಂದರು.

‘ವಜಾ ಮಾಡಿದ್ದು ಏಕೆ?: ಸರ್ಕಾರ ಉತ್ತರಿಸಲಿ’

ಬೆಂಗಳೂರು: ‘ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯ ಅಧ್ಯಕ್ಷನಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ವಜಾಗೊಳಿಸಿರುವುದು ಏಕೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು’ ಎಂದು ನಿರ್ಗಮಿತ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ನೋಟಿಸ್ ಕೂಡಾ ನೀಡದೇ, ಯಾವುದೇ ವಿವರ ಪಡೆಯದೇ ಏಕಾಏಕಿ ವಜಾ ಮಾಡಿದ್ದರಿಂದ ದಿಗ್ಭ್ರಮೆಗೊಂಡಿದ್ದೇನೆ’ ಎಂದರು.

‘ನನ್ನ ಮೇಲೆ ವಿಶ್ವಾಸ ಇಟ್ಟು ಸಿದ್ದರಾಮಯ್ಯ ಈ ಸ್ಥಾನ ನೀಡಿದ್ದರು. ಆದರೆ, ನಾನು ಮಾಡಿದ ಕೆಲಸಗಳು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ತಲುಪಲು ಕೆಲವರು ಬಿಟ್ಟಿಲ್ಲ. ಬಂಜಾರ ಸಮುದಾಯದ ಕೆಲವು ಸ್ವಯಂಘೋಷಿತ ನಕಲಿ ನಾಯಕರ ಪಿತೂರಿಯಿಂದ ಹೀಗಾಗಿದೆ’ ಎಂದರು.

ಹೋರಾಟಗಾರರಾದ ರೇವತಿರಾಜ್, ನಾಗೇಶ್, ಸುರೇಂದ್ರ, ವಡ್ಡಗೆರೆ ನಾಗರಾಜಯ್ಯ ಇದ್ದರು.

ಜೆಡಿಎಸ್ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಟ್ರಂಕ್ ಪ್ರತಿಭಟನೆ ನಡೆಸಿದರು

ಜೆಡಿಎಸ್ ‘ಟ್ರಂಕ್’ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌.ಡಿ.ಕುಮಾರಸ್ವಾಮಿ ಅವರು ಖಾಲಿ ಟ್ರಂಕ್ ಎಂದಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಜೆಡಿಎಸ್ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಬೆಂಗಳೂರು ಘಟಕದ ಅಧ್ಯಕ್ಷ ಎಚ್‌.ಎಂ.ರಮೇಶ್ ಗೌಡ ಮತ್ತು ಬೆಂಗಳೂರು ನಗರ ಯುವ ಘಟಕದ ಅಧ್ಯಕ್ಷ ಆರ್‌.ಸ್ಯಾಮುಯೆಲ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಟ್ರಂಕ್‌ಗಳನ್ನು ಹಿಡಿದು ಪ್ರತಿಭಟಿಸಿದರು. ಶಿವಕುಮಾರ್ ಅವರು ಕುಮಾರಸ್ವಾಮಿ ಅವರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಮತ್ತು ಈಗ ಕೇಂದ್ರ ಸಚಿವರಾಗಿ ರಾಜ್ಯಕ್ಕೆ ನೀಡಿದ ಯೋಜನೆಗಳ ಕಡತಗಳಿದ್ದ ಒಂದು ಟ್ರಂಕ್ ಮತ್ತು ಶಿವಕುಮಾರ್ ವಿರುದ್ಧ ಇರುವ ಭ್ರಷ್ಟಾಚಾರದ ಆರೋಪಗಳಿಗೆ ಸಂಬಂಧಿಸಿದ ಕಡತಗಳಿದ್ದ ಇನ್ನೊಂದು ಟ್ರಂಕ್ ಅನ್ನು ಕಾರ್ಯಕರ್ತರು ಪ್ರತಿಭಟನೆ ವೇಳೆ ಪ್ರದರ್ಶಿಸಿದರು.

ಯಶವಂತಪುರ ಕೋಚಿಂಗ್ ಡಿಪೊ ಪರಿಶೀಲಿಸಿದ ಸಚಿವ ವಿ. ಸೋಮಣ್ಣ

ಉಪನಗರ ರೈಲು: ವಾರದೊಳಗೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಚುರುಕುಗೊಳಿಸಲಾಗುವುದು. ಬಿಎಸ್‌ಆರ್‌ಪಿ ಕಾಮಗಾರಿಗೆ ಮರು ಟೆಂಡರ್ ಕರೆಯುವ ಸಂಬಂಧ ಇನ್ನೊಂದು ವಾರದಲ್ಲಿ ಸಭೆ ಕರೆಯಲಾಗುವುದು ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಯಶವಂತಪುರ ಕೋಚಿಂಗ್ ಡಿಪೊವನ್ನು ಗುರುವಾರ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ಗುತ್ತಿಗೆದಾರರು ಹಿಂದೆ ಸರಿದಿರುವುದರಿಂದ ಬಿಎಸ್‌ಆರ್‌ಪಿ ಸದ್ಯ ಸ್ಥಗಿತಗೊಂಡಿದೆ. ಮರು ಟೆಂಡರ್ ಕರೆದು ಕಾಮಗಾರಿ ಮುಂದುವರಿಸಲಾಗುವುದು ಎಂದು ಹೇಳಿದರು.

ಮೆಟ್ರೊವನ್ನು ಕನಕಪುರ, ತುಮಕೂರಿಗೆ ವಿಸ್ತರಣೆ ಮಾಡುವ ಯೋಜನೆಯಿದೆ. ಕೆಲವೆಡೆ ರೈಲು ಹಳಿ ದ್ವಿಪಥಗೊಳ್ಳಲಿದೆ ಎಂದರು.

ಯಶವಂತಪುರ ಕೋಚಿಂಗ್ ಡಿಪೊದಲ್ಲಿ 400ಕ್ಕೂ ಅಧಿಕ ತಾಂತ್ರಿಕ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಂದು ದಿನಕ್ಕೆ 400ಕ್ಕೂ ಅಧಿಕ ಕೋಚ್‌ಗಳನ್ನು ಸ್ವಚ್ಛತೆ ಮಾಡಲಾಗುತ್ತದೆ. ಗಾಲಿಗಳಿಂದ ಹಿಡಿದು ರೈಲಿನಲ್ಲಿನ ಪ್ರತಿಯೊಂದನ್ನೂ ಪರಿಶೀಲನೆ ಮಾಡಿ, ಸರಿಪಡಿಸಲಾಗುತ್ತದೆ. ಈ ವರ್ಷ ಇ–ತ್ಯಾಜ್ಯ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗಿದೆ. ಇದರಿಂದ ಬರುವ ಹಣ ಸ್ವಚ್ಛತೆಗೆ ವೆಚ್ಚ ಮಾಡಲಾಗುತ್ತದೆ ಎಂದು ವಿವರಿಸಿದರು.

ದೇಶದಲ್ಲಿ ಒಟ್ಟು 65 ಸಾವಿರ ರೈಲ್ವೆ ಪೊಲೀಸರಿದ್ದಾರೆ. ಆರ್‌ಪಿಎಫ್ ಜೊತೆಗೆ ಸ್ಥಳೀಯ ಪೊಲೀಸರೂ ಇರುತ್ತಾರೆ. 4000 ರೈಲ್ವೆ ಪೊಲೀಸರ ಕೊರತೆ ಇದ್ದು, ನೀಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿದ್ದಿಗೆ ಬಿದ್ದಿದ್ದಾರೆ ಡಿಸಿಎಂ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುರಂಗ ರಸ್ತೆ ಮಾಡುವ ಜಿದ್ದಿಗೆ ಬಿದಿದ್ದಾರೆ. ಸಚಿವರು ಇದನ್ನು ಸ್ವ ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಳ್ಳದೆ ಸಾರ್ವಜನಿಕರ ಹಿತವನ್ನು ಕಾಪಾಡುವುದಕ್ಕೆ ಆದ್ಯತೆ ನೀಡಬೇಕು ಎಂದು ವಿ. ಸೋಮಣ್ಣ ಸಲಹೆ ನೀಡಿದ್ದಾರೆ.

ಸುರಂಗ ಯೋಜನೆಯಿಂದ ಆಗುವ ತೊಂದರೆಗಳ ಬಗ್ಗೆಯೂ ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕು. ಸಂಸದ ತೇಜಸ್ವಿ ಸೂರ್ಯ ಅವರ ನೀಡಿದ ಸಲಹೆಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು ಎಂದು ಹೇಳಿದ್ದಾರೆ.

ಹೊರ ವರ್ತುಲ ರೈಲು ಅಸಾಧ್ಯ

ಬೆಂಗಳೂರು ಹೊರ ವರ್ತುಲ ರೈಲ್ವೆ ಯೋಜನೆ ಅನುಷ್ಠಾನಗೊಳ್ಳುವುದು ಅಸಾಧ್ಯ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ತಿಳಿಸಿದರು.

ಯೋಜನೆಗೆ ₹65 ಸಾವಿರ ಕೋಟಿ ಆಗಬಹುದು ಎಂದು ಅಂದಾಜಿಸಲಾಗಿತ್ತು. ಪ್ರಸ್ತುತ ಭೂಸ್ವಾಧೀನ ಸೇರಿ ₹1 ಲಕ್ಷ ಕೋಟಿ ಬೇಕಾಗುತ್ತದೆ ಎಂಬ ಮಾಹಿತಿ ಬಂದಿರುವುದರಿಂದ ಯೋಜನೆ ಕಾರ್ಯಗತಗೊಳ್ಳುವುದು ಕಷ್ಟ ಎಂದು ಸ್ಪಷ್ಟಪಡಿಸಿದರು.

ಸಂಕ್ಷಿಪ್ತ ಸುದ್ದಿ

ಆರೋಗ್ಯ ತಪಾಸಣೆ ಶಿಬಿರ

ಬೆಂಗಳೂರು: ಏಷ್ಯನ್ ಪೇಂಟ್ಸ್ ಬ್ಯೂಟಿಫುಲ್ ಹೋಮ್ಸ್ ಅಕಾಡೆಮಿ ಮತ್ತು ನಾರಾಯಣ ಹೃದಯಾಲಯದ ಸಂಯುಕ್ತ ಆಶ್ರಯದಲ್ಲಿ ಗುತ್ತಿಗೆದಾರರು ಮತ್ತು ಪೇಂಟರ್‌ಗಳಿಗೆ ಬುಧವಾರ ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಒಟ್ಟು 75 ಮಂದಿ ಭಾಗವಹಿಸಿದ್ದರು. ರಕ್ತದ ಒತ್ತಡ, ರಕ್ತ ಪರೀಕ್ಷೆ, ಸಕ್ಕರೆ ಅಂಶ, ಇಸಿಜಿ ಇತ್ಯಾದಿ ಪರೀಕ್ಷೆ ನಡೆಸಿ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರು ಸಲಹೆಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ಪೇಂಟಿಗ್ ಗುತ್ತಿಗೆದಾರರಿಗೆ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ತರಬೇತಿ ನೀಡಲಾಯಿತು. ನಾರಾಯಣ ಹೃದಯಾಲಯ ತಂಡದ ಸದಸ್ಯರಾದ ದೇವರಾಜ, ಏಷ್ಯನ್ ಪೇಂಟ್ಸ್ ಬ್ಯೂಟಿಫುಲ್ ಹೋಮ್ಸ್ ಅಕಾಡೆಮಿ ತಂಡದ ಜಯಪ್ರಕಾಶ, ಅರುಣ ಹಾಗೂ ಇತರರು ಶಿಬಿರದ ಉಸ್ತುವಾರಿ ವಹಿಸಿದ್ದರು.

ವಾಟರ್ ಪ್ರೊಜೆಕ್ಷನ್ ಶೋ

ಬೆಂಗಳೂರು: ಬ್ರಿಗೇಡ್ ಗೇಟ್‌ವೇಯಲ್ಲಿರುವ ಒರಾಯನ್ ಮಾಲ್‌ನಲ್ಲಿ ನವೆಂಬರ್ 1ರಂದು ಕರ್ನಾಟಕರಾಜ್ಯೋತ್ಸವದ ಅಂಗವಾಗಿ ‘ನಮ್ಮ ಕರ್ನಾಟಕ ನಮ್ಮ ವಾಟರ್ ಪ್ರೊಜೆಕ್ಷನ್ ಶೋ’ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ನಕ್ಷೆಯ ಆಕಾರದಲ್ಲಿ ಪ್ರಕಾಶಮಾನವಾದ ಬಣ್ಣಗಳಲ್ಲಿ ಈ ದೃಶ್ಯಾವಳಿ ಪ್ರದರ್ಶನಗೊಳ್ಳಲಿದೆ. ಕಿತ್ತೂರು ರಾಣಿ ಚನ್ನಮ್ಮ ಅವರ ಚಿತ್ರಣವೂ ಪ್ರದರ್ಶನದ ಭಾಗವಾಗಿರುತ್ತದೆ. ಮನರಂಜನೆ ಮತ್ತು ಪರಂಪರೆಯ ವಿಶಿಷ್ಟತೆಯನ್ನು ಇಲ್ಲಿ ಕಾಣಬಹುದು. ಸಂಜೆ 6.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಸಾಹಿತ್ಯ ಸಮಾವೇಶ ನ.8ಕ್ಕೆ

ಬೆಂಗಳೂರು: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಅನಿಕೇತನ ಕನ್ನಡ ಬಳಗ ಹಾಗೂ ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್ ಸಹಯೋಗದಲ್ಲಿ ನವೆಂಬರ್ 8ರಂದು ಶೇಷಾದ್ರಿಪುರಂ ಕಾಲೇಜಿನಲ್ಲಿ ರಾಜ್ಯಮಟ್ಟದ ಆರನೇ ಮಹಿಳಾ ಸಾಹಿತ್ಯ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಸಾಹಿತಿ ಪುಷ್ಪಾ ಬಸವರಾಜ ಬಣಕಾರ್ ಅವರು ಈ ಸಮಾವೇಶದ ಸರ್ವಾಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಲೇಖಕಿ ಕೆ. ಷರೀಫಾ ಅವರು ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಎಸ್‌.ಎಲ್. ಭೋಜೇಗೌಡ ಅವರು 10 ಮಂದಿ ಸಾಧಕರಿಗೆ ‘ಗಾಂಧಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ’ ಪ್ರದಾನ ಮಾಡಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 15 ಮಂದಿ ಸಾಧಕರಿಗೆ ‘ಬಿ.ಎಂ.ಶ್ರೀ ಮತ್ತು ಅನಿಕೇತನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಇಂದಿನಿಂದ ಅಂಜನಾನಗರದಲ್ಲಿ ನಮ್ಮೂರ ಹಬ್ಬ

ರಾಜರಾಜೇಶ್ವರಿ ನಗರ: ಅಂಜನಾನಗರದ ನಾಡಪ್ರಭು ಕೆಂಪೇಗೌಡ ಆಟದ ಮೈದಾನದಲ್ಲಿ ಅಂಜನಾನಗರ ನಮ್ಮೂರ ಹಬ್ಬ, ಗಣೇಶೋತ್ಸವ, ಕರ್ನಾಟಕ ರಾಜ್ಯೋತ್ಸವ ಸಮಾರಂಭ ಅ.31ರಿಂದ ನ.2ರವರೆಗೆ ನಡೆಯಲಿದೆ ಎಂದು ಕಾರ್ಯಕ್ರಮದ ಆಯೋಜಕ ಎಂ.ಗಂಗರಾಜು ತಿಳಿಸಿದ್ದಾರೆ.

ಅ.31ರಂದು ಗಣೇಶ ಮೂರ್ತಿ ಪ್ರತಿಷ್ಠಾಪನೆ, ರಾಜ್ಯಮಟ್ಟದ ರಂಗೋಲಿ, ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದ್ದು, ಶಾಸಕ ಎಸ್‌.ಟಿ. ಸೋಮಶೇಖರ್ ಚಾಲನೆ ನೀಡುವರು.

ಸಾವಿತ್ರಿಗೆ ‘ನಿನ್ನೊಲುಮೆಯಿಂದಲೆ’ ಪುರಸ್ಕಾರ

ಸಾವಿತ್ರಿ ವ್ಯಾಸರಾವ್

ಬೆಂಗಳೂರು: ಕೆ.ಎಸ್‌. ನರಸಿಂಹಸ್ವಾಮಿ ಟ್ರಸ್ಟ್ ನೀಡುವ ‘ನಿನ್ನೊಲುಮೆಯಿಂದಲೆ’ ಗೌರವ ಪುರಸ್ಕಾರಕ್ಕೆ ಸಾವಿತ್ರಿ ವ್ಯಾಸರಾವ್ ಆಯ್ಕೆಯಾಗಿದ್ದಾರೆ.

ಕಾವ್ಯ ನಿರ್ಮಾಣಕ್ಕೆ ಬಾಳಿನುದ್ದಕ್ಕೂ ಸಹಕರಿಸಿದ ಕವಿ ಪತ್ನಿಗೆ ಈ ಪುರಸ್ಕಾರ ನೀಡಲಾಗುತ್ತಿದೆ. ಸಾವಿತ್ರಿ ಅವರು ಕವಿ ಎಂ.ಎನ್‌. ವ್ಯಾಸರಾವ್ ಅವರ ಪತ್ನಿಯಾಗಿದ್ದಾರೆ.

ನ.2ರಂದು ಸಂಜೆ 4 ಗಂಟೆಗೆ ಬಸವನಗುಡಿಯಲ್ಲಿ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಕವಿಪತ್ನಿ ದಿನಾಚರಣೆ ಹಾಗೂ ಈ ಪುರಸ್ಕಾರ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಂಸದ ಡಾ.ಸಿ.ಎನ್‌. ಮಂಜುನಾಥ್ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಟ್ರಸ್ಟ್‌ನ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದ್ದಾರೆ.

Swiggy

ಸ್ವಿಗ್ಗಿ ಲಿಮಿಟೆಡ್
(ಈ ಮೊದಲು ‘ಸ್ವಿಗ್ಗಿ ಪ್ರೈವೇಟ್ ಲಿಮಿಟೆಡ್’ ಮತ್ತು ಬಂಡಲ್ ಟೆಕ್ನಾಲೊಜಿಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
CIN: L74110KA2013PLC096530
ನೋಂದಾಯಿತ ಕಚೇರಿ: ನಂ. 55, ಸರ್ವೇ ಸಂಖ್ಯೆ: 8-14, ನೆಲಮಹಡಿ, ಐ ಮತ್ತು ಜೆ ಬ್ಲಾಕ್, ಎಂಬಸ್ಸಿ ಟೆಕ್ ವಿಲೇಜ್, ಔಟರ್ ರಿಂಗ್ ರೋಡ್, ದೇವರಬಿಸನಹಳ್ಳಿ, ಬೆಂಗಳೂರು, ಕರ್ನಾಟಕ, ಭಾರತ - 560103.
ದೂರವಾಣಿ: 080-68422422 | ಇಮೇಲ್ ಐಡಿ: ir@swiggy.in | ವೆಬ್ ತಾಣ: www.swiggy.com

ಸೆಪ್ಟೆಂಬರ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಲೆಕ್ಕಪರಿಶೋಧಿಸದ ಹಣಕಾಸು ಫಲಿತಾಂಶಗಳ ಹೇಳಿಕೆ (ಪ್ರತ್ಯೇಕ ಮತ್ತು ಕ್ರೋಢೀಕೃತ)

ಅಕ್ಟೋಬರ್ 30, 2025 ರಂದು ನಡೆದ ಸಭೆಯಲ್ಲಿ, ಕಂಪನಿಯ ನಿರ್ದೇಶಕರ ಮಂಡಳಿಯು ಸೆಪ್ಟೆಂಬರ್ 30, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಲೆಕ್ಕಪರಿಶೋಧಿಸದ ಕಂಪನಿಯ ಹಣಕಾಸು ವಿವರಗಳನ್ನು (“ಹಣಕಾಸು ವಿವರಗಳು”) ಅನುಮೋದಿಸಿದೆ.

ಸೀಮಿತ ಪರಿಶೀಲನೆಯ ವರದಿಯ ಜೊತೆಗೆ ಹಣಕಾಸು ವಿವರಗಳನ್ನು ಕಂಪನಿಯ ವೆಬ್‌ತಾಣದಲ್ಲಿ ಒದಗಿಸಲಾಗಿದೆ, ಅಂದರೆ https://www.swiggy.com/corporate/investor-relations/financial-results/, ಈ ವೆಬ್‌ತಾಣಕ್ಕೆ ಕ್ಯೂಆರ್ ಕೊಡನ್ನು ಸ್ಕ್ಯಾನ್ ಮಾಡುವ ಮೂಲಕ ಪ್ರವೇಶಿಸಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ,
ಸ್ವಿಗ್ಗಿ ಲಿಮಿಟೆಡ್
(ಈ ಮೊದಲು ‘ಸ್ವಿಗ್ಗಿ ಪ್ರೈವೇಟ್ ಲಿಮಿಟೆಡ್’ ಮತ್ತು ಬಂಡಲ್ ಟೆಕ್ನಾಲೊಜಿಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಸಹಿ,
ಶ್ರೀಹರ್ಷ ಮಜೇಟಿ
ವ್ಯವಸ್ಥಾಪಕ ನಿರ್ದೇಶಕ ಮತ್ತು ಸಮೂಹದ ಮುಖ್ಯ ಕಾರ್ಯಕಾರಿ ಅಧಿಕಾರಿ
DIN: 06680073

ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 30, 2025

ಸೂಚನೆ: ಈ ಮೇಲಿನ ಸೂಚನೆಯನ್ನು ಸೆಬಿ (ಲಿಸ್ಟಿಂಗ್ ಓಬ್ಲಿಗೇಶನ್ಸ್ ಅಂಡ್ ಡಿಸ್ಕ್ಲೋಶರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015 ರ ನಿಯಮ 33 ರೊಂದಿಗೆ ಉಲ್ಲೇಖಿಸಲಾದ ನಿಯಮ 47 (1) ರ ಪ್ರಕಾರ ನೀಡಲಾಗಿದೆ.

SZCC

ಸಂಸ್ಕೃತಿ ಸಚಿವಾಲಯ
ಭಾರತ ಸರ್ಕಾರ
सत्यमेव जयते

ಭಾರತ ಸರ್ಕಾರ
ಸಂಸ್ಕೃತಿ ಸಚಿವಾಲಯ

ದಕ್ಷಿಣ ವಲಯ ಸಂಸ್ಕೃತಿ ಕೇಂದ್ರ (ಎಸ್‌ಜೆಡ್‌ಸಿಸಿ), ತಂಜಾವೂರ್‌ನ ನಿರ್ದೇಶಕ ಹುದ್ದೆಗಾಗಿ ಜಾಹೀರಾತು

ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿನ ಸ್ವಾಯುತ್ತ ಅಂಗ ಸಂಸ್ಥೆಯಾಗಿರುವ ದಕ್ಷಿಣ ವಲಯ ಸಂಸ್ಕೃತಿ ಕೇಂದ್ರ (ಎಸ್‌ಜೆಡ್‌ಸಿಸಿ), ತಂಜಾವೂರ್‌ನ ನಿರ್ದೇಶಕ ಹುದ್ದೆಯ ಭರ್ತಿಗಾಗಿ, ಅರ್ಹ ಅಭ್ಯರ್ಥಿಗಳಿಂದ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದೇಶಾದ್ಯಂತ ವಿಭಿನ್ನ ಪ್ರದೇಶಗಳಲ್ಲಿ ಇರುವ ವಿವಿಧ ಜಾನಪದ, ಬುಡಕಟ್ಟು ಕಲೆಗಳಿಗೆ ಮತ್ತು ಸಂಸ್ಕೃತಿಗೆ ಉತ್ತೇಜನ ನೀಡುವುದಕ್ಕಾಗಿ, ಭಾರತ ಸರ್ಕಾರದಿಂದ ಸ್ಥಾಪಿಸಲಾಗಿರುವ ಏಳು ವಲಯ ಸಂಸ್ಕೃತಿ ಕೇಂದ್ರಗಳಲ್ಲಿ ಒಂದಾಗಿದೆ, ಸದರಿ ಎಸ್‌ಜೆಡ್‌ಸಿಸಿ, ತಂಜಾವೂರ್ ಸಂಸ್ಥೆ.
ಈ ನೇಮಕಾತಿಯನ್ನು ಡೆಪ್ಯುಟೇಶನ್/ಅಲ್ಪಾವಧಿ ಗುತ್ತಿಗೆ ಆಧಾರದ ಮೇರೆಗೆ, 3 ವರ್ಷಗಳ ಅವಧಿಗಾಗಿ ಮಾಡಲಾಗುತ್ತದೆ. ಅದಾಗ್ಯೂ, ಅಭ್ಯರ್ಥಿಯ ಸಾಧನೆಯ ಆಧಾರದ ಮೇರೆಗೆ ಈ ಅವಧಿಯನ್ನು 2 ವರ್ಷ ಕಾಲ ವಿಸ್ತರಿಸಬಹುದಾಗಿರುತ್ತದೆ. ಭಾರತ ಸರ್ಕಾರದ ನಿರ್ದೇಶಕ/ಸಹಾಯಕ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳು, ಸಾಂಸ್ಕೃತಿಕ ದಿಗ್ಗಜರು (ಕಲೆ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳಿಂದ ನೆಲೆನಿಂತು, ಅನುಭವ ಪಡೆದಿರುವ ಕಾರ್ಯನಿರತ ಕಲಾವಿದರು, ವಿದ್ವಾಂಸರು ಅಥವಾ ಪಂಡಿತರು) ಇದಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45 ದಿನಗಳೊಳಗೆ, ಸಂಪೂರ್ಣ ಭರ್ತಿ ಮಾಡಿದ ತಮ್ಮ ಅರ್ಜಿಯನ್ನು, ಮಾನ್ಯ ರಾಜ್ಯಪಾಲರು, ತಮಿಳನಾಡು ಸರ್ಕಾರ, ರಾಜಭವನ, ಚೆನ್ನೈ – 600022 ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಇನ್ನಿತರ ವಿವರಗಳು, ಸಂಸ್ಕೃತಿ ಸಚಿವಾಲಯದ www.indiaculture.nic.in ಮತ್ತು ಎಸ್‌ಜೆಡ್‌ಸಿಸಿ ಸಂಸ್ಥೆಯ www.szccindia.org ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

(ನಿರ್ದೇಶಕರು)
ಎಸ್‌ಜೆಡ್‌ಸಿಸಿ, ತಂಜಾವೂರ್

CBC 09132/12/0001/2526

AIR FORCE STATION
Jalahalli (East), Bangalore-560 013, Tele : 41187235

1. Applications are Invited from war widows/ widows of defence personnel killed while on duty, disabled soldiers/ ex servicemen and spouses/ widows of ex- servicemen for running the following SI Side shops at Air Force Station, Jalahalli (East and West) for period of 01 year initially.
2. Applications are invited from civilians also. However, category mentioned in Para 1 above will be given priority over Para 2 category. The mentioned SI No. from 10 to 13 (East Area) and 01 to 05 (West Area) will be yearly contract renewable annually for 05 years subject to satisfactory performance. The mentioned no's from 01 to 09 (East Area) will be contracted for 01 year only from the date of contract and fresh tender would be undertaken.
3. Applications are invited from SI Shops as listed:

Sl. No.	Name of the Shop	Location	Sl. No.	Name of the Shop	Location
EAST AREA					
1	General Store & Book stall	ETI	9	Supper bar	16 TS
2	Dry Cleaning shop		10	Mobile & watch repair shop	Akshaya complex
3	Tailor shop	E&ITI	11	Electric repair shop	
4	Fruit shop		12	Steel box shop	Akshaya complex II
5	Supper bar		13	Provision shop	7th camp
6	Sweet shop	E&ITI			
7	Dry cleaning shop				
8	General store & book stall				
WEST AREA					
1	Steel box shop	**Tripti complex**	4	Mochi shop	**Tripti complex**
2	Tailor shop		5	Newspaper/ Magazine	
3	Car garage				

4. Further, considering the prime locality and scope for progression, interested parties are promoted to set up franchise like shops including safal vegetable shop, Hallimane vegetable shop, Karnataka state fisheries co-operative shop, Nandu's, 99 store, organics etc.
5. The space earmarked for the shops will be run as SI venture. Salient QRs for running the shops is as follows:
(a) The shops should be brought up to desired standards on the expenses of vendor.
(b) Sanitation and hygiene towards operating the shops is to be met.
(c) Monthly rebate, rent and allied charges as applicable will be paid by the vendor to SI Fund and to BSO through MRO as per procedure in vogue.
6. Application forms can be procured on payment of Rs.500/- (non refundable) from 01 Nov 2025 to 17 Nov 2025, between 0900hrs to 1300hrs on all working days (except Saturdays & Sundays). Earnest money @ Rs.5,000/- per application must be deposited by applicant from 03 Nov 2025 to 17 Nov 2025 between 0900hrs to 1300hrs on all working days (except Saturdays & Sundays). Same can be collected from Service Institute office, Air force Station Jalahalli (East) Bangalore.
7. Contracts will be awarded through Auction Process. Minimum bench marking rebates will be set by AFS Jalahalli. Box will be placed at main gate, Air Force Station, Jalahalli (East), Bangalore-13 from 03 Nov 2025 to 18 Nov 2025 (1000hrs). Application forms should be in sealed envelopes separate for each shop with the name of shop written on it. If applied for more than one shop, application form for each shop should have copies of required documents. A vendor will be allotted not more than two shops. All applicants are to drop the sealed application envelopes in the said box which will be sealed at 1000hrs on 18 Nov 2025, and applications will be opened at 1100hrs on 18 Nov 2025, by BOO in the presence of applicants. In case selected applicants do not take over the allotment shop within the stipulated time, the earnest money will be forfeited and contract will not be awarded.
8. Interested persons are to attach a photo copy of the below mentioned documents along with the application form and produce the original ID card and original documents at the time of opening of applications for verification. Non adherence will result in disqualification of the applicant. Applicants not present during the Tendering will be disqualified. The shops will be allotted based on the highest bidders for the rebates to be paid, in the Auction process, in presence of the applicants.
(i) Discharge book **(ii) PPO No.** **(iii) Adhaar card**
(iv) Education certificate **(v) Bank pass book** **(vi) TIN/ GST /PAN No.**
(vii) FSSAI certificate (Supper bar, Sweet shop and restaurants)
9. The final call on allotment and location of the shops would be undertaken by an independent BOO depending on the responses received, considering the proposals for setting up of stalls not included in the main list.

PERSON TO CONTACT:
Service Institute office
Air Force Station Jalahalli (East), Bangalore 13 Tele : 41187235

ಕೋಮಲ್

ಆರು ತಿಂಗಳಲ್ಲಿ ಮೂರು ಸಿನಿಮಾ!

ಶಶಾಂಕ್ ನಿರ್ದೇಶನದಲ್ಲಿ ಡಾರ್ಲಿಂಗ್ ಕೃಷ್ಣ ನಟಿಸಿರುವ 'ಬ್ರ್ಯಾಟ್' ಸಿನಿಮಾ ಇಂದು (ಅ.31) ತೆರೆಕಾಣುತ್ತಿದೆ. 'ಲವ್ ಮಾಕ್ಟೇಲ್–2' ಬಳಿಕ ತಮ್ಮ ಸಿನಿಜರ್ನಿಯಲ್ಲೊಂದು ಬದಲಾವಣೆ ಮಾಡಿಕೊಂಡಿರುವ ಡಾರ್ಲಿಂಗ್ ಕೃಷ್ಣ ಹೊಸ ಸಿನಿಮಾಗಳನ್ನು ಒಪ್ಪಿಕೊಂಡೇ ಇಲ್ಲ! ಮುಂದಿನ ಮೂರು ತಿಂಗಳಲ್ಲಿ 'ಲವ್ ಮಾಕ್ಟೇಲ್–3' ತೆರೆಕಾಣಲಿದೆ ಎನ್ನುತ್ತಾ ಮಾತಿಗಿಳಿದರು ಕೃಷ್ಣ.

• ಅಭಿಲಾಷ್ ಪಿ.ಎಸ್.

• ಶಶಾಂಕ್ ಅವರ ಜೊತೆ ಎರಡನೇ ಪ್ರಾಜೆಕ್ಟ್...

ಹೌದು. 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾ ಆಗಿ ಮೂರ್ನಾಲ್ಕು ತಿಂಗಳಾದ ಮೇಲೆ ಈ ಸಿನಿಮಾ ಒಪ್ಪಿಕೊಂಡಿದ್ದೆ. ಎರಡು ಮೂರು ಕಥೆಗಳನ್ನು ಶಶಾಂಕ್ ಆಗ ಹೇಳಿದ್ದರು. ಅದರಲ್ಲಿ 'ಬ್ರ್ಯಾಟ್' ಒಂದಾಗಿತ್ತು. ನನಗೆ ಈ ಕಥೆ ಇಷ್ಟವಾಯಿತು. 'ಕೌಸಲ್ಯಾ..' ಗೆಲುವು ಈ ಕಾಂಬಿನೇಷನ್ ಮುಂದುವರಿಯಲು ಕಾರಣ. ಒಬ್ಬ ನಟನಾಗಿ ನನಗೆ ಶಶಾಂಕ್ ಅವರ ಮೇಲೆ, ಅವರ ಕಥೆಯ ಮೇಲೆ ನಂಬಿಕೆಯಿದೆ. ನಿರ್ದೇಶಕರಾಗಿ ಅವರಿಗೂ ನನ್ನ ಜೊತೆ ಕೆಲಸ ಮಾಡುವುದು ಸುಲಭವೆಂದೆನಿಸಿದೆ.

• ವರ್ಷಕ್ಕೆ ನಿಮ್ಮ ಮೂರ್ನಾಲ್ಕು ಸಿನಿಮಾಗಳು ಬರುತ್ತಿದ್ದವು. ಇದು ಕಡಿಮೆಯಾಗಿದ್ದೇಕೆ?

'ಲವ್ ಮಾಕ್ಟೇಲ್–2' ಆದ ಬಳಿಕ ಹೆಚ್ಚು ಕಥೆಗಳನ್ನು ಒಪ್ಪಿಕೊಂಡಿಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ತೆರೆಕಂಡ ಸಿನಿಮಾಗಳೆಲ್ಲವೂ 'ಲವ್ ಮಾಕ್ಟೇಲ್' ಆದ ಬಳಿಕ ಒಪ್ಪಿಕೊಂಡಿದ್ದ ಸಿನಿಮಾಗಳು. 'ಲವ್ ಮಾಕ್ಟೇಲ್–2' ಆದ ಮೇಲೆ ಕಥೆ ಆಯ್ಕೆಯಲ್ಲಿ ಹೆಚ್ಚು ಸೂಕ್ಷ್ಮವಾದೆ. ಈ ಸಿನಿಮಾ ಆದ ಬಳಿಕ ನಾನು ಒಪ್ಪಿಕೊಂಡಿದ್ದ ಮೊದಲ ಸಿನಿಮಾ 'ಕೌಸಲ್ಯಾ...', ಬಳಿಕ 'ಬ್ರ್ಯಾಟ್' ಹಾಗೂ ನಿರ್ದೇಶಕ ಆರ್.ಚಂದ್ರು ಅವರು ನಿರ್ಮಾಣ ಮಾಡಿರುವ, ರಾಜ್‌ಮೋಹನ್ ನಿರ್ದೇಶನದ 'ಫಾದರ್'. ಇದೂ ಒಂದೂವರೆ ವರ್ಷದ ಹಿಂದೆ ಆಗಿದ್ದು. ಅಲ್ಲಿಂದ ನಂತರ ಯಾವುದೇ ಹೊಸ ಸಿನಿಮಾಗಳನ್ನು ನಾನು ಒಪ್ಪಿಕೊಂಡಿಲ್ಲ. ಈಗ ಹೊಸ ಕಥೆಗಳನ್ನು ಕೇಳಲು ಆರಂಭಿಸಬೇಕು. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಆರ್ಥಿಕವಾಗಿ ಕೊಂಚ ಸದೃಢವಾಗಬೇಕು, ಸುರಕ್ಷಿತವಾಗಿರಬೇಕು ಎನ್ನುವ ಸಮಯದಲ್ಲಿ ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಳ್ಳುತ್ತೇವೆ. ಉದಾಹರಣೆಗೆ 'ಲವ್ ಮಾಕ್ಟೇಲ್' ಸಿನಿಮಾಗೆ 'ಮಿ.ಬ್ಯಾಚುಲರ್' ಸಿನಿಮಾದ ಅಡ್ವಾನ್ಸ್ ಹಣವೇ ಮೊದಲ ಹೂಡಿಕೆಯಾಗಿತ್ತು. ಹೀಗೆ ಒಂದು ಸಿನಿಮಾದಿಂದ ಇನ್ನೊಂದು ಸಿನಿಮಾಗೆ ಕೊಂಡಿ ಇರುತ್ತದೆ. ಒಂದು ಚಿಕ್ಕ ಗೆಲುವು ಸಿಕ್ಕಾಗ, ಜವಾಬ್ದಾರಿ ಹೆಚ್ಚುತ್ತದೆ. ಒಪ್ಪಿಕೊಳ್ಳುವ ಕಥೆಯ ಬಗ್ಗೆಯೂ ಹೆಚ್ಚು ಗಮನಹರಿಸಬೇಕಾಗುತ್ತದೆ. ಹೀಗಾಗಿ ಆಯ್ಕೆಯಲ್ಲಿ ಸೂಕ್ಷ್ಮವಾಗುತ್ತೇವೆ. ಸದ್ಯ ನಾನು ಮನಸ್ಸಿಗೆ ಒಪ್ಪಿಗೆಯಾಗುವ ಕಥೆಗಳನ್ನಷ್ಟೇ ಮಾಡುತ್ತಿದ್ದೇನೆ. ಈ ನಡುವೆ ನನ್ನದೇ 'ಲವ್ ಮಾಕ್ಟೇಲ್–3' ಕೈಗೆತ್ತಿಕೊಂಡು ಪೂರ್ಣಗೊಳಿಸಿದ್ದೇನೆ. ಇದನ್ನು ಮುಂದಿನ ಮೂರು ತಿಂಗಳೊಳಗಾಗಿ ತೆರೆಗೆ ತರುವ ಯೋಚನೆಯಲ್ಲಿದ್ದೇನೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಜನವರಿ–ಫೆಬ್ರುವರಿಯಲ್ಲಿ 'ಲವ್ ಮಾಕ್ಟೇಲ್' ಒಂದನೇ ಭಾಗ–ಎರಡನೇ ಭಾಗ ಬಂದಿತ್ತು. ಇದು ನಮ್ಮ ಲಕ್ಕಿ ಸಮಯ.

• 'ಬ್ರ್ಯಾಟ್'ನಲ್ಲಿರುವ ಪಾತ್ರದ ಬಗ್ಗೆ...

ನಾನು ಇದರಲ್ಲಿ 'ಕ್ರಿಸ್ಟಿ' ಎನ್ನುವ ಪಾತ್ರವನ್ನು ಮಾಡಿದ್ದೇನೆ. ಈತ ಓರ್ವ ಪ್ರಾಮಾಣಿಕ ಕಾನ್‌ಸ್ಟೆಬಲ್‌ನ ಪುತ್ರ. ಆದರೆ 'ಕ್ರಿಸ್ಟಿ'ಗೆ ಹಣದ ಮೋಹ. ಅಪ್ಪ–ಮಗನ ನಡುವಿನ ಸೈದ್ಧಾಂತಿಕ ಸಂಘರ್ಷವೇ 'ಬ್ರ್ಯಾಟ್'. ಇದುವೇ ಇಡೀ ಕಥಾಹಂದರ. ಇದಕ್ಕೆ ಕ್ರಿಕೆಟ್ ಬೆಟ್ಟಿಂಗ್‌ನ ಅಂಶ ಸೇರಿಸಿದ್ದೇವೆ. ಈ ಪಾತ್ರವನ್ನು ನಿಭಾಯಿಸುವುದು ಸವಾಲಿನಿಂದ ಕೂಡಿತ್ತು. ಈ ಪಾತ್ರದ ಬರವಣಿಗೆಯು ಹಲವು ಪದರಗಳನ್ನು ಹೊಂದಿದೆ. 'ಕ್ರಿಸ್ಟಿ'ಗೊಂದು ಸ್ವ್ಯಾಗ್, ಸ್ಟೈಲ್ ಇದೆ. ಈ ಪಾತ್ರಕ್ಕೆ ಯಾವುದೇ ರೀತಿ, ನೀತಿ ಇಲ್ಲ.

• 'ಫಾದರ್' ಸಿನಿಮಾ ಎಲ್ಲಿಯವರೆಗೆ ಬಂತು?

ಈ ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದೆ. ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ಇದೂ ರಿಲೀಸ್ ಹಂತದಲ್ಲಿದೆ. ಮುಂದಿನ ನನ್ನ ಮೂರು ಸಿನಿಮಾಗಳು ಬ್ಯಾಕ್ ಟು ಬ್ಯಾಕ್ ಬರಲಿವೆ. ಮುಂದಿನ ಆರು ತಿಂಗಳಲ್ಲಿ ಉಳಿದರೆಡು ಸಿನಿಮಾಗಳು ಬಂದರೂ ಆಶ್ಚರ್ಯವಿಲ್ಲ.

• 'ಲವ್ ಮಾಕ್ಟೇಲ್–3' ಹೇಗೆ ಭಿನ್ನವಾಗಿರಲಿದೆ?

ಮೊದಲೆರಡು ಸಿನಿಮಾಗಳ ಜಾನರ್ ಬೇರೆ ಬೇರೆಯದ್ದಾಗಿತ್ತು. ಒಂದನೇ ಭಾಗ 'ಕಮಿಂಗ್ ಆಫ್ ಏಜ್' ವಿಭಾಗದಲ್ಲಿತ್ತು. ಎಂದರೆ ಯುವ ಪಾತ್ರಗಳೇ ಹೆಚ್ಚಾಗಿತ್ತು. ಎರಡನೇ ಭಾಗ ಭಾವನಾತ್ಮಕ ಕಥೆಯನ್ನೊಳಗೊಂಡಿತ್ತು. ಮೂರನೇ ಭಾಗದಲ್ಲಿ ಪಾತ್ರಗಳು ಅವೇ ಇದ್ದರೂ ಭಿನ್ನ ವಿಷಯ, ಜಾನರ್ ಇರಲಿದೆ. ಇದನ್ನು ಸದ್ಯ ಬಿಟ್ಟುಕೊಡುವುದಿಲ್ಲ.

ವೈಯಕ್ತಿಕ ಜೀವನದಲ್ಲೂ 'ಫಾದರ್' ಆಗಿದ್ದೀರಿ...

ಹೌದು. ನಾನು ನನ್ನ ಸಿನಿಮಾಗಳ ಜೊತೆಗೆ 'ಲವ್ ಮಾಕ್ಟೇಲ್–3'ನಲ್ಲೇ ತೊಡಗಿಸಿಕೊಂಡಿದ್ದೆ. ಇದಕ್ಕೆ ಮಿಲನಾಳೂ ಸಾಥ್ ಕೊಟ್ಟಿದ್ದಳು. ಹೀಗಾಗಿ ಹೆಚ್ಚಿನ ಸಮಯವನ್ನು ಮಗಳಿಗಾಗಿ ಮೀಸಲಿಡಲು ಸಾಧ್ಯವಾಗಲೇ ಇಲ್ಲ. ಸದ್ಯ ಎರಡು ಪ್ರಾಜೆಕ್ಟ್ಸ್ ಕೈಯಲ್ಲಿದ್ದ ರೀತಿಯ ಅನುಭವ. ಸಿನಿಮಾ ಹಾಗೂ ಜೀವನ ಒಟ್ಟೊಟ್ಟಿಗೆ ಚೆನ್ನಾಗಿ ನಡೆಯುತ್ತಿದೆ. ಎರಡೂ ಒತ್ತಡದ ಕೆಲಸಗಳೇ ಆಗಿದ್ದರೂ ಖುಷಿಖುಷಿಯಾಗಿಯೇ ಮುನ್ನಡೆಯುತ್ತಿದ್ದೇವೆ.

ಬ್ರ್ಯಾಟ್
ಡಾರ್ಲಿಂಗ್ ಕೃಷ್ಣ, ಮನಿಶಾ ಕಂದಕೂರ್

ಕೋಮಲ್ ಕೈಯಲ್ಲಿ ಭಿನ್ನ ಪಾತ್ರಗಳು

ಕುಪ್ಪಂಡಾಸ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ 'ಬಿಗ್‌ಬಾಸ್' ಖ್ಯಾತಿಯ ತನಿಶಾ ಕುಪ್ಪಂಡ, ಕಾರ್ತಿಕ್ ಕಿರಣ್ ಸಂಕಪಾಲ್, ರವಿಕಿರಣ್ ಎನ್. ನಿರ್ಮಾಣ ಮಾಡಿರುವ 'ಕೋಣ' ಸಿನಿಮಾ ಇಂದು (ಅ.31) ತೆರೆಕಂಡಿದೆ. ನಿರ್ಮಾಣದ ಜೊತೆಗೆ 'ಲಕ್ಷ್ಮಿ' ಎಂಬ ಪಾತ್ರದಲ್ಲಿ ತನಿಶಾ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಸಿನಿಪಯಣದ ಎರಡನೇ ಇನಿಂಗ್ಸ್ ಆರಂಭಿಸಿರುವ ಕೋಮಲ್ 'ನಾರಾಯಣ'ನಾಗಿ ಇಲ್ಲಿ ಕಾಣಿಸಿಕೊಂಡಿದ್ದಾರೆ. ಸಿನಿಮಾದ ಅನುಭವ ಹಾಗೂ ಮುಂದಿನ ಸಿನಿಮಾಗಳ ಕುರಿತು ಕೋಮಲ್ ಮಾತಿಗಿಳಿದಾಗ...

'ಜಗ್ಗೇಶ್ ಅವರು ನಟಿಸಿದ್ದ '8ಎಂಎಂ' ಸಿನಿಮಾ ನಿರ್ದೇಶಿಸಿದ್ದ ಹರಿಕೃಷ್ಣ ಅವರೇ 'ಕೋಣ' ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಇದು ರಿಮೇಕ್ ಅಲ್ಲ. ಕೋಣ ಬಲಿ ಕೊಡುವ ವಿಷಯಕ್ಕೆ ಸಂಬಂಧಿಸಿದ ಸಿನಿಮಾ ಇದಾಗಿದೆ. ಕೋಣ ಬಲಿ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನಂಬಿರುವ ಊರಿಗೆ ನಾಯಕ ಪ್ರವೇಶಿಸಿದಾಗ ಏನೇನಾಗುತ್ತದೆ ಎನ್ನುವುದೇ ಕಥಾಹಂದರ. ನಾನು ಈ ಚಿತ್ರದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದೇನೆ. ಅಘೋರಿಯಾಗಿಯೂ ನಟಿಸಿದ್ದೇನೆ. 'ನಾರಾಯಣ' ಎನ್ನುವ ನನ್ನ ಮೂಲ ಪಾತ್ರಕ್ಕೂ ಇದಕ್ಕೂ ಸಂಬಂಧವಿದೆ. ಫ್ಯಾಂಟಸಿ ಹಾರರ್ ಜಾನರ್‌ನಲ್ಲಿ ಈ ಸಿನಿಮಾವಿದ್ದು ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಕಥೆ ಸಾಗುತ್ತದೆ. ಹಾಸ್ಯದ ಜೊತೆಗೆ ಮೂಢನಂಬಿಕೆ, ಭಾವನಾತ್ಮಕ ವಿಷಯಗಳೂ ಸಿನಿಮಾದಲ್ಲಿದೆ. ಚಿತ್ರದಲ್ಲಿ ಮೂಢನಂಬಿಕೆ ಇದೆ ಅಥವಾ ಇಲ್ಲ ಎಂದು ನಾವು ಹೇಳುತ್ತಿಲ್ಲ. ಸಿನಿಮಾದಲ್ಲಿ 'ಕೋಣ'ವೇ ಮುಖ್ಯ ಪಾತ್ರಧಾರಿಯಾಗಿರುವುದರಿಂದ ಈ ಶೀರ್ಷಿಕೆಯೇ ಸೂಕ್ತವೆನಿಸಿತು' ಎಂದರು ಕೋಮಲ್.

'ಕಾಂಟೆಂಟ್ ಆಧಾರಿತ ಹಲವು ಸಿನಿಮಾಗಳನ್ನು ನಾನು ಮಾಡುತ್ತಿದ್ದೇನೆ. 'ಯಲಾಕುನ್ನಿ'ಯಲ್ಲಿ 'ವಜ್ರಮುನಿ'ಯಾಗಿದ್ದೆ. 'ಕೋಣ'ದಲ್ಲೂ ಭಿನ್ನ ಪಾತ್ರವಿದೆ. 'ಸಂಗೀತಾ ಬಾರ್ ಆ್ಯಂಡ್ ರೆಸ್ಟೋರೆಂಟ್'ನಲ್ಲಿ ಕರಾವಳಿ ಭಾಗದ ಸ್ಲ್ಯಾಂಗ್ ಇದೆ. 'ರೋಲೆಕ್ಸ್'ನಲ್ಲಿ ಒಂದು ಕಟ್ಟಡದಲ್ಲಿ ಒಬ್ಬನೇ ಇರುವ ಪಾತ್ರ ನನ್ನದು. ಈ ಪಾತ್ರ ಸವಾಲಿನದ್ದಾಗಿತ್ತು. ಎರಡು ಗಂಟೆ ಪ್ರೇಕ್ಷಕರನ್ನು ಒಬ್ಬನೇ ಹಿಡಿದಿಟ್ಟುಕೊಳ್ಳುವುದು ಸುಲಭದ ಮಾತಲ್ಲ. ವಿಚ್ಛೇದನ ಕೊಡಿಸುವ ಲಾಯರ್ ಜೀವನದಲ್ಲೇ ವಿಚ್ಛೇದನದ ಸ್ಥಿತಿ ಬಂದಾಗ ಏನಾಗುತ್ತದೆ ಎನ್ನುವ ಕಥೆಯಿರುವ ಮತ್ತೊಂದು ಸಿನಿಮಾ ಮಾಡುತ್ತಿದ್ದೇನೆ. 'ವಾರೆವ್ಹಾ-2' ಸಿನಿಮಾದ ಯೋಚನೆಯಿದೆ. ಪ್ರಾಣಿಗಳು ಮಾತನಾಡುವುದು ಕೇಳಿಸಿದರೆ ಹೇಗಿರುತ್ತದೆ ಎನ್ನುವ ಕಥೆ ಇದು. ಹಾಲಿವುಡ್‌ನ 'ಡಾ.ಡೂಲಿಟಲ್' ಮಾದರಿಯಲ್ಲಿ ಈ ಸಿನಿಮಾವಿರಲಿದೆ. ಕೈಯಲ್ಲಿ ಏಳೆಂಟು ಸಿನಿಮಾಗಳಿವೆ. ನನ್ನಿಂದ ಭಿನ್ನ ಭಿನ್ನ ಪಾತ್ರಗಳನ್ನು ಮಾಡಿಸುವ ಧೈರ್ಯವನ್ನು ನಿರ್ದೇಶಕರು ಇನ್ನೂ ಮಾಡುತ್ತಿದ್ದಾರೆ ಎನ್ನುವುದೇ ಖುಷಿ' ಎನ್ನುತ್ತಾರೆ ಕೋಮಲ್.

'ನಾನು ಇಲ್ಲಿಯವರೆಗೂ ಪ್ರಯತ್ನಿಸದೇ ಇರುವ ಮುದ್ರೆಗಳು, ಮಂತ್ರಪಠಣ ಮುಂತಾದುವುಗಳನ್ನು 'ಕೋಣ'ದಲ್ಲಿ ಮಾಡಿದ್ದೇನೆ. ಸಿನಿಮಾದಲ್ಲಿ ಹಾಸ್ಯ ಹಾಗೂ ಇತರೆ ವಿಷಯಗಳು ಸಮಾನವಾಗಿ ಹಂಚಿಕೆಯಾಗಿವೆ. ಗ್ರಾಫಿಕ್ಸ್ ಕೂಡಾ ಇದೆ. ಕಥೆಗೆ ಬೇಕಾದಷ್ಟು ಹಾಸ್ಯ ಸಿನಿಮಾದಲ್ಲಿದೆ' ಎಂದರು.

'ಕನ್ನಡದಲ್ಲಿ ನನಗೆ ಖಳನಾಯಕನ ಪಾತ್ರ ದೊರಕಿರಲಿಲ್ಲ. ಹಾಗಾಗಿ ತಮಿಳಿನಲ್ಲಿ ಪ್ರಯತ್ನಿಸಿದೆ. ಇದರಿಂದ ಇನ್ನೊಂದು ತಮಿಳು ಸಿನಿಮಾದ ಅವಕಾಶ ಬಂದಿದೆ. ನಿರ್ದೇಶಕ ವೆಟ್ರಿಮಾರನ್ ಅವರೊಂದಿಗೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದವರೊಬ್ಬರು ಕಥೆ ಹೇಳಲು ಬರುತ್ತಿದ್ದಾರೆ' ಎಂದರು ಕೋಮಲ್.

ಎಲ್ಲಾ ಚಿತ್ರಮಂದಿರಗಳನ್ನು ಕೊಟ್ಟುಬಿಟ್ಟೆ

'ಕೋವಿಡ್‌ಗೂ ಮೊದಲು 21 ಚಿತ್ರಮಂದಿರಗಳನ್ನು ನಡೆಸುತ್ತಿದ್ದೆ. ಆಗ ಒಳ್ಳೆಯ ವರಮಾನವೂ ಇತ್ತು. ಕೋವಿಡ್ ಬಳಿಕ ಸ್ಥಿತಿ ಬದಲಾಗಿದೆ. ಇದೀಗ ಒಂದೂ ಇಲ್ಲ. ಇವುಗಳಲ್ಲಿ 15–16 ಚಿತ್ರಮಂದಿರಗಳನ್ನು ಒಡೆದು ಹಾಕಿದ್ದಾರೆ. ನೂರು ಸೀಟ್‌ಗಳ ಬಲೂನ್ ಥಿಯೇಟರ್ ಪರಿಕಲ್ಪನೆ ಈಗ ಬರುತ್ತಿದೆ. ಈ ಮೂಲಕ ತಾಲ್ಲೂಕು ಕೇಂದ್ರಗಳಲ್ಲಿ ಗುಣಮಟ್ಟದ ಸಿನಿಮಾವನ್ನು ತೋರಿಸಲು ಸಾಧ್ಯವಿದೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು.

'ನಿರ್ಮಾಪಕಿಯಾಗಲು ಖುಷ್ಬು ಸ್ಫೂರ್ತಿ'

ತನಿಶಾ

'ನಿರ್ಮಾಣ ಕೆಲಸ ಸುಲಭದ್ದಲ್ಲ' ಎಂದು ಮಾತು ಆರಂಭಿಸಿದ ತನಿಶಾ ಕುಪ್ಪಂಡ, 'ಈ ಹಿಂದೆ ಕೇವಲ ನಟಿಯಾಗಿ ಸೆಟ್ ಪ್ರವೇಶಿಸುತ್ತಿದ್ದೆ. ಈ ಸಿನಿಮಾ ಮೂಲಕ ಹೊಸ ಜವಾಬ್ದಾರಿ ಹೊತ್ತುಕೊಂಡೆ. 2018–19ರಲ್ಲಿ 'ಲಕ್ಷ್ಮಿ ಸ್ಟೋರ್ಸ್' ಎಂಬ ಧಾರಾವಾಹಿ ಮಾಡುತ್ತಿದ್ದೆ. ಇದಕ್ಕೆ ನಟಿ ಖುಷ್ಬು ಅವರು ನಿರ್ಮಾಪಕಿಯಾಗಿದ್ದರು. ಧಾರಾವಾಹಿಯಲ್ಲಿ ಅವರ ಜೊತೆ ನಟಿಸಿದ್ದೆ. ಅವರನ್ನು ನಿರ್ಮಾಪಕಿಯಾಗಿ ನೋಡಿದಾಗ, ನಾನೂ ನಿರ್ಮಾಪಕಿಯಾಗಬೇಕು ಎನ್ನುವ ಆಸೆ ಹುಟ್ಟಿತ್ತು. ಹಲವು ತಾಂತ್ರಿಕ ವಿಷಯಗಳನ್ನು ಈ ಸಿನಿಮಾ ಮೂಲಕ ಕಲಿತೆ. ಕೋಮಲ್ ಅವರ ಸಲಹೆಗಳಿಂದಾಗಿ ನಿರ್ಮಾಣ ವೆಚ್ಚದಲ್ಲಿ ಲಕ್ಷಾಂತರ ರೂಪಾಯಿ ಉಳಿಸಿದ್ದೇವೆ. ಇಲ್ಲಿಯವರೆಗೂ ಗ್ಲ್ಯಾಮರಸ್ ಪಾತ್ರಗಳನ್ನು ನಿಭಾಯಿಸಿದ್ದೇನೆ. ಇದರಲ್ಲಿ ಡಿಗ್ಲ್ಯಾಮರ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ಹಿಂದೆ ನನಗೆ ಇಂತಹ ಅವಕಾಶಗಳನ್ನು ಯಾರೂ ನೀಡಿಲ್ಲ ಎನ್ನುವ ಬೇಸರವಿದೆ. ನನ್ನೊಳಗಿನ ನಟನೆಯ ಸಾಮರ್ಥ್ಯವನ್ನು ಪ್ರದರ್ಶಿಸಲು ಈ ಸಿನಿಮಾ ಅವಕಾಶ ನೀಡಿದೆ ಎನ್ನುವ ಖುಷಿಯೂ ಇದೆ' ಎಂದರು.

ತ್ರಿವೇಣಿ ಕೆಂಪೇಗೌಡ ಸರ್ಕಲ್ DOLBY 7.1 4K DIGITAL SCRABBLE 4ಆಟ
ಮಾಗಡಿ ರಸ್ತೆ : ಪ್ರಸನ್ನ
ರಾಜಾಜಿನಗರ : ನವರಂಗ್
ಜೆ.ಪಿ.ನಗರ : ಸಿದ್ದೇಶ್ವರ
ಆವಲಹಳ್ಳಿ : ವೆಂಕಟೇಶ್ವರ
ತಾವರೆಕೆರೆ : ಬಾಲಾಜಿ
ಸಂಜಯನಗರ : ವೈಭವ್
ಬನಶಂಕರಿ : ಕಾಮಾಕ್ಯ
ಕಮಲಾನಗರ : ವೀರಭದ್ರೇಶ್ವರ
ಪೀಣ್ಯ : ಭಾರತಿ
ಕೋಣನಕುಂಟೆ : ಮಾನಸ
ಉಲ್ಲಾಳ : ವಜ್ರೇಶ್ವರಿ
ಉತ್ತರಹಳ್ಳಿ : ವೈಷ್ಣವಿವೈಭವಿ
ಸುಂಕದಕಟ್ಟೆ : ಮೋಹನ್
ಗೌಡನಪಾಳ್ಯ : ಶ್ರೀನಿವಾಸ
ಕೆಂಗೇರಿ : ರಾಬಿನ್
ದೊಮ್ಮಸಂದ್ರ : ಬಾಲಾಜಿ
ಗೊಟ್ಟಿಗೆರೆ : ಲಕ್ಷ್ಮೀ
ಚಿಕ್ಕಲಸಂದ್ರ : ಬಾಲಾಜಿ
ಗರುಡಾಚಾರ್‌ಪಾಳ್ಯ : ವಿಜಯಲಕ್ಷ್ಮೀ
ಗೊಲ್ಲರಹಟ್ಟಿ : ವೆಂಕಟೇಶ್ವರ
ಹರಿನಗರ : ವಿನಾಯಕ
ಲಗ್ಗೆರೆ : ಆಕಾಶ್
ಮಲ್ಲತ್ತಹಳ್ಳಿ : ವಿ.ಆರ್.ಸಿನಿಮಾಸ್
ಬೊಮ್ಮನಹಳ್ಳಿ : ಕೃಷ್ಣ
ಸರ್ಜಾಪುರ : ರವಿ
ಯಲಹಂಕ : ಗಣೇಶ
ನೆಲಮಂಗಲ : ರೂಪ
PVR INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD | VEGACITY
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | GRAND | INNOVATION | INNOVATION BTM | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MULTIPLEX MARATHALLI
KINO CINEMAS SEEGEHALLI
MOVIETIME RR NAGAR
new Fangled MG ROAD
ತುಮಕೂರು : ಮಾರುತಿ, PVR INOX
ಕುಣಿಗಲ್ : ಆಕಾಶ್
ರಾಮನಗರ : ಶ್ರೀರಾಮ
ಚನ್ನಪಟ್ಟಣ : ಲಕ್ಷ್ಮೀ
ಕನಕಪುರ : ಅರ್ಕಾವತಿ
ತಿಪಟೂರು : ತ್ರಿಮೂರ್ತಿ
ದೊಡ್ಡಬಳ್ಳಾಪುರ : ವೈಭವ್
ಚಿಕ್ಕಬಳ್ಳಾಪುರ : ಬಾಲಾಜಿ
ಮಾಲೂರು : ಬಾಲಾಜಿ
ವಿಜಿಪುರ : ಗೌರಿಶಂಕರ
ಹಾರೋಹಳ್ಳಿ : ವಿನಾಯಕ
ತುರುವೇಕೆರೆ : ಕೃಷ್ಣ
ಆನೇಕಲ್ : ಎಸ್.ಎಲ್.ಎನ್
ಕೊರಟಗೆರೆ : ಶಿವಗಂಗಾ
ಸಿರಾ : ಭಾಗ್ಯಲಕ್ಷ್ಮೀ
ಮೈಸೂರು : ಸಂಗಮ್, DRC CINEMAS, PVR INOX GARUDA | FORUM SATYAM | CENTRO, VISION CINEMAS
ಮಂಡ್ಯ : ಮಹಾವೀರ್
ಹಾಸನ : ಶ್ರೀಗುರು
ಚಾಮರಾಜನಗರ : ಸಿಂಹಮೂವಿಪ್ಯಾರಡೈಸ್
ಕೊಳ್ಳೆಗಾಲ : ಶ್ರೀನಿವಾಸ
ಮಳವಳ್ಳಿ : ಮಹಾಲಕ್ಷ್ಮೀ
ಟಿ.ನರಸೀಪುರ : ಮುರುಗನ್
ಕೆ.ಆರ್.ನಗರ : ಗೌರಿಶಂಕರ
ಗುಂಡ್ಲುಪೇಟೆ : ವೆಂಕಟೇಶ್ವರ
ನಂಜನಗೂಡು : ಶ್ರೀವತ್ಸ
ಬನ್ನೂರು : ರತ್ನಮಹಲ್
ಕೆ.ಎಂ.ದೊಡ್ಡಿ : ಸುಮಾ
ಮದ್ದೂರು : ಸಂಜಯ
ನಾಗಮಂಗಲ : ವೆಂಕಟೇಶ್ವರ
ಹುಲ್ಲಹಳ್ಳಿ : ಯಜಮಾನ
ಬೆಳಕವಾಡಿ : ಬೀರೇಶ್ವರ
ಹೊಳೆನರಸೀಪುರ : ಎಸ್.ಎಲ್.ಎನ್
ಚನ್ನರಾಯಪಟ್ಟಣ : ಬಾಲಾಜಿ
ಪಿರಿಯಾಪಟ್ಟಣ : ಶಾರದ
ಪಾಂಡವಪುರ : ಕೋಕಿಲ
ಶ್ರೀರಂಗಪಟ್ಟಣ : ಶ್ರೀದೇವಿ
ಕೆ.ಆರ್.ಪೇಟೆ : ಕೆ.ಜೆ.ಬಿ
ಬೆಳ್ಳೂರುಕ್ರಾಸ್ : ಮಾರುತಿ
ದಾವಣಗೆರೆ : ಅಶೋಕ, MOVIETIME
ಚಿತ್ರದುರ್ಗ : ವೆಂಕಟೇಶ್ವರ, MOVIETIME
ಬಳ್ಳಾರಿ : ನಟರಾಜಕಾಂಪ್ಲೆಕ್ಸ್
ಹೊಸಪೇಟೆ : ಮೀರ್‌ಆಲಂ
ಸಿರುಗುಪ್ಪ : ಬಾಲಾಜಿ
ಹಗರಿಬೊಮ್ಮನಹಳ್ಳಿ : ಕೃಷ್ಣ
ಕಂಪ್ಲಿ : ಭಾರತ್
ಹುಬ್ಬಳ್ಳಿ : ಸುಧಾ, LAXMI CITY PRIDE, cinépolis
ಧಾರವಾಡ : ವಿಜಯ, PVR INOX
ಗದಗ : ಕೃಷ್ಣ
ಬೆಳಗಾವಿ : ಪ್ರಕಾಶ್, PVR INOX, KAPEEL CINEMA, Bharath Cinemas
ಬಿಜಾಪುರ : ಡ್ರೀಮ್‌ಲ್ಯಾಂಡ್
ರಾಣೇಬೆನ್ನೂರು : ಶಂಕರ್
ಬಾಗಲಕೋಟೆ : ವಾಸವಿ
ಮುಧೋಳ : ಸೂರ್ಯವಂಶಿ
ಇಳಕಲ್ : ನಾರಾಯಣ
ಗೋಕಾಕ್ : ಆನಂದ್
ಅಥಣಿ : ದುರ್ಗಾಲಕ್ಷ್ಮೀ
ಲಕ್ಷ್ಮೇಶ್ವರ : ಕೃಷ್ಣ
ಹಾವೇರಿ : ಸರಸ್ವತಿ
ಸಿಂಧಗಿ : ಆನಂದ್
ಬಾದಾಮಿ : ಕುಮಾರೇಶ್ವರ
ಕಲಬುರ್ಗಿ : PVR INOX, MIRAJ
ಗಂಗಾವತಿ : MOHIUDDIN TALKIES
ಕೊಪ್ಪಳ : ಶಾರದ
ಶಹಪುರ : ಜಯಶ್ರೀ
ಕುಷ್ಟಗಿ : ಬಸವರಾಜ್
ಸಿಂಧನೂರು : ಶರಣಬಸವೇಶ್ವರ
ಮಾನ್ವಿ : ಮಲ್ಲಿಕಾರ್ಜುನ
ಕರಟಗಿ : ಪದ್ಮಾವತಿ
ಲಿಂಗಸೂರು : ಎಂಪೈರ್
ರಾಯಚೂರು : MIRAJ
ಶಿವಮೊಗ್ಗ : ವೀರಭದ್ರೇಶ್ವರ, Bharath Cinemas
ಭದ್ರಾವತಿ : ವೀರಭದ್ರೇಶ್ವರ
ಕಡೂರು : ಅನ್ನಪೂರ್ಣ
ಶಿಕಾರಿಪುರ : ಕಿರಣ್
ತೀರ್ಥಹಳ್ಳಿ : ವಿನಾಯಕ
ಬಾಳೆಹೊನ್ನೂರು : ಸುದರ್ಶಿನಿ
ಶಿರಾಲಿ : ವೆಂಕಟೇಶ್ವರ
ಮಂಗಳೂರು : PVR INOX, cinépolis, Bharath Cinemas BHARATH MALL, Cine GALAXY SURATHKAL
ಉಡುಪಿ : ಕಲ್ಪನಾ, Bharath Cinemas
ಮಣಿಪಾಲ : PVR INOX, cinépolis
ಕುಂದಾಪುರ : Bharath Cinemas
ಪಡುಬಿದ್ರೆ : Bharath Cinemas
ಪುತ್ತೂರು : Bharath Cinemas
ಹಾಗೂ ರಾಜ್ಯಾದ್ಯಂತ

'ಪರಾಕ್' ಸೆಟ್‌ಗೆ ರವಿವರ್ಮ ಪ್ರವೇಶ

'ಬಘೀರ' ಚಿತ್ರದ ಬಳಿಕ ನಟ ಶ್ರೀಮುರಳಿ ಕೈಗೆತ್ತಿಕೊಂಡಿರುವ, ಹಾಲೇಶ್ ಕೋಗುಂಡಿ ಆ್ಯಕ್ಷನ್ ಕಟ್ ಹೇಳುತ್ತಿರುವ 'ಪರಾಕ್' ಸೆಟ್‌ನಿಂದ ಹೊಸ ಸುದ್ದಿಯೊಂದು ಬಂದಿದೆ. ಚಿತ್ರದ ಸಾಹಸ ನಿರ್ದೇಶಕರಾಗಿ ರವಿವರ್ಮ ಕಾರ್ಯ ನಿರ್ವಹಿಸಲಿದ್ದಾರೆ.

ರವಿವರ್ಮ, ಸ್ಯಾಂಡಲ್‌ವುಡ್ ಮಾತ್ರವಲ್ಲ ಬಾಲಿವುಡ್ ಸ್ಟಾರ್ ಹೀರೊಗಳಾದ ಸಲ್ಮಾನ್ ಖಾನ್, ಶಾರುಖ್ ಖಾನ್ ಸಿನಿಮಾಗಳಿಗೆ ಸಾಹಸ ಸಂಯೋಜಿಸಿದ ಅನುಭವವಿರುವವರು. ಇದೀಗ 'ಪರಾಕ್' ಚಿತ್ರಕ್ಕೆ ರವಿವರ್ಮ ಸಾಹಸ ಸಂಯೋಜನೆ ಮಾಡಲಿದ್ದಾರೆ. 'ಪರಾಕ್' ಒಂದು ವಿಂಟೇಜ್ ಸ್ಟೈಲ್‌ನ ಸಿನಿಮಾವಾಗಿದ್ದು, ಚರಣ್ ರಾಜ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿರಲಿದೆ. ಕಿರುಚಿತ್ರಗಳನ್ನು ಮಾಡಿ ಅನುಭವ ಹೊಂದಿರುವ ಹಾಲೇಶ್ ಕೋಗುಂಡಿ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. ಬ್ರ್ಯಾಂಡ್ ಸ್ಟುಡಿಯೋಸ್ ಬ್ಯಾನರ್ ಅಡಿ 'ಪರಾಕ್' ಸಿನಿಮಾ ನಿರ್ಮಾಣವಾಗುತ್ತಿದೆ. ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದ್ದು, ಚಿತ್ರಕ್ಕೆ ಸಂದೀಪ್ ವಲ್ಲುರಿ ಛಾಯಾಚಿತ್ರಗ್ರಹಣ, ಉಲ್ಲಾಸ್ ಹೈದೂರ್ ಕಲಾ ನಿರ್ದೇಶನವಿದೆ.

ಧೀರೆನ್‌ಗೆ ಸತ್ಯಪ್ರಕಾಶ್ ಆ್ಯಕ್ಷನ್ ಕಟ್

ಧೀರೆನ್, ಸತ್ಯಪ್ರಕಾಶ್

'ಶಿವ 143' ಎಂಬ ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟಿದ್ದ ನಟ ಧೀರೆನ್ ಆರ್. ರಾಜ್‌ಕುಮಾರ್ ಬಳಿಕ ಗೀತಾ ಪಿಕ್ಚರ್ಸ್ ನಿರ್ಮಾಣದ, 'ಶಾಖಾಹಾರಿ' ನಿರ್ದೇಶಕ ಸಂದೀಪ್ ಸುಂಕದ್ ನಿರ್ದೇಶನದ 'ಪಬ್ಬಾರ್'ನಲ್ಲಿ ಬಣ್ಣಹಚ್ಚಿದ್ದರು. ಇದೀಗ 'ರಾಮಾ ರಾಮಾ ರೇ' ಖ್ಯಾತಿಯ ಡಿ. ಸತ್ಯಪ್ರಕಾಶ್ ಆ್ಯಕ್ಷನ್ ಕಟ್ ಹೇಳಲಿರುವ ಸಿನಿಮಾದಲ್ಲಿ ಧೀರೆನ್ ನಟಿಸಲಿದ್ದಾರೆ.

ಆರ್.ವಿ ಮಲ್ಟಿ ಸಿನಿಸ್ ಕ್ರಿಯೇಟರ್ಸ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾದ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಸತ್ಯಪ್ರಕಾಶ್ ಅವರೇ ಬರೆದಿದ್ದಾರೆ. ಭಿನ್ನವಾದ ಕಥೆ, ಪ್ರಯೋಗಗಳ ಮೂಲಕ ಗುರುತಿಸಿಕೊಂಡಿರುವ ಸತ್ಯಪ್ರಕಾಶ್ ಇತ್ತೀಚೆಗಷ್ಟೇ 'ಎಕ್ಸ್ ಆ್ಯಂಡ್ ವೈ' ಎನ್ನುವ ಸಿನಿಮಾವನ್ನು ತೆರೆಗೆ ತಂದಿದ್ದರು. ನಟ ಶಿವರಾಜ್‌ಕುಮಾರ್ ಅವರೂ ಧೀರೆನ್ ಹೊಸ ಸಿನಿಮಾದ ಕಥೆ ಕೇಳಿ ಮೆಚ್ಚಿಕೊಂಡಿದ್ದಾರೆ ಎಂದು ಚಿತ್ರತಂಡ ತಿಳಿಸಿದೆ. ಚಿತ್ರದ ಹೆಚ್ಚಿನ ವಿವರಗಳನ್ನು ಶೀಘ್ರದಲ್ಲೇ ನೀಡಲಾಗುವುದು ಎಂದಿದ್ದಾರೆ ಸತ್ಯಪ್ರಕಾಶ್.

'ಮಹಾಕಾಳಿ'ಯಾದ ಭೂಮಿ ಶೆಟ್ಟಿ

2024ರಲ್ಲಿ ತೆರೆಕಂಡ ತೆಲುಗಿನ 'ಹನುಮಾನ್' ಸಿನಿಮಾ ಬ್ಲಾಕ್‌ಬಸ್ಟರ್ ಆಗಿತ್ತು. ಇದರ ಬೆನ್ನಲ್ಲೇ ಚಿತ್ರದ ನಿರ್ದೇಶಕ ಪ್ರಶಾಂತ್ ವರ್ಮಾ ನಟ ರಿಷಬ್ ಶೆಟ್ಟಿ ಜೊತೆ 'ಜೈ ಹನುಮಾನ್' ಸಿನಿಮಾ ಘೋಷಿಸಿದ್ದರು. ಇದೀಗ ಮತ್ತೊಂದು ಪ್ರಾಜೆಕ್ಟ್ ಕೈಗೆತ್ತಿಕೊಂಡಿರುವ ವರ್ಮಾ, ಕನ್ನಡದ ಭೂಮಿ ಶೆಟ್ಟಿ ಅವರಿಗೆ 'ಮಹಾಕಾಳಿ' ಕಥೆ ಬರೆದಿದ್ದಾರೆ.

'ಜೈ ಹನುಮಾನ್' ಜೊತೆಗೆ ನಟ ಬಾಲಯ್ಯ ಅವರ ಪುತ್ರ ಮೋಕ್ಷಜ್ಞ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಲಿರುವ ವರ್ಮಾ, ಸೂಪರ್ ಹೀರೊ ಯೂನಿವರ್ಸ್‌ನ ಮೂರನೇ ಸಿನಿಮಾ ಘೋಷಿಸಿದ್ದಾರೆ. ಭಾರತದ ಮೊದಲ ಮಹಿಳಾ ಸೂಪರ್ ಹೀರೊ ಕಥೆಯನ್ನು ಈ ಸಿನಿಮಾ ಹೊಂದಿರಲಿದೆ ಎಂದಿದೆ ಚಿತ್ರತಂಡ. ಚಿತ್ರಕ್ಕೆ 'ಮಹಾಕಾಳಿ' ಎಂಬ ಶೀರ್ಷಿಕೆ ಇಡಲಾಗಿದೆ. ಚಿತ್ರದ ಫಸ್ಟ್‌ಲುಕ್ ಗುರುವಾರ (ಅ.30) ಅನಾವರಣಗೊಂಡಿದೆ.

ಕುಂದಾಪುರದ ಭೂಮಿ ಶೆಟ್ಟಿ 'ಮಹಾಕಾಳಿ' ಅವತಾರವೆತ್ತಲಿದ್ದಾರೆ. ಫಸ್ಟ್‌ಲುಕ್‌ನಲ್ಲಿ ಸಾಂಪ್ರದಾಯಿಕ ಆಭರಣಗಳನ್ನು ತೊಟ್ಟು ದೈವಿಕ ಅನುಭವ ನೀಡುವ ಲುಕ್‌ನಲ್ಲಿ ಭೂಮಿ ಕಾಣಿಸಿಕೊಂಡಿದ್ದಾರೆ. ಪ್ರಶಾಂತ್ ವರ್ಮಾ ತಮ್ಮದೇ ಪ್ರಶಾಂತ್ ವರ್ಮಾ ಸಿನಿಮ್ಯಾಟಿಕ್ ಯೂನಿವರ್ಸ್‌ನಡಿ 'ಮಹಾಕಾಳಿ' ಚಿತ್ರ ಮಾಡುತ್ತಿದ್ದಾರೆ. ಈ ಸಿನಿಮಾಗೆ ಪ್ರಶಾಂತ್ ಕಥೆ ಬರೆದಿದ್ದು, ಮಹಿಳಾ ನಿರ್ದೇಶಕಿ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ವಿಶೇಷ. ಈ ಹಿಂದೆ 'ಮಾರ್ಟಿನ್ ಲೂಥರ್ ಕಿಂಗ್' ಎಂಬ ಚಿತ್ರ ನಿರ್ದೇಶಿಸಿದ್ದ ಪೂಜಾ ಅಪರ್ಣಾ ಕೊಲ್ಲೂರು 'ಮಹಾಕಾಳಿ'ಯನ್ನು ನಿರ್ದೇಶಿಸಲಿದ್ದಾರೆ.

ಕಾಳಿ ಕಥೆಯೇನು?

ಪಶ್ಚಿಮ ಬಂಗಾಳದ ಜನಪ್ರಿಯ ದೇವಿಯಾಗಿರುವ ಕಾಳಿಯ ಹಿನ್ನೆಲೆ, ಅಲ್ಲಿನ ನೆಲದ ಸಂಸ್ಕೃತಿಯನ್ನು ಸಿನಿಮಾ ರೂಪದಲ್ಲಿ ಕಟ್ಟಿಕೊಡಲಾಗುವುದು ಎಂದಿದೆ ಚಿತ್ರತಂಡ. ಸಿನಿಮಾವನ್ನು ಆರ್‌ಕೆಡಿ ಸ್ಟುಡಿಯೊಸ್ ಬ್ಯಾನರ್‌ನಡಿ ರಿವಾಜ್ ರಮೇಶ್ ದುಗ್ಗಲ್ ನಿರ್ಮಾಣ ಮಾಡುತ್ತಿದ್ದಾರೆ. ಆರ್.ಕೆ.ದುಗ್ಗಲ್ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ. ಸ್ಮರಣ್ ಸಾಯಿ ಸಂಗೀತ ನಿರ್ದೇಶನ ಚಿತ್ರಕ್ಕಿರಲಿದೆ. ಸಿನಿಮಾವನ್ನು ಭಾರತೀಯ ಭಾಷೆ ಮಾತ್ರವಲ್ಲದೆ ಇತರೆ ವಿದೇಶಿ ಭಾಷೆಗಳಲ್ಲಿಯೂ ತರಲು ಚಿತ್ರತಂಡ ನಿರ್ಧರಿಸಿದೆ. ನಟ ಅಕ್ಷಯ್ ಖನ್ನಾ 'ಅಸುರಗುರು ಶುಕ್ರಾಚಾರ್ಯ'ರಾಗಿ ಈ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಸ್ತನ ಕ್ಯಾನ್ಸರ್‌ಗೆ ಬೇಕಿದೆ ತುರ್ತು ಜಾಗೃತಿ!

ಸ್ತನ ಕ್ಯಾನ್ಸರ್ ಕುರಿತಾದ ನಿರ್ಲಕ್ಷ್ಯವೆಷ್ಟು ಅಪಾಯ ಗೊತ್ತಾ? • ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಮೆಡಿಕಲ್ ಆಂಕಾಲಜಿ ಮತ್ತು ಇಮ್ಯೂನೋಥೆರಪಿ, ಔಷಧ ಸಲಹೆಗಾರರಾದ ಡಾ.ಪೂನಂ ಪಾಟೀಲ್, ಸರ್ಜಿಕಲ್ ಆಂಕಾಲಜಿ ಮತ್ತು ರೊಬೋಟಿಕ್ ಸರ್ಜರಿ ಸಲಹೆಗಾರರಾದ ಡಾ.ಹೇಮಂತ್.ಜಿ.ಎನ್‌ರವರ ಆರೋಗ್ಯ ಸಲಹೆಗಳು

ಸ್ತನ ಕ್ಯಾನ್ಸರ್ ಎನ್ನುವುದು ಭಾರತೀಯ ಮಹಿಳೆಯರನ್ನು ಅಪಾಯದ ತುದಿಗೆ ತಲುಪಿಸುತ್ತಿದೆ. ಈಗಾಗಲೇ ಈ ಕ್ಯಾನ್ಸರ್‌ನ ಗಂಭೀರತೆ ತೀವ್ರ ಹಂತ ತಲುಪಿದ್ದು, ಪ್ರತಿ 4 ಕ್ಯಾನ್ಸರ್ ಪ್ರಕರಣಗಳಲ್ಲಿ 1 ಸ್ತನ ಕ್ಯಾನ್ಸರ್ ವರದಿಯಾಗುತ್ತಿದೆ. ಪರಿಸ್ಥಿತಿ ಹೀಗಿದ್ದರೂ ಸಹ ಭಾರತೀಯ ಮಹಿಳೆಯರಲ್ಲಿ ಈ ಕ್ಯಾನ್ಸರ್ ಕುರಿತಾಗಿ ಅಷ್ಟಾಗಿ ಜಾಗೃತಿಯಿಲ್ಲದೇ ನಿರ್ಲಕ್ಷ್ಯ ಭಾವನೆ ಹೆಚ್ಚಾಗಿದೆ. ಹೀಗಾಗಿ, ಕ್ಯಾನ್ಸರ್ ಪತ್ತೆ ಮತ್ತು ಚಿಕಿತ್ಸೆಗೆ ಸಂಬಂಧಿಸಿದಂತೆ ಪಾಶ್ಚಿಮಾತ್ಯರಿಗೆ ಹೋಲಿಸಿಕೊಂಡರೆ ಭಾರತೀಯ ಮಹಿಳೆಯರು ದಶಕಗಳಷ್ಟು ಹಿಂದುಳಿದಿದ್ದಾರೆ. ಇದರ ಪರಿಣಾಮ ಎದುರಿಸುತ್ತಿರುವ ಮಹಿಳೆಯರಿಗೆ ಮುನ್ನೆಚ್ಚರಿಕೆ ಮಾತ್ರವಲ್ಲದೆ ಸ್ತನ ಕ್ಯಾನ್ಸರ್‌ನ ಕುರಿತಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಅಗತ್ಯ ಜಾಗೃತಿ, ಪೂರಕ ಸಲಹೆಗಳ ಅಗತ್ಯವಿದೆ.

ಈ ವಿಷಯದಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಮೆಡಿಕಲ್ ಆಂಕಾಲಜಿ ಮತ್ತು ಇಮ್ಯೂನೋಥೆರಪಿ, ಔಷಧ ಸಲಹೆಗಾರರಾದ ಡಾ.ಪೂನಂ ಪಾಟೀಲ್ ಮಹಿಳೆಯರ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ, ಸ್ತನ ಕ್ಯಾನ್ಸರ್‌ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ವಿವರವಾಗಿ ಸೂಚಿಸಿದ್ದಾರೆ. ಜತೆಗೆ, ಪ್ರಸ್ತುತ ಸಮಾಜದಲ್ಲಿರುವ ತಪ್ಪು-ಕಲ್ಪನೆಗಳಿಗೆ ತಜ್ಞರ ವಾಸ್ತವ ವಿವರಣೆ.

- **ಮಿಥ್ಯ 1: ವಯಸ್ಸಾದ ಮಹಿಳೆಯರಿಗೆ ಮಾತ್ರ ಸ್ತನ ಕ್ಯಾನ್ಸರ್ ಬರುತ್ತದೆ.**

ವಾಸ್ತವ : ಇದು ಹಿಂದಿನ ಕಾಲದ ಮಾತು. ಸ್ತನ ಕ್ಯಾನ್ಸರ್ ವಯಸ್ಸಾದವರ ಮೇಲೆ ಮಾತ್ರ ಪರಿಣಾಮ ಬೀರುವುದಿಲ್ಲ. ಇದು 30 ಮತ್ತು 40ರ ಹರೆಯದ ಕಿರಿಯ ಮಹಿಳೆಯರಲ್ಲಿಯೂ ಸಾಮಾನ್ಯವಾಗಿದೆ. ಗರ್ಭಾವಸ್ಥೆಯಲ್ಲಿ ಮತ್ತು ಹಾಲುಣಿಸುವ ಸಮಯದಲ್ಲಿ ಕಿರಿಯ ಮಹಿಳೆಯರಿಗೂ ಕ್ಯಾನ್ಸರ್ ಬರಬಹುದು. ಆದ್ದರಿಂದ, ಸ್ವಯಂ ಪರೀಕ್ಷೆಯ ಸಮಯದಲ್ಲಿ ಸ್ತನದಲ್ಲಿನ ಲಕ್ಷಣಗಳು ಅಥವಾ ಬದಲಾವಣೆಗಳು ಕಂಡುಬಂದಾಗ, ತಕ್ಷಣ ವೈದ್ಯರನ್ನು ಕಾಣುವುದು ಸೂಕ್ತ.

- **ಮಿಥ್ಯ 2: ಕುಟುಂಬದ ಇತಿಹಾಸವಿಲ್ಲವೆಂದರೆ ಅಪಾಯವಿಲ್ಲ.**

ವಾಸ್ತವ : ಸ್ತನ ಕ್ಯಾನ್ಸರ್‌ಗಳಲ್ಲಿ ಕೇವಲ 5–10% ಮಾತ್ರ ಅನುವಂಶಿಕ. ಉಳಿದ ಪ್ರಕರಣಗಳಲ್ಲಿ ಹೆಚ್ಚುತ್ತಿರುವ ವಯಸ್ಸು, ಧೂಮಪಾನ, ಮದ್ಯಪಾನ, ಹಾರ್ಮೋನುಗಳು ಮತ್ತು ಜೀವನಶೈಲಿಯಂತಹ ಇತರ ಅಂಶಗಳಿಗೆ ಸಂಬಂಧಿಸಿವೆ. ನಾನು ಚಿಕಿತ್ಸೆ ನೀಡಿದ ಅತ್ಯಂತ ಕಿರಿಯ ಮಹಿಳೆ 19 ವರ್ಷದ ಕಾಲೇಜು ವಿದ್ಯಾರ್ಥಿನಿಯಾಗಿದ್ದು, ಯಾವುದೇ ಕುಟುಂಬದ ಇತಿಹಾಸವಿಲ್ಲ.

- **ಮಿಥ್ಯ 3: ಆರೋಗ್ಯಕರ ಜೀವನಶೈಲಿ ಹೊಂದಿರುವ ಜನರು ಸ್ತನ ಕ್ಯಾನ್ಸರ್ ಮುಕ್ತರಾಗುತ್ತಾರೆ.**

ವಾಸ್ತವ : ಉತ್ತಮ ಆರೋಗ್ಯ ಪೋಷಣೆ ಮತ್ತು ನಿಯಮಿತ ವ್ಯಾಯಾಮ ಸ್ತನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುತ್ತದೆ. ಆದರೆ, ಅದನ್ನು ನಿವಾರಿಸುವುದಿಲ್ಲ. ಪ್ರತಿ ಮಹಿಳೆಗೆ ದಿನನಿತ್ಯದ ಸ್ಕ್ರೀನಿಂಗ್ ಮುಖ್ಯವಾಗಿದೆ. ವಯಸ್ಸಿಗೆ ಸಂಬಂಧಿಸಿದ ಮಾರ್ಗಸೂಚಿಗಳ ಪ್ರಕಾರ ಆವರ್ತಕ ಸ್ತನ ಕ್ಯಾನ್ಸರ್ ಸ್ಕ್ರೀನಿಂಗ್ ಅನ್ನು ಸೂಚಿಸಲಾಗುತ್ತದೆ. ಮಣಿಪಾಲ್ ಆಸ್ಪತ್ರೆಯು ಸಮಾಜದಲ್ಲಿ ಜಾಗೃತಿ ಮೂಡಿಸಲು ಕಾಲಕಾಲಕ್ಕೆ ಅಭಿಯಾನಗಳನ್ನು ಕೈಗೊಳ್ಳುತ್ತಿದೆ.

- **ಮಿಥ್ಯ 4: ಸ್ವಯಂ ಪರೀಕ್ಷೆ ನಿಲ್ಲಿಸಿ!**

ವಾಸ್ತವ : ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಸ್ವಯಂ ಪರೀಕ್ಷೆ ಬದಲಿಗೆ ಕ್ಲಿನಿಕಲ್ ತಪಾಸಣೆ ಅಗತ್ಯ. ಮುಖ್ಯವಾಗಿ ಸ್ಕ್ಯಾನಿಂಗ್ ವಿಭಾಗದ ಮ್ಯಾಮೊಗ್ರಾಮ್‌ಗಳು, ಎಂಆರ್‌ಐ ಮತ್ತು ಬಯಾಪ್ಸಿಗಳು ಸ್ವಯಂ ತಪಾಸಣೆಯಲ್ಲಿ ತಪ್ಪಿಸಿಕೊಳ್ಳಬಹುದಾದ ಕ್ಯಾನ್ಸರ್ ಗೆಡ್ಡೆಗಳನ್ನು ಪತ್ತೆ ಮಾಡಬಹುದು.

- **ಮಿಥ್ಯ 5: ಡಿಯೋಡರೆಂಟ್ ಅಥವಾ ಬಿಗಿಯಾದ ಒಳ ಉಡುಪು(ಬ್ರಾ) ಬಳಕೆ ಸ್ತನ ಕ್ಯಾನ್ಸರ್‌ಗೆ ಕಾರಣವಾಗುತ್ತವೆ.**

ವಾಸ್ತವ : ಈ ರೀತಿಯ ಯಾವುದೇ ಕಾರಣಗಳನ್ನು ದೃಢಪಡಿಸುವ ಪುರಾವೆಗಳಿಲ್ಲ.

ಸ್ತನ ಕ್ಯಾನ್ಸರ್ ಪರೀಕ್ಷೆ ಮತ್ತು ಚಿಕಿತ್ಸಾ ವಿಧಾನ!

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಕಾಲಕಳೆದಂತೆ ಹೊಸ ತಂತ್ರಜ್ಞಾನಗಳು ಸೇರ್ಪಡೆಯಾಗಿದ್ದು, ಪತ್ತೆ ಮತ್ತು ಚಿಕಿತ್ಸೆಗೆ ಅತ್ಯಾಧುನಿಕ ಮಾರ್ಗೋಪಾಯಗಳು ಅಳವಡಿಕೆಯಾಗಿವೆ. ಇದು ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಸಾಕಷ್ಟು ನೆರವಾಗುತ್ತಿದೆ. ಮಣಿಪಾಲ್ ಕಾಂಪ್ರಹೆನ್ಸಿವ್ ಕ್ಯಾನ್ಸರ್ ಸೆಂಟರ್ ಅತ್ಯಾಧುನಿಕ ತಂತ್ರಜ್ಞಾನ, ಸೌಕರ್ಯಗಳನ್ನೊಳಗೊಂಡಿದೆ. ಡಿಜಿಟಲ್ ಮ್ಯಾಮೊಗ್ರಫಿ, ಅಲ್ಟ್ರಾಸೌಂಡ್, ಬಯಾಪ್ಸಿ, ಎಂಆರ್‌ಐ ಮತ್ತು ಪಿಇಟಿ-ಸಿಟಿ ಸೇರಿದಂತೆ ಅತ್ಯಾಧುನಿಕ ರೋಗನಿರ್ಣಯ ಸಾಧನಗಳನ್ನು ಹೊಂದಿದ್ದು, ಇವು ರೋಗ ಪತ್ತೆಗೆ ಸಾಕಷ್ಟು ನೆರವಾಗುತ್ತಿದೆ. ಕೆಲ ಪ್ರಕರಣಗಳಿಗೆ ರಿಫ್ಲೆಕ್ಸ್ ಟೆಸ್ಟಿಂಗ್ ಮತ್ತು ಇಮ್ಯುನೊಹಿಸ್ಟೋ-ಕೆಮಿಸ್ಟ್ರಿ ಮಾರ್ಕರ್‌ಗಳು ನಿಖರ ಕ್ಯಾನ್ಸರ್ ವಿಧಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ಮೆಡಿಕಲ್ ಮತ್ತು ಸರ್ಜಿಕಲ್ ಆಂಕಾಲಾಜಿ, ರೇಡಿಯಾಲಜಿ, ರೇಡಿಯೊಥೆರಪಿ, ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಪ್ಯಾಥಾಲಜಿ ತಜ್ಞರನ್ನೊಳಗೊಂಡ ಮಲ್ಟಿಡಿಸಿಪ್ಲೀನರಿ ಟ್ಯೂಮರ್ ಬೋರ್ಡ್ ಚಿಕಿತ್ಸೆಗೆ ಅಗತ್ಯ ಚರ್ಚೆ ನಡೆಸಿ, ಸೂಕ್ತ ನಿರ್ಣಯ ಕೈಗೊಳ್ಳುತ್ತಾರೆ. ಸ್ತನ ಕ್ಯಾನ್ಸರ್‌ಗೆ ಡೇಕೇರ್ ಮಾದರಿಯ ಚಿಕಿತ್ಸೆ ಲಭ್ಯವಿದ್ದು, ರೋಗಿಗಳು ನಿತ್ಯದ ಬದುಕಿಗೆ ಯಾವುದೇ ತೊಂದರೆಯಾಗದಂತೆ ಅದೇ ದಿನ ಮನೆಗೆ ಮರಳಲು ಅವಕಾಶ ಮಾಡಿಕೊಡಲಾಗುತ್ತದೆ.

ಮಹಿಳೆಯರೆ ಭಯ ಬೇಡ, ಎಚ್ಚರವಿರಲಿ!

- ಸ್ತನ ಕ್ಯಾನ್ಸರ್ ಕುರಿತಾಗಿ ಜಾಗೃತಿಯಿರಲಿ.
- ಆರಂಭದಲ್ಲೇ ಪತ್ತೆ ಹಚ್ಚುವುದರಿಂದಾಗಿ ಗುಣಮುಖರಾಗಲು ಸಾಧ್ಯ.
- ಸರಳ ಚಿಕಿತ್ಸೆಯಿಂದಲೇ ಗುಣಮುಖರಾಗಬಹುದು.
- ಸ್ತನಗಳಲ್ಲಿನ ಆರಂಭಿಕ ಬದಲಾವಣೆ, ಗೆಡ್ಡೆಗಳಾದಾಗ ವೈದ್ಯರನ್ನು ಸಂಪರ್ಕಿಸಿ.
- ಆನ್‌ಲೈನ್ ಮಾಹಿತಿಗಳಿಂದಾಗಿ ದಾರಿತಪ್ಪುವ ಸಾಧ್ಯತೆಗಳೇ ಹೆಚ್ಚುರುವ ಹಿನ್ನೆಲೆ ಎಚ್ಚರಿಕೆ ಅಗತ್ಯ.
- ಶಸ್ತ್ರಚಿಕಿತ್ಸೆಗಳ ಕುರಿತಾಗಿ ಯಾವುದೇ ಭಯ ಬೇಡ.
- ಮಣಿಪಾಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸೌಕರ್ಯಗಳುಳ್ಳ ಚಿಕಿತ್ಸಾ ಸೇವೆ ಲಭ್ಯ.
- ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ಪರಿಣಿತ ವೈದ್ಯರ ಪಡೆ ಸದಾ ರೋಗಿಗಳ ಸೇವೆ ಸಿದ್ಧ.

ಸ್ತನ ಕ್ಯಾನ್ಸರ್ ಚಿಕಿತ್ಸೆ ಕುರಿತಾದ ತಪ್ಪು ಕಲ್ಪನೆ!

ಸ್ತನ ಕ್ಯಾನ್ಸರ್ ಆರಂಭದಲ್ಲೇ ಪತ್ತೆ ಹಚ್ಚುವುದು ಜಾಗೃತಿಯ ಮೊದಲ ಹೆಜ್ಜೆಯಾಗಿದ್ದು, ಅನೇಕ ಜೀವಗಳನ್ನು ಉಳಿಸುವ ಹಾದಿಯಾಗಿದೆ. ಈ ಹಂತದಲ್ಲಿ ಮಹಿಳೆಯರಲ್ಲಿನ ಕೆಲ ಗೊಂದಲ, ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಸರ್ಜಿಕಲ್ ಆಂಕಾಲಜಿ ಮತ್ತು ರೊಬೋಟಿಕ್ ಸರ್ಜರಿ ಸಲಹೆಗಾರರಾದ ಡಾ.ಹೇಮಂತ್.ಜಿ.ಎನ್ ಒಂದಷ್ಟು ಸಲಹೆಗಳನ್ನಿಲ್ಲಿ ನೀಡಿದ್ದಾರೆ.

- **ಮಿಥ್ಯ 1: ಸ್ತನ ಗೆಡ್ಡೆಯ ಬಯಾಪ್ಸಿ ಕ್ಯಾನ್ಸರ್ ಹರಡಲು ಕಾರಣವಾಗಬಹುದು.**

ವಾಸ್ತವ : ಬಯಾಪ್ಸಿಯಿಂದ ಕ್ಯಾನ್ಸರ್ ಹರಡುತ್ತದೆ ಎನ್ನುವುದು ತಪ್ಪು ಕಲ್ಪನೆ. ಸ್ತನ ಗೆಡ್ಡೆಯ ಬಯಾಪ್ಸಿ ಸಂಪೂರ್ಣ ಸುರಕ್ಷಿತ. ಇದು ದೇಹದ ಇತರ ಭಾಗಗಳಿಗೆ ಕ್ಯಾನ್ಸರ್ ಹರಡಲು ಕಾರಣವಾಗುವುದಿಲ್ಲ. ಸ್ತನ ಕ್ಯಾನ್ಸರ್ ರೋಗ ನಿರ್ಣಯಕ್ಕೆ ಬಯಾಪ್ಸಿ ಅನಿವಾರ್ಯ. ಬಯಾಪ್ಸಿ ಇಲ್ಲದೆ ನಿಖರವಾದ ಚಿಕಿತ್ಸಾ ಮಾರ್ಗ ಕಂಡುಕೊಳ್ಳಲು ಸಾಧ್ಯವಿಲ್ಲ.

- **ಮಿಥ್ಯ 2: ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗುವ ಪ್ರತಿಯೊಬ್ಬ ಮಹಿಳೆಗೂ ತೋಳಿನ ಊತ (ಲಿಂಫೋಡೆಮಾ) ಉಂಟಾಗುತ್ತದೆ.**

ವಾಸ್ತವ : ಈ ಮಾತು ಸದ್ಯದ ಮಟ್ಟಿಗೆ ಸಾಕಷ್ಟು ಕಡಿಮೆಯಾಗಿದೆ. ಕಾಲಕ್ರಮೇಣ ಶಸ್ತ್ರಚಿಕಿತ್ಸಾ ವಿಧಾನಗಳಲ್ಲಿ ಸಾಕಷ್ಟು ಪ್ರಗತಿ ಕಂಡುಕೊಂಡಿದ್ದು, ತೋಳಿನ ಊತ ಬರುವ ಪ್ರಕರಣಗಳು ಇಳಿಕೆಯಾಗಿವೆ. ಕೆಲವು ರೋಗಿಗಳಲ್ಲಿ ಮಾತ್ರ ಲಿಂಪೋಡಿಮಾ ಕಂಡುಬರುತ್ತಿದೆ. ಮಣಿಪಾಲ್ ಕಾಂಪ್ರಹೆನ್ಸೀವ್ ಕ್ಯಾನ್ಸರ್ ಸೆಂಟರ್‌ನಲ್ಲಿ ಲಿಂಪೋವೆನಸ್ ಅನಾಸ್ಟೊಮೊ-ಸಿಸ್‌ನಂತಹ ಕಾರ್ಯವಿಧಾನಗಳನ್ನು ನಿಯಮಿತವಾಗಿ

ನಡೆಸಲಾಗುತ್ತದೆ. ಇದು ಸಂಕೀರ್ಣವಾದ ಸೂಪರ್ ಮೈಕ್ರೋಸರ್ಜರಿ ವಿಧಾನವಾಗಿದ್ದು, ತಡೆಗಟ್ಟಲಾದ ದುಗ್ಧರಸ ಹರಿವನ್ನು ಪುನಃಸ್ಥಾಪಿಸಲು 0.2-0.8 ಮಿಮೀ ಅಳತೆಯ ಸಣ್ಣ ದುಗ್ಧರಸ ನಾಳಗಳನ್ನು ಸಣ್ಣ ರಕ್ತನಾಳಗಳಿಗೆ ಜೋಡಿಸಲಾಗುತ್ತದೆ. ಈ ವಿಧಾನವು ದುಗ್ಧರಸ ಹರಿವನ್ನು ಕಾಪಾಡಿಕೊಳ್ಳಲು ಮತ್ತು ದ್ರವದ ಶೇಖರಣೆಯನ್ನು ತಡೆಯಲು ಸಹಾಯ ಮಾಡುತ್ತದೆ. ಈ ಚಿಕಿತ್ಸಾ ವಿಧಾನದಿಂದ ಊತದ ಅಪಾಯವನ್ನು ಕಡಿಮೆ ಮಾಡಲಾಗುತ್ತದೆ.

ಸ್ತನದ ಬಗ್ಗೆ ಎಚ್ಚರ!

ಸದ್ಯ ಸಮಾಜದಲ್ಲಿನ ತಪ್ಪು ಕಲ್ಪನೆಗಳಿಂದಾಗಿ ವಿನಾಕಾರಣ ಸ್ತನ ಕ್ಯಾನ್ಸರ್‌ಗೆ ಮಹಿಳೆಯರು ಒಳಗಾಗುತ್ತಿದ್ದಾರೆ. ಚಿಕಿತ್ಸಾ ವಿಷಯದಲ್ಲಿ ವಿಳಂಬ ಸರಿಯಲ್ಲ. ಪ್ರತಿಯೊಬ್ಬ ಮಹಿಳೆಯೂ ತಿಂಗಳಿಗೊಮ್ಮೆ ಸ್ತನ ಪರೀಕ್ಷೆಗೆ ಒಳಗಾಗಬೇಕು. ಆ ಮೂಲಕ ಸ್ತನಗಳ ಆರೋಗ್ಯ ಸಂರಕ್ಷಣೆ ಸಾಧ್ಯ. ಆರಂಭಿಕ ಹಂತದಲ್ಲೇ ಸ್ತನಗಳಲ್ಲಿನ ಬದಲಾವಣೆ, ಗೆಡ್ಡೆಗಳನ್ನು ಗುರುತಿಸುವುದು ಕ್ಯಾನ್ಸರ್ ತಡೆಗಟ್ಟಲು, ಸೂಕ್ತ ಚಿಕಿತ್ಸೆ ಪಡೆಯಲು ಸಹಕಾರಿಯಾಗುತ್ತದೆ. ಸ್ತನದ ಗೆಡ್ಡೆಗಳೆಲ್ಲವೂ ಹಾನಿಕಾರಕವಲ್ಲದಿದ್ದರೂ ಸಹ ಮುನ್ನೆಚ್ಚರಿಕೆ ಅನಿವಾರ್ಯ. ಇಂದಿನ ಆನ್‌ಲೈನ್ ಯುಗದಲ್ಲಿ ಸ್ವಯಂ ಚಿಕಿತ್ಸೆಯಂಥಹಾ ತಪ್ಪು ಹಾದಿಗೆ ಹೋಗದೇ, ಸೂಕ್ತ ವೈದ್ಯರ ಭೇಟಿ, ಸಲಹೆ ಪಡೆಯುವುದು ಅತ್ಯವಶ್ಯಕ. ತಪ್ಪು ಮಾಹಿತಿಗಳಿಂದಾಗಿ ವಿನಾಕಾರಣ ಗಂಭೀರ ಅನಾರೋಗ್ಯ ಪರಿಣಾಮ ಎದುರಿಸುವ ಬದಲು ತಮ್ಮ ವೈದ್ಯರು ಅಥವಾ ಆಂಕಾಲಜಿಸ್ಟ್‌ಅನ್ನು ಸಂಪರ್ಕಿಸುವುದು ಒಳ್ಳೆಯದು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಮಣಿಪಾಲ್ ಆಸ್ಪತ್ರೆಯಲ್ಲಿದೆ ಅತ್ಯಾಧುನಿಕ ಚಿಕಿತ್ಸೆ!

ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯಲ್ಲಿ ಮಣಿಪಾಲ್ ಕಾಂಪ್ರಹೆನ್ಸಿವ್ ಕ್ಯಾನ್ಸರ್ ಸೆಂಟರ್ ಕಾರ್ಯನಿರ್ವಹಿಸುತ್ತಿದೆ. ಇಲ್ಲಿನ ಕ್ಯಾನ್ಸರ್ ಕೇರ್ ಸೆಂಟರ್ ಅತ್ಯಾಧುನಿಕ ತಂತ್ರಜ್ಞಾನ, ಸೌಕರ್ಯಗಳನ್ನೊಳಗೊಂಡಿದ್ದು, ಡಿಜಿಟಲ್ ಮ್ಯಾಮೊಗ್ರಫಿ, ಅಲ್ಟ್ರಾಸೌಂಡ್, ಬಯಾಪ್ಸಿ, ಎಂಆರ್‌ಐ ಮತ್ತು ಪಿಇಟಿ-ಸಿಟಿ ಸೇರಿದಂತೆ ಅತ್ಯಾಧುನಿಕ ರೋಗನಿರ್ಣಯ ಸಾಧನಗಳನ್ನು ಹೊಂದಿದೆ. ಕೆಲ ಪ್ರಕರಣಗಳಿಗೆ ರಿಫ್ಲೆಕ್ಸ್ ಟೆಸ್ಟಿಂಗ್ ಮತ್ತು ಇಮ್ಯುನೊಹಿಸ್ಟೋ-ಕೆಮಿಸ್ಟ್ರಿ ಮಾರ್ಕರ್‌ಗಳು ನಿಖರ ಕ್ಯಾನ್ಸರ್ ವಿಧಗಳನ್ನು ಗುರುತಿಸಲು ಸಹಾಯ ಮಾಡುತ್ತವೆ. ಮೆಡಿಕಲ್ ಮತ್ತು ಸರ್ಜಿಕಲ್ ಆಂಕಾಲಾಜಿ, ರೇಡಿಯಾಲಜಿ, ರೇಡಿಯೊಥೆರಪಿ, ನ್ಯೂಕ್ಲಿಯರ್ ಮೆಡಿಸಿನ್ ಮತ್ತು ಪ್ಯಾಥಾಲಜಿ ತಜ್ಞರನ್ನೊಳಗೊಂಡ ಮಲ್ಟಿಡಿಸಿಪ್ಲೀನರಿ ಟ್ಯೂಮರ್ ಬೋರ್ಡ್ ಸಹ ಇಲ್ಲಿರುವ ಹಿನ್ನೆಲೆ ಕ್ಯಾನ್ಸರ್ ರೋಗಕ್ಕೆ ಅಗತ್ಯ ಚಿಕಿತ್ಸಾ ವಿಧಾನಗಳನ್ನು ಕಂಡುಕೊಳ್ಳಲು ಸಾಕಷ್ಟು ನೆರವಾಗುತ್ತಿದೆ.

ತಪ್ಪು ಕಲ್ಪನೆಗಳಿಂದ ಹೊರಬನ್ನಿ!: ಸಾಮಾಜಿಕವಾಗಿ ಸ್ತನ ಕ್ಯಾನ್ಸರ್ ಕುರಿತಾಗಿ ಸಾಕಷ್ಟು ತಪ್ಪು ಕಲ್ಪನೆಗಳಿವೆ. ಈ ಪೈಕಿ ಕೆಲವೊಂದು ವಿಚಾರಗಳಿಂದಾಗಿ ಮಹಿಳೆಯರು ಗಂಭೀರ ಪರಿಣಾಮಗಳನ್ನು ಎದುರಿಸುವಂತಾಗಿದೆ. ಮಣಿಪಾಲ್ ಆಸ್ಪತ್ರೆಯ ಮೆಡಿಕಲ್ ಆಂಕಾಲಜಿ ಮತ್ತು ಇಮ್ಯೂನೋಥೆರಪಿ ಔಷಧ ಸಲಹೆಗಾರರಾದ ಡಾ.ಪೂನಂ ಪಾಟೀಲ್‌ರವರು ಚಿಕಿತ್ಸೆ ನೀಡಿದ ಸಾಕಷ್ಟು ಮಹಿಳೆಯರಲ್ಲಿ ನಾನಾ ತಪ್ಪು ಗ್ರಹಿಕೆಗಳಿದ್ದವು. ಮುಖ್ಯವಾಗಿ 'ಸ್ತನ ಕ್ಯಾನ್ಸರ್ ವಯಸ್ಸಾದವರಿಗಷ್ಟೇ ಬರುತ್ತದೆ, ಅನುವಂಶಿಕವಾಗಿ ಮಾತ್ರ ಈ ಕ್ಯಾನ್ಸರ್ ಬರುತ್ತದೆ' ಎನ್ನುವ ತಪ್ಪು ಗ್ರಹಿಕೆಗಳನ್ನು ವೈದ್ಯರು ಗುರುತಿಸಿದ್ದರು. ಈ ತಪ್ಪು ಕಲ್ಪನೆಗಳಿಂದಾಗಿ ಅನೇಕ ಮಹಿಳೆಯರು ಸ್ತನ ಕ್ಯಾನ್ಸರ್ ಎದುರಿಸಿದ್ದಾರೆ. ಕಾಲ ಬದಲಾದಂತೆ ವಿದ್ಯಾವಂತ ಸಮಾಜವೆಂದು ಗುರುತಿಸಿಕೊಂಡಿರುವ ನಾವು ಸ್ತನ ಕ್ಯಾನ್ಸರ್ ಎನ್ನುವ ಪಿಡುಗಿನ ವಿರುದ್ಧ ಗೆಲುವು ಸಾಧಿಸಬೇಕೆಂದರೆ ಎಲ್ಲರೂ ಜಾಗೃತರಾಗಬೇಕೆನ್ನುವುದು ವೈದ್ಯರ ಆಶಯ. ❖

SCAN TO ASK MAI
YOUR 24/7 DIGITAL DOCTOR
ಮಣಿಪಾಲ್ ಆಸ್ಪತ್ರೆಯ ವಾಟ್ಸಾಪ್ ವೈದ್ಯಕೀಯ ಸೇವೆಗೆ ಸ್ಕ್ಯಾನ್ ಮಾಡಿ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
☎1800 203 2999

ಚಿಟಿಕೆ ಸುದ್ದಿ

ಬಂಡೀಪುರ ಅರಣ್ಯದಲ್ಲಿ 2 ಸಫಾರಿ ಟ್ರಿಪ್ ಕಡಿತ

ಚಾಮರಾಜನಗರ: ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮಾನವ ಪ್ರಾಣಿ ಸಂಘರ್ಷ ತಡೆಯಲು ಸಫಾರಿ ಮೇಲೆ ನಿರ್ಬಂಧ ಹೇರಬೇಕು ಎಂಬ ರೈತ ಸಂಘಟನೆಗಳ ಒತ್ತಾಯದ ಹಿನ್ನೆಲೆಯಲ್ಲಿ ಬಂಡೀಪುರ ಅರಣ್ಯದಲ್ಲಿ 2 ಸಫಾರಿ ಟ್ರಿಪ್‌ಗಳನ್ನು ಕಡಿತಗೊಳಿಸಲು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಆದೇಶಿಸಿದ್ದಾರೆ.

ಬಂಡೀಪುರದಲ್ಲಿ ಸಂಜೆ 5 ರಿಂದ 6.30ರ ಅವಧಿಯ ಕೊನೆಯ ಬಸ್ ಸಫಾರಿ ಹಾಗೂ ಹಾಗೂ ಸಂಜೆ 4.30ರಿಂದ 6.30ರ ಅವಧಿಯಲ್ಲಿ ಪ್ರವಾಸಿಗರನ್ನು ಕರೆದೊಯ್ಯುವ ಜೀಪ್ ಸಫಾರಿ ಟ್ರಿಪ್‌ಗಳನ್ನು ರದ್ದು ಮಾಡುವಂತೆ ಸಚಿವರು ನಿರ್ದೇಶನ ನೀಡಿದ್ದಾರೆ.

ಪ್ರಶಸ್ತಿಗೆ ಬೆಂಕಿ ಇಟ್ಟ ಹರಿಹರಪ್ರಿಯ!

ಮಾಲೂರು (ಕೋಲಾರ): ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಾಕ್ಟರೇಟ್ ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳು ನೀಡಿದ ಪ್ರಶಸ್ತಿ, ಫಲಕಗಳನ್ನು ಸಾಹಿತಿ ಹಾಗೂ ಪುಸ್ತಕಮನೆ ಹರಿಹರಪ್ರಿಯ ಸುಟ್ಟು ಹಾಕಿದ್ದಾರೆ.



ನಗರದ ಹೊರವಲಯದಲ್ಲಿ ತಮ್ಮ ಪುಸ್ತಕಮನೆಯ ಎದುರು ಬುಧವಾರ ಪ್ರಶಸ್ತಿಗಳನ್ನು ರಾಶಿ ಹಾಕಿ ಬೆಂಕಿ ಹಚ್ಚಿ, ಸರ್ಕಾರದ ವಿರುದ್ಧ ಬೇಸರ ವ್ಯಕ್ತಪಡಿಸಿದ್ದಾರೆ.

‘ಅನಾರೋಗ್ಯದಿಂದ ಬಳಲುತ್ತಿದ್ದರೂ ನೆರವಿಗೆ ನನ್ನ ಯಾರೂ ಬಂದಿಲ್ಲ. ನನ್ನನ್ನು ತಿರಸ್ಕಾರ ಭಾವದಿಂದ ಕಾಣಲಾಗುತ್ತಿದೆ.ನನಗೆ ಈ ಪ್ರಶಸ್ತಿಗಳ ನೆನಪು ಮತ್ತೆ ಬರಬಾರದೆಂದು ಈ ರೀತಿ ಮಾಡಿದ್ದೇನೆ’ ಎಂದು ಹರಿಹರಪ್ರಿಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬೆಂಗಳೂರಿನ ಅಪೋಲೊ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ನನಗೆ ಎರಡು ಸ್ಟೆಂಟ್ ಹಾಕಿದ್ದಾರೆ. ವೈದ್ಯಕೀಯ ವೆಚ್ಚ ನೀಡುವಂತೆ ಸರ್ಕಾರವನ್ನು ಕೋರಿದ್ದು, ಈವರೆಗೆ ಲಭಿಸಿಲ್ಲ. ಆಸ್ಪತ್ರೆಗೆ ಪಾವತಿಸಿದ್ದ ₹4.50 ಲಕ್ಷ ನನಗೆ ತುರ್ತಾಗಿ ಬೇಕಿದೆ. ಇತರರ ಬಳಿ ಪಡೆದು ಅಂದು ಪಾವತಿಸಿದ್ದೆ. ನನಗೆ ಒಂದು ಮನೆ ಬೇಕು, ಪುಸ್ತಕ ಇಡಲು ವ್ಯವಸ್ಥೆ ಮಾಡಿಕೊಡಬೇಕು. ಜೊತೆಗೆ ಮುಂದಿನ ಜೀವನಕ್ಕೆ ದಾರಿ ಮಾಡಿಕೊಡಬೇಕು’ ಎಂದು ಆಗ್ರಹಿಸಿದರು.

‘ಈ ವಿಚಾರ ಮುಖ್ಯಮಂತ್ರಿಗೆ ಮಾತ್ರವಲ್ಲ, ಪ್ರಧಾನಿಗೂ ಗೊತ್ತಾಗಬೇಕು. ಆ ಮೂಲಕ ನನಗೆ ಸಹಾಯ ಮಾಡಬೇಕು’ ಎಂದು ಅವರು ಕೋರಿದರು.

ಒಳಮೀಸಲಾತಿ: ಕಾಯ್ದೆ ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳ ಮೀಸಲಾತಿ ಅನುಷ್ಠಾನ ವಿಳಂಬ ಮಾಡಲು ರಾಜ್ಯ ಸರ್ಕಾರ ಕಾಯ್ದೆ ರೂಪಿಸುವ ನಾಟಕ ಮಾಡುತ್ತಿದೆ. ಇಂತಹ ನಡೆಯ ಹಿಂದೆ ಒಳಮೀಸಲಾತಿ ಆದೇಶ ರದ್ದು ಮಾಡುವ ದುರುದ್ದೇಶವಿದೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ‘ಡಿ.8ಕ್ಕೆ ಬೆಳಗಾವಿ ಅಧಿವೇಶನ ಆರಂಭವಾಗುತ್ತದೆ. ಅಷ್ಟರೊಳಗೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ಗಳಲ್ಲಿ ಒಳಮೀಸಲಾತಿ ವಿರುದ್ಧ ಪ್ರಕರಣಗಳು ದಾಖಲಾಗುತ್ತವೆ. ಸರ್ಕಾರದ ಆದೇಶ ರದ್ದಾಗುತ್ತದೆ ಎಂಬ ದುರಾಲೋಚನೆ ರಾಜ್ಯ ಸರ್ಕಾರಕ್ಕೆ ಇದೆ. ಆರ್ಥಿಕ ಸಂಕಷ್ಟದ ಕಾರಣ ನೇಮಕಾತಿ ಮುಂದೆ ಹೋಗಲಿ ಎಂಬ ಉದ್ದೇಶವೂ ವಿಳಂಬಕ್ಕೆ ಕಾರಣ ಇರಬಹುದು’ ಎಂದರು.

‘ಪರಿಶಿಷ್ಟ ಸಮುದಾಯದಲ್ಲಿ ಒಳ ಮೀಸಲಾತಿ ಜಾರಿಯಾಗಬೇಕು ಎಂದು 30 ವರ್ಷಗಳಿಂದ ಹೋರಾಟ ನಡೆಸಿದ್ದಾರೆ. 101 ಜಾತಿಗಳಿಗೆ ಸಾಮಾಜಿಕ ನ್ಯಾಯ ಸಿಗಬೇಕು ಎಂಬ ಆಶಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮುತುವರ್ಜಿ ವಹಿಸಿ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪು ಬಂದು 1 ವರ್ಷ 3 ತಿಂಗಳಾಗಿದೆ. ಆದರೂ, ಒಳಮೀಸಲಾತಿಯ ಸಮರ್ಪಕ ಅನುಷ್ಠಾನಕ್ಕೆ ಅಗತ್ಯ ಕ್ರಮಕೈಗೊಂಡಿಲ್ಲ’ ಎಂದು ದೂರಿದರು.

ಗೋವಿಂದ ಕಾರಜೋಳ

‘ಒಳ ಮೀಸಲಾತಿ ಕುರಿತು ರಾಜ್ಯ ಸರ್ಕಾರ ದೋಷ ಪೂರಿತ ಆದೇಶಗಳನ್ನು ಮಾಡುತ್ತಿದೆ. ಆದೇಶವನ್ನು ಪ್ರಶ್ನಿಸಿ ಈಚೆಗೆ ಹೈಕೋರ್ಟ್‌ನಲ್ಲಿ ಪ್ರಕರಣ ಬಂದಾಗ ರಾಜ್ಯ ಸರ್ಕಾರದ ಪರವಾಗಿ ಯಾರೂ ಹಾಜರಾಗಿಲ್ಲ. ಹಾಗಾಗಿ, ಆದೇಶಕ್ಕೆ ಭಾಗಶಃ ತಡೆಯಾಗಿದೆ’ ಎಂದು ಹೇಳಿದರು.

ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಮಾತನಾಡಿ, ‘ಒಳ ಮೀಸಲಾತಿ ವಿಚಾರದಲ್ಲಿ ಗೊಂದಲಗಳಿವೆ. ಸಂವಿಧಾನಬದ್ಧವಾಗಿ ಯೋಚಿಸದೆ ರಾಜಕೀಯ ತೀರ್ಮಾನ ತೆಗೆದುಕೊಳ್ಳಲಾಗಿದೆ. ಅಲೆಮಾರಿ ಸಮುದಾಯವು ಪ್ರತ್ಯೇಕ ಮೀಸಲಾತಿ ಕೇಳುತ್ತಿದೆ. ಅವರಿಗೆ ನ್ಯಾಯ ಕೊಡಿಸುವಲ್ಲಿ ವಿಫಲರಾಗಿದ್ದಾರೆ’ ಎಂದು ದೂರಿದರು.

ಒಳ ಮೀಸಲು: ಮುಂದಿನ ಸಂಪುಟ ಸಭೆಗೆ

ಬೆಂಗಳೂರು: ಒಳ ಮೀಸಲಾತಿಯ ಸಮರ್ಪಕ ಅನುಷ್ಠಾನಕ್ಕೆ ಕಾಯ್ದೆ ತರುವ ವಿಚಾರದ ಬಗ್ಗೆ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಅಧಿಕಾರಿಗಳ ಜತೆ ಸಭೆ ನಡೆಸಬೇಕಿದೆ. ಹೀಗಾಗಿ ಕರಡು ಮಸೂದೆಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಕರಡು ಮಸೂದೆಯ ಬಗ್ಗೆ ಬುಧವಾರವೇ ಚರ್ಚೆ ನಡೆಯಬೇಕಿತ್ತು, ಇನ್ನೂ ಚರ್ಚೆ ನಡೆದಿಲ್ಲ. ಹೀಗಾಗಿ ಇವತ್ತಿನ ಸಂಪುಟ ಸಭೆಗೆ ಪ್ರಸ್ತಾವ ಬಂದಿಲ್ಲ ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಇನ್ನು ಮೂರು ಅಥವಾ ನಾಲ್ಕು ದಿನಗಳಲ್ಲಿ ಸಭೆ ಮಾಡಿ ಆ ಬಳಿಕ ಸಂಪುಟಕ್ಕೆ ಮಸೂದೆ ತರಲಾಗುವುದು ಎಂದು ಅವರು ಹೇಳಿದರು.

ಸಾರ್ವಜನಿಕ ಸ್ಥಳದಲ್ಲಿ 10ಕ್ಕಿಂತ ಹೆಚ್ಚು ಜನ ಸೇರುವುದಕ್ಕೆ ಪೊಲೀಸ್ ಅನುಮತಿ ಪಡೆಯುವುದನ್ನು ಕಡ್ಡಾಯ ಮಾಡಿರುವ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದ್ದು, ಅದನ್ನು ತೆರವುಗೊಳಿಸಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ವಯನಾಡು ಪ್ರವಾಸಕ್ಕೆ ಸಂಬಂಧಿಸಿದಂತೆ ಕೆಎಸ್‌ಟಿಡಿಸಿ ನೀಡಿರುವ ಜಾಹೀರಾತಿನ ಬಗ್ಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ವಿವರಣೆ ಕೇಳಿದ್ದೇನೆ’ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ಧರ್ಮಸ್ಥಳ: ಎಸ್‌ಐಟಿಗೆ ಮಧ್ಯಂತರ ತಡೆ

ಒಂದನೇ ಪುಟದಿಂದ...

‘ರಾಜಕೀಯ, ಧಾರ್ಮಿಕ, ಸಂಘಟನಾತ್ಮಕ ವೈರತ್ವದ ಮನೋಭಾವದಿಂದ ಈ ನೋಟಿಸ್‌ಗಳನ್ನು ನೀಡಲಾಗಿದೆ. ವಿಚಾರಣೆಗೆ ಹೋದರೆ ಬೆಳಿಗ್ಗೆಯಿಂದ ಮಧ್ಯರಾತ್ರಿವರೆಗೆ ಕೂರಿಸುತ್ತಾರೆ. ಈಗಾಗಲೇ 150 ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಲಾಗಿದೆ. ಆರಂಭದಲ್ಲಿ 211(ಎ) ಅಡಿ ಎಫ್‌ಐಆರ್ ದಾಖಲಿಸಿ ನಂತರ ಬೇರೆ ಕಲಂ ಸೇರ್ಪಡೆ ಮಾಡಿಸಿದ್ದಾರೆ. ಅದೂ ಎರಡೂವರೆ ತಿಂಗಳ ನಂತರ ಹೊಸ ಕಲಂಗಳನ್ನು ಸೇರ್ಪಡೆ ಮಾಡಲಾಗಿದೆ. ಇದು ಸುಪ್ರೀಂ ಕೋರ್ಟ್‌ನ ಪೂರ್ವ ನಿರ್ಧರಿತ ತೀರ್ಪಿಗೆ ವಿರುದ್ಧವಾಗಿದ್ದು ಪುನಃ ನೀಡಲಾಗಿರುವ ನೋಟಿಸ್ ರದ್ದುಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ರಾಜ್ಯ ಪ್ರಾಸಿಕ್ಯೂಷನ್‌ನ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಅರ್ಜಿದಾರರ ಪ್ರಚೋದನೆ ಮೇಲೆಯೇ ಚಿನ್ನಯ್ಯ ದೂರು ನೀಡಿದ್ದಾನೆ. ನಂತರ 164ರಡಿ ಹೇಳಿಕೆ ನೀಡಿ ಅರ್ಜಿದಾರರ ವಿರುದ್ಧ ಆರೋಪ ಹೊರಿಸಿದ್ದಾನೆ. ಅರ್ಜಿದಾರರನ್ನು ಆರಂಭದಲ್ಲಿ ಸಾಕ್ಷಿಗಳಾಗಿ ಪರಿಗಣಿಸಲಾಗಿತ್ತು. ಧರ್ಮಸ್ಥಳ ಗ್ರಾಮದ 20 ಕಡೆ ಅಗೆದು ಪರಿಶೀಲನೆ ನಡೆಸಲಾಯಿತು. ಆನಂತರ ಆರೋಪ ಬಹುತೇಕ ಸುಳ್ಳೆಂದು ದೃಢಪಟ್ಟಿದ್ದರಿಂದ ದೂರುದಾರರನ್ನು ಆರೋಪಿಗಳನ್ನಾಗಿ ಮಾಡಿ ನೋಟಿಸ್ ನೀಡಲಾಗಿದೆ’ ಎಂದರು.

‘ಚಿನ್ನಯ್ಯನ ಮನವಿ ಅನುಸಾರವೇ ಸರ್ಕಾರ ಎಸ್‌ಐಟಿ ರಚನೆ ಮಾಡಿತು. ನಂತರ ಇವರೆಲ್ಲಾ ಎಸ್‌ಐಟಿ ಅತ್ಯಂತ ಚೆನ್ನಾಗಿ ತನಿಖೆ ನಡೆಸುತ್ತಿದೆ ಎಂದು ಕೊಂಡಾಡಿದರು. ಎಸ್‌ಐಟಿಯ ಮುಂದುವರಿದ ಆಳವಾದ ತನಿಖೆಯಲ್ಲಿ ಇವರೆಲ್ಲರ ವಿಚಾರಣೆ ಅಗತ್ಯವಾಗಿದೆ ಎಂದು ಕಂಡುಬಂದ ಕಾರಣ ಅರ್ಜಿದಾರರಿಗೆ ನೋಟಿಸ್ ನೀಡಲಾಗಿದೆ ಎಂಬುದು ಗಮನಾರ್ಹ. ಆದರೆ, ಇವರಿಗೆಲ್ಲಾ ಈಗ ಎಸ್‌ಐಟಿ ತನಿಖೆಯೇ ಕಾನೂನು ಬಾಹಿರವಾಗಿ ಕಾಣಿಸುತ್ತಿರುವುದು ಆಶ್ಚರ್ಯಕರ’ ಎಂದರು.

‘ಅರ್ಜಿದಾರರ್ಯಾರೂ ತನಿಖೆಗೆ ಸಹಕರಿಸುತ್ತಿಲ್ಲ. ಈ ಮೂಲಕ ರಾಜ್ಯದ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಯಾವುದೇ ಕಾರಣಕ್ಕೂ ಅರ್ಜಿದಾರರ ಮನವಿಯನ್ನು ಪುರಸ್ಕರಿಸಬಾರದು. ಇವರಿಗೆಲ್ಲಾ ಬೇಕೆಂದಾಗ ತನಿಖೆ ಮಾಡಬೇಕು. ಬೇಡ ಎಂದಾದಾಗ ತನಿಖೆಯ ಕಾನೂನು ತಳಹದಿಯನ್ನೇ ಪ್ರಶ್ನಿಸುವುದು ಎಷ್ಟು ಸರಿ? ಇದೆಲ್ಲಾ ಯಾವ ರೀತಿಯ ವರ್ತನೆ’ ಎಂದು ಝಾಡಿಸಿದರಲ್ಲದೆ, ‘ಅರ್ಜಿದಾರರು ನ್ಯಾಯಾಂಗದ ಮೇಲೆಯೇ ಸವಾರಿ ಮಾಡಲು ಹೊರಟಂತಿದೆ’ ಎಂದು ಕಿಡಿ ಕಾರಿದರು.

ಅಂತಿಮವಾಗಿ ಅರ್ಜಿದಾರರ ಪರ ವಕೀಲರು, ‘ಅರ್ಜಿದಾರನ್ನು ಬಂಧಿಸದಂತೆ ಮಧ್ಯಂತರ ರಕ್ಷಣೆ ನೀಡಬೇಕು’ ಎಂದು ಮನವಿ ಮಾಡಿದರು. ‘ಅರ್ಜಿದಾರರಿಗೆ ಯಾವುದೇ ಕಿರುಕುಳ ನೀಡಬಾರದು’ ಎಂದು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

ಪೊಲೀಸ್ ನೋಟಿಸ್ ಪ್ರಶ್ನಿಸಿದ ಅರ್ಜಿ

ಒಂದನೇ ಪುಟದಿಂದ...

‘ಈ ಪ್ರಕರಣಕ್ಕೆ ಸಂಬಂಧಿಸಿದ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ಖಚಿತಪಡಿಸಿಕೊಳ್ಳುವ ಬಗ್ಗೆ ನಿಮ್ಮನ್ನು ವಿಚಾರಿಸುವುದು ಅಗತ್ಯವಾಗಿದೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ನೀವು 27ರ ಅಕ್ಟೋಬರ್ 2025 ರಂದು ಬೆಳಿಗ್ಗೆ 10:30 ಗಂಟೆಗೆ ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಬಂದು ಹಾಜರಾಗಬೇಕು’ ಎಂದು ಸೂಚಿಸಿದ್ದರು.

‘ಒಂದು ವೇಳೆ ನೀವು ನೋಟೀಸಿನಲ್ಲಿ ನೀಡಿರುವ ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಪಾಲನೆ ಮಾಡದೇ ಅಥವಾ ಹಾಜರಾಗದೇ ಹೋದಲ್ಲಿ ನಿಮ್ಮನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಕಲಂ 35(6) ರ ಅಡಿಯಲ್ಲಿ ದಸ್ತಗಿರಿ ಕ್ರಮ ಕೈಗೊಳ್ಳಲಾಗುವುದು’ ಎಂದೂ ಅವರು ನೋಟಿಸ್‌ನಲ್ಲಿ ಎಚ್ಚರಿಸಿದ್ದರು.

ರಾಜ್ಯದ ನೂರು ಕಡೆ ಸೋಲಾರ್ ಘಟಕ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ರಾಜ್ಯದ ನೂರು ಕಡೆ ಸೋಲಾರ್ ಘಟಕ ಸ್ಥಾಪಿಸಿ ಎರಡು ಸಾವಿರ ಮೆಗಾ ವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

‘ಪ್ರಜಾವಾಣಿ’ ವರದಿ ಉಲ್ಲೇಖಿಸಿ ಮುಖ್ಯಮಂತ್ರಿಗೆ ಪತ್ರ

ಕಳಪೆ ಆಹಾರ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಉಡುಪಿ: ರಾಜ್ಯದ ಬುಡಕಟ್ಟು ಸಮುದಾಯಕ್ಕೆ ನೀಡುತ್ತಿರುವ ಕಳಪೆ ಪೌಷ್ಟಿಕ ಆಹಾರದ ಕುರಿತು ‘ಪ್ರಜಾವಾಣಿ’ಯ ಒಳನೋಟದಲ್ಲಿ ಪ್ರಕಟ ವಾಗಿದ್ದ ವರದಿ ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಲೋಕಾಯುಕ್ತ ತನಿಖೆಗೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಕನಿಷ್ಠ ಲೋಕಾಯುಕ್ತ ತನಿಖೆಗಾದರೂ ಆದೇಶ ನೀಡಲು ವಿನಂತಿಸಿ ಈ ಪತ್ರ ಬರೆಯುತ್ತಿದ್ದೇನೆ’ ಎಂದು ಕೋಟ ಅವರು ಹೇಳಿದ್ದಾರೆ.

> ಬುಡಕಟ್ಟು ಜನಾಂಗಕ್ಕೆ ಕೊಡುವ ಆಹಾರ ಆಡಳಿತಾತ್ಮಕ ಕಾರಣಕ್ಕೆ ಕಳಪೆ ಎಂದು ದೂರು ಬಂದಾಗಲೂ ಸರ್ಕಾರ ನಿರ್ಲಿಪ್ತವಾಗಿರುವುದು ಶೋಭೆಯಲ್ಲ
> **ಕೋಟ ಶ್ರೀನಿವಾಸ** ಪೂಜಾರಿ ಸಂಸದ

‘ರಾಜ್ಯದಲ್ಲಿ ಸುಮಾರು 48,000 ಬುಡಕಟ್ಟು ಸಮುದಾಯದ ಕುಟುಂಬಗಳಿವೆ. ಈ ಪೈಕಿ 2,48,000 ಫಲಾನುಭವಿಗಳಿಗೆ ಸರ್ಕಾರ ಪೌಷ್ಟಿಕ ಆಹಾರ ನೀಡುತ್ತಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುವ ಕಡುಬಡವರಿಗೆ ನೀಡುವ ಗುಣಮಟ್ಟದ ಆಹಾರದ ಕಿಟ್ ವಿತರಣೆಯಲ್ಲಿ ಊಹಿಸಲಾಗದ ಕಳಪೆ ಮಟ್ಟದ ಆಹಾರ ಸರಬರಾಜಾಗುತ್ತಿರುವ ಬಗ್ಗೆ ‘ಪ್ರಜಾವಾಣಿ’ ಸುದ್ದಿ ಮಾಡಿದೆ’ ಎಂದು ಅವರು ಹೇಳಿದ್ದಾರೆ.

---

20 ಜನರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಇಲ್ಲಿಯ ಮಿನಿವಿಧಾನ ಸೌಧದ ರಸ್ತೆ ಹಾಗೂ ಸೌಧದ ಮುಂಭಾಗ ಅಕ್ರಮ ಕೂಟ ಸೇರಿ ಸಾರ್ವಜನಿಕರಿಗೆ ತೊಂದರೆ ಮಾಡಿದ ಆರೋಪದಲ್ಲಿ ಸೌಜನ್ಯ ತಾಯಿ ಕುಸುಮಾವತಿ, ಸೌಜನ್ಯ ಪರ ಹೋರಾಟಗಾರರಾದ ಅನಿಲ್ ಅಂತರ, ಪ್ರಸನ್ನ ರವಿ ಸೇರಿದಂತೆ 20 ಮಂದಿ ವಿರುದ್ಧ ಬೆಳ್ತಂಗಡಿ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ ಸೇರಿ ಸೌಜನ್ಯ ಪರ ಹೋರಾಟಗಾರರ ವಿರುದ್ಧ ಪೊಲೀಸರು ಸುಳ್ಳು ಪ್ರಕರಣ ದಾಖಲಿಸುತ್ತಿದ್ದಾರೆ ಎಂದು ಆರೋಪಿಸಿ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸುವ ಕಾರ್ಯಕ್ರಮವನ್ನು ಸೌಜನ್ಯ ಪರ ಹೋರಾಟಗಾರರು ಅ.27ರಂದು ಘೋಷಿಸಿದ್ದರು. ಕಾರ್ಯಕ್ರಮಕ್ಕೆ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿತ್ತು. . ಈ ಘಟನೆಗೆ ಸಂಬಂಧಿಸಿ ಇದೀಗ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಅನಿಲ್ ಕುಮಾರ್ ಅಂತರ, ಪ್ರಜ್ವಲ್ ಗೌಡ, ಪ್ರದೀಪ್ ಕುಲಾಲ್, ಶ್ರೀನಿವಾಸ ಗೌಡ, ರವೀಂದ್ರ ಶೆಟ್ಟಿ, ಪ್ರಸನ್ನ ರವಿ, ಉದಯ ಪ್ರಸಾದ್, ಕುಸುಮಾವತಿ, ವೆಂಕಪ್ಪ ಕೋಟ್ಯಾನ್, ತನುಷ್ ಶೆಟ್ಟಿ, ಮೋಹನ್ ಶೆಟ್ಟಿ, ಜಯರಾಮ ಗೌಡ, ಸಂತೋಷ್ ಶೆಟ್ಟಿ, ಪ್ರಮೋದ್ ಶೆಟ್ಟಿ, ಯೋಗೀಶ್ ಕುಲಾಲ್, ನಾರಾವಿ ವಿಜಯ, ರವೀಂದ್ರ ಶೆಟ್ಟಿ ಮುಡಿಪು, ಶಶಿಕಲಾ ಶೆಟ್ಟಿ, ಪೂಜಾಶ್ರೀ ಧರ್ಮಸ್ಥಳ, ಟಿಕ್ಕಿ ರವಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ತಿಮರೋಡಿ, ಮಟ್ಟಣ್ಣವರ ಮನೆಗೆ ನೋಟಿಸ್

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ವಿಚಾರಣೆಗೆ ಹಾಜರಾಗುವಂತೆ ಹೋರಾಟಗಾರರಾದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟಣ್ಣವರ, ಜಯಂತ್ ಟಿ. ಹಾಗೂ ವಿಠ್ಠಲ ಗೌಡ ಅವರ ಮನೆಗೆ ನೋಟಿಸ್ ಅಂಟಿಸಿದೆ.

ಬಾಗೇಪಲ್ಲಿ, ಅಜ್ಜಂಪುರದಲ್ಲಿ ಪ್ರತ್ಯೇಕ ಹೃದಯಾಘಾತ ಪ್ರಕರಣ

ಕುಸಿದು ಬಿದ್ದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ(ಚಿಕ್ಕಬಳ್ಳಾಪುರ): ಪರಿಶಿಷ್ಟ ಜಾತಿಗೆ ಸೇರಿದ ವ್ಯಕ್ತಿ ಮೇಲಿನ ದೌರ್ಜನ್ಯ (ಅಟ್ರಾಸಿಟಿ) ಪ್ರಕರಣದ ಆರೋಪಿ ಮಹಿಳೆಯೊಬ್ಬರು ಇಲ್ಲಿನ ಜಿಲ್ಲಾ ನ್ಯಾಯಾಲಯದಲ್ಲಿ ವಿಚಾರಣೆ ವೇಳೆ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಅ.28 ರಂದು ವಿಚಾರಣೆಗೆ ಹಾಜರಾಗಿದ್ದ ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ವಂಟೀರವಾಡ್ಲ-ಪಲ್ಲಿ ಗ್ರಾಮದ ಮಾರಮ್ಮ(58) ನ್ಯಾಯಾಧೀಶರ ವಿಚಾರಣೆ ವೇಳೆ ಕಟಕಟೆಯಲ್ಲಿಯೇ ಹೃದಯಾಘಾತಕ್ಕೆ ಒಳಗಾದರು. ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು.

‘ನನ್ನ ತಾಯಿ ಮಾರಮ್ಮ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು’ ಎಂದು ಮಹಿಳೆಯ ಮಗ ವಿ.ಆರ್. ಮಂಜುನಾಥ್ ತಿಳಿಸಿದ್ದಾರೆ.

2024ರ ಜನವರಿಯಲ್ಲಿ ಕೃಷಿ ಜಮೀನು ಗಡಿರೇಖೆ ಗುರುತಿಸುವ ವಿಚಾರದಲ್ಲಿ ಗ್ರಾಮದ ಪರಿಶಿಷ್ಟ ಸಮುದಾಯದ ನರಸಿಂಹಪ್ಪ ಅವರೊಂದಿಗೆ ಮಾರಮ್ಮ ಜಗಳವಾಡಿದ್ದರು. ಮಾರಮ್ಮ ಮತ್ತು ಕುಟುಂಬ ಸದಸ್ಯರ ವಿರುದ್ಧ ಪಾತಪಾಳ್ಯ ಪೊಲೀಸ್ ಠಾಣೆಯಲ್ಲಿ ನರಸಿಂಹಪ್ಪ ದೌರ್ಜನ್ಯ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿತ್ತು.

ಜಿಲ್ಲಾ ಆಸ್ಪತ್ರೆಯಿಂದ ಮಾರಮ್ಮ ಶವವನ್ನು ಪೊಲೀಸ್ ಬಂದೋಬಸ್ತ್‌ನಲ್ಲಿ ಸ್ವಗ್ರಾಮಕ್ಕೆ ತರಲಾಯಿತು. ಈ ವೇಳೆ ಎರಡು ಗುಂಪುಗಳ ಮಧ್ಯೆ ಮಾತಿನ ಚಕಮಕಿ ನಡೆಯಿತು. ಪೊಲೀಸರ ಮಧ್ಯ ಪ್ರವೇಶದಿಂದ ಗೊಂದಲದ ವಾತಾವರಣ ತಿಳಿಯಾಯಿತು.

ಹೃದಯಾಘಾತ: ವಧು ಸಾವು

ಅಜ್ಜಂಪುರ (ಚಿಕ್ಕಮಗಳೂರು): ಶುಕ್ರವಾರ (ಅ.31) ಹಸೆಮಣೆ ಏರಬೇಕಿದ್ದ ವಧು ಹೃದಯಾಘಾತದಿಂದ ಬುಧವಾರ ತಡರಾತ್ರಿ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಸೊಲ್ಲಾಪುರ ಗ್ರಾಮದ ಶೃತಿ (24) ಮೃತಪಟ್ಟವರು. ಶೃತಿ ಅವರ ವಿವಾಹವು ತರೀಕೆರೆಯ ದಿಲೀಪ್ ಜತೆ ಶುಕ್ರವಾರ ನಡೆಯಬೇಕಿತ್ತು. ಮದುವೆ ಅಂಗವಾಗಿ ಬುಧವಾರ ನಡೆದ ದೇವರ ಕಾರ್ಯದಲ್ಲಿ ಪಾಲ್ಗೊಂಡಿದ್ದ ಶೃತಿ, ತಡರಾತ್ರಿ ನಿತ್ರಾಣಗೊಂಡರು. ಅವರಿಗೆ ಕಡೂರಿನಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದೊಯ್ಯುವ ವೇಳೆ ಅವರು ಮೃತಪಟ್ಟರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ರಾಜ್ಯೋತ್ಸವ ಪ್ರಶಸ್ತಿ–2025’ ಪುರಸ್ಕೃತರು

ಎಲ್.ಮಹದೇವಪ್ಪ ಉಡಿಗಾಲ · ಕೆ.ರಾಮ ಮೂರ್ತಿರಾವ್ · ಬಸಣ್ಣ ಮೋನಪ್ಪ ಬಡಿಗೇರ · ಸಿಂಧು ಗುಜರನ್ · ಪೆನ್ನ ಓಬಳಯ್ಯ · ತುಂಬಾಡಿ ರಾಮಯ್ಯ · ಎಂ.ಆರ್. ಜಯರಾಂ

ಟಾಕಪ್ಪ ಕಣ್ಣೂರು · ಕೆ.ಪಿ.ಹೆಗಡೆ · ಎಲ್.ಬಿ.ಶೇಖ್ ಮಾಸ್ತರ್ · ಎಸ್.ವಿ. ಹಿತ್ತಲಮನಿ · ರವೀಂದ್ರ ಕೋರಿಶೆಟ್ಟರ್ · ಬಿ.ಎಂ. ಹನೀಫ್ · ಕೆ.ಸುಬ್ರಮ್ಮಣ್ಯ · ಹನುಮಂತಪ್ಪ

ಹೆಸರು	ಜಿಲ್ಲೆ
ಸಾಹಿತ್ಯ	
ರಾಜೇಂದ್ರ ಚೆನ್ನಿ	ಶಿವಮೊಗ್ಗ
ತುಂಬಾಡಿ ರಾಮಯ್ಯ	ತುಮಕೂರು
ಪ್ರೊ ಅರ್. ಸುನಂದಮ್ಮ	ಚಿಕ್ಕಬಳ್ಳಾಪುರ
ಎಚ್.ಎಲ್ ಪುಷ್ಪ	ತುಮಕೂರು
ರಹಮತ್ ತರೀಕೆರೆ	ಚಿಕ್ಕಮಗಳೂರು
ಹ.ಮ. ಪೂಜಾರ	ವಿಜಯಪುರ
ಜಾನಪದ	
ಬಸಪ್ಪ ಭರಮಪ್ಪ ಚೌಡ್ಕಿ	ಕೊಪ್ಪಳ
ಬಿ. ಟಾಕಪ್ಪ ಕಣ್ಣೂರು	ಶಿವಮೊಗ್ಗ
ಸನ್ನಿಂಗಪ್ಪ ಸತ್ತೆಪ್ಪ ಮುಶೆನ್ನಗೋಳ	ಬೆಳಗಾವಿ
ಹನುಮಂತಪ್ಪ ಮಾರಪ್ಪ ಚೀಳಂಗಿ	ಚಿತ್ರದುರ್ಗ
ಎಂ. ತೋಪಣ್ಣ	ಕೋಲಾರ
ಸೋಮಣ್ಣ ದುಂಡಪ್ಪ ಧನಗೊಂಡ	ವಿಜಯಪುರ
ಸಿಂಧು ಗುಜರನ್	ದಕ್ಷಿಣ ಕನ್ನಡ
ಎಲ್. ಮಹದೇವಪ್ಪ ಉಡಿಗಾಲ	ಮೈಸೂರು
ಸಂಗೀತ	
ದೇವೇಂದ್ರಕುಮಾರ ಪತ್ತಾರ್	ಕೊಪ್ಪಳ
ಮಡಿವಾಳಯ್ಯ ಸಾಲಿ	ಬೀದರ್
ನೃತ್ಯ	
ಕೆ. ರಾಮಮೂರ್ತಿ ರಾವ್	ಮೈಸೂರು
ಚಲನಚಿತ್ರ /ಕಿರುತೆರೆ	
ಪ್ರಕಾಶ್ ರಾಜ್	ದಕ್ಷಿಣ ಕನ್ನಡ
ವಿಜಯಲಕ್ಷ್ಮೀ ಸಿಂಗ್	ಕೊಡಗು
ಆಡಳಿತ	
ಎಚ್. ಸಿದ್ದಯ್ಯ. ಐಎಎಸ್ (ನಿ)	ಬೆಂಗಳೂರು ದಕ್ಷಿಣ (ರಾಮನಗರ)
ವೈದ್ಯಕೀಯ	
ಡಾ. ಆಲಮ್ಮ ಮಾರಣ್ಣ	ತುಮಕೂರು
ಡಾ. ಜಯರಂಗನಾಥ್	ಬೆಂಗಳೂರು ಗ್ರಾ.
ಸಮಾಜ ಸೇವೆ	
ಸೂಲಗಿತ್ತಿ ಈರಮ್ಮ	ವಿಜಯನಗರ
ಫಕ್ಕೀರಿ	ಬೆಂಗಳೂರು ಗ್ರಾ.
ಕೋರಿನ್ ಆಂಟೊನಿಯಟ್ ರಸ್ಕೀನಾ	ದಕ್ಷಿಣ ಕನ್ನಡ
ಡಾ.ಎನ್. ಸೀತಾರಾಮ ಶೆಟ್ಟಿ	ಉಡುಪಿ
ಕೋಣಂದೂರು ಲಿಂಗಪ್ಪ	ಶಿವಮೊಗ್ಗ
ಸಂಕೀರ್ಣ	
ಉಮೇಶ ಪಂಬದ	ದಕ್ಷಿಣ ಕನ್ನಡ
ಡಾ. ರವೀಂದ್ರ ಕೋರಿಶೆಟ್ಟರ್	ಧಾರವಾಡ
ಕೆ.ದಿನೇಶ್	ಬೆಂಗಳೂರು
ಶಾಂತರಾಜು	ತುಮಕೂರು
ಜಾಫರ್ ಮೊಹಿಯುದ್ದೀನ್	ರಾಯಚೂರು
ಪೆನ್ನ ಓಬಳಯ್ಯ	ಬೆಂಗಳೂರು ಗ್ರಾ.
ಶಾಂತಿ ಬಾಯಿ ಕೆ	ಬಳ್ಳಾರಿ
ಪುಂಡಲೀಕ ಶಾಸ್ತ್ರೀ(ಬುಡಬುಡಕೆ)	ಬೆಳಗಾವಿ
ಹೊರನಾಡು/ಹೊರದೇಶ	
ಝುಕಾರಿಯ ಬಜಪೆ	ಸೌದಿ
ಪಿ.ವಿ. ಶೆಟ್ಟಿ	ಮುಂಬೈ

ಪರಿಸರ	
ರಾಮೇಗೌಡ	ಚಾಮರಾಜನಗರ
ಮಲ್ಲಿಕಾರ್ಜುನ ನಿಂಗಪ್ಪ	ಯಾದಗಿರಿ
ಕೃಷಿ	
ಎಸ್.ವಿ.ಹಿತ್ತಲಮನಿ	ಹಾವೇರಿ
ಎಂ.ಸಿ. ರಂಗಸ್ವಾಮಿ	ಹಾಸನ
ಮಾಧ್ಯಮ	
ಕೆ.ಸುಬ್ರಹ್ಮಣ್ಯ	ಬೆಂಗಳೂರು
ಅಂಶಿ ಪ್ರಸನ್ನಕುಮಾರ್	ಮೈಸೂರು
ಬಿ.ಎಂ. ಹನೀಫ್	ದಕ್ಷಿಣ ಕನ್ನಡ
ಎಂ. ಸಿದ್ಧರಾಜು	ಮಂಡ್ಯ
ವಿಜ್ಞಾನ ಮತ್ತು ತಂತ್ರಜ್ಞಾನ	
ರಾಮಯ್ಯ	ಚಿಕ್ಕಬಳ್ಳಾಪುರ
ಏರ್ ಮಾರ್ಷಲ್ ಫಿಲಿಪ್ ರಾಜಕುಮಾರ್	ದಾವಣಗೆರೆ
ಡಾ.ಆರ್.ವಿ. ನಾಡಗೌಡ	ಗದಗ
ಸಹಕಾರ	
ಶೇಖರಗೌಡ ವಿ. ಮಾಲಿಪಾಟೀಲ್	ಕೊಪ್ಪಳ
ಯಕ್ಷಗಾನ	
ಕೋಟ ಸುರೇಶ ಬಂಗೇರ	ಉಡುಪಿ
ಐರಬೈಲ್ ಆನಂದ ಶೆಟ್ಟಿ	ಉಡುಪಿ
ಕೃಷ್ಣ ಪರಮೇಶ್ವರ ಹೆಗಡೆ (ಕೆ.ಪಿ ಹೆಗಡೆ)	ಉತ್ತರ ಕನ್ನಡ
ಬಯಲಾಟ	
ಗುಂಡೂರಾಜ್	ಹಾಸನ
ರಂಗಭೂಮಿ	
ಎಚ್.ಎಂ. ಪರಮಶಿವಯ್ಯ	ಬೆಂಗಳೂರು ದಕ್ಷಿಣ (ರಾಮನಗರ)
ಎಲ್.ಬಿ. ಶೇಖ್ (ಮಾಸ್ತರ್)	ವಿಜಯಪುರ
ಬಂಗಾರಪ್ಪ ಖುದಾನ್‌ಪುರ	ಬೆಂಗಳೂರು
ಮೈಮ್ ರಮೇಶ್	ದಕ್ಷಿಣ ಕನ್ನಡ
ಡಿ.ರತ್ನಮ್ಮ ದೇಸಾಯಿ	ರಾಯಚೂರು
ಶಿಕ್ಷಣ	
ಎಂ.ಆರ್. ಜಯರಾಂ	ಬೆಂಗಳೂರು
ಎನ್.ಎಸ್. ರಾಮೇಗೌಡ	ಮೈಸೂರು
ಎಸ್. ಬಿ. ಹೊಸಮನಿ	ಕಲಬುರಗಿ
ರಾಜಶ್ರೀ ನಾಗರಾಜ	ಬೆಳಗಾವಿ
ಕ್ರೀಡೆ	
ಆಶೀಶ್ ಕುಮಾರ್ ಬಲ್ಲಾಳ್	ಬೆಂಗಳೂರು
ಎಂ. ಯೋಗೇಂದ್ರ	ಮೈಸೂರು
ಡಾ.ಬಬಿನಾ .ಎನ್.ಎಂ. (ಯೋಗ)	ಕೊಡಗು
ನ್ಯಾಯಾಂಗ	
ನ್ಯಾ. ಪಿ.ಬಿ. ಭಜಂತ್ರಿ (ಪವನ್‌ಕುಮಾರ್ ಭಜಂತ್ರಿ)	ಬಾಗಲಕೋಟೆ
ಶಿಲ್ಪಕಲೆ	
ಬಸಣ್ಣ ಮೋನಪ್ಪ ಬಡಿಗೇರ	ಯಾದಗಿರಿ
ನಾಗಲಿಂಗಪ್ಪ ಜಿ. ಗಂಗೂರ	ಬಾಗಲಕೋಟೆ
ಚಿತ್ರಕಲೆ	
ಬಿ. ಮಾರುತಿ	ವಿಜಯನಗರ
ಕರಕುಶಲ	
ಎಲ್. ಹೇಮಾಶೇಖರ್	ಮೈಸೂರು

ಅಂತ್ಯಸಂಸ್ಕಾರಕ್ಕೆ ಅಡಿಗಡಿಗೂ ಲಂಚ

ಮರಣೋತ್ತರ ಪರೀಕ್ಷಾ ವರದಿ • ಮರಣ ಪ್ರಮಾಣಪತ್ರ ಪಡೆಯಲು ತಂದೆ ಪಡಿಪಾಟಲು

ಪಿಎಸ್‌ಐ, ಕಾನ್‌ಸ್ಟೆಬಲ್ ಅಮಾನತು

‘ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಪೋಸ್ಟ್ ಗಮನಿಸಿ ಪ್ರಾಥಮಿಕ ತನಿಖೆ ನಡೆಸಲಾಗಿದೆ. ವಿಚಾರಣೆ ವೇಳೆ ಬೆಳ್ಳಂದೂರು ಪೊಲೀಸ್ ಠಾಣೆಯ ಪಿಎಸ್‌ಐ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಗೋರಖ್‌ನಾಥ್ ಅವರು ಕರ್ತವ್ಯಲೋಪ ಎಸಗಿರುವುದು ಸಾಬೀತಾಗಿದೆ. ಹಣ ಪಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇಲಾಖಾ ತನಿಖೆ ಕಾಯ್ದಿರಿಸಿ, ಇಬ್ಬರನ್ನೂ ಅಮಾನತು ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುತ್ರಿಯ ಮೃತದೇಹ ಸಾಗಿಸಲು ಹಾಗೂ ಮರಣೋತ್ತರ ಪರೀಕ್ಷೆ ನಡೆಸಲು ಪಟ್ಟ ಸಂಕಷ್ಟ ಹಾಗೂ ಆಂಬುಲೆನ್ಸ್ ಚಾಲಕ, ಪೊಲೀಸರು, ಸ್ಮಶಾನದ ಸಿಬ್ಬಂದಿ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳಿಂದ ಅನುಭವಿಸಿದ ನೋವು ಹಾಗೂ ಸಿಬ್ಬಂದಿ ಹಣಕ್ಕೆ ಬೇಡಿಕೆಯಿಟ್ಟ ಬಗೆಯನ್ನು ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಸಿಎಫ್‌ಒ ಕೆ.ಶಿವಕುಮಾರ್ ಅವರು ‘ಲಿಂಕ್ಡ್‌ಇನ್’ನಲ್ಲಿ ಎಳೆಎಳೆಯಾಗಿ ತೆರೆದಿಟ್ಟಿದ್ದಾರೆ.

ಪುತ್ರಿಯ ಅಂತ್ಯಸಂಸ್ಕಾರಕ್ಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಡಿಗಡಿಗೂ ಲಂಚ ಕೇಳಿದ ಸಂಗತಿಯನ್ನೂ ಕೇಂದ್ರ ಸರ್ಕಾರದ ಸ್ವಾಮ್ಯದ ಕಂಪನಿಯಲ್ಲಿ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಆಗಿದ್ದ ಶಿವಕುಮಾರ್ ಅವರು ನೋವಿನಿಂದ ಹೇಳಿಕೊಂಡಿದ್ದಾರೆ.

‘ಪುತ್ರಿ ಅಕ್ಷಯಾ (34) ಅವರು ಮಿದುಳು ರಕ್ತಸ್ರಾವ ಸಮಸ್ಯೆಯಿಂದಾಗಿ ಸೆ.18ರಂದು ಮೃತಪಟ್ಟಿದ್ದರು. ಅಕ್ಷಯಾ ಅವರು ಅಹಮದಾಬಾದ್‌ನ ಐಐಎಂನಿಂದ ಬಿ.ಟೆಕ್ ಮತ್ತು ಎಂಬಿಎ ಪದವಿ ಪಡೆದಿದ್ದರು. ವೃತ್ತಿ ಜೀವನದ 11 ವರ್ಷಗಳ ಪೈಕಿ, 8 ವರ್ಷ ಬೆಂಗಳೂರಿನ ಗೋಲ್ಡ್‌ಮನ್ ಸ್ಯಾಚ್ಸ್‌ನಲ್ಲಿ ಕೆಲಸ ಮಾಡಿ ದ್ದರು’ ಎಂದು ಶಿವಕುಮಾರ್ ಅವರು ತಮ್ಮ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಕೆ.ಶಿವಕುಮಾರ್ ಅವರು ಕೆಲವು ಗಂಟೆಗಳ ಬಳಿಕ ಪೋಸ್ಟ್ ಅಳಿಸಿ ಹಾಕಿದ್ದರು.

ಶಿವಕುಮಾರ್

‘ಕಸವನಹಳ್ಳಿಯ ಆಸ್ಪತ್ರೆಯಿಂದ ಕೋರಮಂಗಲದ ಸೇಂಟ್ ಜಾನ್ಸ್ ಆಸ್ಪತ್ರೆಗೆ ಮೃತದೇಹ ಸಾಗಿಸಲು ಆಂಬುಲೆನ್ಸ್ ಚಾಲಕರೊಬ್ಬರು ₹3 ಸಾವಿರ ಕೇಳಿದ್ದರು. ಮರಣೋತ್ತರ ಪರೀಕ್ಷೆಗೆ ಮೃತದೇಹ ಕೊಂಡೊಯ್ಯುವ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ದರ್ಪ ತೋರಿದ್ದರು. ಸ್ಥಳದಲ್ಲಿದ್ದ ಮಾಜಿ ಸಹೋದ್ಯೋಗಿ ನನ್ನ ನೆರವಿಗೆ ಬಂದಿದ್ದರು. ಅವರ ಮಧ್ಯ-ಪ್ರವೇಶದಿಂದ ಪೊಲೀಸರು ಸುಮ್ಮನಾದರು. ನಂತರ, ಪುತ್ರಿಯ ಕಣ್ಣುಗಳನ್ನು ದಾನ ಮಾಡಲಾಯಿತು. ಮರಣೋತ್ತರ ಪರೀಕ್ಷೆ ಮುಗಿಸಿ ಅಂತ್ಯಸಂಸ್ಕಾರಕ್ಕೆ ಮೃತದೇಹ ತೆಗೆದುಕೊಂಡು ಹೋದಾಗ ಸ್ಮಶಾನದ ಸಿಬ್ಬಂದಿ ಸಹ ಹಣ ಕೇಳಿದರು. ಸ್ಮಶಾನದ ಸಿಬ್ಬಂದಿಗೂ ಹಣ ನೀಡಿದ್ದೆವು’ ಎಂದು ಉಲ್ಲೇಖಿಸಿದ್ದಾರೆ.

‘ಯುಡಿಆರ್ ಹಾಗೂ ಮರಣೋತ್ತರ ಪರೀಕ್ಷೆ ವರದಿಯ ಪ್ರತಿಗಾಗಿ ನಾಲ್ಕು ಬಾರಿ ಪೊಲೀಸರನ್ನು ಭೇಟಿ ಮಾಡಿದ್ದೆ. ವರದಿ ನೀಡುವುದಕ್ಕೂ ಪೊಲೀಸರು ಹಣ ಕೇಳಿದ್ದರು. ಠಾಣೆಯಲ್ಲೇ ಹಣ ತೆಗೆದುಕೊಂಡರು. ಆದರೆ, ಅವರು ಲಂಚ ಪಡೆದ ಜಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಇರಲಿಲ್ಲ. ಆರಂಭದಲ್ಲಿ ಪಿಎಸ್‌ಐ ಚೆನ್ನಾಗಿ ಮಾತನಾಡಿದ್ದರು. ದಾಖಲೆಗಳಿಗೂ ಸಹಿ ಹಾಕಿದ್ದರು. ಆದರೆ, ಲಂಚ ನೀಡಲು ಅವರ ಸಹಾಯಕರನ್ನು ಭೇಟಿಯಾಗಲು ಹೇಳಿದ್ದರು’ ಎಂದು ಶಿವಕುಮಾರ್ ಆರೋಪಿಸಿದ್ದಾರೆ.

‘ಮರಣ ಪ್ರಮಾಣಪತ್ರಕ್ಕಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಕಚೇರಿಗೆ ಅಲೆಯಬೇಕಾದ ಸ್ಥಿತಿ ಬಂದಿತ್ತು. ಐದು ಬಾರಿ ಕಚೇರಿಗೆ ಅಲೆದಿದ್ದೆ. ಕಚೇರಿಯಲ್ಲಿ ಸಿಬ್ಬಂದಿ ಇಲ್ಲ. ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಗೆ ತೆರಳಿದ್ದಾರೆ ಎಂದು ಅಲ್ಲಿದ್ದವರು ಹೇಳಿದ್ದರು. ಬಳಿಕ ಹಿರಿಯ ಅಧಿಕಾರಿಯನ್ನು ಸಂಪರ್ಕಿಸಿದೆ. ಅವರೂ ಸಹ ಹಣ ಪಡೆದು ಪತ್ರ ನೀಡಿದರು’ ಎಂದು ದೂರಿದ್ದಾರೆ.

‘ನನ್ನ ಸ್ಥಿತಿಯೇ ಈ ರೀತಿಯಾದರೆ ಜನಸಾಮಾನ್ಯರ ಪಾಡೇನು’ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಉಮಾಶ್ರೀಗೆ ರಾಜಕುಮಾರ್ ಪ್ರಶಸ್ತಿ

ರಘುನಾಥ ಚ.ಹ.

ಎನ್‌ಆರ್‌ ನಂಜುಂಡೇಗೌಡ

ರಿಚರ್ಡ್ ಕ್ಯಾಸ್ಟಲಿನೊ

ಒಂದನೇ ಪುಟದಿಂದ...

‘ಪುಟ್ಟಣ್ಣ ಕಣಗಾಲ್ ಪ್ರಶಸ್ತಿ’ಗೆ ನಿರ್ದೇಶಕ ಎನ್.ಆರ್.ನಂಜುಂಡೇಗೌಡ, ‘ಡಾ.ವಿಷ್ಣುವರ್ಧನ್ ಪ್ರಶಸ್ತಿ’ಗೆ ನಿರ್ಮಾಪಕ–ನಿರ್ದೇಶಕ ರಿಚರ್ಡ್ ಕ್ಯಾಸ್ಟಲಿನೊ ಅವರು ಆಯ್ಕೆಯಾಗಿದ್ದಾರೆ. ಈ ಮೂರೂ ಪ್ರಶಸ್ತಿಗಳು ತಲಾ 50 ಗ್ರಾಂ ಚಿನ್ನದ ಪದಕ ಮತ್ತು ₹5 ಲಕ್ಷ ನಗದು ಒಳಗೊಂಡಿವೆ.

ಅದೇ ಸಾಲಿನ ಚಲನಚಿತ್ರ ಸಾಹಿತ್ಯ ಪ್ರಶಸ್ತಿಗೆ ‘ಪ್ರಜಾವಾಣಿ’ಯ ಅಭಿಮತ ಸಂಪಾದಕ ರಘುನಾಥ ಚ.ಹ. ಅವರು ಬರೆದಿರುವ ‘ಬೆಳ್ಳಿತೊರೆ– ಸಿನಿಮಾ ಪ್ರಬಂಧಗಳು’ ಆಯ್ಕೆಯಾಗಿದೆ. ಪ್ರಶಸ್ತಿಯು ₹20,000 ನಗದು ಮತ್ತು 50 ಗ್ರಾಂ ಬೆಳ್ಳಿಯ ಪದಕ ಒಳಗೊಂಡಿದೆ. ಪುಸ್ತಕದ ಪ್ರಕಾಶಕ, ಅಂಕಿತ ಪುಸ್ತಕದ ಪ್ರಕಾಶ ಕಂಬತ್ತಳ್ಳಿ ಅವರನ್ನೂ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ₹20,000 ನಗದು ಮತ್ತು 50 ಗ್ರಾಂ ಬೆಳ್ಳಿಯ ಪದಕ ಒಳಗೊಂಡಿದೆ.

ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಗೆ ಶ್ರೀನಾಥ್ ಎಸ್. ಹಡಗಲಿ ಅವರ ನಿರ್ದೇಶನದ ‘ಗುಳೆ’ ಕಿರುಚಿತ್ರ ಆಯ್ಕೆಯಾಗಿದೆ. ನಿರ್ದೇಶಕ ಶ್ರೀನಾಥ್ ಮತ್ತು ನಿರ್ಮಾಪಕ ಮನೋಹರ್ ಎಸ್.ಐಯರ್ ಅವರಿಗೆ ತಲಾ ₹25,000 ನಗದು ಮತ್ತು 50 ಗ್ರಾಂ ಬೆಳ್ಳಿಯ ಪದಕ ನೀಡಲಾಗುತ್ತದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಣೆ ತಿಳಿಸಿದೆ.

ಚಿತ್ರ ಮಾತ್ರ

ಕಬ್ಬಿಗೆ ಬೆಲೆ ನಿಗದಿಪಡಿಸುವಂತೆ ಒತ್ತಾಯಿಸಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಕ್ರಾಸ್ ಬಳಿ ಗುರುವಾರ ರೈತರು ಬೃಹತ್ ಪ್ರತಿಭಟನೆ ನಡೆಸಿದರು

ಸುಶೀಲಮ್ಮಗೆ ‘ಅನುಭವ ಮಂಟಪ’ ಪ್ರಶಸ್ತಿ

ಬೆಂಗಳೂರು: ಬೀದರ್‌ನ ಭಾಲ್ಕಿ ಮಠ ನೀಡುವ ‘ಅನುಭವ ಮಂಟಪ ಪ್ರಶಸ್ತಿ’ಗೆ ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮಠದ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಹೇಳಿದರು. ನಗರದಲ್ಲಿ ಗುರುವಾರ ನಡೆದ ಸುಮಂಗಲಿ ಸೇವಾಶ್ರಮದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು. ದಶಕಗಳಿಂದ ಸೇವಾಶ್ರಮವನ್ನು ನಡೆಸಿಕೊಂಡು ಬರುತ್ತಿರುವ ಸುಶೀಲಮ್ಮ ಅವರೇ ಪ್ರಶಸ್ತಿಗೆ ಅರ್ಹರು ಎಂದು ಮೂರು ದಿನಗಳ ಹಿಂದೆ ನಡೆದ ಆಯ್ಕೆ ಸಮಿತಿ ಸಭೆ ತೀರ್ಮಾನಿಸಿತು. ಬಸವ ಕಲ್ಯಾಣದಲ್ಲಿ ನವೆಂಬರ್ 29ರಂದು ನಡೆಯುವ ಶರಣ ಕಮ್ಮಟದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪುರಸ್ಕಾರವು ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ ಎಂದರು.

70 ಸಾಧಕರಿಗೆ ರಾಜ್ಯೋತ್ಸವ ಗರಿ

ಒಂದನೇ ಪುಟದಿಂದ...

‘ಇದೇ ಮೊದಲ ಬಾರಿಗೆ ಸಮಗಾರ ಹರಳಯ್ಯ ಸಮುದಾಯಕ್ಕೆ ಸೇರಿದ ಇಬ್ಬರು ಪ್ರತಿಭೆಗಳನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮೊದಲೇ ನಿರ್ಧರಿಸಿದಂತೆ ಈ ಬಾರಿ ಯಾವುದೇ ಸಂಘ-ಸಂಸ್ಥೆಗ-ಳಿಗೆ ಪ್ರಶಸ್ತಿ ನೀಡಿಲ್ಲ. ಆಯ್ಕೆ ಮಾಡುವ ಸಂದರ್ಭದಲ್ಲಿ ಜಿಲ್ಲಾವಾರು ಪರಿಗಣಿಸಲಾಗಿದೆ. ಜೊತೆಗೆ, ಸಾಮಾಜಿಕ ನ್ಯಾಯವನ್ನೂ ಗಣನೆಗೆ ತೆಗೆದುಕೊಳ್ಳಲಾಗಿದೆ. ಆಯ್ಕೆ ಸಲಹಾ ಸಮಿತಿ ಶಿಫಾರಸು ಮಾಡಿದ್ದ ಬಹುತೇಕರನ್ನು ಆಯ್ಕೆ ಮಾಡಲಾಗಿದೆ. ನಾಲ್ಕೈದು ಬಾರಿ ಸಭೆ ನಡೆಸಿ ಅರ್ಹರ ಹೆಸರು ಅಂತಿಮಗೊಳಿಸಲಾಗಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

‘ಕಾಯಕ ಗ್ರಾಮ’ಕ್ಕೆ 1,310 ಪಂಚಾಯಿತಿ ಆಯ್ಕೆ

ಬೆಂಗಳೂರು: ಕೊನೆಯ ಸ್ಥಾನದಲ್ಲಿರುವ 1,310 ಗ್ರಾಮ ಪಂಚಾಯಿತಿಗಳನ್ನು ‘ಕಾಯಕ ಗ್ರಾಮ’ ಯೋಜನೆ ಅಡಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಯೋಜನೆಗೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ‘ಗ್ರಾಮೀಣಾಭಿವೃದ್ಧಿಯ ಇ-ಆಡಳಿತ ವಿಭಾಗವು ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಕ್ಷಮತೆಯ ಶ್ರೇಯಾಂಕ ವರದಿಯಲ್ಲಿ ಗುರುತಿಸುವಂತೆ ಕೊನೆಯ ಸ್ಥಾನಗಳಲ್ಲಿರುವ ಗ್ರಾಮ ಪಂಚಾಯತಿಗಳನ್ನು ವೈಜ್ಞಾನಿಕವಾಗಿ ಆಯ್ಕೆ ಮಾಡಿ-ಕೊಳ್ಳಲಾಗುತ್ತದೆ. ವಿವಿಧ ಇಲಾಖೆಗಳ ಸಮನ್ವಯದಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸಲಾಗುವುದು. ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದ ಅಧಿಕಾರಿಗಳು ಉಸ್ತುವಾರಿ ನೋಡಿಕೊಳ್ಳುವರು’ ಎಂದರು.

ಗ್ರಾಮ ಪಂಚಾಯಿತಿಗಳನ್ನು ಹಿರಿಯ ಅಧಿಕಾರಿಗಳು ದತ್ತು ಪಡೆದು ಅಭಿವೃದ್ಧಿಪಡಿಸಲು ಹೊಸ ಯೋಜನೆ ರೂಪಿಸಲಾಗುವುದು ಎಂದು ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು. ಬಸವಣ್ಣನವರ ಕಾಯಕದ ಸಂದೇಶವನ್ನು ಸಾಕಾರಗೊಳಿಸಲು ‘ಕಾಯಕ ಗ್ರಾಮ’ ಯೋಜನೆ ರೂಪಿಸಲಾಗಿದೆ ಎಂದರು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಳು ಸೇರಿದಂತೆ ಆರು ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಮೂವರು ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದಲ್ಲಿ ಜಿಲ್ಲಾವಾರು ನೇಮಕ ಮಾಡಲಾಗಿರುವ ನೋಡಲ್ ಅಧಿಕಾರಿಗಳು ಇರುತ್ತಾರೆ ಎಂದರು.

ಹಾನಿ: ₹1,545 ಕೋಟಿಗೆ ಮೊರೆ

ಒಂದನೇ ಪುಟದಿಂದ...

2,200 ಶಾಲಾ ಕೊಠಡಿ ನಿರ್ಮಾಣ: ವಿವಿಧ ಜಿಲ್ಲೆಗಳಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ 2,200 ಶಾಲಾ ಕೊಠಡಿಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲು ಒಪ್ಪಿಗೆ ನೀಡಲಾಗಿದೆ. ಇದರ ಒಟ್ಟು ವೆಚ್ಚ ₹360 ಕೋಟಿ ಎಂದು ಅವರು ಹೇಳಿದರು. ಲೋಕೋಪಯೋಗಿ ಇಲಾಖೆ ನಿರ್ಧರಿಸಿದ ಸಕ್ಷಮ ಪ್ರಾಧಿಕಾರವು ವಲಯ ಮಟ್ಟದಲ್ಲಿ ಟೆಂಡರ್ ಕರೆಯಲು ಅವಕಾಶ ನೀಡಲಾಗುವುದು ಎಂದರು.

ಗಂಗಾ ಕಲ್ಯಾಣ ಹೊಣೆ ಸಚಿವರಿಗೆ: ಗಂಗಾ ಕಲ್ಯಾಣ ಯೋಜನೆ ಮತ್ತು ಸ್ವಯಂ ಉದ್ಯೋಗ ಯೋಜನೆಗಳಡಿ ಫಲಾನುಭವಿಗಳನ್ನು ಆಯಾ ವರ್ಷದ ಅಕ್ಟೋಬರ್ 31ನೇ ತಾರೀಖಿನೊಳಗೆ ಸಂಬಂಧಪಟ್ಟ ಶಾಸಕರು ಆಯ್ಕೆ ಮಾಡದೇ ಇದ್ದರೆ, ಆಯ್ಕೆ ಪ್ರಕ್ರಿಯೆಯನ್ನು ಆಯಾ ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಲು (2025–26 ನೇ ಸಾಲಿನ ಗುರಿ ಹೊರತುಪಡಿಸಿ) ಸಂಪುಟ ಸಭೆ ತೀರ್ಮಾನಿಸಿದೆ ಎಂದು ಪಾಟೀಲ ಹೇಳಿದರು.

ನೋಂದಣಿ ಸೇವೆಗೆ ‘ಕಾವೇರಿ ಐಟಿ ಸೆಲ್’

ಒಂದನೇ ಪುಟದಿಂದ...

ಹೊಸ ವ್ಯವಸ್ಥೆಯು ಕಾನೂನು ತಿದ್ದುಪಡಿಗಳು, ಹೊಸ ಸಂಯೋಜನೆಗಳು ಹಾಗೂ ಕಾರ್ಯಾಚರಣೆಯಲ್ಲಿನ ಬದಲಾವಣೆಗಳಿಗೆ ನಿರಂತರವಾಗಿ ಹೊಂದಿಕೊಳ್ಳಬೇಕಾಗಿದೆ. ಇದಕ್ಕಾಗಿ ನಡೆಯುತ್ತಿರುವ ಬದಲಾವಣೆಗಳು, ಸಮಸ್ಯೆಗಳಿಗೆ ಪರಿಹಾರ ಮತ್ತು ವಿಷಯ ತಜ್ಞರೊಂದಿಗೆ ನಿಕಟ ಸಹಯೋಗದ ಅಗತ್ಯವಿದೆ. ಪ್ರತಿಯೊಂದು ಬದಲಾವಣೆಗಳ-ನ್ನು ತಂತ್ರಾಂಶದಲ್ಲಿ ಮಾರ್ಪಾಡು ಮಾಡಬೇಕಾಗಿದ್ದು, ಐಟಿ ಸೆಲ್ ಆರಂಭಿಸಲಾಗುತ್ತಿದೆ ಎಂದರು.

2025ನೇ ಸಾಲಿನ ‘ವಿದ್ಯಾಶಂಕರ ಪ್ರಶಸ್ತಿ’ ಪ್ರಕಟ

ಬೆಂಗಳೂರು: ಡಾ.ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ವಿದ್ಯಾಶಂಕರ ಪ್ರಶಸ್ತಿ’ಗೆ ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಸಂಗಮೇಶ ಸವದತ್ತಿಮಠ ಹಾಗೂ ‘ವಿದ್ಯಾಶಂಕರ ಪುರಸ್ಕಾರ’ಕ್ಕೆ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಜಯಲಲಿತಾ ಆಯ್ಕೆಯಾಗಿದ್ದಾರೆ.

‘ವಿದ್ಯಾಶಂಕರ ಪ್ರಶಸ್ತಿ’ಯು ₹30 ಸಾವಿರ ನಗದು, ‘ವಿದ್ಯಾಶಂಕರ ಪುರಸ್ಕಾರ’ವು ₹15 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿವೆ.

ನವೆಂಬರ್ 18ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ತಿಳಿಸಿದ್ದಾರೆ.

ಗ್ರಂಥಪಾಲಕ ಆತ್ಮಹತ್ಯೆ: ಪಿಡಿಒ ಅಮಾನತು

ದಾಬಸ್‌ಪೇಟೆ/ನೆಲಮಂಗಲ: ತಾಲ್ಲೂಕಿನ ಕಳಲುಘಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗೀತಾಮಣಿ ಅವರನ್ನು ಅಮಾನತು ಮಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿಇಒ ಡಾ.ಕೆ. ಎಸ್.ಅನುರಾಧ ಅವರು ಆದೇಶ ಹೊರಡಿಸಿದ್ದಾರೆ.

ಇದೇ ಪಂಚಾಯಿತಿಯ ಗ್ರಂಥಾಲಯದ ಗ್ರಂಥಪಾಲಕರಾಗಿ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದ ಗೋವೇನಹಳ್ಳಿಯ ರಾಮಚಂದ್ರಯ್ಯ ಅವರು ಅ.27ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಗೀತಾಮಣಿ

‘ರಾಮಚಂದ್ರಯ್ಯ ಅವರ ಸಾವಿಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಗೀತಾಮಣಿ ಕಾರಣ. ಸುಮಾರು ಮೂರು ತಿಂಗಳಿಂದ ಸಂಬಳ ಪಾವತಿಸಿಲ್ಲ. ಹಾಜರಾತಿ ನಮೂದಿಸಲು ಬಯೊಮೆಟ್ರಿಕ್ ಕೊಡದೇ ಕಿರುಕುಳ ನೀಡಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಮೃತರ ಸಹೋದರನ ಪುತ್ರ ಕಾಂತರಾಜು ಪೊಲೀಸರಿಗೆ ದೂರು ನೀಡಿದ್ದರು.

ಆ ದೂರು ಆಧರಿಸಿ ಪಿಡಿಒ ಗೀತಾಮಣಿ (ಆರೋಪಿ–1) ವಿರುದ್ಧ ತ್ಯಾಮಗೊಂಡ್ಲು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ಪಂಚಾಯಿತಿ ಸಿಬ್ಬಂದಿಯ ಅಸ್ವಾಭಾವಿಕ ಸಾವಿನ ಘಟನೆ ನಡೆದು 24 ಗಂಟೆ ಕಳೆದರೂ ಸಹ ಪಿಡಿಒ ಸಂಪರ್ಕಕ್ಕೆ ಸಿಕ್ಕಿಲ್ಲ. ಘಟನೆಯ ಬಗ್ಗೆ ಮೇಲಿನ ಅಧಿಕಾರಿಗಳಿಗೂ ಮಾಹಿತಿ ನೀಡಿಲ್ಲ. ರಾಮಚಂದ್ರಯ್ಯ ಅವರಿಗೆ ಜೂನ್‌ವರೆಗೆ ಮಾತ್ರ ಸಂಬಳ ಪಾವತಿಸಲಾಗಿದೆ. ಜುಲೈ ಹಾಗೂ ಆಗಸ್ಟ್ ತಿಂಗಳ ವೇತನವನ್ನು ಪಾವತಿಸದೇ ಇರುವುದು ಕಂಡುಬಂದಿದೆ. ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿಸುವುದು ಕರ್ತವ್ಯ. ಸಕಾಲದಲ್ಲಿ ಸಿಬ್ಬಂದಿಗೆ ವೇತನ ಪಾವತಿಸದೇ ಪಿಡಿಒ ಗೀತಾಮಣಿ ಅವರು ನಿರ್ಲಕ್ಷ್ಯ ವಹಿಸಿದ್ದಾರೆ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ನ.10ರವರೆಗೆ ಆನ್‌ಲೈನ್‌ನಲ್ಲಿ ಜಾತಿವಾರು ಸಮೀಕ್ಷೆ

ಬೆಂಗಳೂರು: ರಾಜ್ಯ ಸರ್ಕಾರದ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗಿಯಾಗದೇ ಇರುವವರು ಮತ್ತು ಈವರೆಗೆ ಮಾಹಿತಿ ನೀಡಲು ಸಾಧ್ಯವಾಗದೇ ಇರುವವರು ನವೆಂಬರ್ 10ರವೆಗೆ ಆನ್‌ಲೈನ್ ಮೂಲಕ ವಿವರಗಳನ್ನು ನಮೂದಿಸಬಹುದಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಮೀಕ್ಷೆಯ ಮನೆ–ಮನೆ ಭೇಟಿ ಹಂತವು ಶುಕ್ರವಾರಕ್ಕೆ (ಅಕ್ಟೋಬರ್ 31) ಕೊನೆಗೊಳ್ಳಲಿದೆ. ಆದರೆ, ಆನ್‌ಲೈನ್ ಮೂಲಕ ಜನರು ಸ್ವಯಂ ಮಾಹಿತಿ ದಾಖಲಿಸುವ ದಿನಾಂಕವನ್ನು ನವೆಂಬರ್ 10ರವರೆಗೆ ವಿಸ್ತರಿಸಿ, ಆಯೋಗವು ಗುರುವಾರ ಆದೇಶಿಸಿದೆ.

https://kscbcselfdeclaration.karnataka.gov.in ಲಿಂಕ್ ಮೂಲಕ ಸಮೀಕ್ಷೆಯಲ್ಲಿ ಭಾಗಿಯಾಗಬಹುದಾಗಿದೆ. ಜನರು ತಮ್ಮ ಮನೆಗೆ ನೀಡಲಾಗಿರುವ ಯುಎಚ್‌ಐಡಿ ಅಥವಾ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಈ ಪೋರ್ಟಲ್‌ನಲ್ಲಿ ಮಾಹಿತಿ ತುಂಬಬಹುದಾಗಿದೆ.

ಹೆಚ್ಚಿನ ಮಾಹಿತಿಗೆ 80507 70004 ಸಂಖ್ಯೆಯ ಸಹಾಯವಾಣಿಗೆ ಕರೆ ಮಾಡಬಹುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಮಾದರ ಮಹಾಸಭೆಗೆ ಮುನಿಯಪ್ಪ ಸಾರಥ್ಯ

ಬೆಂಗಳೂರು: ಮಾದಿಗ ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ 2015ರಲ್ಲಿ ಸ್ಥಾಪಿತವಾದ ಕರ್ನಾಟಕ ಮಾದರ ಮಹಾಸಭೆಯನ್ನು ಪುನರ್ ರಚಿಸಲಾಗಿದ್ದು, ನೂತನ ಅಧ್ಯಕ್ಷರಾಗಿ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಆಯ್ಕೆಯಾಗಿದ್ದಾರೆ. ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ (ಉಪಾಧ್ಯಕ್ಷರು), ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಮಾಜಿ ಸಚಿವ ಎಚ್.ಆಂಜನೇಯ (ಪ್ರಧಾನ ಕಾರ್ಯದರ್ಶಿಗಳು), ಮಾಜಿ ಸಂಸದ ಬಿ.ಎನ್.ಚಂದ್ರಪ್ಪ, ಶಾಸಕರಾದ ದುರ್ಯೋಧನ ಐಹೊಳೆ, ಡಾ.ತಿಮ್ಮಯ್ಯ, ಮಾಜಿ ಶಾಸಕ ಕೆ.ಎಂ. ತಿಮ್ಮರಾಯಪ್ಪ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಮಾಜಿ ಅಧ್ಯಕ್ಷ ಎ. ಮುನಿಯಪ್ಪ, ಕಲಬುರಗಿಯ ಜಿ. ವಿಜಯ ಕುಮಾರ್, ರಾಮಕೃಷ್ಣ (ಜಂಟಿ ಕಾರ್ಯದರ್ಶಿಗಳು) ಆಯ್ಕೆಯಾಗಿದ್ದಾರೆ.

ನಿಯಮ ತಿದ್ದುಪಡಿಗೆ ಸಚಿವ ಸಂಪುಟದ ಒಪ್ಪಿಗೆ

ಕೆಎಸ್‌ಆರ್‌ಪಿ: ಪಿಯು ವಿದ್ಯಾರ್ಹತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಮತ್ತು ಭಾರತೀಯ ಮೀಸಲು ದಳ (ಐಆರ್‌ಬಿ) ನೇಮಕಾತಿಗೆ ಇರುವ ವಿದ್ಯಾರ್ಹತೆಯನ್ನು ಎಸ್‌ಎಸ್‌ಎಲ್‌ಸಿಯಿಂದ ಪಿಯುಸಿಗೆ ಏರಿಸುವ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಮಾಡಿರುವ ತಿದ್ದುಪಡಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಸಚಿವ ಸಂಪುಟ ಸಭೆಯ ತೀರ್ಮಾನಗಳು:

- ಕರ್ನಾಟಕ ನವೋದ್ಯಮ ನೀತಿ 2022–27ರ ಅಡಿ ಐದು ವರ್ಷಗಳ ಅವಧಿಗೆ ₹80 ಕೋಟಿ ಅನುದಾನ ಹಂಚಿಕೆಯೊಂದಿಗೆ ಒಟ್ಟು ಎಂಟು ಟೆಕ್ನಾಲಜಿ ಇನ್‌ಕ್ಯುಬೇಟರ್ 2.0 ಸ್ಥಾಪಿಸಲು ತೀರ್ಮಾನ.
- ಕಾರವಾರ, ಹಳೆ ಮಂಗಳೂರು-(ಬೆಂಗ್ರೆ), ಹಳೆ ಮಂಗಳೂರು-(ನಗರ ಬದಿ) ಮತ್ತು ಮಲ್ಪೆಯ ಬರ್ತ್‌ಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ-ಪಡಿಸಿ ನಿರ್ವಹಿಸಲು ತೀರ್ಮಾನ
- ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾಥಮಿಕ ಹಂತಕ್ಕಾಗಿ ₹23.25 ಕೋಟಿ ಮೊತ್ತದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ, ದುರಸ್ತಿ ಮತ್ತು ನವೀಕರಣ ಕಾಮಗಾರಿ
- ಕಾರವಾರ ಕ್ಯಾನ್ಸರ್ ಕೇರ್ ಘಟಕದ ಸ್ಥಾಪನೆಗೆ ಅಗತ್ಯವಿರುವ ಹೆಚ್ಚುವರಿ ಉಪಕರಣಗಳಿಗೆ ತಗಲುವ ಅನುದಾನವನ್ನು ಈಗಾಗಲೇ ಅನುಮೋದನೆ ಆಗಿರುವ ₹18.25 ಕೋಟಿ ಸರ್ಕಾರದ ವತಿಯಿಂದ ಭರಿಸಲಾಗುವುದು. ಇನ್ನುಳಿದ ಮೊತ್ತ ₹13.38 ಕೋಟಿಯನ್ನು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ಭರಿಸಲು ಒಪ್ಪಿಗೆ.
- ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಕೇರ್ ಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಮೊದಲ ಹಂತದ ಉಪಕರಣಗಳ ಖರೀದಿಗೆ ₹50 ಕೋಟಿ.
- ಕೆ–ಶೋರ್ ಯೋಜನೆಗೆ ತಾಂತ್ರಿಕ ಮತ್ತು ನಿರ್ವಹಣಾ ಸಲಹೆಗಾರರ ಸೇವೆಗಳನ್ನು ಪಡೆಯಲು ₹20.47 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಯಾದಗಿರಿ ಜಿಲ್ಲೆ ಶಹಾಪುರ ನಗರಸಭೆ ವ್ಯಾಪ್ತಿಯಲ್ಲಿ ಕನಕಭವನ ನಿರ್ಮಾಣಕ್ಕೆ 300.14 ಚದರ ಮೀಟರ್ ಕರ್ನಾಟಕ ಪ್ರದೇಶ ಕುರುಬರ ಸಂಘಕ್ಕೆ ಉಚಿತವಾಗಿ ಮಂಜೂರು ಮಾಡಲು ತೀರ್ಮಾನ
- 2025–26 ನೇ ಸಾಲಿನಲ್ಲಿ ಪೊಲೀಸ್ ಇಲಾಖೆಗೆ ವಿವಿಧ ಮಾದರಿಯ 241 ವಾಹನಗಳನ್ನು ₹34.95 ಕೋಟಿ ವೆಚ್ಚದಲ್ಲಿ ಖರೀದಿಸಲು ಒಪ್ಪಿಗೆ
- ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ, ಉಡುಪಿ ಜಿಲ್ಲೆ ಅಂಜಾರು ಗ್ರಾಮ, ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಜಮೀನು ಮಂಜೂರು

‘ಅಸ್ಪೃಶ್ಯ ಅಲೆಮಾರಿಗಳಿಗೆ ಪ್ರತ್ಯೇಕ ಒಳಮೀಸಲು ಕೊಡಿ’

ಬೆಂಗಳೂರು: ‘ಅತ್ಯಂತ ಹಿಂದುಳಿದ ಅಸ್ಪೃಶ್ಯ ಅಲೆಮಾರಿ ಸಮುದಾಯಗಳಿಗೆ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಶೇಕಡ 1ರಷ್ಟು ಒಳಮೀಸಲಾತಿಯನ್ನು ನೀಡಬೇಕು’ ಎಂದು ಹೋರಾಟಗಾರ್ತಿ ಮೇಧಾ ಪಾಟ್ಕರ್ ನೇತೃತ್ವದ ‘ನ್ಯಾಷನಲ್ ಅಲಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ಸ್’ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ.

‘ರಾಜ್ಯದ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ 600ಕ್ಕೂ ಹೆಚ್ಚು ಪ್ರತಿನಿಧಿಗಳು ದೆಹಲಿಯಲ್ಲಿ ಅಕ್ಟೋಬರ್ 1ರಿಂದ 15ರವರೆಗೆ ಪ್ರತಿಭಟನೆ ನಡೆಸಿದ್ದರು. ಆಗ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು ಒಳಮೀಸಲಾತಿ ನೀಡುವ ಸಂಬಂಧ ದೀಪಾವಳಿಯ ನಂತರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದ್ದರು. ಇದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದೆ.

‘ಈ ಸಮುದಾಯಗಳಿಗೆ ಪ್ರತ್ಯೇಕ ಒಳಮೀಸಲಾತಿ ನೀಡುವ ಸಂಬಂಧ ಶುಕ್ರವಾರ ಸಭೆ ನಡೆಸಲಿದ್ದೀರಿ. ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರ ಆಯೋಗದ ಶಿಫಾರಸಿನಂತೆ ಈ ಸಮುದಾಯಗಳಿಗೆ ಶೇ 1ರಷ್ಟು ಪ್ರತ್ಯೇಕ ಮೀಸಲಾತಿ ಘೋಷಿಸಬೇಕು. ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು’ ಎಂದು ಕೋರಿದೆ. ‘ಶಿಕ್ಷಣದಲ್ಲಿ ಈ ಸಮುದಾಯಗಳು ಬಹಳ ಹಿಂದೆ ಉಳಿದಿವೆ. ಶೈಕ್ಷಣಿಕವಾಗಿ ಅವರನ್ನು ಮುಂದಕ್ಕೆ ತರಲು ಸರ್ಕಾರವು ವಿಶೇಷ ಕಾರ್ಯಕ್ರಮ ರೂಪಿಸಬೇಕು. ಅವುಗಳ ಅನುಷ್ಠಾನಕ್ಕೆ ಅಗತ್ಯ ಅನುದಾನ ಒದಗಿಸಬೇಕು’ ಎಂದು ಒತ್ತಾಯಿಸಿದೆ.

ಕೆಂಭಾವಿ: ಪಥಸಂಚಲನಕ್ಕೆ ಅನುಮತಿ ಕೋರಿಕೆ

ಮತ್ತೆರಡು ಸಂಘಟನೆಗಳ ಮನವಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ಕೆಂಭಾವಿಯಲ್ಲಿ ನವೆಂಬರ್ 4ರಂದು ಪಥಸಂಚಲನಕ್ಕೆ ಅನುಮತಿ ಕೋರಿ ಆರ್‌ಎಸ್‌ಎಸ್ ಮನವಿ ಸಲ್ಲಿಸಿದ ಬಳಿಕ ಇದೀಗ ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಸ್ವಾಭಿಮಾನಿ ಪ್ರೊ. ಜಿ.ಕೃಷ್ಣಪ್ಪ ಬಣ) ಶಹಾಪುರ ತಾಲ್ಲೂಕು ಘಟಕ ಹಾಗೂ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಘಟಕ ಅದೇ ದಿನ ಪಥಸಂಚಲನಕ್ಕೆ ತಮಗೂ ಅವಕಾಶ ನೀಡಬೇಕು ಎಂದು ಗುರುವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿವೆ.

ಆರ್‌ಎಸ್‌ಎಸ್ ಕಾರ್ಯಕರ್ತರು ಅನುಮತಿ ಕೋರಿ ಅ.27ರಂದು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ಪರಿಶೀಲನೆ ಹಂತದಲ್ಲಿತ್ತು. ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡಬಾರದು ಎಂದು ಎರಡೂ ಸಂಘಟನೆಗಳು ಕೋರಿವೆ. ‘ಒಂದು ವೇಳೆ ಆರ್‌ಎಸ್‌ಎಸ್‌ಗೆ ದೊಣ್ಣೆ ಸಮೇತ ಪಥಸಂಚಲನಕ್ಕೆ ಅನುಮತಿಸಿದರೆ ನಮಗೂ ಅದೇ ದಿನ ಸಂವಿಧಾನ ಪೀಠಿಕೆ, ನೀಲಿ ಬಾವುಟ ಮತ್ತು ಲಾಠಿ ಹಿಡಿದು ಪಥಸಂಚಲನ ಮಾಡಲು ಅವಕಾಶ ಕೊಡಬೇಕು’ ಎಂದು ಮನವಿ ಮಾಡಿವೆ.

‘ಆರ್‌ಎಸ್‌ಎಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳಂತೆ. ಸಂವಿಧಾನ ಬಾಹಿರವಾಗಿ ದೊಣ್ಣೆ ಹಿಡಿದು ಪಥಸಂಚಲನ ಮಾಡಲು ಅನುಮತಿ ಕೇಳಿದ್ದಾರೆ. ಅವರು ಕೋಮುವಾದಿ, ಜಾತಿವಾದಿಗಳಾಗಿದ್ದು ಜನರಲ್ಲಿ ಭಯದ ವಾತಾವರಣ ಮೂಡಿಸುತ್ತಾರೆ. ನೋಂದಣಿ ಇಲ್ಲದ ಸಂಘಟನೆಯಾಗಿದ್ದು, ಕೋಮುಗಲಭೆಗೆ ಪ್ರಚೋದನೆ ನೀಡುತ್ತದೆ. ಹೀಗಾಗಿ, ಪಥಸಂಚಲನಕ್ಕೆ ಅನುಮತಿ ಕೊಡಬಾರದು’ ಎಂದು ಮನವಿಪತ್ರದಲ್ಲಿ ಉಲ್ಲೇಖಿಸಿವೆ.

‘ನವೆಂಬರ್‌ನಲ್ಲಿ ಅಭಿವೃದ್ಧಿ ಕ್ರಾಂತಿ’

ಪ್ರಜಾವಾಣಿ ವಾರ್ತೆ

ಹೊಸಕೋಟೆ: ‘ನವೆಂಬರ್ ಕ್ರಾಂತಿಗೀತಿ ಏನೂ ಇಲ್ಲ. ನಮ್ಮ ಸರ್ಕಾರದ ಅಭಿವೃದ್ಧಿ ಕಾಮಗಾರಿಗಳು ರಾಜ್ಯದಲ್ಲಿ ಕ್ರಾಂತಿ ಮಾಡುತ್ತಿವೆ ಅಷ್ಟೇ’ ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬಿಹಾರ ಚುನಾವಣೆಗೆ ರಾಜ್ಯ ಕಾಂಗ್ರೆಸ್ ₹300 ಕೋಟಿ ಹಣ ನೀಡಿದೆ ಎಂಬ ಬಿಜೆಪಿಯವರ ಆರೋಪದಲ್ಲಿ ಹುರುಳಿಲ್ಲ. ಚುನಾವಣಾ ಬಾಂಡ್ ಮೂಲಕ ಬಿಜೆಪಿ ಸಂಗ್ರಹಿಸಿದ ಹಣದ ಬಗ್ಗೆ ಮೊದಲು ಸ್ಪಷ್ಟನೆ ನೀಡಲಿ’ ಎಂದು ಸವಾಲೆಸೆದರು.

ಇದಕ್ಕೆ ಧ್ವನಿಗೂಡಿಸಿದ ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, ‘ಹಾಗಾದರೆ ಗುಜರಾತ್, ಮಹಾರಾಷ್ಟ್ರ, ಉತ್ತರ ಪ್ರದೇಶ ಸೇರಿದಂತೆ ಬಿಜೆಪಿ ಆಡಳಿತವಿರುವ ರಾಜ್ಯಗಳಿಂದ ಬಿಹಾರ ಚುನಾವಣೆಗೆ ಎಷ್ಟು ಹಣ ಕಳಿಸಲಾಗಿದೆ’ ಎಂದು ಪ್ರಶ್ನಿಸಿದರು.

ಯಾವುದೇ ಸಂಘ, ಸಂಸ್ಥೆಯಾದರೂ ಅನುಮತಿ ಪಡೆದ ಬಳಿಕವೇ ಸಾರ್ವಜನಿಕ ಸ್ಥಳಗಳಲ್ಲಿ ಪಥ ಸಂಚಲನ, ಕಾರ್ಯಕ್ರಮ ಮಾಡಬೇಕು. ಸರ್ಕಾರದ ಅಭ್ಯಂತರ ಇಲ್ಲ. ಈ ನೆಲದ ಕಾನೂನಿಗಿಂತ ಯಾರೂ ದೊಡ್ಡವರಲ್ಲ ಎಂದು ಜಾರ್ಜ್, ಚಿತ್ತಾಪುರದ ಆರ್‌ಎಸ್‌ಎಸ್ ಪಥ ಸಂಚಲನ ವಿವಾದಕ್ಕೆ ಸ್ಪಷ್ಟನೆ ನೀಡಿದರು.

ಪಿಡಿಒ ಅಮಾನತು ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಚೂರು ಜಿಲ್ಲೆ ಲಿಂಗಸುಗೂರಿನಲ್ಲಿ ನಡೆದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗವಹಿಸಿದ್ದಕ್ಕಾಗಿ ಪಿಡಿಒ ಕೆ.ಪಿ.ಪ್ರವೀಣ್ ಕುಮಾರ್ ಅವರನ್ನು ಅಮಾನತು ಮಾಡಿ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಕೆಎಸ್‌ಎಟಿ (ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ) ತಡೆ ನೀಡಿದೆ.

ಈ ಸಂಬಂಧ ಪ್ರವೀಣ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಕೆಎಸ್‌ಎಟಿ ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಅವರಿದ್ದ ಪೀಠವು ಗುರುವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಅವರ ವಾದ ಮನ್ನಿಸಿದ ಪೀಠವು, ಸರ್ಕಾರದ ಅಮಾನತು ಆದೇಶ ಜಾರಿಗೆ ಮಧ್ಯಂತರ ತಡೆ ನೀಡಿತು. ಅಂತೆಯೇ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ಆಕ್ಷೇಪಣೆಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಅಮಾನತು: ಪ್ರವೀಣ್ ಕುಮಾರ್, ಅಕ್ಟೋಬರ್ 12ರಂದು ಲಿಂಗಸುಗೂರು ಪಟ್ಟಣದಲ್ಲಿ ನಡೆದಿದ್ದ ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಗಣವೇಷಧಾರಿಯಾಗಿ ಭಾಗಿಯಾಗಿದ್ದರು. ಇದರ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಗಂಭೀರವಾಗಿ ಪರಿಗಣಿಸಿದ್ದ ಸರ್ಕಾರ ಅಮಾನತು ಮಾಡಿತ್ತು

ಮೂವರು ಸಾಹಿತಿ, ಎರಡು ಸಂಸ್ಥೆಗಳಿಗೆ ಕೊಂಕಣಿ ಪುರಸ್ಕಾರ

ಪ್ರಜಾವಾಣಿ ವಾರ್ತೆ


ಪುಂಡಲೀಕ ನಾಯಕ

ಬಾಲಚಂದ್ರ ಗಾಂವಕರ

ಶಶಿಕಾಂತ ಪೂನಾಜಿ

ಮಂಗಳೂರು: ಇಲ್ಲಿನ ವಿಶ್ವ ಕೊಂಕಣಿ ಕೇಂದ್ರವು ವಾರ್ಷಿಕವಾಗಿ ನೀಡುವ ಐದು ಪುರಸ್ಕಾರಗಳನ್ನು ಘೋಷಿಸಿದೆ.

ವಿಮಲಾ ವಿ.ಪೈ ಹೆಸರಿನಲ್ಲಿ ನೀಡುವ ವಿಶ್ವ ಕೊಂಕಣಿ ಜೀವನ ಸಿದ್ಧಿ ಸನ್ಮಾನ ಪುರಸ್ಕಾರಕ್ಕೆ ಸಾಹಿತಿ ಪುಂಡಲೀಕ ಎನ್. ನಾಯಕ್ ಆಯ್ಕೆಯಾಗಿದ್ದಾರೆ.

ಕೊಂಕಣಿ ಕವಿತಾ ಕೃತಿ ಪುರಸ್ಕಾರಕ್ಕೆ ಕವಿ ಶಶಿಕಾಂತ ಪೂನಾಜಿ ಅವರ ‘ಗುಠೆಣೆ’ ಕೃತಿ, ಕೊಂಕಣಿ ಸಾಹಿತ್ಯ ಪುರಸ್ಕಾರಕ್ಕೆ ಲೇಖಕ ಬಾಲಚಂದ್ರ ಗಾಂವಕರ ಅವರ ‘ಪನವತ’ ಕೃತಿ ಆಯ್ಕೆಯಾಗಿವೆ ಎಂದು ಕೊಂಕಣಿ ಕೇಂದ್ರದ ಅಧ್ಯಕ್ಷ ನಂದಗೋಪಾಲ್ ಶೆಣೈ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಸ್ತಿ ವಾಮನ ಶೆಣೈ ವಿಶ್ವ ಕೊಂಕಣಿ ಸೇವಾ ಪುರಸ್ಕಾರಕ್ಕೆ ಈಶ್ವರಾನಂದ ಮಹಿಳಾ ಸೇವಾಶ್ರಮ (ಅನಾಥರ ಸೇವೆ) ಹಾಗೂ ಹೊಸ ಬೆಳಕು ಸೇವಾ ಸಂಸ್ಥೆ (ನಿರ್ಗತಿಕರ ಸೇವೆ) ಆಯ್ಕೆಯಾಗಿವೆ. ಈ ಐದು ಪುರಸ್ಕಾರಗಳು ತಲಾ ₹1 ಲಕ್ಷ ನಗದು, ಫಲಕ ಒಳಗೊಂಡಿವೆ ಎಂದರು. ನ.1ರಂದು ಬೆಳಿಗ್ಗೆ 9 ಗಂಟೆಗೆ ವಿಶ್ವ ಕೊಂಕಣಿ ಕೇಂದ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ಚಿಟಿಕೆ ಸುದ್ದಿ

ಶಿವಾನಂದ ತಗಡೂರು ಅವಿರೋಧ ಆಯ್ಕೆ


ಶಿವಾನಂದ ತಗಡೂರು

ಬೆಂಗಳೂರು: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಶಿವಾನಂದ ತಗಡೂರು ಅವರು 2025–28ನೇ ಸಾಲಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶಿವಾನಂದ ಅವರು ಸತತ ಮೂರನೇ ಬಾರಿಗೆ ಅಧ್ಯಕ್ಷರಾಗಿದ್ದಾರೆ.

ಉಪಾಧ್ಯಕ್ಷರಾಗಿ ಎಚ್.ಬಿ. ಮದನಗೌಡ, ಮತ್ತೀಕೆರೆ ಜಯರಾಮ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ಸಿ. ಲೋಕೇಶ, ಕಾರ್ಯದರ್ಶಿಗಳಾಗಿ ಪುಂಡಲೀಕ ಬಿ. ಬಾಳೋಜಿ, ಸೋಮಶೇಖರ ಕೆರಗೋಡು, ನಿಂಗಪ್ಪ ಚಾವಡಿ, ರಾಜ್ಯ ಖಜಾಂಜಿಯಾಗಿ ಎಂ. ವಾಸುದೇವ ಹೊಳ್ಳ ಅವರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎನ್. ರವಿಕುಮಾರ್ ತಿಳಿಸಿದ್ದಾರೆ.

ಡಿ.ಎ.ಶಂಕರ್ ಅವರಿಗೆ ಮುದ್ದಣ ಕಾವ್ಯ ಪ್ರಶಸ್ತಿ


ಡಿ.ಎ.ಶಂಕರ್

ಮೂಡುಬಿದಿರೆ (ದಕ್ಷಿಣ ಕನ್ನಡ): ಕಾಂತಾವರ ಕನ್ನಡ ಸಂಘದ ಪಠೇಲ್ ಪುನರೂರು ವಾಸುದೇವ ರಾವ್ ಟ್ರಸ್ಟ್ ಪ್ರಾಯೋಜಕತ್ವದ 2025ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಯನ್ನು ಮೈಸೂರಿನ ಡಿ.ಎ. ಶಂಕರ್ ಅವರ ‘ಇರುವೆಯಂತೆ ನನ್ನೊಡನೆ’ ಎಂಬ ಹಸ್ತಪ್ರತಿಗೆ ಘೋಷಿಸಲಾಗಿದೆ ಎಂದು ಸಂಘದ ಅಧ್ಯಕ್ಷ ನಾ.ಮೊಗಸಾಲೆ ತಿಳಿಸಿದ್ದಾರೆ.

ಪ್ರಶಸ್ತಿಯು ₹10 ಸಾವಿರ ನಗದು, ತಾಮ್ರಪತ್ರ ಒಳಗೊಂಡಿದೆ. ಈ ಸಾಲಿನ ಸ್ಪರ್ಧೆಗೆ ಒಟ್ಟು 28 ಹಸ್ತಪ್ರತಿಗಳು ಬಂದಿದ್ದವು.

ಪ್ರಶಸ್ತಿ ಪ್ರದಾನ ಸಮಾರಂಭವು 2026ರ ಫೆಬ್ರುವರಿಯಲ್ಲಿ, ಪ್ರಶಸ್ತಿಯ ಪ್ರಾಯೋಜಕರಾದ ಹರಿಕೃಷ್ಣ ಪುನರೂರು ನೇತೃತ್ವದಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ಅವರು ತಿಳಿಸಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗ
ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಸಿಎನ್‌ಎಫ್(1)1182/2025–26/ಪಿಎಸ್‌ಸಿ ದಿನಾಂಕ: 30–10–2025.

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 504 ಆರ್‌ಟಿಬಿ(2)/2023–24/3495, ದಿನಾಂಕ: 15–03–2024 ರನ್ವಯ ಅಧಿಸೂಚಿಸಲಾದ ವಿವಿಧ ಇಲಾಖೆಯಲ್ಲಿನ ವಿವಿಧ ಗ್ರೂಪ್–ಸಿ (ಹೆಚ್.ಕೆ) (ಪದವಿಗಿಂತ ಕೆಳ ಮಟ್ಟದ) ಹುದ್ದೆಗಳಿಗೆ ಸಂಬಂಧಿಸಿದಂತೆ ದಿನಾಂಕ:19–09–2025ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ **ಸಾಮಾನ್ಯ ಜ್ಞಾನ ಪತ್ರಿಕೆ–1 (ವಿಷಯ ಸಂಕೇತ–666) ಮತ್ತು ಪತ್ರಿಕೆ–2 (ವಿಷಯ ಸಂಕೇತ–667)ರ ಕೀ–ಉತ್ತರಗಳನ್ನು** ಆಯೋಗದ ಜಾಲತಾಣ http://kpsc.kar.nic.in/Key Answer ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಕೀ–ಉತ್ತರಗಳಿಗೆ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಆಕ್ಷೇಪಣಾ ನಮೂನೆಯಲ್ಲಿ ದಿನಾಂಕ: 06–11–2025ರ ಸಂಜೆ 5.30 ಗಂಟೆಯೊಳಗಾಗಿ ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು–560001, ಇವರಿಗೆ ಸಲ್ಲಿಸಬಹುದಾಗಿದೆ. ಈ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಸಹಿ/–
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ವಾ.ಸಾ.ಸಂ.ಇ/ವಾಪ್ರ/3513/ಆಕಾರ್/2025–26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
ಸಂಖ್ಯೆ: ಕಾಅ/ಕವಿ.1/ಎಇ–4/50/2025–26/4173 ದಿನಾಂಕ: 30.10.2025

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಸರ್ದಾರ್ ಪಟೇಲ್ ಮಾರ್ಗ್ ಚಾಣಕ್ಯಪುರಿ, ನವದೆಹಲಿ, ಇಲ್ಲಿರುವ ಕರ್ನಾಟಕ ಭವನ–2 (ಶರಾವತಿ) ರ ನವೀಕರಣ ಮತ್ತು ಅಭಿವೃದ್ಧಿ (ಪಿಡಬ್ಲ್ಯೂಡಿ/2025–26/ಬಿಡಿ/ವರ್ಕ್–ಇಂಡೆಂಟ್28642) ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.1455.42 ಲಕ್ಷಗಳು.** ಇಎಂಡಿ: **ರೂ.14.56 ಲಕ್ಷಗಳು** (ಕೆಪಿಪಿಪಿ ಮೂಲಕ ರೂ.1.00 ಲಕ್ಷಗಳು ಮತ್ತು ಉಳಿದ ಹಣ ರೂ.13.56 ಲಕ್ಷಗಳನ್ನು ಬಿಜಿ, ಎನ್‌ಎಸ್‌ಸಿ, ಎಫ್‌ಡಿಆರ್, ಬ್ಯಾಂಕರ್ಸ್ ಸರ್ಟಿಫಿಕೇಟ್ ಇತ್ಯಾದಿ ಮೂಲಕ ಸಲ್ಲಿಸುವುದು). ದಸ್ತಾವೇಜು ಬೆಲೆ: **ಕೆಪಿಪಿ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಕಾಲಾವಧಿ: **06 ತಿಂಗಳು.** ಮೀಸಲಾತಿ: ಇತರೆ. ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 04.12.2025, ಸಂಜೆ 4.30 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಪ್ರೀ–ಬಿಡ್ ಸಭೆ: **ಮೇಲ್ಕಂಡ ಕಚೇರಿಯಲ್ಲಿ 12.11.2025ರಂದು ನಡೆಸಲಾಗುವುದು.** ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಕೆಪಿಪಿ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ಯುನಿ–ಸಿ.ಪಿ/3515/ಕೆಎಸ್‌ಎಂಸಿಎ/2025–26

ಕರ್ನಾಟಕ ಲೋಕಸೇವಾ ಆಯೋಗ
ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಸಿಎನ್‌ಎಫ್(1)1180/2025–26/ಪಿಎಸ್‌ಸಿ ದಿನಾಂಕ: 30–10–2025.

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 505 ಆರ್‌ಟಿಬಿ(2)/2023–24/3496, ದಿನಾಂಕ: 15–03–2024 ರನ್ವಯ ಅಧಿಸೂಚಿಸಲಾದ ವಿವಿಧ ಇಲಾಖೆಯಲ್ಲಿನ ವಿವಿಧ ಗ್ರೂಪ್–ಸಿ (ಹೆಚ್.ಕೆ) (ಪದವಿ ಮಟ್ಟದ) ಹುದ್ದೆಗಳಿಗೆ ಸಂಬಂಧಿಸಿದಂತೆ ದಿನಾಂಕ: 03–09–2025ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ **ಸಾಮಾನ್ಯ ಜ್ಞಾನ ಪತ್ರಿಕೆ–1 (ವಿಷಯ ಸಂಕೇತ–660) ಮತ್ತು ಪತ್ರಿಕೆ–2 (ವಿಷಯ ಸಂಕೇತ–661)ರ ಕೀ–ಉತ್ತರಗಳನ್ನು** ಆಯೋಗದ ಜಾಲತಾಣ http://kpsc.kar.nic.in/Key Answer ನಲ್ಲಿ ಪ್ರಕಟಿಸಲಾಗಿರುತ್ತದೆ.

ಸದರಿ ಕೀ–ಉತ್ತರಗಳಿಗೆ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಆಕ್ಷೇಪಣಾ ನಮೂನೆಯಲ್ಲಿ ದಿನಾಂಕ: 06–11–2025ರ ಸಂಜೆ 5.30 ಗಂಟೆಯೊಳಗಾಗಿ ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು–560001, ಇವರಿಗೆ ಸಲ್ಲಿಸಬಹುದಾಗಿದೆ. ಈ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಸಹಿ/–
ಪರೀಕ್ಷಾ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ವಾ.ಸಾ.ಸಂ.ಇ/ವಾಪ್ರ/3512/ಆಕಾರ್/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2025–26
ದಿನಾಂಕ: 29–10–2025

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 & ಕೆಡಬ್ಲ್ಯೂ–4 ನಿಯಮಗಳಂತೆ ಕ್ರಮ ಸಂಖ್ಯೆ 01 ರಿಂದ 02ನೇ ಕಾಮಗಾರಿಗಳಿಗೆ ಬೆಂಗಳೂರಿನ ಕೆ.ಆರ್.ವೃತ್ತ ದಲ್ಲಿರುವ ಲೋಕೋಪಯೋಗಿ ಇಲಾಖೆಯ ಕಛೇರಿಗಳಿಗೆ ಹೊರಗುತ್ತಿಗೆ ನೌಕರರ ಸೇವೆಯನ್ನು ಒದಗಿಸುವ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 30.10.2025 ರಿಂದ 07.11.2025 ಸಂಜೆ 4.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 07.11.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 10.11.2025 ರಂದು ಬೆಳಗ್ಗೆ 10.30 ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/3510/Zen/2025-26

ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ನಂ.430, ಮೊದಲನೇ ಮಹಡಿ, ಅಣ್ಣ ಬಿಲ್ಡಿಂಗ್, ಹೆನ್ನಗಾರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560 099.
ದಿನಾಂಕ: 15.10.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಆನೇಕಲ್ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿ ರೂ.347.36ಕೋಟಿಗಳನ್ನು ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಂಬಂಧ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ದಿನಾಂಕ:31.10.2025ರಂದು ಸಮಯ ಸಂಜೆ 3.0003 ಒಳಗೆ ಇ–ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ಹೆಚ್ಚಿನ ವಿವರಗಳಿಗೆ ವಿಳಾಸ https://kppp.karnataka.gov.in ನಲ್ಲಿ ಪರಿಶೀಲಿಸಬಹುದು.

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
DIPR/CP/VCPL/3508/2025-26

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ–581301
ದೂ: 08382–226406, 226471 ಫ್ಯಾಕ್ಸ್: 08382–226603
Email: dckarwar@gmail.com Website: http://uttarakannada.nic.in
No:UK/AJSK/Opr/01/2025-26 ದಿನಾಂಕ: 29/10/2025

ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯ ಅಟಲ್ ಜೀ ಜನಸ್ನೇಹಿ ಕೇಂದ್ರಗಳಿಗೆ ಮತ್ತು ಆಧಾರ ನೋಂದಣಿ/ತಿದ್ದುಪಡಿಗಾಗಿ ಒಟ್ಟು 57 ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ. ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಂಸ್ಥೆಯಿಂದ ದರವಾರು ಪಟ್ಟಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆಯ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್ ಅಧಿಸೂಚನೆ ಸಂಖ್ಯೆ: UK/AJSK/Opr/01/2025-26, ಟೆಂಡರ್ ರೆಫರೆನ್ಸ್ ಸಂಖ್ಯೆ: RD/2025-26/SE0464/Call-2

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 06/11/2025, 05.00 PM, ಟೆಂಡರನ್ನು (ಆರ್ಥಿಕ) ತೆರೆಯುವ ದಿನಾಂಕ: 10/11/2025, 10.00 AM

ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿ ಕಛೇರಿಯನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 08382–226406

ಸಹಿ/– ಜಿಲ್ಲಾಧಿಕಾರಿ
ಉತ್ತರ ಕನ್ನಡ ಕಾರವಾರ
DIPR/ADK/KSMCA/652/25-26 Dt. 29.10.2025

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು–560009
ಸಂಖ್ಯೆ: KPRC-MISC/147/2025 ದಿನಾಂಕ: 30.10.2025

ನೇಮಕಾತಿ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ **RGSA ಸಮಾಲೋಚಕರು ಮತ್ತು ಡಾಟಾ ವಿಶ್ಲೇಷಕರುಗಳ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನಾಲ್ಕು ತಿಂಗಳ (ಡಿಸೆಂಬರ್–2025 ರಿಂದ ಮಾರ್ಚ್–2026 ರವರೆಗೆ)** ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಉದ್ದೇಶಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಇಮೇಲ್: **rgsa.consultant@gmail.com** ಮುಖಾಂತರ ದಿನಾಂಕ: 07/11/2025ರಂದು ಸಂಜೆ 05.30 ರೊಳಗಾಗಿ ಸಲ್ಲಿಸಬಹುದಾಗಿದೆ. ವಿವರವಾದ ಮಾಹಿತಿಯನ್ನು ಪಂಚಾಯತ್ ರಾಜ್ ಆಯುಕ್ತಾಲಯದ ಜಾಲತಾಣವಾದ **https://prcrdpr.karnataka.gov.in/12/notifications/en** ಮೂಲಕ ಅಥವಾ ಆಯುಕ್ತಾಲಯದ ಸೂಚನಾ ಫಲಕದಿಂದ ಪಡೆಯಬಹುದಾಗಿದೆ.

ಸಹಿ/–
ಉಪ ಕಾರ್ಯದರ್ಶಿ (ಆಡಳಿತ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
DIPR/CP/YC/3511/2025-26

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು 560041
registrar@rguhs.ac.in +91–80–29601928
No. RGUHSB/PROC/GEN/152/2025 (118631) ದಿನಾಂಕ: 30/10/2025

ಇ–ಟೆಂಡರ್ ಪ್ರಕಟಣೆ

ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕ್ಯೂಆರ್ ಕೋಡ್ / ಬಾರ್ ಕೋಡ್ ಹೊಂದಿರುವ 56 ಪುಟಗಳನ್ನು ಒಳಗೊಂಡ ಓಎಂಆರ್ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ.

ಟೆಂಡರ್ ಸಂಖ್ಯೆ. ಆರ್‌ಜಿಯುಹೆಚ್‌ಎಸ್‌ಕೆ/2025–26/ಐಎನ್‌ಡಿ0021

1	ಡೌನ್‌ಲೋಡ್‌ಗಾಗಿ ಟೆಂಡರ್ ಡಾಕ್ಯೂಮೆಂಟ್‌ಗಳ ಲಭ್ಯತೆ	29/10/2025, 18:00 ಗಂಟೆ
2	ಬಿಡ್ ಪೂರ್ವಭಾವಿ ಸಭೆ	13/11/2025, 11:00 ಗಂಟೆ
3	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	28/11/2025, 17:29 ಗಂಟೆ
4	ಮಾದರಿಯನ್ನು ಸಲ್ಲಿಸುವ ದಿನಾಂಕ	28/11/2025, 17:30 ಗಂಟೆ
5	ತಾಂತ್ರಿಕ ಬಿಡ್ ತೆರೆಯುವುದು	01/12/2025, 11:00 ಗಂಟೆ
6	ಆರ್ಥಿಕ ಬಿಡ್ ತೆರೆಯುವುದು	03/12/2025, 11:00 ಗಂಟೆ
7	ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು
ವಾ.ಸಾ.ಸಂ.ಇ/ವಾಪ್ರ/3514/ಆಕಾರ್/2025–26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142
ಫೋನ್ ನಂ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಪ್ರಕಟಣೆ ಸಂಖ್ಯೆ: 15/2025–26
ದಿನಾಂಕ : 27.10.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 04 ಕಾಮಗಾರಿಗಳಿಗಾಗಿ ಐಟಂವಾರು ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 322.45 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.120.18 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 03.11.2025 ಮಧ್ಯಾಹ್ನ 5.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 07.11.2025 ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.11.2025 ಬೆಳಿಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ,
ಎಡೆಯೂರು
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/526/2025–26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: N/109/2025/1079 ದಿನಾಂಕ: 30.10.2025

ಸಾರ್ವಜನಿಕ ವಿಚಾರಣಾ ಸೂಚನಾ ಪತ್ರ

ವಿಷಯ: ಮುಕ್ತ ಪ್ರವೇಶ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಎಸ್ಕಾಂಗಳ ಪ್ರಸ್ತಾವನೆಗೆ ಸಂಬಂಧಿಸಿದಂತೆ.

ವಿದ್ಯುತ್ ಕಾಯ್ದೆ, 2003ರ ಸೆಕ್ಷನ್ 42 ಸಹವಾಚಕ ಸುಂಕ ನೀತಿ ನಿಯಮ 8.5.2.4, ರಾಷ್ಟ್ರೀಯ ವಿದ್ಯುತ್ ನೀತಿಯ ನಿಯಮ 5.8.3, KERC (ಮುಕ್ತ ಪ್ರವೇಶಕ್ಕಾಗಿ ನಿಯಮಗಳು ಮತ್ತು ಷರತ್ತುಗಳು) ನಿಯಮಗಳು, 2025, ದಿನಾಂಕ 27.03.2025 ಮತ್ತು ಆಯೋಗದ ಸುಂಕ ಆದೇಶ–2025 ದಿನಾಂಕ 27.03.2025ರಲ್ಲಿನ ಪ್ಯಾರಾ 6.13.6 ಅನುಸಾರವಾಗಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಬೆಸ್ಕಾಂ) ಮುಕ್ತ ಪ್ರವೇಶ ಗ್ರಾಹಕರ ಮೇಲೆ ಹೆಚ್ಚುವರಿ ಸರ್ಚಾರ್ಜ್ ವಿಧಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿ ಆಯೋಗದ ಮುಂದೆ ಮೂಲ ಅರ್ಜಿ ಸಂಖ್ಯೆ OP No. 29/2025 ಅನ್ನು ಸಲ್ಲಿಸಿದೆ. ಬೆಸ್ಕಾಂ ಸಲ್ಲಿಸಿರುವ ಮೂಲ ಅರ್ಜಿಯ ಪ್ರತಿ ರಾಜ್ಯದ ಎಸ್ಕಾಂಗಳ ಮತ್ತು ಆಯೋಗದ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ. **(https://kerc.karnataka.gov.in).**

ಈ ಸಂಬಂಧ ದಿನಾಂಕ: 09.10.2025ರಂದು ಸಾರ್ವಜನಿಕ ತಿಳುವಳಿಕೆ ಪತ್ರದ ಮೂಲಕ ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ ಮತ್ತು ಸೆಸ್ಕ್ ವ್ಯಾಪ್ತಿಗೆ ಒಳಪಡುವ ಜೆನರೇಟರ್‌ಗಳು / ಮುಕ್ತಪ್ರವೇಶ ಗ್ರಾಹಕರು / ಆಸಕ್ತರು ತಮ್ಮ ಆಕ್ಷೇಪಣೆ, ಅಭಿಪ್ರಾಯ ಅಥವಾ ಸಲಹೆಗಳನ್ನು ಈ ಸೂಚನಾ ಪತ್ರವನ್ನು ಪ್ರಕಟಿಸಿದ 30 ದಿನ ಅಥವಾ ಅದಕ್ಕೂ ಮೊದಲು ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಇವರಿಗೆ ಸಲ್ಲಿಸಲು ಕೋರಲಾಗಿತ್ತು.

ಏತನ್ಮಧ್ಯೆ, 29.10.2025 ರಂದು, ಬೆಸ್ಕಾಂ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿದ್ದು, ಆಯೋಗವು 30.10.2025 ರಂದು ತಿದ್ದುಪಡಿ ಅರ್ಜಿಯ ಬಗ್ಗೆ ಆಹವಾಲನ್ನು ಆಲಿಸಿ, ಸದರಿ ಅರ್ಜಿಯನ್ನು ಅನುಮತಿಸಿದೆ. ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ ಮತ್ತು ಸೆಸ್ಕ್ ವ್ಯಾಪ್ತಿಗೆ ಬರುವ ಪಾಲುದಾರರು, ಮುಕ್ತ ಪ್ರವೇಶ ಗ್ರಾಹಕರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಲು ಅನುವು ಮಾಡಿಕೊಡಲು ತಿದ್ದುಪಡಿ ವಾದಪತ್ರ ಮತ್ತು ವಿವರಣೆಯನ್ನು ಎಸ್ಕಾಂಗಳ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚನೆ ನೀಡಲಾಗಿದೆ.

ಬೆಸ್ಕಾಂ ಸಲ್ಲಿಸಿರುವ ತಿದ್ದುಪಡಿ ವಾದಪತ್ರವು ಎಸ್ಕಾಂಗಳು ಮತ್ತು ಆಯೋಗದ ವೆಬ್‌ಸೈಟ್‌ಗಳಲ್ಲಿ **(https://kerc.karnataka.gov.in)** ಲಭ್ಯವಿದೆ. ಎಸ್ಕಾಂಗಳ ವ್ಯಾಪ್ತಿಗೆ ಬರುವ ಪಾಲುದಾರರು ಮತ್ತು ಮುಕ್ತ ಪ್ರವೇಶ ಗ್ರಾಹಕರು ತಮ್ಮ ಆಕ್ಷೇಪಣೆಗಳನ್ನು **12.11.2025ರ ಸಂಜೆ 05.00 ಗಂಟೆಗೆ ಅಥವಾ ಅದಕ್ಕೂ ಮೊದಲು** ಆಯೋಗಕ್ಕೆ ಸಲ್ಲಿಸಬಹುದು.

ಪ್ರಸ್ತಾಪಿತ ವಿಷಯದ ಬಗ್ಗೆ ಪಾಲುದಾರರು / ಮುಕ್ತ ಪ್ರವೇಶ ಗ್ರಾಹಕರುಗಳ ಅಭಿಪ್ರಾಯಗಳನ್ನು ಪಡೆಯಲು, ಆಯೋಗವು ದಿನಾಂಕ 13.11.2025 ರಂದು ಬೆಳಿಗ್ಗೆ 11.00 ಕ್ಕೆ ಬೆಂಗಳೂರಿನ ಆಯೋಗದ ನ್ಯಾಯಾಲಯದ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಡೆಸಲಿದೆ.

ಸಾರ್ವಜನಿಕ ವಿಚಾರಣೆಯನ್ನು, ಆಯೋಗವು ದಿನಾಂಕ 18.09.2025 ರಂದು ಪ್ರಕಟಿಸಿರುವ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನದ ಪ್ರಕಾರ, ಹೈಬ್ರಿಡ್ ವಿಧಾನದ ಮೂಲಕ, ಅಂದರೆ ಭೌತಿಕ ಮತ್ತು ಆನ್‌ಲೈನ್ / ವರ್ಚುಯಲ್ ಎರಡೂ ವಿಧಾನದಲ್ಲಿ ನಡೆಸಲಾಗುವುದು.

ಆನ್‌ಲೈನ್ / ವರ್ಚುಯಲ್ ವಿಧಾನದ ವಿಚಾರಣೆಯ ಮೂಲಕ ಪ್ರತಿನಿಧಿಸಲು ಆಸಕ್ತಿ ಹೊಂದಿರುವ ಪಕ್ಷಕಾರರು / ಪಾಲುದಾರರು ಮತ್ತು ಮುಕ್ತ ಪ್ರವೇಶ ಗ್ರಾಹಕರು ತಮ್ಮ ಹೆಸರುಗಳು, ಇಮೇಲ್ ಐಡಿಗಳು ಮತ್ತು ಫೋನ್ ಸಂಖ್ಯೆಗಳನ್ನು ಆಯೋಗದ ನೋಂದಾವಣೆಗೆ ಇ–ಮೇಲ್ ವಿಳಾಸ **asst.secykerc@gmail.com** ಮೂಲಕ **12.11.2025 ರಂದು ಅಥವಾ ಅದಕ್ಕೂ ಮೊದಲು ಬೆಳಿಗ್ಗೆ 11.00 ರಿಂದ ಸಂಜೆ 05.00 ರ ನಡುವೆ ಸಲ್ಲಿಸಬೇಕು.**

ಆಸಕ್ತ ಪಾಲುದಾರರು/ ಮುಕ್ತ ಪ್ರವೇಶ ಗ್ರಾಹಕರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಬಹುದು ಮತ್ತು ಸಾರ್ವಜನಿಕ ವಿಚಾರಣೆಯ ಸಮಯದಲ್ಲಿ ತಮ್ಮ ಮೌಖಿಕ/ಲಿಖಿತ ಆಕ್ಷೇಪಣೆಗಳನ್ನು ಆಯೋಗಕ್ಕೆ ಸಲ್ಲಿಸಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/3516/2025-26

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_ASHOK LEYLAND 3718IL
YOM – 2015
Reg No – KA28C3565
2) TATA MOTORS LTD. - TATA LPT 3118/52 COWL CHASSIS GOODS, YOM – 2014
Reg No – KA29A8601
3) CB_CONCRETE_MIXER_PUMP_MPD_40_SUNBEAM
YOM – 2024
Engine No 54001171
4) CB_SKID_STEER_LOADER_S70_BOBCAT
YOM – 2024
Engine No 1RC1709PIN
5) CB_AL 3123 FULLY BUILT TIPPER
YOM – -
Reg No – KA32D4592
6) CB_PRO_3019_CBC
YOM – -
Reg No – KA01AQ0556
7) CB_MAHINDRA_BLAZO_42_BULKER
YOM – -
Reg No – KA63A2458
8) CB_MAHINDRA_BLAZO_42_BULKER
YOM – -
Reg No – KA63A2459
9) CB_Tata LPT 1112 Fully Built
YOM –
Reg No – KA597597
10) CB_EICHER_PRO_30_15_GOODS
YOM – 2022
Reg No – KA9AA2851
11) MAHINDRA BOLERO PICK-UP
YOM – 2021
Reg No – KA16AA0305
12) CB_EICHER_PRO_6055_TRACTOR_TRAILER
YOM – -
Reg No – KA34D1342
13) CB_BHARATBENZ_1926C_TIPPER
YOM –
Reg No – KA664130
14) Bolero Maxi Truck
YOM –
Reg No – KA16AA8568
15) CB_TATA_INTRA_V_10
YOM – 2022
Engine No KA41D3842
16) CB_EICHER_PRO_6055_TRACTOR_TRAILER
YOM –
Engine No KA34D1343
17) CB_ASHOK_LEYLAND_GP4825_COWL_CHASSIS_GOODS
YOM – 2022
Engine No KA34C5311

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 31.10.2025
(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Prashanthkumar S
Kotak Mahindra Bank Ltd.
Contact / 080 - 61564202

ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
ನಿಗಮ ಕಛೇರಿ, ಸ್ಟೇಷನ್ ರಸ್ತೆ ಕಲಬುರಗಿ Mobile No : 9480849007
E-mail: gescom.seprojects@gmail.com
ಸಂಖ್ಯೆ:ಜೆಸ್ಕಾಂ/ಮುಇಂ.(ಕಾ)/ಅಇಂ(ಯೋ)/ಸಕಾನಿ(ಯೋ)/ಸಇಂ–1/2025-26/BIR-613 & 614/55955-62
ದಿನಾಂಕ: 30-10-2025

:: ಟೆಂಡರ್ ಪ್ರಕಟಣೆ ::

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ)

ಜೆಸ್ಕಾಂ ವ್ಯಾಪ್ತಿಯ ರಾಯಚೂರು ಜಿಲ್ಲೆಯಲ್ಲಿನ 1059 ವಿದ್ಯುತ್ ರಹಿತ ಮನೆಗಳಿಗೆ ಧರ್ತಿ ಆಬಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನ (DA-JGUA) ಯೋಜನೆ ಅಡಿಯಲ್ಲಿ ಮೂಲ ಸೌಕರ್ಯ ರಚಿಸಿ ವಿದ್ಯುತ್ ಕಲ್ಪಿಸಲು ಸಂಪೂರ್ಣ ಟರ್ನ್ ಕೀ ಆಧಾರದ KPP Portal ಮೂಲಕ ಅರ್ಹರಿಂದ 2 ಪ್ಯಾಕೇಜಗಳಲ್ಲಿ ಬಿಡ್ಡುಗಳನ್ನು ಅಹ್ವಾನಿಸಲಾಗಿದೆ. ಜಿಎಸ್‌ಟಿ ಹೊರತುಪಡಿಸಿ ಟೆಂಡರ್‌ಗಳ ಮೊತ್ತ: **ಪ್ಯಾಕೇಜ–1 ರಾಯಚೂರು ಗ್ರಾಮೀಣ ವಿಭಾಗ ರೂ. 5.32 ಕೋಟಿ, ಪ್ಯಾಕೇಜ–2 ಸಿಂಧನೂರ ವಿಭಾಗ ರೂ. 5.99 ಕೋಟಿ.**

ಬಿಡ್ಡುದಾರರು ಟೆಂಡರ್‌ಗಳಲ್ಲಿ ಭಾಗವಹಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ದಿನಾಂಕ: **31–10–2025** ರಂದು ಅಥವಾ ನಂತರ https://kppp.karnataka.gov.in ಭೇಟಿ ನೀಡಲು ಕೋರಿದೆ.

ಸಹಿ/– ಮುಖ್ಯ ಇಂಜಿನಿಯರ್ (ಕಾರ್ಯಚರಣೆ),
ನಿಗಮ ಕಛೇರಿ, ಜೆಸ್ಕಾಂ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/659/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.
ಸಂಖ್ಯೆ: ಕಾಇಂ:ಲೋವಿಚಿ:ಎಇ–1,2:ಜೆಇ–1:ಟೆಂಡರ್–38:2025–26 ದಿನಾಂಕ: 30.10.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಗಳಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು. ಕಾಮಗಾರಿಗಳ ವಿವರ:– ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಸಾಮಾನ್ಯ:– ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ಮುಖ್ಯ ರಸ್ತೆ ಕಾಮಗಾರಿಗಳು ಸುಧಾರಣೆ:– (1) ಹೊಳಲ್ಕೆರೆ ತಾಲ್ಲೂಕು ಮಾಳೇನಹಳ್ಳಿಯಿಂದ ಹನುಮಲಿ ಗ್ರಾಮದ ರಸ್ತೆ ವಯಾ ಆರ್. ನುಲೇನೂರು ವರೆಗೆ ರಸ್ತೆ ಅಭಿವೃದ್ಧಿ (ವ.ಇಂ. 27841)/2ನೇ ಕರೆ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–300.00 ಕೆಪಿಪಿಪಿ ಪೋರ್ಟಲ್ ಮೂಲಕ– ಏಕ ಲಕೋಟೆ ಪದ್ಧತಿ:– ಲೆಕ್ಕ ಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ:– (2) Road Safety Works on State Highway Roads in Challakere Taluk (W.I. 28595)/call-2 ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–11.20 ಪರಿಶಿಷ್ಟ ಜಾತಿಗೆ ಮೀಸಲು:– ಲೆಕ್ಕ ಶೀರ್ಷಿಕೆ: 3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ:– (3) ಹಿರಿಯೂರು ತಾಲ್ಲೂಕು ಜವಗೊಂಡನಹಳ್ಳಿ ಯಿಂದ ಯಲ್ಲದಕೆರೆ ರಸ್ತೆ ಮಾರ್ಗ ಓಬಳಾಪುರ, ವೀರವ್ವನಾಗತಿಹಳ್ಳಿ, ಚಿಗಳೀಕಟ್ಟೆ ರಸ್ತೆ ಕಿ.ಮೀ. 0.00 ರಿಂದ 1.00, 3.45 ರಿಂದ 9.23, ಮತ್ತು 16.97 ರಿಂದ 23.70 ರವರೆಗೆ ರಸ್ತೆ ವಾರ್ಷಿಕ ನಿರ್ವಹಣೆ (ವ.ಇಂ. 28764) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–38.65

ಪ್ರವರ್ಗ–2(ಎ) ಮೀಸಲು:– ಲೆಕ್ಕ ಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ:– (4) Annual maintenance of Highway connecting Ekkumbi with Molakalmuru (SH-2) KM 161.42 to 168.72 in Molakalmuru Taluk (W.I. 28321) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–22.00

ಕ್ರ.ಸಂ. 1 ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 12–11–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 13–11–2025 ಸಮಯ 16–00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–11–2025 ಸಮಯ 16–15 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 17–11–2025 ಸಮಯ 11–00

ಕ್ರ.ಸಂ. 2 ಮತ್ತು 4 ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 06–11–2025 ಸಮಯ 17–30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 07–11–2025 ಸಮಯ 16–00 ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 10–11–2025 ಸಮಯ 16–15 ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/450/2025-26 ಸಹಿ/– ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ, ಚಿತ್ರದುರ್ಗ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ದ್ವೇಷಕ್ಕೆ ಹಲವು ಮುಖ. ಆದರೆ, ಪ್ರೀತಿಗೆ ಒಂದೇ ಮುಖ.

ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಪ್ರತಿನಿಧಿಗಳಿಲ್ಲದ ಸ್ಥಳೀಯ ಸಂಸ್ಥೆಗಳು ಪ್ರಜಾಪ್ರಭುತ್ವದ ಬೇರುಗಳು ದುರ್ಬಲ

ಸ್ಥಳೀಯ ಸಂಸ್ಥೆಗಳಿಗೆ ನಿಗದಿತ ಅವಧಿಯಲ್ಲಿ ಚುನಾವಣೆ ನಡೆಸಲು ಸಾಧ್ಯವಾಗದೆ ಇರುವುದಕ್ಕೆ ರಾಜ್ಯ ಸರ್ಕಾರ ಅನುವು ಮಾಡಿಕೊಡದಿರುವುದೇ ಕಾರಣ ಎಂದು ರಾಜ್ಯ ಚುನಾವಣಾ ಆಯೋಗ ಹೇಳಿದೆ. ಅವಧಿ ಮುಗಿಯಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿಕಾರಿ ನೇಮಕ ಮಾಡದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ನಲವತ್ತಕ್ಕೂ ಹೆಚ್ಚು ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ, ಚುನಾವಣೆ ನಡೆಸಲು ಸಾಧ್ಯವಾಗದಿರುವ ಬಗ್ಗೆ ಆಯೋಗ ತನ್ನ ಅಸಹಾಯಕತೆ ವ್ಯಕ್ತಪಡಿಸಿದೆ. ಸ್ಥಳೀಯ ಸಂಸ್ಥೆಗಳಿಗೆ ಸಮಯಕ್ಕೆ ಸರಿಯಾಗಿ ಚುನಾವಣೆ ನಡೆಯುವಂತಾಗಬೇಕು ಎಂದು ನಾಲ್ಕೈದು ವರ್ಷಗಳಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿರುವುದನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರನ್ನೊಳಗೊಂಡ ಏಕಸದಸ್ಯ ನ್ಯಾಯಪೀಠದ ಗಮನಕ್ಕೆ ಆಯೋಗ ತಂದಿದೆ. ಸರ್ಕಾರ ಅನುವು ಮಾಡಿಕೊಟ್ಟರಷ್ಟೇ ನಿಗದಿತ ಸಮಯದಲ್ಲಿ ಚುನಾವಣೆ ನಡೆಯುವುದಕ್ಕೆ ಸಾಧ್ಯ ಎನ್ನುವ ಆಯೋಗದ ಹೇಳಿಕೆಯೇ ಎಲ್ಲವನ್ನೂ ಹೇಳುವಂತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಂಬಿಕೆಯುಳ್ಳ ಯಾವ ಸರ್ಕಾರವೂ ಸ್ಥಳೀಯ ಸಂಸ್ಥೆಗಳಿಗೆ ಜನಪ್ರತಿನಿಧಿಗಳು ಇಲ್ಲದೆ ಇರುವ ಸ್ಥಿತಿಯನ್ನು ಸೃಷ್ಟಿಸಲಾರವು. ಮಹಾತ್ಮ ಗಾಂಧೀಜಿ ಪ್ರತಿಪಾದಿಸಿದ ಸ್ವರಾಜ್ಯ ಪರಿಕಲ್ಪನೆಗೆ ಸಮೀಪವಾದ ಸ್ಥಳೀಯ ಸಂಸ್ಥೆಗಳ ವ್ಯವಸ್ಥೆ, ಅಧಿಕಾರ ವಿಕೇಂದ್ರೀಕರಣದ ಮೂಲಕ ಗುಣಮಟ್ಟ ಹಾಗೂ ವೇಗದ ಅಭಿವೃದ್ಧಿ ಚಟುವಟಿಕೆಗಳನ್ನು ಖಾತರಿ ಪಡಿಸುವಂತಹದ್ದು. ಪ್ರಜಾಪ್ರಭುತ್ವದ ಬೇರುಗಳ ರೂಪದಲ್ಲಿ ನೋಡಬಹುದಾದ ಈ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಪ್ರಕ್ರಿಯೆಗೆ ಇತ್ತೀಚಿನ ವರ್ಷಗಳಲ್ಲಿ ಸರ್ಕಾರಗಳು ತಮ್ಮ ಕೊಡುಗೆ ಸಲ್ಲಿಸುತ್ತಲೇ ಇವೆ ಹಾಗೂ ಅಧಿಕಾರ ಕೇಂದ್ರೀಕರಣದ ಅನಾರೋಗ್ಯಕರ ರಾಜಕೀಯದಲ್ಲಿ ತೊಡಗಿಕೊಂಡಿವೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರ ಅನುಸರಿಸುವ ವಿಳಂಬ ನೀತಿ ಜನರ ಹಕ್ಕುಗಳನ್ನು ಹತ್ತಿಕ್ಕುವಂತಹ ಹಾಗೂ ಪ್ರಜಾಪ್ರಭುತ್ವದ ಬೇರುಗಳನ್ನು ದುರ್ಬಲಗೊಳಿಸುವ ಪ್ರಯತ್ನ.

ಅವಧಿಗೆ ಸರಿಯಾಗಿ ಚುನಾವಣೆ ನಡೆಯದ ಕಾರಣ ರಾಜ್ಯದ ಅನೇಕ ಸ್ಥಳೀಯ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳಿಲ್ಲದ ನಿರ್ವಾತ ಸ್ಥಿತಿ ಅನುಭವಿಸುತ್ತಿವೆ; ಅಧಿಕಾರಿಗಳ ಆಡಳಿತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ವ್ಯವಸ್ಥೆ ಪ್ರಜಾಪ್ರಭುತ್ವದ ಅಣಕವಾಗಿದೆ ಹಾಗೂ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳು, ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಸಾಂವಿಧಾನಿಕ ಮಹತ್ವವನ್ನು ಕುಗ್ಗಿಸುವಂತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಉದಾಹರಣೆಯನ್ನೇ ಗಮನಿಸಿ. ಪಾಲಿಕೆಯ ಚುನಾವಣೆಗಳು ಕೊನೆಯದಾಗಿ ನಡೆದದ್ದು ಆಗಸ್ಟ್ 22ರ 2015ರಂದು. 2020ರಲ್ಲಿ ಪಾಲಿಕೆಯ ಸದಸ್ಯರ ಅವಧಿ ಮುಗಿದು ಐದು ವರ್ಷಗಳು ಕಳೆದರೂ, ಚುನಾವಣೆ ನಡೆದಿಲ್ಲ. ವಾರ್ಡ್‌ಗಳಲ್ಲಿ ಚುನಾಯಿತ ಪ್ರತಿನಿಧಿಗಳು ಮಾಡಬೇಕಾದ ಕೆಲಸವನ್ನು ಅಧಿಕಾರಿಗಳು ನಿರ್ವಹಿಸುವ ಪರಿಸ್ಥಿತಿ ತಲೆದೋರಿದೆ. ನಾಗರಿಕರು ಮತ್ತು ಅಧಿಕಾರಿಗಳ ನಡುವೆ ಕೊಂಡಿಗಳ ರೂಪದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಾರ್ಡ್ ಸದಸ್ಯರಿಲ್ಲದೆ ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವವರೇ ಇಲ್ಲವಾಗಿದೆ. ಈಗ, 'ಬಿಬಿಎಂಪಿ' ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ರೂಪಾಂತರಗೊಂಡಿದ್ದು, 2026ರಲ್ಲಿ ಚುನಾವಣೆಗಳು ನಡೆಯಬಹುದು ಎಂದು ಹೇಳಲಾಗುತ್ತಿದೆ. ಆದರೆ, ಇಲ್ಲಿಯವರೆಗೂ ಚುನಾವಣೆಯ ಸಿದ್ಧತೆಗಳೇ ಆರಂಭಗೊಂಡಿಲ್ಲ.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ವಿಳಂಬ ಮಾಡಿದಷ್ಟೂ ಜನರ ಹಕ್ಕುಗಳನ್ನು ಹತ್ತಿಕ್ಕಿದಂತಾಗುತ್ತದೆ. ಗ್ರಾಮ ಪಂಚಾಯಿತಿಗಳಿಂದ ಮಹಾನಗರ ಪಾಲಿಕೆಗಳವರೆಗೆ ಚುನಾವಣೆಗಳನ್ನು ಸಕಾಲದಲ್ಲಿ ನಡೆಸುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವ ವ್ಯವಸ್ಥೆ ಸಕ್ರಿಯವಾಗಿರುವಂತೆ ನೋಡಿಕೊಳ್ಳಬೇಕಾದುದು ಜನಪರ ಸರ್ಕಾರದ ಹೊಣೆಗಾರಿಕೆ. ಸ್ಥಳೀಯ ಸಂಸ್ಥೆಗಳು ಇಲ್ಲದೆ ಹೋದರೆ ಜನಸಾಮಾನ್ಯರ ತವಕ ತಲ್ಲಣಗಳು ಆಡಳಿತದ ಗಮನಕ್ಕೆ ಬರುವುದರಲ್ಲಿ ದೊಡ್ಡ ಕಂದಕವೇ ರೂಪುಗೊಳ್ಳುತ್ತದೆ. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಜನರಿಗೆ ನೇರವಾಗಿ ಉತ್ತರದಾಯಿಗಳಾಗಿರುತ್ತಾರೆ. ಅವರು, ಸ್ಥಳೀಯರಾಗಿರುವುದರಿಂದ ಅಲ್ಲಿನ ಸಮಸ್ಯೆಗಳ ಪರಿಚಯವಿರುತ್ತದೆ ಹಾಗೂ ಜನರ ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಸಾಧ್ಯವೂ, ಅನಿವಾರ್ಯವೂ ಆಗುತ್ತದೆ. ಕ್ಷೇತ್ರಗಳ ಪುನರ್ ವಿಂಗಡಣೆ, ಮೀಸಲಾತಿ ಹೊಂದಾಣಿಕೆ ಸೇರಿದಂತೆ ವಿವಿಧ ಕಾರಣಗಳನ್ನು ನೀಡಿ ಚುನಾವಣೆಗಳನ್ನು ಮುಂದೂಡುವ ಚಾಳಿ ಒಳ್ಳೆಯದಲ್ಲ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಪಕ್ಷ ಹಾಗೂ ರಾಜಕೀಯ ಚಟುವಟಿಕೆಯ ದೃಷ್ಟಿಯಿಂದಷ್ಟೇ ನೋಡದೆ, ಬೇರುಮಟ್ಟದ ಅಭಿವೃದ್ಧಿ ಸಾಧ್ಯತೆಗಳ ರೂಪದಲ್ಲಿ ನೋಡಬೇಕಾಗಿದೆ. ಯಾವುದೇ ನೆಪ ಹೇಳದೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ವಿಳಂಬವಿಲ್ಲದೆ ನಡೆಸಲು ಸರ್ಕಾರ ಮುಂದಾಗಬೇಕು.

ಅಂತೂ ಇಂತೂ ದಲಿತ ಸಿಎಂ ಇಲ್ಲ!



ಅನುಸಂಧಾನ

ರವೀಂದ್ರ ಭಟ್ಟ

ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎಂಬ ಹಾಗೆಯೇ ಅಂತೂ ಇಂತೂ ಕರ್ನಾಟಕಕ್ಕೆ ದಲಿತ ಸಿಎಂ ಭಾಗ್ಯ ಇಲ್ಲ! ಸದ್ಯದ ರಾಜಕೀಯ ವಿದ್ಯಮಾನವನ್ನು ಗಮನಿಸಿದರೆ, ರಾಜ್ಯದಲ್ಲಿ ದಲಿತ ವ್ಯಕ್ತಿಯೊಬ್ಬರು ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಸಾಧ್ಯವಾಗುವ ಲಕ್ಷಣ ಕಾಣುತ್ತಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟದಲ್ಲಿ ಇರುವ ದಲಿತ ಸಚಿವರೆಲ್ಲ ಸಭೆ ಮೇಲೆ ಸಭೆ ನಡೆಸಲಿ, ದಲಿತ ಮುಖಂಡರ ಮೆರವಣಿಗೆ ನಡೆಯಲಿ, ಸಮಾವೇಶ ನಡೆಯಲಿ, ಏನೇ ಪ್ರಯತ್ನ ಪಟ್ಟರೂ ಈ ಬಾರಿ ದಲಿತರೊಬ್ಬರು ಮುಖ್ಯಮಂತ್ರಿಯಾಗುವುದು ದೂರದ ಮಾತು ಎನ್ನುತ್ತದೆ ಕಾಂಗ್ರೆಸ್‌ನ ರಾಜಕೀಯ ಮೊಗಸಾಲೆ. ಮುಖ್ಯಮಂತ್ರಿ ಪಟ್ಟದ ವಿಚಾರ ಬಂದಾಗ 'ದಲಿತರಿಗೆ ಮುಂದಿನ ಬಾರಿ' ಎನ್ನುವುದೊಂದೇ ಸಿಕ್ಕುವ ಭರವಸೆ. ದಲಿತರೊಬ್ಬರು ಮುಖ್ಯಮಂತ್ರಿಯಾಗುವ ಸಾಧ್ಯತೆ ಇದ್ದರೆ ಅದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ. ಬಿಜೆಪಿ ಅಥವಾ ಜೆಡಿಎಸ್‌ನಲ್ಲಿ ಅದು ಸಾಧ್ಯವೇ ಇಲ್ಲ. ಆದರೆ, ಈ ಬಾರಿ ದಲಿತ ಮುಖ್ಯಮಂತ್ರಿ ಇಲ್ಲ ಎಂದೇ ಪಕ್ಷದ ವಲಯ ಹೇಳುತ್ತದೆ. ಇದೆಲ್ಲ ಗೊತ್ತಾಗಿಯೇ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಅವರು, ತಾವು 2028ಕ್ಕೆ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಅವರು ಮತ್ತು ಅವರ ಬೆಂಬಲಿಗರು ದಲಿತ ಸಿಎಂ ಎಂಬ ಭೂತವನ್ನು ಹೊರಗೆ ಬಿಟ್ಟಿರುವುದು ಸಿದ್ದರಾಮಯ್ಯ ಅವರ ಕುರ್ಚಿಯನ್ನು ಗಟ್ಟಿ ಮಾಡಿಕೊಳ್ಳುವ ತಂತ್ರದ ಭಾಗವೇ ವಿನಾ ಮತ್ತೇನೂ ಅಲ್ಲ. ಕಾಂಗ್ರೆಸ್‌ನಲ್ಲಿರುವ ಬಹಳಷ್ಟು ದಲಿತ ನಾಯಕರು ಮುಖ್ಯಮಂತ್ರಿ ಹುದ್ದೆಗೆ ಅರ್ಹರೇ ಆಗಿದ್ದರೂ ಅವರ ಕನಸು ನನಸಾಗುವ ಸಂಭವ ಕಡಿಮೆ.

'ಅಹಿಂದ' ರಾಜಕಾರಣವನ್ನು ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಅವರು, ತಾವು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿಯುವುದು ಖಚಿತವಾದರೆ, ಅಹಿಂದ ವರ್ಗಕ್ಕೆ ಸೇರಿದ ವ್ಯಕ್ತಿಗೇ ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟುಕೊಡುವುದಾಗಿ ಷರತ್ತು ವಿಧಿಸಿದರೆ ಅದು ಸಹಜವೂ ಹೌದು. ಅವರಿಗೆ ಅದು ಮಾಡಲೇಬೇಕಾದ ಕಾರ್ಯವೂ ಹೌದು. ಆದರೆ, ದಲಿತ ಸಿಎಂ ಎಂಬ ಕೂಗೆಬ್ಬಿಸಿರುವುದರ ಹಿಂದೆ ಇಂತಹ ಉದಾತ್ತ ಭಾವವೊಂದೇ ಇದೆಯೋ ಅಥವಾ ರಾಜಕಾರಣವೂ ಇದೆಯೇ ಎಂದು ಕೇಳಿದರೆ ಖಂಡಿತ ರಾಜಕೀಯ ತಂತ್ರವೂ ಇದೆ ಎನ್ನುತ್ತದೆ ಕಾಂಗ್ರೆಸ್ ಪಡಸಾಲೆ. ಹಾಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವುದನ್ನು ತಡೆಯಬೇಕು ಮತ್ತು ಇದೇ ವಿಷಯಕ್ಕೆ ರಾಜಕೀಯ ಗೊಂದಲ ಉಂಟಾಗಿ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಗಾದಿಯಲ್ಲಿ ಮುಂದುವರಿಯಬೇಕು ಎಂಬ ಇರಾದೆ ಇರುವುದಂತೂ ಸತ್ಯ. ಇದು ಅಂಗೈ ಹುಣ್ಣಿನಷ್ಟೇ ಗೋಚರ. ಅದನ್ನು ನೋಡಲು ಕನ್ನಡಿ ಅಗತ್ಯವಿಲ್ಲ.

ಹಾಗಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಟ್ಟದಿಂದ ಕೆಳಕ್ಕೆ ಇಳಿಯುವರೇ? ಎಂದು ಪ್ರಶ್ನೆ ಮಾಡಿದರೆ, 'ಹೌದು, ಕಾಂಗ್ರೆಸ್ ಪಾಳಯದಲ್ಲಿ ಅಂತಹ ಸನ್ನಿವೇಶವೊಂದು ನಿರ್ಮಾಣ ಆಗಿದೆ' ಎನ್ನುವ ಉತ್ತರವೇ ಬರುತ್ತದೆ. ಅದಕ್ಕೆ ಸಿದ್ದರಾಮಯ್ಯ ಅವರ ಮಾತುಗಳೇ ಸಾಕ್ಷಿ ಎನ್ನುತ್ತಾರೆ ಕಾಂಗ್ರೆಸ್ ಮುಖಂಡರು. ಮೊದಮೊದಲು ಸಿದ್ದರಾಮಯ್ಯ ಅವರು, 'ಹೈಕಮಾಂಡ್ ಲೆವೆಲ್‌ನಲ್ಲಿ ಅಧಿಕಾರದ ಹಂಚಿಕೆಯ ಬಗ್ಗೆ ಮಾತುಕತೆಯೇ ಆಗಿಲ್ಲ. ಅವೆಲ್ಲ ಮಾಧ್ಯಮಗಳ ಸೃಷ್ಟಿ. ನಾನು ಐದು ವರ್ಷ ಮುಖ್ಯಮಂತ್ರಿ. ಈ ಬಗ್ಗೆ ಅನುಮಾನವೇ ಬೇಡ' ಎನ್ನುತ್ತಿದ್ದರು. ಸ್ವಲ್ಪ ಸಮಯದ ನಂತರ 'ಶಾಸಕರ ಬೆಂಬಲ ಇದ್ದರೆ ಮುಖ್ಯಮಂತ್ರಿಯಾಗಬಹುದು' ಎಂದರು. ನಂತರ 'ಮುಖ್ಯಮಂತ್ರಿಯಾಗಲು ಶಾಸಕರ ಬೆಂಬಲವೂ ಬೇಕು, ಹೈಕಮಾಂಡ್ ಆಶೀರ್ವಾದವೂ ಬೇಕು' ಎಂಬ ಹೇಳಿಕೆ ನೀಡಿದರು. ಈಗ ಅವರು 'ಹೈಕಮಾಂಡ್ ಒಪ್ಪಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ' ಎಂದು ಹೇಳುತ್ತಿದ್ದಾರೆ. ಅಂದರೆ

> ಮುಖ್ಯಮಂತ್ರಿ ಬದಲಾವಣೆ ಕುರಿತ ಸುದ್ದಿಗಳು ರಾಜಕಾರಣದ ಮೊಗಸಾಲೆಯಲ್ಲಿ ಮತ್ತೆ ದಟ್ಟವಾಗಿವೆ. ಅದೇ ಕಾಲಕ್ಕೆ, ದಲಿತರೊಬ್ಬರು ಮುಖ್ಯಮಂತ್ರಿ ಆಗುವ ಸಾಧ್ಯತೆ ನಿಧಾನವಾಗಿ ನೇಪಥ್ಯಕ್ಕೆ ಸರಿಯುತ್ತಿದೆ. 'ದಲಿತ ಸಿಎಂ' ಕಾಣುವ ಅವಕಾಶ ಕನ್ನಡಿಗರಿಗೆ ಸದ್ಯಕ್ಕೆ ಇರುವಂತೆ ಕಾಣಿಸುತ್ತಿಲ್ಲ. ಆದರ್ಶ ಎನ್ನುವುದು ಅಧಿಕಾರಕ್ಕೆ ಮೆಟ್ಟಿಲೇ ಹೊರತು ಆಚರಣೆಗಲ್ಲ ಎನ್ನುವ ಸತ್ಯ ಮತ್ತೆ ಸಾಬೀತಾಗುತ್ತಿದೆ.

ಅವರ ಮಾತಿನ ಅರ್ಥ ಸದ್ಯಕ್ಕೆ ಅಧಿಕಾರದ ಹಂಚಿಕೆ ಅನಿವಾರ್ಯ ಎಂಬುದನ್ನೇ ಸೂಚಿಸುತ್ತಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಇನ್ನೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವರ್ತನೆಯನ್ನು ಗಮನಿಸಬೇಕು. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯ ಚರ್ಚೆಗೆ ಬಂದಾಗಿನಿಂದಲೂ ಅವರ ನಡವಳಿಕೆ ಗಂಭೀರವಾಗಿಯೇ ಇದೆ. ತೀರಾ ಎಚ್ಚರಿಕೆಯಿಂದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಮುತುವರ್ಜಿಯ ಹೆಜ್ಜೆ ಇಡುತ್ತಿದ್ದಾರೆ. ಎಲ್ಲಿಯೂ ಅತಿರೇಕದ ಮಾತುಗಳಿಲ್ಲ. ಮಹಾಭಾರತದ ಕುರುಕ್ಷೇತ್ರ ಯುದ್ಧದಲ್ಲಿ ದ್ರೋಣಪುತ್ರ ಅಶ್ವತ್ಥಾಮ ಪಾಂಡವರ ವಿರುದ್ಧ ನಾರಾಯಣ ಅಸ್ತ್ರವನ್ನು ಪ್ರಯೋಗ ಮಾಡುತ್ತಾನೆ. ಆ ಅಸ್ತ್ರಕ್ಕೆ ಪ್ರತಿಯೆಂಬುದೇ ಇಲ್ಲ. ಅದನ್ನು ಧಿಕ್ಕರಿಸಿದರೆ ಅದು ಎಲ್ಲರನ್ನೂ ನಾಶ ಮಾಡುತ್ತದೆ. ಇಂತಹ ನಾರಾಯಣ ಅಸ್ತ್ರವನ್ನು ಕಂಡು ಪಾಂಡವರು ಕಂಗಾಲಾಗುತ್ತಾರೆ. ಯುದ್ಧದಲ್ಲಿ ಸೋಲು ಗ್ಯಾರಂಟಿ ಎಂದು ಭಯಗೊಳ್ಳುತ್ತಾರೆ. ಆಗ ಕೃಷ್ಣ ಪಾಂಡವರನ್ನು ಸಮಾಧಾನಪಡಿಸಿ, 'ಈ ಅಸ್ತ್ರಕ್ಕೆ ಶರಣಾದರೆ ಅದು ನಿಷ್ಫಲವಾಗುತ್ತದೆ' ಎಂದು ಉಪದೇಶ ಮಾಡುತ್ತಾನೆ. ಅದರಂತೆಯೇ ಪಾಂಡವರು ನಾರಾಯಣ ಅಸ್ತ್ರಕ್ಕೆ ಶರಣಾಗುತ್ತಾರೆ. ಅದು ಹಿಂದೆ ಸರಿಯುತ್ತದೆ. ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಎಂಬ ನಾರಾಯಣಾಸ್ತ್ರ ಹೊರಕ್ಕೆ ಬಂದಾಗ ಶಿವಕುಮಾರ್ ಬಣ ಕೂಡಾ ಕಂಗಾಲಾಯಿತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಮುಖ್ಯಮಂತ್ರಿಯಾಗುತ್ತಾರೆ ಎಂಬ ಗುಲ್ಲು ಹಬ್ಬಿಸಲಾಯಿತು. ಆಗ ಶಿವಕುಮಾರ್ ನಡವಳಿಕೆ ಕೂಡಾ ಬದಲಾಯಿತು. ಸಿದ್ದರಾಮಯ್ಯ ಅವರು ಪಟ್ಟದಿಂದ ಇಳಿದು ಇನ್ನೊಬ್ಬರು ಮುಖ್ಯಮಂತ್ರಿಯಾಗುವುದಕ್ಕಿಂತ ಈಗಿರುವ ವ್ಯವಸ್ಥೆಯೇ ಮುಂದುವರಿಯಲಿ ಎಂದು ಅವರು ಭಾವಿಸಿದರೋ ಏನೋ, ಅಂತೂ ಅವರು ಅಲ್ಲಿಂದ ತಮ್ಮ ವರ್ತನೆಯನ್ನೇ ಬದಲಿಸಿಕೊಂಡರು. ಅವರಿಗೆ ಉಪದೇಶ ಮಾಡಿದ ಕೃಷ್ಣ ಪರಮಾತ್ಮ ಯಾರೆಂಬುದು ಗೊತ್ತಿಲ್ಲ. ಆದರೆ, ಉಪದೇಶ ಸಂಪೂರ್ಣ ಅವರಿಗೆ ನಾಟಿರುವುದು ಸತ್ಯ. ಮೈಸೂರಿನಲ್ಲಿ ನಡೆದ ಸಮಾವೇಶದಲ್ಲಿಯೂ ಅವರು, 'ಸಿದ್ದರಾಮಯ್ಯ ಅವರ ಪರ ಬಂಡೆಯಂತೆ ನಿಲ್ಲುವೆ' ಎಂಬ ಭರವಸೆಯ ಮಾತುಗಳನ್ನು ಆಡಿದ್ದರು. ಸಿದ್ದರಾಮಯ್ಯ ವಿರುದ್ಧ ಎಲ್ಲಿಯೂ ಕಟುಟೀಕೆ ಮಾಡಲಿಲ್ಲ. ಕಾಂಗ್ರೆಸ್ ಭಿನ್ನಮತ ಇಷ್ಟೊಂದು ಲೈಟಾದರೆ ಹೇಗೆ ಸ್ವಾಮಿ ಎಂದು ಜನರೇ ಪ್ರಶ್ನೆ ಮಾಡುವಂತೆ ಅವರ ವರ್ತನೆ ಇತ್ತು. ರಾಜಕೀಯದಲ್ಲಿ ಭಿನ್ನಮತ ಎಂದರೆ ಅದು ಮಾತಿನ ಚಕಮಕಿಯೂ ಹೌದು. ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ವೀರಪ್ಪ ಮೊಯಿಲಿ, ರಾಜಶೇಖರಮೂರ್ತಿ, ಎಸ್.ಎಂ. ಕೃಷ್ಣ ಮುಂತಾದವರು ಹೇಗೆಲ್ಲ ನಡೆದುಕೊಂಡಿದ್ದರು, ಏನೆಲ್ಲ ಮಾತನಾಡಿದ್ದರು ಎನ್ನುವುದನ್ನು ನೆನಪಿಸಿಕೊಂಡರೆ ಈಗಿನ ಭಿನ್ನಮತ ಸಪ್ಪೆಸಪ್ಪೆ.

ಸಿದ್ದರಾಮಯ್ಯ ಅವರ ಬೆಂಬಲಿಗರು ಮುಖ್ಯಮಂತ್ರಿ ಪರವಾಗಿ ಹೇಳಿಕೆ ನೀಡಿದಾಗಲೂ, ಸ್ವತಃ ಸಿದ್ದರಾಮಯ್ಯ ಅವರೇ 'ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕರ ಬೆಂಬಲ ಇಲ್ಲ' ಎಂದು ಹೇಳಿದಾಗಲೂ, ಶಿವಕುಮಾರ್ ಅವರು ಸಂಯಮ ಕಳೆದುಕೊಳ್ಳಲಿಲ್ಲ. ಶಿವಕುಮಾರ್ ಆಗಲಿ, ಅವರ ಸಹೋದರ ಸುರೇಶ್ ಆಗಲಿ ಅತಿರೇಕದ ಹೇಳಿಕೆ ನೀಡಲಿಲ್ಲ. ಸಿದ್ದರಾಮಯ್ಯ ಅವರ ಪುತ್ರ ಡಾ. ಯತೀಂದ್ರ ಅವರು, 'ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಸತೀಶ ಜಾರಕಿಹೊಳಿ' ಎಂದು ಹೇಳಿಕೆ ನೀಡಿದಾಗಲೂ ಶಿವಕುಮಾರ್ ಮುಗುಂ ಆಗಿಯೇ ಇದ್ದರು. 'ಹೈಕಮಾಂಡ್ ಬಯಸಿದರೆ ನಾನೇ ಐದು ವರ್ಷ ಮುಖ್ಯಮಂತ್ರಿ' ಎಂದು ಸಿದ್ದರಾಮಯ್ಯ ಹೇಳಿದಾಗಲೂ ಶಿವಕುಮಾರ್ ಅವರು 'ಮುಖ್ಯಮಂತ್ರಿ ಹೇಳಿದ ಮೇಲೆ ಮುಗಿದೇ ಹೋಯ್ತು. ಇನ್ನೇನೂ ಹೇಳುವುದಕ್ಕೆ ಇಲ್ಲ' ಎಂದು ಪ್ರತಿಕ್ರಿಯೆ ನೀಡಿದರು. ಅವರ ತಮ್ಮ ಸುರೇಶ್ 'ನನ್ನ ಅಣ್ಣನ ಹಣೆಬರಹದಲ್ಲಿ ಮುಖ್ಯಮಂತ್ರಿ ಆಗುವ ಯೋಗ ಇದ್ದರೆ ಆಗ್ತಾರೆ. ಇಲ್ಲದಿದ್ದರೆ ಇಲ್ಲ' ಎಂದು ಅಲವತ್ತುಕೊಂಡರು. ಹಾಗಂತ ಶಿವಕುಮಾರ್ ಏನೂ ತಂತ್ರಗಾರಿಕೆಯನ್ನೇ ಮಾಡಿಲ್ಲ ಎಂದಲ್ಲ. ಕಾಂತರಾಜ ಸಮಿತಿ ವರದಿ ಜಾರಿ ವಿಷಯ ಆಗಲಿ, ಮತ್ತೊಮ್ಮೆ ಜಾತಿ ಸಮೀಕ್ಷೆ ನಡೆಸುವ ವಿಚಾರವೇ ಇರಲಿ, ಸಹಕಾರ ಸಚಿವ ರಾಜಣ್ಣ ಅವರ ರಾಜೀನಾಮೆ ವಿಷಯದಲ್ಲಿಯೇ ಇರಲಿ, ಎಲ್ಲಿ ಏನು ಹೇಳಬೇಕೋ ಅದನ್ನು ಹೇಳಿದರು. ಏನಾಗಬೇಕಾಗಿತ್ತೋ ಆ ಪರಿಣಾಮ ಆಯಿತು. ಈಗ ಯತೀಂದ್ರ ಅವರ ಹೇಳಿಕೆಯ ಬಗ್ಗೆಯೂ ಅವರು ಹೇಳಿದ್ದು 'ಎಲ್ಲಿ ಹೇಳಬೇಕೋ ಅಲ್ಲಿ ಹೇಳುವೆ' ಎಂಬುದೇ ಆಗಿತ್ತು. ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಅವರು ನಂಬಿದ್ದು ದೇವರು ಮತ್ತು ಹೈಕಮಾಂಡ್‌ನನ್ನು ಮಾತ್ರ.

ಒಟ್ಟಾರೆ ವಿಷಯ ಇಷ್ಟೆ. ಈ ಬಾರಿ ದಲಿತರೊಬ್ಬರು ಮುಖ್ಯಮಂತ್ರಿ ಆಗುವುದಿಲ್ಲ. ಹೆಚ್ಚೆಂದರೆ ಕೆಪಿಸಿಸಿ ಅಧ್ಯಕ್ಷರಾಗಬಹುದು ಅಷ್ಟೇ. ಅಲ್ಲಿಗೆ ಗೊಂದಲಗಳೆಲ್ಲ ಮುಗಿದು ಶುಭಂ ಎಂದು ಮುಗಿಸಬಹುದೇ? ಬಹುತೇಕ ಹೌದು. ಅಥವಾ ಹೊಸ ಸಮಸ್ಯೆ ಆರಂಭವೂ ಆಗಬಹುದು. ಆದರೆ, ಒಂದಂತೂ ಸತ್ಯ. ಅದು ಕನಕದಾಸರ ವಿಚಾರಗಳೇ ಆಗಲಿ, ಅಂಬೇಡ್ಕರ್, ಮಹಾತ್ಮ ಗಾಂಧಿ, ಬಸವಣ್ಣನವರ ವಿಚಾರಗಳೇ ಆಗಲಿ, ಎಲ್ಲವೂ ಅಧಿಕಾರದ ಮೆಟ್ಟಿಲುಗಳೇ ವಿನಾ ಆಚರಣೆಯ ದಾರಿಗಳಲ್ಲ. ರಾಜಕೀಯದಲ್ಲಿ ಅದೆಲ್ಲವನ್ನೂ ನಿರೀಕ್ಷಿಸುವಂತೆಯೂ ಇಲ್ಲ. ಹೇ ರಾಮ್.

ವಾಚಕರ ವಾಣಿ

ಮದ್ಯವ್ಯಸನದಿಂದ ವ್ಯಕ್ತಿ–ಕುಟುಂಬ ನಾಶ

ಆಂಧ್ರಪ್ರದೇಶದ ಕರ್ನೂಲ್ ಬಳಿ ಸಂಭವಿಸಿದ ಬಸ್ ದುರಂತಕ್ಕೆ ಮದ್ಯವ್ಯಸನಿಯೇ ಕಾರಣ ಎಂದು ಪ್ರಾಥಮಿಕ ತನಿಖಾ ವರದಿ ಹೇಳಿದೆ. ಕುಡಿದ ಮತ್ತಿನಲ್ಲಿ ಬೈಕ್ ಸವಾರ ರಸ್ತೆ ಡಿವೈಡರ್‌ಗೆ ಡಿಕ್ಕಿ ಹೊಡೆದು ಸಾವಿಗೀಡಾಗಿದ್ದ. ಆ ಬೈಕ್‌ಗೆ ಬಸ್ ಡಿಕ್ಕಿಯಾಗಿದ್ದರಿಂದ ದೊಡ್ಡ ಅನಾಹುತ ಸಂಭವಿಸಿದೆ. ಹಾಗಾಗಿ, ಸರ್ಕಾರಗಳು ಮದ್ಯಪಾನದಿಂದ ಆಗುತ್ತಿರುವ ದುರಂತಗಳತ್ತ ಗಮನಹರಿಸಬೇಕಿದೆ. ಜನರ ಜೀವಹರಣ ಮಾಡಿ ಹಣ ಸಂಪಾದಿಸುವುದು ನೈತಿಕತೆಯಲ್ಲ. ಮದ್ಯಪಾನ ನಿಷೇಧಕ್ಕೆ ಸರ್ಕಾರ ಮುಂದಾಗಬೇಕಿದೆ.

ರಷ್ಯಾದ ಮೇರು ಲೇಖಕ ಲಿಯೊ ಟಾಲ್‌ಸ್ಟಾಯ್ ಯುವ ವಯಸ್ಸಿನಲ್ಲಿ ಕುಡುಕನಾಗಿದ್ದ. ನಂತರ ಕುಡಿತದಿಂದ ಮುಕ್ತನಾದ. ಮನುಷ್ಯರಿಗೆ ಅತ್ಯಂತ ಅವಶ್ಯಕವಾದ ವಿವೇಕವನ್ನೇ ಕುಡಿತ ಕಿತ್ತುಕೊಳ್ಳುತ್ತದೆ; ಆದ್ದರಿಂದ ಇದರ ಸಹವಾಸ ಬೇಡವೇ ಬೇಡ ಎಂದ. 'ತಾನು ಈ ದೇಶದ ಸರ್ವಾಧಿಕಾರಿಯಾದರೆ ಮದ್ಯಪಾನ ನಿಷೇಧವು ನನ್ನ ಮೊದಲ ಆದ್ಯತೆ' ಎಂದಿದ್ದರು ಗಾಂಧೀಜಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಆಸ್ತಿ ನೋಂದಣಿಗೆ ಸರ್ವರ್ ಅಡಚಣೆ

ಕಳೆದ ಮೂರು ದಿನಗಳಿಂದ ಆಸ್ತಿ ನೋಂದಣಿ ಮಾಡಿಸಲು ನೋಂದಣಾಧಿಕಾರಿಗಳ ಕಚೇರಿ ಸುತ್ತುತ್ತಿದ್ದೇನೆ. ಅಲ್ಲಿನ ಸಿಬ್ಬಂದಿ ಸರ್ವರ್ ಸರಿ ಇಲ್ಲವೆಂಬ ಉತ್ತರ ನೀಡುತ್ತಾರೆ. ಸರ್ವರ್ ಸಮಸ್ಯೆಯಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ವರಮಾನ ನಷ್ಟ. ಇದಕ್ಕೆ ಯಾರೂ ಹೊಣೆ. ತ್ವರಿತವಾಗಿ ಈ ಸಮಸ್ಯೆ ಬಗೆಹರಿಸಿ ನಾಗರಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕಿದೆ.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಎಸ್‌ಬಿಐ: ಕನ್ನಡಿಗರಿಗೆ ಸಿಗಬೇಕಿದೆ ಆದ್ಯತೆ

ಕರ್ನಾಟಕದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಶಾಖೆಗಳಲ್ಲಿ ಕನ್ನಡೇತರ ಸಿಬ್ಬಂದಿಯ ಭಾಷಾ ಸಂವಹನ ಕೊರತೆಯಿಂದಾಗಿ ಕನ್ನಡಿಗರು ತೊಂದರೆಗೆ ಸಿಲುಕುತ್ತಿದ್ದಾರೆ. ಭಾಷೆಯ ಸಮಸ್ಯೆ ಕೆಲವು ಶಾಖೆಗಳಲ್ಲಿ ಸಿಬ್ಬಂದಿ ಮತ್ತು ಗ್ರಾಹಕರ ನಡುವೆ ಘರ್ಷಣೆಗೂ ಕಾರಣವಾಗಿದೆ. ಮುಂದಿನ ಐದು ತಿಂಗಳೊಳಗೆ ಸುಮಾರು 3,500 ಸಿಬ್ಬಂದಿ ನೇಮಕಕ್ಕೆ ಎಸ್‌ಬಿಐ ನಿರ್ಧರಿಸಿದೆ. ಕರ್ನಾಟಕಕ್ಕೆ ಮೀಸಲಾಗಿರುವ ಹುದ್ದೆಗಳಿಗೆ ಕನ್ನಡದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ಣಯಿಸಬೇಕಿದೆ. ಇದರಿಂದ ಬ್ಯಾಂಕಿಂಗ್ ವಹಿವಾಟು ಸರಾಗವಾಗಿ ನಡೆಯಲಿದೆ. ಗ್ರಾಹಕರಿಗೂ ಅನುಕೂಲವಾಗಲಿದೆ.

ಪಟ್ಟಡಿ ಎ. ಬಸವರಾಜ್, ಬೆಂಗಳೂರು

ಬದುಕು

ಕಣ್ಣಿಲ್ಲದವರ ಮದುವೆಗೆ
ಕಣ್ಣಿದ್ದವರ ಕಾನೂನು
ಕುರುಡಾಗಿತ್ತು.
ಪ್ರಭಾವತಿ ಮತ್ತು
ಇಮಾಂಸಾಬ್ ಅಂಧರು
ದಾಂಪತ್ಯಕ್ಕೆ ಕಾಲಿಟ್ಟಾಗ,
ಜಾತಿ–ಧರ್ಮ ಹಿಂದೆ ಸರಿದು
ಬದುಕು ಕಣ್ಣು ತೆರೆಸಿತು.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಸುರಂಗ ರಸ್ತೆ: ಜನಪ್ರತಿನಿಧಿಗಳೇಕೆ ಮೌನ?

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಜೋಡಿ ಸುರಂಗ ರಸ್ತೆ ನಿರ್ಮಾಣವು ಅನಗತ್ಯ ಕಾರಣಗಳಿಂದ ನಿತ್ಯವೂ ಸದ್ದು ಮಾಡುತ್ತಿದೆ. ಇದರ ನಿರ್ಮಾಣದ ಅವಶ್ಯಕತೆ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಇಂದಿಗೂ ಜನರ ಮುಂದೆ ವೈಜ್ಞಾನಿಕ ಸಕಾರಣಗಳನ್ನು ತೆರೆದಿಟ್ಟಿಲ್ಲ. ಬೆಂಗಳೂರು ಪ್ರತಿನಿಧಿಸುವ ಜನಪ್ರತಿನಿಧಿಗಳ ಪೈಕಿ ಒಂದಿಬ್ಬರಷ್ಟೆ ಇದರ ವಿರುದ್ಧ ಮಾತನಾಡುತ್ತಿದ್ದಾರೆ. ಇಂತಹ ವಿಷಯದಲ್ಲಿ ಉಳಿದವರ ಮೌನ ನಿಜಕ್ಕೂ ಅಚ್ಚರಿದಾಯಕ. ಸುರಂಗ ರಸ್ತೆಯಿಂದ ಆಗುವ ಪರಿಸರ ಹಾನಿಗೆ ಜವಾಬ್ದಾರಿ ಹೊರುವವರು ಯಾರು?

ಕೆ.ಎಸ್. ಸೋಮೇಶ್ವರ, ಬೆಂಗಳೂರು

'ಎ' ಖಾತಾ: ಇಡೀ ರಾಜ್ಯಕ್ಕೆ ವಿಸ್ತರಣೆ ಆಗಲಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ 'ಬಿ' ಖಾತಾ ಆಸ್ತಿಗಳಿಗೆ 'ಎ' ಖಾತಾ ನೀಡುವ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿದೆ. 'ಬಿ' ಖಾತಾ ಸಮಸ್ಯೆಗಳು ರಾಜ್ಯದ ಎಲ್ಲಾ ನಗರಸಭೆ, ಪುರಸಭೆ ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿವೆ. ಬೆಂಗಳೂರಿಗರಿಗೆ ಸಿಕ್ಕಿರುವ ನೆಮ್ಮದಿ ಮತ್ತು ಕಾನೂನಾತ್ಮಕ ಭದ್ರತೆಯು ರಾಜ್ಯದ ಉಳಿದ ಭಾಗದ ಜನರಿಗೆ ಏಕಿಲ್ಲ? ಈ ಯೋಜನೆಯು ಕೇವಲ ಬೆಂಗಳೂರಿಗೆ ಸೀಮಿತವಾಗಬಾರದು. ಸರ್ಕಾರವು ಈ ಕುರಿತಾದ ಕಾನೂನು ಪ್ರಕ್ರಿಯೆಗಳನ್ನು ವಿಳಂಬ ಮಾಡದೆ ಕೂಡಲೇ ತಜ್ಞರ ಅಭಿಪ್ರಾಯ ಪಡೆದು ಇಡೀ ರಾಜ್ಯಕ್ಕೆ ವಿಸ್ತರಿಸಬೇಕಿದೆ.

ರವಿ, ಹರಿಹರ

ಅಶ್ವಮೇಧ ಬಸ್: ಪಾಸ್ ಅನುಮತಿಸಿ

ಶಾಲಾ–ಕಾಲೇಜು ವಿದ್ಯಾರ್ಥಿಗಳು ಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ 'ಶಕ್ತಿ' ಯೋಜನೆಯ ಪರಿಣಾಮದಿಂದಾಗಿ ಈ ಬಸ್‌ಗಳಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ಜನ ಪ್ರಯಾಣಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಪಾಡು ಹೇಳತೀರದು. ವಿದ್ಯಾರ್ಥಿನಿಯರಿಗೆ 'ಶಕ್ತಿ' ಸೌಲಭ್ಯದಿಂದ ಅಶ್ವಮೇಧ ಬಸ್ ಮತ್ತು ತಡೆರಹಿತ ಬಸ್‌ಗಳಲ್ಲಿಯೂ ಉಚಿತ ಪ್ರಯಾಣದ ಅವಕಾಶವಿದೆ. ಗಂಡು ಮಕ್ಕಳಿಗೆ ಈ ಬಸ್‌ಗಳಲ್ಲಿ ಪಾಸ್ ಅನುಮತಿಸುತ್ತಿಲ್ಲ. ಇದರಿಂದ ಅವರು ಆಗೊಮ್ಮೆ ಹೀಗೊಮ್ಮೆ ಬರುವ ಸಾಮಾನ್ಯ ಬಸ್‌ಗಳನ್ನೇ ಅವಲಂಬಿಸುವಂತಾಗಿದೆ. ಇದರಿಂದ ಅವರು ನಿಗದಿತ ಸಮಯಕ್ಕೆ ಶಾಲೆ, ಕಾಲೇಜು ತಲುಪಲು ಸಾಧ್ಯವಿಲ್ಲದಂತಾಗಿದೆ. ತಡೆರಹಿತ ಮತ್ತು ಅಶ್ವಮೇಧ ಬಸ್‌ಗಳಲ್ಲಿ ವಿದ್ಯಾರ್ಥಿ ಪಾಸ್ ಅನುಮತಿಗೆ ಅವಕಾಶ ಕಲ್ಪಿಸಬೇಕಿದೆ.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಭ್ರಷ್ಟಾಚಾರದ ವಿರಾಟದರ್ಶನ

ಆಸ್ಪತ್ರೆಯಲ್ಲಿ ಸತ್ತರೆ ಮನೆಗೆ ದೇಹ ಕೊಂಡೊಯ್ಯಲು ಆ್ಯಂಬುಲೆನ್ಸ್‌ನವರು ಹಣ ಕೀಳುತ್ತಾರೆ. ಕಾರ್ಯ ಮಾಡಿಸುವ ಪುರೋಹಿತರು ಹೆಚ್ಚು ಹಣ ಕೀಳುತ್ತಾರೆ. ಸ್ಮಶಾನದಲ್ಲಿ ಹಣ ಕೀಳುತ್ತಾರೆ. ಬಿಬಿಎಂಪಿ ಕಚೇರಿಯಲ್ಲಿ ಮರಣಪತ್ರ ನೀಡಲು ಹಣ ಕೀಳುತ್ತಾರೆ. ಹೇಸಿಗೆ ಹುಟ್ಟಿಸುವ ವ್ಯವಸ್ಥೆಯಲ್ಲಿ ನಾವಿದ್ದೇವೆ.

ಅಮರನಾಥ್ ಶಿವಶಂಕರ್, ಟೆಕ್ಕಿ, 'ಎಕ್ಸ್'ನಿಂದ

ಕಿಡಿನುಡಿ

ರಾಹುಲ್ ಗಾಂಧಿ ವಿದೇಶಗಳಲ್ಲಿ ಭಾರತದ ಮಾನ ಹರಾಜು ಮಾಡಲಿಕ್ಕಾಗಿ ಡಾನ್ಸ್ ಮತ್ತು ಡ್ರಾಮಾ ಅಥವಾ ಇನ್ನೇನಾದರೂ ಮಾಡುತ್ತಾರೆ.

ಎಸ್. ಸುರೇಶ್ ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 31-10-2000

- **ಕೊಪ್ಪಳ: ರೈತರ ಆಕ್ರೋಶ ಜೀಪಿಗೆ ಬೆಂಕಿ, ಲಾಠಿ ಪ್ರಹಾರ**

ಕೊಪ್ಪಳ, ಅ. 30– ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿ ಮಾಡುವ ವಿಚಾರದಲ್ಲಿ ರೈತರು ಹಾಗೂ ಅಧಿಕಾರಿಗಳ ನಡುವೆ ನಡೆದ ಮಾತುಕತೆ ವಿಫಲಗೊಂಡಾಗ ರೊಚ್ಚಿಗೆದ್ದು, ಸರ್ಕಾರಿ ಜೀಪಿಗೆ ಬೆಂಕಿ ಇಟ್ಟು ದಾಖಲೆ ಸುಟ್ಟ ಭಾರೀ ಸಂಖ್ಯೆಯ ರೈತರನ್ನು ನಿಯಂತ್ರಿಸುವುದಕ್ಕಾಗಿ ಪೊಲೀಸರು ಇಲ್ಲಿ ಇಂದು ಲಾಠಿ ಪ್ರಹಾರ ಮಾಡಿ ಅಶ್ರುವಾಯು ಪ್ರಯೋಗಿಸಿದರು.

ಸರ್ಕಾರದ ನೀತಿ ವಿರುದ್ಧ ಆಕ್ರೋಶ ತಾಳಿದ ರೈತರು, ತಹಶೀಲ್ದಾರ್ ಜೀಪಿಗೆ ಬೆಂಕಿ ಹಚ್ಚಿ ಅದನ್ನು ಭಸ್ಮ ಮಾಡಿದ್ದೇ ಅಲ್ಲದೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ದಾಖಲೆ, ಪೀಠೋಪಕರಣಗಳಿಗೆ ಬೆಂಕಿ ಹಚ್ಚಿ ನಾಶಗೊಳಿಸಿದಾಗ ಪೊಲೀಸರು ನಿಯಂತ್ರಣ ಕ್ರಮವಾಗಿ ಲಾಠಿ, ಅಶ್ರುವಾಯುವಿನಂಥ ಬಲಪ್ರಯೋಗ ಮಾಡಿದರು.

- **ಕ್ರಿಕೆಟ್ ಮೋಸದಾಟ: ಸಿಬಿಐನಿಂದ ವರದಿ ಸಲ್ಲಿಕೆ**

ನವದೆಹಲಿ, ಅ. 30– ಕ್ರಿಕೆಟ್‌ನಲ್ಲಿನ ಮೋಸದಾಟ ಕುರಿತು ಆರು ತಿಂಗಳ ಕಾಲ ವಿಚಾರಣೆ ನಡೆಸಿದ ಕೇಂದ್ರೀಯ ತನಿಖಾ ಆಯೋಗವು (ಸಿಬಿಐ), ತನ್ನ ವರದಿಯನ್ನು ಇಂದು ಕೇಂದ್ರ ಕ್ರೀಡಾ ಸಚಿವ ಸುಖದೇವ್ ಧಿಂಡ್ಸಾ ಅವರಿಗೆ ಸಲ್ಲಿಸಿತು.

75 ವರ್ಷಗಳ ಹಿಂದೆ

ಮಂಗಳವಾರ, 31-10-1950

- **ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಉದ್ಘಾಟನೆ**

ಮೈಸೂರು, ಅ. 30– ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ಏಳನೇ ಅಧಿವೇಶನದ ಪ್ರಾರಂಭೋತ್ಸವವನ್ನು ಮೈಸೂರಿನ ರಾಜ ಪ್ರಮುಖರಾದ ಜಯಚಾಮರಾಜ ಒಡೆಯರ್ ಬಹದ್ದೂರ್‌ರವರು ನವೆಂಬರ್ 4ನೇ ತಾರೀಖು ಶನಿವಾರ ಬೆಳಿಗ್ಗೆ 10.45 ಗಂಟೆಗೆ ಜಗನ್ಮೋಹನ ಬಂಗಲೆಯಲ್ಲಿ ನೆರವೇರಿಸುತ್ತಾರೆ.

ಕೆ. ಜೀವಣ್ಣರಾಯರು ಅಧ್ಯಕ್ಷತೆ ವಹಿಸುತ್ತಾರೆ. ಆಹ್ವಾನಿತರೆಲ್ಲಾ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಅರ್ಧಗಂಟೆ ಮೊದಲು ಬರಬೇಕೆಂದು ಸ್ವಾಗತ ಸಮಿತಿಯವರು ತಿಳಿಸಿದ್ದಾರೆ.

- **ಭಾರತ ವಾಣಿಜ್ಯದ ಮೇಲೆ ಅಪಮೌಲ್ಯದ ಪರಿಣಾಮ**

ದೆಹಲಿ, ಅ. 30– ಪುನರ್‌ರಚಿತ ರಫ್ತು ಸಲಹಾ ಸಮಿತಿಯ ಪ್ರಥಮ ಅಧಿವೇಶನವು ಇಂದು ಮುಕ್ತಾಯವಾಯಿತು. ಸಭೆಯಲ್ಲಿ ಭಾರತ ರಫ್ತು ನೀತಿಯ ವಿಶಿಷ್ಟ ಅಂಶಗಳನ್ನು ಪರಿಶೀಲಿಸಲಾಯಿತು.

ಚುರುಮುರಿ

ಮೌನ ಸಂದರ್ಶನ!

• ಬಿ.ಎನ್. ಮಲ್ಲೇಶ್

ಇವತ್ತು ಏನಾದರಾಗ್ಲಿ, ಡಿಸಿಎಂ ಡಿಕೆಶಿ ಸಾಹೇಬ್ರ ಮೌನ ಭಂಗ ಮಾಡ್ಲೇಬೇಕು ಎಂದು ಪಣ ತೊಟ್ಟು ಕ್ಯಾಮೆರಾ, ಮೈಕು ಹಿಡ್ಕಂಡು ವಿಧಾನಸೌಧಕ್ಕೆ ಹೋದ ಟಿ.ವಿ. ಪತ್ರಕರ್ತ ತೆಪರೇಸಿ. ಡಿಕೆಶಿ ಸಾಹೇಬ್ರು ಬಂಡೆಯಂತೆ ಕೂತಿದ್ದರು.

'ಸರ್, ನವೆಂಬರ್ ಕ್ರಾಂತಿ ಗ್ಯಾರಂಟಿನಾ?' ತೆಪರೇಸಿ ಕಡ್ಡಿ ಕೆರೆಯೋಕೆ ಮೆಲ್ಲಗೆ ಕಡ್ಡಿಪೆಟಿಗಿ ಹೊರ ತೆಗೆದ.

ಬಂಡೆ ಸಾಹೇಬ್ರು ತುಟಿ ಮೇಲೆ ಬೆರಳಿಟ್ಟು ಸುಮ್ಮನೆ ನಕ್ಕರು.

'ಮಾತಾಡಲ್ವ? ಮೌನ ವ್ರತಾನ? ಅಥ್ವ ಮೌನ ಯುದ್ಧಾನ?' ಎಂದ ತೆಪರೇಸಿ.

ಬಂಡೆ ಸಾಹೇಬ್ರು ಎರಡೂ ಕೈ ಎತ್ತಿ ಮುಗಿದರು.

'ಅಂದ್ರೆ? ದೊಡ್ಡ ನಮಸ್ಕಾರ, ಏನಾದ್ರು ತಿಳ್ಕಾ ಅಂತಾನ? ಈಗ ಮತ್ತೆ ದಲಿತ ಸಿ.ಎಂ. ಡಿಮ್ಯಾಂಡ್ ಶುರುವಾಗಿದೆ?'

ಬಂಡೆ ಸಾಹೇಬ್ರು ಬಲಗೈ ಬೆರಳು ಮೇಲಕ್ಕೆತ್ತಿ ತೋರಿಸಿದರು.

'ಅಂದ್ರೆ ಹೈಕಮಾಂಡ್‌ಗೆ ಬಿಟ್ಟದ್ದು ಅಂತಾನ? ಸಿದ್ರಾಮಣ್ಣ ಸಾಹೇಬ್ರ ಕಡೆ ಬಾಳ ಜನ ಬ್ಯಾಟಿಂಗ್ ಮಾಡ್ತಿದಾರೆ?'

ಬಂಡೆ ಆಕಾಶ ನೋಡಿದರು. ತೆಪರೇಸಿಗೆ ಅಲ್ಲೇನೂ ಕಾಣಿಸಲಿಲ್ಲ. 'ಓ... ದೇವರಿದಾನೆ ಅಂತಾನ? ಅದಿರ್ಲಿ ಈಗ ಎಲ್ಲ ಕಡೆ ಔತಣಕೂಟ ಜಾಸ್ತಿಯಾಗಿದಾವೆ?'

ಆಗಲೂ ಬಂಡೆ ಸಾಹೇಬ್ರು ಏನನ್ನೂ ಮಾತಾಡದೆ ತಮ್ಮ ಮುಂದಿದ್ದ ಕಪ್ ಎತ್ತಿ ನೀರು ಕುಡಿದರು.

'ಓ... ಅವರು ಊಟ ಮಾಡ್ಲಿ, ನಾನು ನೀರು ಕುಡಿಸ್ತೀನಿ ಅಂತ ಅರ್ಥನಾ?'

ಬಂಡೆ ಸಾಹೇಬ್ರು ಹಣೆ ಮುಟ್ಟಿಕೊಂಡರು.

'ಗೊತ್ತಾತು, ಹಣೆಬರಹದಲ್ಲಿ ಇದ್ರೆ ಸಿ.ಎಂ. ಆಗ್ತೀನಿ ಅಂತ. ಹಣೆಬರಹದಲ್ಲಿ ಇಲ್ಲದೇ ಇದ್ರೆ?'

ಬಂಡೆ ಸಾಹೇಬ್ರ ಮುಖ ಕೆಂಪಾಯಿತು. ಸಿಟ್ಟಿನಿಂದ ಬಾಗಿಲ ಕಡೆಗೆ ಕೈ ತೋರಿಸಿದರು.

'ಓ... ಬಾಗಿಲು ಒದ್ದು ಸಿ.ಎಂ. ಸ್ಥಾನ ಕಿತ್ಕೋತೀನಿ ಅಂದ್ರಾ?'

'ಇಲ್ಲ, ಬಾಗಿಲು ಆ ಕಡೆ ಇದೆ, ಎದ್ದು ನಡಿಯಪ್ಪ ಸಾಕು ಅಂದೆ...' ಬಾಯಿ ಬಿಟ್ಟರು ಬಂಡೆ!

ಕೊನೆಗೂ ಡಿಕೆಶಿ ಮೌನ ಭಂಗ ಮಾಡಿದ ಖುಷಿಯಲ್ಲಿ ಪಿಟಿಕ್ಕನ್ನದೆ ಎದ್ದು ಬಂದ ತೆಪರೇಸಿ.

ಸಂಗತ

ಆರ್‌ಎಸ್‌ಎಸ್: ಸುಳ್ಳು ಸೃಷ್ಟಿಸುವ ಬ್ರಹ್ಮ

ಸುಳ್ಳು ಹೇಳುವುದು ಆರ್‌ಎಸ್‌ಎಸ್ ಮನಃಸ್ಥಿತಿ. ಸುಳ್ಳುಗಳ ಮೂಲಕ ಜನರನ್ನು ಯಾಮಾರಿಸುತ್ತದೆ. ಗೋಡ್ಸೆ ಆತ್ಮಕಥೆಯಲ್ಲಿ ಆರ್‌ಎಸ್‌ಎಸ್ ನೈಜ ಮನಃಸ್ಥಿತಿ ಇದೆ.

• ಕಾಶ್ಯಪ ಪರ್ಣಕುಟಿ

ಸಾಹಿತಿ ದೇವನೂರ ಮಹಾದೇವ ಅವರಿಗೆ ಪ್ರತಿಕ್ರಿಯಿಸಲು ಹೋಗಿ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರು ಇನ್ನಷ್ಟು ಸುಳ್ಳುಗಳನ್ನು ಹೇಳಿದ್ದಾರೆ (ಪ್ರ.ವಾ., ಅ. 28). ಆರ್‌ಎಸ್‌ಎಸ್ ಸುಳ್ಳನ್ನು ಸೃಷ್ಟಿಸುವ ಬ್ರಹ್ಮವೇ ಆಗಿದೆ ಎನ್ನುವುದನ್ನು ನನ್ನ ಅನುಭವದ ಹಿನ್ನೆಲೆಯಲ್ಲಿ ವಿವರಿಸುತ್ತೇನೆ.

ಇಪ್ಪತ್ತೈದು ವರ್ಷಗಳ ಹಿಂದೆ ನಾನು ಶಿರಸಿಯಲ್ಲಿದ್ದೆ. ಆರ್‌ಎಸ್‌ಎಸ್‌ನ ಬೌದ್ಧಿಕ ಪ್ರಮುಖ ಭಾಷಣಕಾರ ಉಪೇಂದ್ರ ಶೆಣೈ ಬಂದಿದ್ದರು. ಅವರು, ಸುಳ್ಳನ್ನು ಸುಂದರವಾಗಿ ಹೇಳಿ ಜನರನ್ನು ನಂಬಿಸಬಲ್ಲ ವ್ಯಕ್ತಿ. ಅವರ ಭಾಷಣ ಸೃಷ್ಟಿಯ ಆರಂಭದಿಂದ ತೊಡಗಿ ವೇದಕಾಲಗಳನ್ನೆಲ್ಲ ವಿವರಿಸಿದಾಗ, ಅಪ್ರತಿಮವಾಗಿ ಮಾತನಾಡುತ್ತಾರೆಂದು ಸಭಿಕರು ಭ್ರಮಾಧೀನರಾದರು. ಸುಳ್ಳನ್ನು ಕನಿಷ್ಠ ನಾಚಿಕೆಯೂ ಇಲ್ಲದೆ ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುವ ಮನಸ್ಸು ಅವರದಾಗಿತ್ತು. 1678ನೇ ಇಸವಿ ಫೆಬ್ರುವರಿ 6ರಂದು ಏನಾಯಿತು ಎಂದರೆ... ಹೀಗೆ ಹೇಳಿದರೆ ಪ್ರಶ್ನಿಸುವವರು ಕಡಿಮೆ; ಕರಾರುವಕ್ಕಾಗಿ ಮಾತನಾಡುತ್ತಾರೆಂದು ಹೊಗಳುವವರೇ ಹೆಚ್ಚು. ಹೀಗೆ ಧೈರ್ಯದಿಂದ ಸುಳ್ಳು ಹೇಳುವುದೇ ಆರ್‌ಎಸ್‌ಎಸ್‌ನವರ ಪ್ರಕೃತಿ.

ಉಪೇಂದ್ರ ಶೆಣೈ ಅವರು ತಮ್ಮ ಮಾತುಗಳಲ್ಲಿ 'ಹಿಮಾಲಯಮಾರಭ್ಯ ಯಾವದಿಂದು ಸರೋವರಂ./ ತಂ ದೇವ ನಿರ್ಮಿತ ದೇಶವು ಹಿಂದುಸ್ತಾನಮಭಿಜಾಯತೆ' (ಹಿಮಾಲಯದಿಂದಾರಂಭಿಸಿ ಕನ್ಯಾಕುಮಾರಿವರೆಗಿನ ದೇಶವನ್ನು ದೇವರು ಸೃಷ್ಟಿ ಮಾಡಿದ್ದು, ಅದು ಹಿಂದೂಸ್ತಾನ ಎಂದು ಹೆಸರಾಗಿದೆ) ಎನ್ನುವ ಶ್ಲೋಕವನ್ನು ಹೇಳಿ, ಎರಡೂವರೆ ಸಾವಿರ ವರ್ಷಗಳ ಹಿಂದೆ 'ಬಾರ್ಹಸ್ಪತ್ಯ' ಎಂಬ ಗ್ರಂಥದಲ್ಲಿ ಈ ಶ್ಲೋಕ ಇದೆ ಎಂದರು. ತಕ್ಷಣ ನಾನು, 'ಆ ಗ್ರಂಥ ಎಲ್ಲಿದೆ? ನನಗೆ ಬೇಕು' ಎಂದೆ. ರಸಭಂಗವಾದಂತೆ ಇಡೀ ಸಭೆ ನನ್ನನ್ನು ಕೆಕ್ಕರಿಸಿ ನೋಡತೊಡಗಿತು. ಆಗ ವೇದಿಕೆಯ ಮೇಲಿದ್ದವರೊಬ್ಬರನ್ನು ತೋರಿಸಿ, 'ಅವರು ನಿಮಗೆ ಅದೆಲ್ಲವನ್ನು ವಿವರಿಸುತ್ತಾರೆ, ನಾನು ಭಾಷಣ ಮುಂದುವರಿಸುತ್ತೇನೆ' ಎಂದಾಗ, ಸರಿ ಎಂದು ಒಪ್ಪಿಕೊಂಡೆ.

ನಾಲ್ಕೈದು ದಿನಗಳ ಮೇಲೆ ಆ ನಾಯಕನಿಗೆ ದೂರವಾಣಿ ಕರೆ ಮಾಡಿ, 'ಬಾರ್ಹಸ್ಪತ್ಯ ಗ್ರಂಥ ಎಲ್ಲಿದೆ ತಿಳಿಸಿ' ಎಂದೆ. ನಾಲ್ಕೈದು ದಿನಗಳಲ್ಲಿ ತಿಳಿಸುತ್ತೇನೆ ಎಂದರು. ಮತ್ತೆ ಫೋನಾಯಿಸಿದೆ. 'ಆ ಗ್ರಂಥ ಮೈಸೂರಿನಲ್ಲಿದೆ. ಸೋಂದಾ ಶಾಸ್ತ್ರಿಗಳು ತಾನು ನೋಡಿದ್ದೇನೆ ಎಂದಿದ್ದಾರೆ' ಎಂದರು. ನನಗೆ ಸಿಟ್ಟು ನೆತ್ತಿಗೇರಿತು. 'ಬಾರ್ಹಸ್ಪತ್ಯ ಹೆಸರಿನ ಗ್ರಂಥ ಇರಲು ಸಾಧ್ಯವೇ ಇಲ್ಲ. ಅದು ಅಪ್ಪಟ ಸುಳ್ಳು. ಸಾವರ್ಕರ್ ಎನ್ನುವವರೊಬ್ಬರು ಇದ್ದರು, ಗೊತ್ತೇ ನಿಮಗೆ' ಎಂದು ಕೇಳಿದೆ. 'ಗೊತ್ತು, ಅವರು ನಮ್ಮ ಗುರು ಸಮಾನರು' ಎಂದರು. 'ಅವರು ಬರೆದ 'ಆತ್ಮಾಹುತಿ' ಪುಸ್ತಕ ಗೊತ್ತೇ' ಎಂದು ಕೇಳಿದೆ. 'ಅದು ನನ್ನಲ್ಲಿದೆ' ಎಂದರು. 'ಪುಸ್ತಕ ಇದ್ದರಾಗಲಿಲ್ಲ, ಅದನ್ನು ಓದಿ ಮಸ್ತಕಕ್ಕೆ ಏರಿಸಿಕೊಳ್ಳಬೇಕು. ಆ ಪುಸ್ತಕದಲ್ಲಿ ಈ ಶ್ಲೋಕವನ್ನು ನಾನು ಈ ಅರ್ಥದಲ್ಲಿ ರಚಿಸಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂತಿರುವಾಗ ಈ ಶ್ಲೋಕ ಎರಡೂವರೆ ಸಾವಿರ ವರ್ಷಗಳ ಹಿಂದೆ ರಚಿಸಿದ್ದಾದರೆ, ಸಾವರ್ಕರರು ಈ ಶ್ಲೋಕವನ್ನು ಕದ್ದಿದ್ದಾರೆ ಎನ್ನಬಹುದಲ್ಲವೇ? ಇಂಥ ಅಪ್ಪಟ ಸುಳ್ಳುಗಳನ್ನು ಹೇಳುತ್ತಲೇ ಜನರನ್ನು ಯಾಮಾರಿಸುತ್ತಿದ್ದೀರಿ' ಎಂದು ಫೋನಿಟ್ಟೆ.

ಗಾಂಧೀಜಿಯವರನ್ನು ಕೊಂದ ನಾಥೂರಾಮ್ ಗೋಡ್ಸೆ ತನ್ನ ಆತ್ಮಕಥೆಯಲ್ಲಿ (ಗಾಂಧಿ ಹತ್ಯೆ ಮತ್ತು ನಾನು) ಸಂಘದವರ ನೈಜ ಮನಃಸ್ಥಿತಿಯನ್ನು ತೆರೆದಿಟ್ಟಿದ್ದಾನೆ. ಮುಸ್ಲಿಮನಂತೆ ವೇಷ ಧರಿಸಿ ಒಂದು ಗುಂಡನ್ನು ಗಾಂಧೀಜಿಯವರಿಗೆ ಹೊಡೆದು, ಮತ್ತೊಂದು ಗುಂಡನ್ನು ತನ್ನ ಮುಖಕ್ಕೆ ಹೊಡೆದುಕೊಳ್ಳಬೇಕು ಎಂದುಕೊಂಡಿದ್ದನಂತೆ. ಆಗ ಗಾಂಧೀಜಿಯವರನ್ನು ಕೊಂದವರು ಮುಸ್ಲಿಂ ಎಂದು, ಮುಸ್ಲಿಮರನ್ನು ಹಿಂದೂಗಳು ಕಗ್ಗೊಲೆ ಮಾಡುತ್ತಾರೆಂದು ಯೋಚಿಸಿದ್ದನಂತೆ. ಕೊನೆಗೆ ಹಾಗೆ ಮಾಡಲಾಗದೆ, ಗಾಂಧೀಜಿಯವರಿಗೆ ಗುಂಡು ಹಾರಿಸಿದ್ದಾನೆ. ಇದು ಅವನೇ ಹೇಳಿಕೊಂಡಿರುವ ಸತ್ಯ.

ಆರ್‌ಎಸ್‌ಎಸ್ ಎಲ್ಲ ಕ್ಷೇತ್ರಗಳಲ್ಲೂ ತನ್ನ ಉಪಸಂಘಗಳನ್ನು ರಚಿಸಿಕೊಂಡಿದೆ. ಸಾಹಿತ್ಯಕ್ಕೆ ಅಖಿಲ ಭಾರತ ಸಾಹಿತ್ಯ ಪರಿಷತ್, ರಾಷ್ಟ್ರೋತ್ಥಾನ ಸಾಹಿತ್ಯ ಬಳಗ, ಶಿಕ್ಷಣ ಕ್ಷೇತ್ರಕ್ಕೆ ಹಿಂದೂ ಸೇವಾ ಪ್ರತಿಷ್ಠಾನ, ಸಂಘರ್ಷಕ್ಕೆ ಬಜರಂಗದಳ, ಹಿಂದೂ ಜಾಗರಣಾ ವೇದಿಕೆ ಎಂದೆಲ್ಲ ನೂರಾರು ಉಪಸಂಘಗಳಿವೆ. ಅವೆಲ್ಲವನ್ನೂ ಸೇರಿಸಿ 'ಸಂಘ ಪರಿವಾರ' ಎನ್ನಲಾಗುತ್ತದೆ. ಈ ಪರಿವಾರದವರು ಮುಸ್ಲಿಮರ ಮೇಲೆ ಈಗ ದ್ವೇಷ ಕಾರುತ್ತಾರೆ. ಒಂದೊಮ್ಮೆ ಮುಸ್ಲಿಮರು ದೇಶದಿಂದ ಹೊರಗೆ ಹೋದರೆ ಆ ದ್ವೇಷ ಕ್ರಿಶ್ಚಿಯನ್ನರ ಮೇಲೆ ತಿರುಗುತ್ತದೆ. ಅವರನ್ನು ದೇಶದಿಂದ ಹೊರಹಾಕಿದರೆ, ಸಿಖ್ಖರ ಮೇಲೆ, ಬೌದ್ಧರ ಮೇಲೆ ಎರಗುತ್ತದೆ. ಹೀಗೆ ಆ ದುಷ್ಟ ಮನಃಸ್ಥಿತಿ ನಾಶವಾಗುವುದಿಲ್ಲ.

ಸಂಘದಲ್ಲಿ ನಲವತ್ತು ವರ್ಷ ದುಡಿದು ಬೌದ್ಧಿಕ ಪ್ರಮುಖರಾಗಿದ್ದ ಹನುಮೇಗೌಡರು ಹೊರ ಬಂದು ಈಗ ಪ್ರಚುರಪಡಿಸುತ್ತಿರುವ ವಿಚಾರಗಳು ನನ್ನ ಮಾತನ್ನು ಪುಷ್ಟೀಕರಿಸುತ್ತವೆ. ಭ್ರಷ್ಟಾಚಾರ, ಲೈಂಗಿಕ ದೌರ್ಜನ್ಯ, ಕಳ್ಳತನದಲ್ಲಿ ಆಸ್ತಿಯನ್ನು ಹೆಚ್ಚಿಸುವುದು ಎಲ್ಲವೂ ಸಂಘದ ನಾಯಕರಲ್ಲಿದೆ ಎಂಬುದನ್ನು ಅವರು ನಿಖರವಾಗಿ ಹೇಳುತ್ತಿದ್ದಾರೆ. ಸಂಘದವರ ದುಷ್ಟ ಮನಃಸ್ಥಿತಿಯ ಬಗ್ಗೆ ಸಾಕಷ್ಟು ಸಾಕ್ಷಿಗಳಿದ್ದರೂ, ಅವುಗಳನ್ನು ಸುಳ್ಳುಗಳ ಮೂಲಕ ಮರೆಮಾಚುವ ಪ್ರಯತ್ನ ನಡೆಯುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರತಿಷ್ಠಿತ ಚೆಸ್ ವಿಶ್ವಕಪ್ ನವೆಂಬರ್ ಒಂದರಿಂದ ಗೋವಾದಲ್ಲಿ ನಡೆಯಲಿದೆ. ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಬಲ ಶಕ್ತಿಯಾಗಿ ಉದಯಿಸಿರುವ ಭಾರತದ ಆಟಗಾರರಿಗೆ ಈ ಟೂರ್ನಿ ಮಹತ್ವದ್ದು. ಇಲ್ಲಿ ಮೊದಲ ಮೂರರಲ್ಲಿ ಸ್ಥಾನ ಪಡೆದರೆ, ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಅವಕಾಶ ಪಡೆಯಬಹುದು. ವಿಶ್ವ ಚಾಂಪಿಯನ್‌ಷಿಪ್‌ಗೆ ಸವಾಲು ಹಾಕುವ ಆಟಗಾರರನ್ನು ನಿರ್ಧರಿಸುವ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲು ಇಲ್ಲಿ ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ

ಭಾರತದ ಆಟಗಾರನಿಗೆ ಒಲಿಯುವುದೇ ಪಟ್ಟ?

ವಿಶ್ವಕಪ್ ಚೆಸ್ ಮುಕುಟಕ್ಕೆ ಪೈಪೋಟಿ

• ನಾಗೇಶ್ ಶೆಣೈ ಪಿ.

23 ವರ್ಷಗಳ ಬಳಿಕ ಭಾರತವು ವಿಶ್ವಕಪ್ ಚೆಸ್‌ನ ಆತಿಥ್ಯ ವಹಿಸುತ್ತಿದೆ. 'ಭಾರತವು ಪ್ರಾಚೀನ ಚೆಸ್‌ನ ತವರಷ್ಟೇ ಅಲ್ಲ; ಆಧುನಿಕ ಚೆಸ್‌ನ ಜಾಗತಿಕ ಪವರ್‌ಹೌಸ್. ಈ ಕ್ರೀಡೆಯಲ್ಲಿ ಭಾರತವು ಜಾಗತಿಕ ಚೆಸ್ ಹಂದರದ ಕೇಂದ್ರಸ್ತಂಭವಾಗಿರುವುದರಿಂದ ಈ ವಿಶ್ವಕಪ್ ಇಲ್ಲೇ ನಡೆಯುತ್ತಿದೆ' ಎಂದು ವಿಶ್ವ ಚೆಸ್ ಫೆಡರೇಷನ್‌ನ (ಫಿಡೆ) ಅಧ್ಯಕ್ಷ ಅರ್ಕಾಡಿ ಡ್ವೊರಕೊವಿಚ್ ಅವರು ಫಿಡೆ ವೆಬ್‌ಸೈಟ್‌ನಲ್ಲಿ ಬಣ್ಣಿಸಿದ್ದಾರೆ.

ಕ್ರಿಕೆಟ್, ಹಾಕಿ, ಫುಟ್‌ಬಾಲ್ ಮೊದಲಾದ ಕ್ರೀಡೆಗಳಲ್ಲಿ ವಿಶ್ವಕಪ್ ಮಹೋನ್ನತವಾದ ಟೂರ್ನಿ. ಚೆಸ್‌ನಲ್ಲಿ ಮಾತ್ರ, ವಿಶ್ವ ಚಾಂಪಿಯನ್‌ಷಿಪ್ ಮತ್ತು ಕ್ಯಾಂಡಿಡೇಟ್ಸ್ ಟೂರ್ನಿಗಳ ನಂತರದ ಸ್ಥಾನವನ್ನು ವಿಶ್ವಕಪ್ ಪಡೆದಿದೆ. ಆದರೆ ಇದರ ಮಹತ್ವ ಕಡಿಮೆಯೇನಲ್ಲ. ಏಕೆಂದರೆ ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯುತ್ತಾರೆ.

2002ರಲ್ಲಿ ಹೈದರಾಬಾದ್ ವಿಶ್ವಕಪ್‌ನ ಆತಿಥ್ಯ ವಹಿಸಿದ್ದಾಗ ಭಾರತ ಚೆಸ್‌ನಲ್ಲಿ ದೊಡ್ಡ ಶಕ್ತಿಯಾಗಿರಲಿಲ್ಲ. ಅದರ ಮಾದರಿಯೂ ಬೇರೆಯಿತ್ತು. ವಿಶ್ವನಾಥನ್ ಆನಂದ್ ಅವರಷ್ಟೇ ದಿಗ್ಗಜರಾಗಿ ಬೆಳೆದಿದ್ದರು. ಈಗ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ಡ್ವೊರಕೊವಿಚ್ ಅವರೇ ಉಲ್ಲೇಖಿಸಿರುವಂತೆ ಭಾರತ ಈಗ ಚೆಸ್‌ನ ದೈತ್ಯಶಕ್ತಿ.

ಭಾರತದ ಗುಕೇಶ್ ದೊಮ್ಮರಾಜು ಹಾಲಿ ವಿಶ್ವ ಚಾಂಪಿಯನ್. ಭಾರತದ ತಂಡಗಳು, ಹೋದ ವರ್ಷದ ಸೆಪ್ಟೆಂಬರ್‌ನಲ್ಲಿ ಹಂಗೆರಿಯ ಬುಡಾಪೆಸ್ಟ್‌ನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಓಪನ್ ಮತ್ತು ಮಹಿಳಾ ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡಿವೆ. ಜುಲೈನಲ್ಲಷ್ಟೇ ಜಾರ್ಜಿಯಾದ ಬಟುಮಿಯಲ್ಲಿ ನಡೆದ ಮಹಿಳಾ ವಿಶ್ವಕಪ್‌ನಲ್ಲಿ 19 ವರ್ಷ ವಯಸ್ಸಿನ ಪ್ರತಿಭಾನ್ವಿತೆ ದಿವ್ಯಾ ದೇಶಮುಖ್ ಚಾಂಪಿಯನ್ ಆಗಿದ್ದರು. ಫೈನಲ್‌ನಲ್ಲಿ ಅವರಿಗೆ ಸೋತ ಕೋನೇರು ಹಂಪಿ ಸಹ ಭಾರತದ ಅನುಭವಿಯೇ. ಇತ್ತೀಚೆಗಷ್ಟೇ ವೈಶಾಲಿ ರಮೇಶಬಾಬು ಅವರು ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ ಟೂರ್ನಿಯನ್ನು ಸತತ ಎರಡನೇ ಬಾರಿಗೆ ಜಯಿಸಿ ದಾಖಲೆ ಬರೆದಿದ್ದಾರೆ.

ಭಾರತಕ್ಕೆ ಮಹತ್ವದ್ದು

ದಿವ್ಯಾ ದೇಶಮುಖ್, ಕೋನೇರು ಹಂಪಿ, ವೈಶಾಲಿ ಆರ್.– ಈ ಮೂವರೂ 2026ರ ಮಹಿಳಾ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಆದರೆ ಕ್ಯಾಂಡಿಡೇಟ್ಸ್ ಓಪನ್ ವಿಭಾಗದಲ್ಲಿ ಭಾರತದ ಆಟಗಾರರಲ್ಲಿ ಪ್ರಜ್ಞಾನಂದ ಅವರಿಗಷ್ಟೇ ಅವಕಾಶ ದಟ್ಟವಾಗಿದೆ. ಉಳಿದವರಿಗೆ ಸ್ಥಾನ ಪಡೆಯಲು ಗೋವಾದ ವಿಶ್ವಕಪ್ ಸುವರ್ಣಾವಕಾಶ ಒದಗಿಸಿದೆ. ಅರ್ಜುನ್ ಇರಿಗೇಶಿ ಜೊತೆ ವಿದಿತ್ ಎಸ್.ಗುಜರಾತಿ, ನಿಹಾಲ್ ಸರಿನ್, ರೋನಕ್ ಸಾಧ್ವಾನಿ, ಪಾ.ಇನಿಯನ್ ಸೇರಿ ಭಾರತದ 24 ಮಂದಿ ಕಣದಲ್ಲಿದ್ದಾರೆ. ದಿವ್ಯಾ ದೇಶಮುಖ್ ಈ ಟೂರ್ನಿಯಲ್ಲಿ ವೈಲ್ಡ್ ಕಾರ್ಡ್ ಪ್ರವೇಶ ಪಡೆದು ಆಡುತ್ತಿದ್ದಾರೆ. 206 ಮಂದಿಯ ಕಣದಲ್ಲಿ ಅವರೊಬ್ಬರೇ ಮಹಿಳೆ. ಚೀನಾದ ತಾರೆಯರಾದ ಜು ವೆಂಜುನ್ (ಹಾಲಿ ಮಹಿಳಾ ವಿಶ್ವ ಚಾಂಪಿಯನ್) ಮತ್ತು ಹೌ ಇಫಾನ್ ಅವರನ್ನು ಆಹ್ವಾನಿಸಿದರೂ ಅವರು ಆಡಲು ನಿರಾಕರಿಸಿದ್ದರಿಂದ ದಿವ್ಯಾಗೆ ಅವಕಾಶವಾಗಿದೆ.

ಭಾರತದ ಅರ್ಜುನ್ ಇರಿಗೇಶಿ ಅವರಿಗೆ ಈ ಟೂರ್ನಿ ಮಹತ್ವದ್ದು. ಭಾರತದ ಅಗ್ರಮಾನ್ಯ ಹಾಗೂ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಅವರಿಗೆ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯಲು ಈ ಟೂರ್ನಿ ಬಹುಶಃ ಕೊನೆಯ ಅವಕಾಶ. ಈ ಹಿಂದಿನ (ಬಾಕು) ವಿಶ್ವಕಪ್‌ನಲ್ಲಿ ತೆಲಂಗಾಣದ ವರಂಗಲ್‌ನ ಗ್ರ್ಯಾಂಡ್‌ಮಾಸ್ಟರ್ ತಮ್ಮ ಸ್ನೇಹಿತ ಪ್ರಜ್ಞಾನಂದ ಅವರಿಗೆ ಕ್ವಾರ್ಟರ್‌ಫೈನಲ್‌ನಲ್ಲಿ ಮಣಿದಿದ್ದರು.

ವಿಶ್ವ ಚಾಂಪಿಯನ್ ಆಟಗಾರನಿಗೆ ಸವಾಲು ಹಾಕುವ ಆಟಗಾರರನ್ನು ನಿರ್ಧರಿಸಲು ಕ್ಯಾಂಡಿಡೇಟ್ಸ್ ಟೂರ್ನಿ ನಡೆಯುತ್ತದೆ. ಇದರಲ್ಲಿ ಎಂಟು ಮಂದಿಗಷ್ಟೇ ಆಡುವ ಅವಕಾಶ ಇರುತ್ತದೆ. ಫ್ಯಾಬಿಯಾನೊ ಕರುವಾನ (ಅಮೆರಿಕ) 2024ರ ಸರ್ಕೀಟ್ ಪಾಯಿಂಟ್ ಮೂಲಕ ಈಗಾಗಲೇ ಅರ್ಹತೆ ಪಡೆದಿದ್ದಾರೆ. ನೆದರ್ಲೆಂಡ್ಸ್‌ನ ಅನಿಶ್ ಗಿರಿ ಮತ್ತು ಜರ್ಮನಿಯ ಮಥಾಯಸ್ ಬ್ಲೂಬಮ್ ಅವರೂ 2025ರ ಫಿಡೆ ಗ್ರ್ಯಾಂಡ್‌ಸ್ವಿಸ್ ಟೂರ್ನಿಯಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದು ಅರ್ಹತೆ ಗಳಿಸಿದ್ದಾರೆ. 2025ರ ಫಿಡೆ ಸರ್ಕೀಟ್‌ನಲ್ಲಿ ಅತ್ಯಧಿಕ ಪಾಯಿಂಟ್ಸ್ ಹೊಂದಿರುವ ಪ್ರಜ್ಞಾನಂದ ಅವರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುವ ಸಾಧ್ಯತೆ ಉಜ್ವಲವಾಗಿದೆ. ಅಮೆರಿಕದ ಹಿಕಾರು ನಕಾಮುರಾ ರೇಟಿಂಗ್ ಆಧಾರದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ದಟ್ಟವಾಗಿದೆ. ಉಳಿದ ಮೂರು ಸ್ಥಾನಗಳಿಗೆ ಪೈಪೋಟಿಯಿದ್ದು, ಅವುಗಳು ಈ ವಿಶ್ವಕಪ್‌ನಲ್ಲಿ ನಿರ್ಧಾರವಾಗಲಿವೆ.

ಗೆಲುವಿನ ಅವಕಾಶ ಯಾರಿಗೆ?

ಭಾರತದ ಆಟಗಾರರು ಮೊದಲ ಮೂರು ಶ್ರೇಯಾಂಕ ಪಡೆದಿದ್ದಾರೆ. ವಿಶ್ವ ಚಾಂಪಿಯನ್ ಆಗಿ ಗುಕೇಶ್ ಅಗ್ರಶ್ರೇಯಾಂಕ, ಅರ್ಜುನ್ ಇರಿಗೇಶಿ ಎರಡನೇ ಶ್ರೇಯಾಂಕ ಪಡೆದಿದ್ದಾರೆ. ಪ್ರಜ್ಞಾನಂದ, ನೆದರ್ಲೆಂಡ್ಸ್‌ನ ಅನಿಶ್ ಗಿರಿ, ಅಮೆರಿಕದ ವೆಸ್ಲಿ ಸೊ, ಜರ್ಮನಿಯ ವಿನ್ಸೆಂಟ್ ಕೀಮರ್, ಚೀನಾದ ವೀ ಯಿ, ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್, ಅಜರ್‌ಬೈಜಾನ್‌ನ ಶಕ್ರಿಯಾರ್ ಮೆಮದ್ಯರೋವ್ ಮೂರರಿಂದ ಹತ್ತರವರೆಗಿನ ಶ್ರೇಯಾಂಕ ಗಳಿಸಿದ್ದಾರೆ. ಆದರೆ ಪೈಪೋಟಿ ಗುಕೇಶ್, ಅರ್ಜುನ್, ಪ್ರಜ್ಞಾನಂದ, ವೆಸ್ಲಿ ಸೊ, ಅನಿಶ್ ಗಿರಿ, ವಿನ್ಸೆಂಟ್ ಕೀಮರ್ ನಡುವೆಯೇ ನಡೆಯಬಹುದೆನ್ನುವ ವಿಶ್ಲೇಷಣೆಗಳಿವೆ.

ಯುರೋಪಿಯನ್ ಕ್ಲಬ್ ಕಪ್‌ನಲ್ಲಿ ಗುಕೇಶ್ 1927ರ ಲೈವ್ ರೇಟಿಂಗ್ ಸಾಧನೆ ತೋರಿ ಮೊದಲ ಬೋರ್ಡ್ ಚಿನ್ನದ ಪದಕ ಪಡೆದಿದ್ದು, ಇಲ್ಲಿ ವಿಶ್ವಾಸದಿಂದ ಸಜ್ಜಾಗಿದ್ದಾರೆ. ಈ ವರ್ಷ ಕೆಲವು ಫಿಡೆ ಟೂರ್ನಿಗಳಲ್ಲಿ ಗೆದ್ದಿರುವ ಪ್ರಜ್ಞಾನಂದ ಅವರೂ ತವರಿನಲ್ಲಿ ಉತ್ತಮ ಸಾಧನೆಯ ಆಶಾವಾದ ಹೊಂದಿದ್ದಾರೆ. ಸಮರ್‌ಖಂಡದಲ್ಲಿ ಹೋದ ತಿಂಗಳು ಫಿಡೆ ಗ್ರ್ಯಾಂಡ್‌ಸ್ವಿಸ್ ಟೂರ್ನಿ ಗೆದ್ದಿರುವ ಅನಿಶ್ ಗಿರಿ ಅವರೂ ಆತ್ಮವಿಶ್ವಾಸದಲ್ಲಿದ್ದಾರೆ. ಚೆನ್ನೈ ಓಪನ್ ಗೆದ್ದಿರುವ ಜರ್ಮನಿಯ ಅಗ್ರ ಆಟಗಾರ ಹ್ಯಾನ್ಸ್ ನೀಮನ್ ಅವರನ್ನೂ ನಿರ್ಲಕ್ಷಿಸುವಂತಿಲ್ಲ.

ಆಡದಿರುವ ಪ್ರಮುಖರು...

2023ರ ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿದ್ದ ವಿಶ್ವದ ಅಗ್ರ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ದೀರ್ಘ ಮಾದರಿಯ ಆಟದತ್ತ ಒಲವಿಲ್ಲದ ಕಾರಣ ಇಲ್ಲಿ ಆಡುತ್ತಿಲ್ಲ. ಅಮೆರಿಕದ ಫ್ಯಾಬಿಯಾನೊ ಕರುವಾನಾ, ಹಿಕಾರು ನಕಾಮುರ, ಫ್ರಾನ್ಸ್‌ನ ಅಲಿರೇಜಾ ಫಿರೋಜ್, ಚೀನಾದ ಡಿಂಗ್ ಲಿರೆನ್, ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡ ಸಹ ಗೋವಾದ ಟೂರ್ನಿಯಲ್ಲಿ ಭಾಗವಹಿಸುತ್ತಿಲ್ಲ.

ಹೀಗಿರುತ್ತದೆ ವಿಶ್ವಕಪ್ ಮಾದರಿ..

25 ವರ್ಷಗಳ ಹಿಂದೆ ಮೊದಲ ವಿಶ್ವಕಪ್ ನಡೆಯಿತು. ಇದು 13ನೇ ವಿಶ್ವಕಪ್. ಉತ್ತರ ಗೋವಾದ ವಿಲಾಸಿ 'ರೆಸಾರ್ಟ್ ರಿಯೊ'ದಲ್ಲಿ ನಡೆಯಲಿರುವ ಈ ಟೂರ್ನಿಯಲ್ಲಿ ಸುಮಾರು 80 ರಾಷ್ಟ್ರಗಳ 206 ಆಟಗಾರರು ಪಾಲ್ಗೊಳ್ಳುತ್ತಾರೆ. ನವೆಂಬರ್ 1ರಂದು ಮೊದಲ ಸುತ್ತು ಆರಂಭ. ನವೆಂಬರ್ 27ರಂದು ಮುಕ್ತಾಯಗೊಳ್ಳಲಿದೆ.

ಈ ಟೂರ್ನಿಯು ನಾಕೌಟ್ ಮಾದರಿಯಲ್ಲಿ ನಡೆಯುತ್ತದೆ. ಪ್ರತಿಯೊಂದು ಪಂದ್ಯ ಎರಡು ದಿನ ನಡೆಯುತ್ತದೆ. ಮೊದಲ ಎರಡು ದಿನ ಕ್ಲಾಸಿಕಲ್ ಮಾದರಿಯ ಆಟಗಳು ನಡೆಯುತ್ತವೆ. ಎರಡು ಆಟಗಳ ನಂತರವೂ ಸ್ಕೋರ್ ಸಮನಾಗಿದ್ದಲ್ಲಿ (1-1), ಆಟಗಾರರು ಮೂರನೇ ದಿನ ಬಂದು ಕಾಲಮಿತಿಯ ವೇಗದ ಆಟಗಳನ್ನು ಆಡಬೇಕಾಗುತ್ತದೆ. ಇದರಲ್ಲಿ ವಿಜೇತರ ನಿರ್ಧಾರವಾಗುತ್ತದೆ.

ಮೊದಲ ಸುತ್ತಿನಲ್ಲಿ ಅಗ್ರ 50ರಲ್ಲಿರುವ ಆಟಗಾರರಿಗೆ ಬೈ ನೀಡಲಾಗಿದೆ.

ಮೊದಲ ಎರಡು ವಿಶ್ವಕಪ್‌ಗೂ, ವಿಶ್ವ ಚಾಂಪಿಯನ್‌ಷಿಪ್‌ಗೂ ಸಂಬಂಧವಿರಲಿಲ್ಲ. ತಲಾ 24 ಆಟಗಾರರು ಕಣದಲ್ಲಿದ್ದ ಆ ಎರಡೂ ವಿಶ್ವಕಪ್‌ಗಳಲ್ಲಿ (2000 ಮತ್ತು 2002) ಭಾರತದ ವಿಶ್ವನಾಥನ್ ಆನಂದ್ ಚಾಂಪಿಯನ್ ಆಗಿದ್ದರು. 2005 ರಿಂದ 2019ರವರೆಗಿನ ಅವಧಿಯಲ್ಲಿ ನಡೆದ ಎಂಟು ವಿಶ್ವಕಪ್‌ಗಳಲ್ಲಿ ತಲಾ 128 ಆಟಗಾರರು ಭಾಗವಹಿಸಿದ್ದರು. 2021 ರಿಂದ 206 ಆಟಗಾರರು ಭಾಗವಹಿಸುತ್ತಿದ್ದಾರೆ.

2005 ರಿಂದ 2021ರವರೆಗೆ ನಡೆದ ಟೂರ್ನಿಗಳಲ್ಲಿ ಭಾರತದ ಆಟಗಾರರು ಮೊದಲ ನಾಲ್ಕರಲ್ಲಿ ಸ್ಥಾನ ಪಡೆದಿರಲಿಲ್ಲ ಎಂಬುದು ಗಮನಾರ್ಹ. ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ 2023ರ ವಿಶ್ವಕಪ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮೊದಲ ಬಾರಿ ಚಾಂಪಿಯನ್ ಆಗಿದ್ದರು. ಅವರೆದುರು ಫೈನಲ್‌ನಲ್ಲಿ ಪ್ರಬಲ ಹೋರಾಟ ನೀಡಿದವರು ಭಾರತದ ಪ್ರಜ್ಞಾನಂದ. ಈ ಬಾರಿಯ ಟೂರ್ನಿಯು ಸುಮಾರು ₹17.50 ಕೋಟಿ ಬಹುಮಾನ ಮೊತ್ತ ಹೊಂದಿದೆ. ಇದರಲ್ಲಿ ಸುಮಾರು ₹1.6 ಕೋಟಿ ವಿಜೇತರ ಪಾಲಾಗಲಿದೆ. ₹75 ಲಕ್ಷ ರನ್ನರ್ ಅಪ್ ಆಟಗಾರನ ಜೇಬಿಗೆ ಸೇರಲಿದೆ.

ರಾಷ್ಟ್ರೀಯ

ಖುದ್ದು ಹಾಜರಿಯಿಂದ ವಿನಾಯಿತಿ ಅರ್ಜಿ ತಿರಸ್ಕರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ವಿಧಾನಸಭೆ ಚುನಾವಣೆ ಕಾರಣದಿಂದಾಗಿ, ಬೀದಿ ನಾಯಿಗಳ ಹಾವಳಿ ಕುರಿತ ಪ್ರಕರಣದ ವಿಚಾರಣೆಗೆ ಖುದ್ದು ಹಾಜರಾತಿಯಿಂದ ತಮಗೆ ವಿನಾಯಿತಿ ನೀಡುವಂತೆ ಕೋರಿ ಬಿಹಾರ ಮುಖ್ಯ ಕಾರ್ಯದರ್ಶಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ತಿರಸ್ಕರಿಸಿದೆ.

'ಬಿಹಾರ ವಿಧಾನಸಭೆ ಚುನಾವಣೆ ಕುರಿತಂತೆ ಚುನಾವಣಾ ಆಯೋಗ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಿದೆ. ಹೀಗಾಗಿ ಚಿಂತಿಸುವ ಅಗತ್ಯ ಇಲ್ಲ. ಮುಖ್ಯ ಕಾರ್ಯದರ್ಶಿ ವಿಚಾರಣೆಗೆ ಹಾಜರಾಗಲಿ' ಎಂದು ಬಿಹಾರ ಸರ್ಕಾರ ಪರ ಹಾಜರಿದ್ದ ವಕೀಲರನ್ನು ಉದ್ದೇಶಿಸಿ ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇದ್ದ ನ್ಯಾಯಪೀಠ ಮೇಲ್ಮನವಿ ವಿಚಾರಣೆ ನಡೆಸಿತು. ಪ್ರಕರಣದ ವಿಚಾರಣೆ ನವೆಂಬರ್ 3ರಂದು ನಡೆಯಲಿದೆ.

ಬಿಹಾರ ವಿಧಾನಸಭೆ ಚುನಾವಣೆಯ ಮತದಾನವು ನವೆಂಬರ್ 6 ಹಾಗೂ 11ರಂದು ನಡೆಯಲಿದ್ದು, ಮತ ಎಣಿಕೆ ನವೆಂಬರ್ 14ರಂದು ನಡೆಯಲಿದೆ.

ಬೀದಿನಾಯಿಗಳ ಕುರಿತ ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 27ರಂದು ನಡೆಸಿದ್ದ ನ್ಯಾಯಪೀಠ, ನವೆಂಬರ್ 3ರಂದು ನಡೆಯುವ ವಿಚಾರಣೆಗೆ ಹಾಜರಾಗುವಂತೆ ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ಹೊರತುಪಡಿಸಿ ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿತ್ತು.

ಉಮರ್, ಶರ್ಜೀಲ್ ಜಾಮೀನು ಅರ್ಜಿಗೆ ಪೊಲೀಸರ ವಿರೋಧ

ನವದೆಹಲಿ: ಜೆಎನ್‌ಯು ಮಾಜಿ ವಿದ್ಯಾರ್ಥಿಗಳಾದ ಉಮರ್ ಖಾಲಿದ್, ಶರ್ಜೀಲ್ ಇಮಾಮ್ ಮತ್ತು ಇತರರು ಸಲ್ಲಿಸಿರುವ ಜಾಮೀನು ಅರ್ಜಿಗಳಿಗೆ ದೆಹಲಿ ಪೊಲೀಸರು ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ವಿರೋಧ ವ್ಯಕ್ತಪಡಿಸಿದರು.

'ಸರ್ಕಾರ ಉರುಳಿಸುವ ಉದ್ದೇಶದಿಂದ ನಡೆದ ಕೃತ್ಯಗಳಲ್ಲಿ ಆರೋಪಿಗಳು ಭಾಗಿಯಾಗಿದ್ದರು. ತಮ್ಮ ದುರುದ್ದೇಶ ಸಾಧನೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭವನ್ನು ಆಯ್ಕೆ ಮಾಡಿಕೊಂಡಿದ್ದರು. ಗಲಭೆ ಕುರಿತು ಜಗತ್ತಿನ ಗಮನ ಸೆಳೆಯುವ ಉದ್ದೇಶವನ್ನೂ ಹೊಂದಿದ್ದರು' ಎಂದು ಪೊಲೀಸರು ಹೇಳಿದರು.

'ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಹತ್ಯೆಗಳನ್ನು ನಡೆಸಲು ಸಂಚು ರೂಪಿಸಲಾಗಿತ್ತು. ಇದಕ್ಕಾಗಿ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆಯನ್ನು ಬಳಸಿಕೊಂಡಿದ್ದರು' ಎಂದೂ ಪೊಲೀಸರು ವಾದಿಸಿದರು.

'ದೇಶದಾದ್ಯಂತ ನಡೆದ ಗಲಭೆಗಳು ಹಠಾತ್ತನೇ ಭುಗಿಲೆದ್ದಿರಲಿಲ್ಲ. ಅವುಗಳು ಪೂರ್ವಯೋಜಿತ ಕೃತ್ಯಗಳಾಗಿದ್ದವು. ದೇಶದ ಸಾರ್ವಭೌಮತೆ ಹಾಗೂ ಸಮಗ್ರತೆ ಮೇಲೆ ಪ್ರಹಾರ ಮಾಡುವುದಕ್ಕಾಗಿಯೇ ಆರೋಪಿಗಳು ಈ ಸಂಚು ರೂಪಿಸಿದ್ದರು' ಎಂದು ಪೊಲೀಸರು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಕೇವಲ ₹3 ಫಸಲ್ ಬಿಮಾ ಪರಿಹಾರ: ರೈತರ ಪ್ರತಿಭಟನೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಅಕೋಲಾ ಜಿಲ್ಲೆಯ ಕೆಲವು ಗ್ರಾಮಗಳ ರೈತರಿಗೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ, ಪರಿಹಾರವಾಗಿ ಕೇವಲ ₹3 ಪಾವತಿಯಾಗಿದೆ. ಇನ್ನು ಕೆಲವರಿಗೆ ₹21 ದೊರೆತಿದೆ.

'ಅತಿವೃಷ್ಟಿಯಿಂದ ಸಂಕಷ್ಟದಲ್ಲಿರುವ ನಮಗೆ ದೀಪಾವಳಿಗೆ ಮುನ್ನ ಕೇಂದ್ರ ಸರ್ಕಾರ ವಿಮಾ ಪರಿಹಾರವಾಗಿ ₹3 ಪಾವತಿಸುವ ಮೂಲಕ ಅವಮಾನ ಮಾಡಿದೆ ಎಂದು ರೈತರು ಆರೋಪಿಸಿದರು. ಗುರುವಾರ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು, ತಮಗೆ ಬಂದಿರುವ ವಿಮೆ ಪರಿಹಾರವನ್ನು ಚೆಕ್ ರೂಪದಲ್ಲಿ ಸರ್ಕಾರಕ್ಕೇ ಮರಳಿಸಿ ಆಕ್ರೋಶ ವ್ಯಕ್ತಪಡಿಸಿದರು.

'ದಿನೊಡಾ, ಕಸವಾ ಮತ್ತು ಕುಟಾಸ ಗ್ರಾಮಗಳಲ್ಲಿ ಮಳೆಯಿಂದ ಬೆಳೆ ಸಂಪೂರ್ಣ ಹಾನಿಯಾಗಿದೆ. ಇಲ್ಲಿ ಹೆಚ್ಚಿನ ರೈತರ ಖಾತೆಗಳಿಗೆ ₹3ರಿಂದ ₹21 ಪಾವತಿಯಾಗಿದೆ ಎಂದು ದಿನೊಡಾ ಗ್ರಾಮದ ರೈತರೊಬ್ಬರು ದೂರಿದರು.

'ರೈತರನ್ನು ಗೌರವಿಸುವುದು ನಿಮಗೆ ತಿಳಿದಿಲ್ಲ. ಆದರೆ, ಅವರನ್ನು ಅವಮಾನಿಸಬೇಡಿ. ವಿಮೆ ಪರಿಹಾರವನ್ನು ಅವರು ಕೇಂದ್ರ ಸರ್ಕಾರಕ್ಕೇ ಮರಳಿಸಿದ್ದಾರೆ' ಎಂದು ಕಾಂಗ್ರೆಸ್ ಯುವ ಘಟಕದ ವಕ್ತಾರ ಕಪಿಲ್ ಢೋಕೆ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಕ್ರಿಕೆಟ್ ತಂಡದ ಶ್ರೇಯಸ್ ಅಯ್ಯರ್ ಅವರು 2025ರ ಅ.25ರಂದು ಸಿಡ್ನಿಯಲ್ಲಿ ನಡೆದ ಆಸ್ಟ್ರೇಲಿಯಾ ವಿರುದ್ಧದ ಏಕದಿನ ಪಂದ್ಯದಲ್ಲಿ ಆಡುವಾಗ ಗಾಯಗೊಂಡಿದ್ದರು. ಈ ಹಿನ್ನೆಲೆಯಲ್ಲಿ, ಅವರು ಆಸ್ಪತ್ರೆಯ ಮಂಚದ ಮೇಲೆ ಕುಳಿತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅವರು ತೀವ್ರ ನಿಗಾ ಘಟಕದಿಂದ ಹೊರಬಂದಿದ್ದಾರೆ ಎಂದೂ, ಅವರ ಆರೋಗ್ಯ ಸ್ಥಿರವಾಗಿದೆ ಎಂದೂ ಚಿತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ನಾಲ್ಕು ವರ್ಷಗಳ ಹಿಂದಿನ ಚಿತ್ರ.

ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದೇ ಚಿತ್ರವನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಮತ್ತಷ್ಟು ಹುಡುಕಾಟ ನಡೆಸಿದಾಗ, ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ 2021ರ ಏ.8ರಂದು ಇದೇ ಚಿತ್ರ ಪ್ರಕಟವಾಗಿರುವುದು ಕಂಡುಬಂತು. ಅದಕ್ಕೆ ಕೆಲವು ವಾರಗಳ ಮುಂಚೆ ನಡೆದಿದ್ದ ಇಂಗ್ಲೆಂಡ್–ಭಾರತ ಏಕದಿನ ಸರಣಿಯಲ್ಲಿ ಆಡುವಾಗ ಅವರ ಭುಜಕ್ಕೆ ಪೆಟ್ಟಾಗಿತ್ತು. ಗಾಯಗೊಂಡಿದ್ದ ಅವರು ಮಧ್ಯದಲ್ಲಿಯೇ ಸರಣಿಯಿಂದ ನಿರ್ಗಮಿಸಿದ್ದರು. ಆಸ್ಪತ್ರೆಯಲ್ಲಿದ್ದ ತಮ್ಮ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಅವರೇ ಹಂಚಿಕೊಂಡಿದ್ದರು. ಆ ಚಿತ್ರವನ್ನು ಈಗ ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ

ನುಡಿ ಬೆಳಗು

ರೇಣುಕಾ ನಿಡಗುಂದಿ

ಅವರು ದೊಡ್ಡ ಶ್ರೀಮಂತರು. ಹತ್ತಾರು ಕಾರ್ಖಾನೆಗಳು, ಅಪಾರ ಆಸ್ತಿ ಸಂಪತ್ತುಳ್ಳವರು. ಅವರ ಕಾರ್ಖಾನೆ, ಆಫೀಸುಗಳಲ್ಲಿ ಹತ್ತಾರು ಸಾವಿರ ಜನ ದುಡಿಯುತ್ತಾರೆ. ನೌಕರರು ನಿರಂತರ ಅವರ ಸೇವೆಯಲ್ಲಿರುತ್ತಾರೆ. ಅವರ ಮನೆಯಲ್ಲಿ ನೌಕರರಿಗೆ ಬೇರೆ ಅಡುಗೆ, ಮಾಲೀಕರಿಗೆ ಬೇರೆ ಅಡುಗೆ. ಮಾಲೀಕರಿಗೆ ಅತ್ಯುತ್ತಮ ಗುಣಮಟ್ಟದ ಬಾಸುಮತಿ ಅಕ್ಕಿ, ನೌಕರರಿಗೆ ಕಡಿಮೆ ಬೆಲೆಯ ಅಕ್ಕಿ. ಅಲ್ಲಿನ ಅಂಗಡಿಗಳಲ್ಲಿ ಸರ್ವೆಂಟುಗಳ ಅಕ್ಕಿ ಕೊಡಿ ಅಂದರೆ ಅವರು ಕೊಡುತ್ತಾರೆ. ಹಲವು ರೋಗಗಳು, ಹಾರ್ಟು ಸಮಸ್ಯೆ, ಬಿ.ಪಿ ಅಂತೆಲ್ಲ ನೂರೆಂಟು ಮಾತ್ರೆಗಳನ್ನು ನುಂಗುವ ಶ್ರೀಮಂತನಿಗೆ ತಿನ್ನುವುದಕ್ಕೆ ಪಂಚಭಕ್ಷ್ಯಗಳಿದ್ದರೂ ಆತ ಉಣ್ಣುವುದು ಒಂದು ರೊಟ್ಟಿ. ಸದಾ ವೈದ್ಯರ ನಿಗಾವಣೆಯಲ್ಲಿಯೇ ಇರಬೇಕು. ಮೈಮುರಿದು ದುಡಿಯುವವರಿಗೆ ಹಸಿವು ಹೆಚ್ಚು. ಒಂದೆರಡು ರೊಟ್ಟಿಯಿಂದ ಹೊಟ್ಟೆ ತುಂಬೀತೆ? ಅಡುಗೆ ಪದಾರ್ಥಗಳ ಲೆಕ್ಕ ಕೇಳುವವರ ಮನೆಗಳಲ್ಲಿ ಕೆಲಸ ಮಾಡುವವರು ಯಾರೂ ಸಂತೋಷವಾಗಿರುವುದಿಲ್ಲ.

ಕೆಲಸದ ಸಹಾಯಕರನ್ನು ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಣುಗಳಿಂದ ಕಾಯುವ ಜನ ಹೊರಗೆ ಗುರುದ್ವಾರ, ದೇವಸ್ಥಾನಗಳಿಗೆ ಅನ್ನದಾನಕ್ಕಾಗಿ ಧಾರಾಳವಾಗಿ ಕ್ವಿಂಟಲ್‌ಗಟ್ಟಲೆ ಹಿಟ್ಟು ತುಪ್ಪ ಸಕ್ಕರೆ ಒದಗಿಸುತ್ತಾರೆ. ಹಗಲು ರಾತ್ರಿ ತಮ್ಮ ಸೇವೆ ಮಾಡುವವರ ಬಗ್ಗೆ, ಅವರು ಅದಕ್ಕಾಗಿಯೇ ಹುಟ್ಟಿದವರು, ಅವರ ಕರ್ಮದ ಫಲವನ್ನು ಅನುಭವಿಸುತ್ತಿದ್ದಾರೆ ನಾವೇನು ಮಾಡೋಣ ಎನ್ನುವ ಧೋರಣೆ, ಅಹಂಕಾರ ಅವರ ವರ್ತನೆಯಲ್ಲಿರುತ್ತದೆ.

ಪರಿಚಯದ ಒಬ್ಬರು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಐವತ್ತು ಸಾವಿರ ದೇಣಿಗೆ ನೀಡಿದ್ದರು. ಆ ಸಮಾಜ ಅವರನ್ನು ಶಾಲು ಹೊದಿಸಿ ಸನ್ಮಾನಿಸಿತು. ಅದೇ ವ್ಯಕ್ತಿ ಹಸಿದು ಬಾಗಿಲಿಗೆ ಬಂದ ಭಿಕ್ಷುಕನನ್ನು 'ಏನು ಇಷ್ಟು ಕೊಬ್ಬಿದ ಕೋಣನಂತಿದೀಯ, ದುಡಿದು ತಿನ್ನಲಿಕ್ಕೇನು ಧಾಡಿ' ಎಂದು ಬಯ್ಯುತ್ತಿದ್ದರು.

ತೋರಿಕೆಯ ಪ್ರತಿಷ್ಠೆಗಾಗಿ ಜನ ಏನೆಲ್ಲ ಮಾಡುತ್ತಾರೆ. ದೇಣಿಗೆ, ಅನ್ನ ಸಂತರ್ಪಣೆ ಮಾಡುವ ಜನರು, 'ಉಂಬ ಜಂಗಮ ಬಂದಡೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ' ಎಂದು ಸೋಜಿಗವಾಗುತ್ತದೆ. ಕೆಲವರ ಆಷಾಢಭೂತಿತನಕ್ಕೆ ಮನಸ್ಸು ಬೇಸರಗೊಳ್ಳುತ್ತದೆ.

ಉಣ್ಣದ ಲಿಂಗಕ್ಕೆ ಎಡೆ ಹಿಡಿಯುವುದು, ಬಡ ಜಂಗಮರು ಹಸಿದು ಬಂದರೆ ಮುಂದಕ್ಕೆ ಹೋಗು ಎನ್ನುವುದು. ಈ ವೈರುಧ್ಯಗಳು ನಮ್ಮ ಜೀವನದ ವೈರುಧ್ಯಗಳನ್ನು ಪ್ರತಿಬಿಂಬಿಸುತ್ತವೆ. ಮನುಷ್ಯನ ಸಣ್ಣತನಗಳನ್ನು ಒರೆಗೆ ಹಚ್ಚುತ್ತವೆ.

ತಮಗಿಂತ ದುರ್ಬಲರ ಮೇಲೆ, ತಮಗಾಗಿ ಜೀವ ತೇಯುವ ಜನಗಳ ಮೇಲೆ ಒಂಚೂರು ಕರುಣೆ ಔದಾರ್ಯ ತೋರುವುದಿಲ್ಲ. ಕೈಯೆತ್ತಿ ಏನನ್ನೂ ನೀಡುವುದಿಲ್ಲ, ಕಷ್ಟ ಸುಖ ಕೇಳುವುದಿಲ್ಲ. ನೊಂದಿರಾ ಬೆಂದಿರಾ ಉಂಡಿರಾ ಎಂದೂ ವಿಚಾರಿಸಲಾರರು. ಬದಲಾಗಿ ಉಣ್ಣದ ಲಿಂಗಕ್ಕೆ ನೈವೇದ್ಯ ನೀಡುತ್ತಾರೆ. ಗುಡಿ ಗುಂಡಾರಗಳಲ್ಲಿನ ಕಲ್ಲು ದೇವರಿಗೆ, ನಿರ್ಜೀವ ವಸ್ತುಗಳಿಗೆ ಸುರಿಯುವ ಬದಲು ಹಸಿದವರಿಗೆ ನೀಡಿ ಅದನ್ನು ಸದ್ವಿನಿಯೋಗ ಮಾಡಿರಿ ಎನ್ನುತ್ತಾರೆ ಬಸವಣ್ಣ.

ದೊಡ್ಡ ಕಂಪನಿಗಳಲ್ಲಿ, ಕಾರ್ಖಾನೆಗಳಲ್ಲಿ ಕೂಡ ಕೂಲಿಕಾರ್ಮಿಕರ ಕಣ್ಗಾವಲಿಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳಿರುತ್ತವೆ. ಅವರು ಮಾಡುವ ಕೆಲಸವನ್ನು ಶ್ಲಾಘಿಸದ ಅಧಿಕಾರಿಗಳು ಆ ಕಾರ್ಮಿಕ ದಣಿದು ಅರೆಕ್ಷಣ ಕಾಲುಚಾಚಿ ಕುಳಿತಿದ್ದರೂ ಶಿಕ್ಷಿಸುತ್ತಾರೆ. ಶ್ರೀಮಂತ ಅತೀ ಶ್ರೀಮಂತರೂ ಬಡವ ಕಡುಬಡವನೂ ಆಗುತ್ತಿರುವ ಕಾಲದಲ್ಲಿ ಬಡವರಿಗೆ ಅಸ್ತಿತ್ವವೇ ಇಲ್ಲ. ಅವರೂ ಮನುಷ್ಯರು ಎಂದು ಪರಿಗಣಿಸುವುದು ಯಾವಾಗ? ❖

ಪದಬಂಧ 6209

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
3.ನಿಸರ್ಗದಲ್ಲೇ ಪುಸ್ತಕದ ಅಧ್ಯಾಯವನ್ನು ಹುಡುಕಿ! (2)
4.ಅಡಗಿಕೊಳ್ಳಲು ಸೂಕ್ತವಾದ ಕಾಡು! (3)
5.ಉಲ್ಟಾ ಪಲ್ಟಾ ಕಾಣುತ್ತಿರುವ ತಲೆ (3)
7.ಕಮ್ಮಾರನ ಕೈ! (3)
8.ರಭಸದಲ್ಲೇ ದ್ರವ ಇದೆ (2)
10.ಪಂಡಿತ ಇಲ್ಲಿದ್ದಾನೆ (3)
11.ಸುಗಮವಾಗಿ ಕಿತ್ತಿರುವ ಹೂವು (2)
13.ಕಾದಲನ ಹತ್ತಿರ ಕಳೆದ ವೇಳೆ (2)
14.ಮಣಿ ಧರಿಸಿದ ಚೆಲುವೆ ಉಲ್ಟಾ ನಿಂತಿದ್ದಾಳಲ್ಲಾ! (3)
15.ಕರುವಿಗೆ ತೋರಿದ ದಯೆ (3)
16.ದರಿದ್ರನಿಗೆ ಕಾಣಿಸಿದ ಗವಿ! (2)
17.ಪ್ರಾಣವಾಯು ಇಲ್ಲಿದೆ (5)

ಮೇಲಿಂದ ಕೆಳಕ್ಕೆ

2.ಹೆದರಿಕೆಯನ್ನುಂಟುಮಾಡುವುದು (4)
3.ಸರದಲ್ಲೇ ವಿವರಗಳನ್ನೊಳಗೊಂಡುದುದನ್ನು ಹುಡುಕಿ! (4)
4.ಅಧಿಕಾರಯುತವಾಗಿ ಆಡುವ ಮಾತು (6)
6.ಮನಸ್ಸನ್ನು ವಿಭಜಿಸಿ ನೋಡುವುದು (6)
7.ಇನ್ನೂ ಕರು ಹಾಕದೇ ಇರುವ ಹಸು (3)
9.ಒಳ್ಳೆಯ ವಂಶ (3)
12.ಮರದ ಹತ್ತಿರ ಕಾಣಿಸಿದ ಹೆಣ್ಣುದುಂಬಿ (4)
13.ಪಿತೂರಿ ಕೆಲಸ ನಡೆಯುವ ಸ್ಥಳ (4)



6208ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಐಹಿಕ 3.ಮಕ್ಷಿಕ
5.ರವಿಕಿರಣ 6.ತಡ
8.ನಾಯಿ 9.ನಾರಿ
10.ಕದ 14.ನರಭಕ್ಷಕ
15.ಕಡಲು 16.ವಿನಾಶ

ಮೇಲಿಂದ ಕೆಳಕ್ಕೆ:
1.ಐರಾವತ 2.ಕರಟ
3.ಮಣಕ 4.ಕಸುಗಾಯಿ
7.ಡಬರಿ 8.ನಾಸ್ತಿಕ
9.ನಾಗರಿಕ 11.ದಶಮಾಂಶ
12.ಹೊನಲು 13.ಕುಕವಿ

ಸುಡೊಕು 6593

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	6		4		5		9
5			6		9		4	2
	9			7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4

6592 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

31 ಅಕ್ಟೋಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ನವಮಿ ಗಂ. 10-04 **ನಕ್ಷತ್ರ:** ಧನಿಷ್ಠ ಗಂ 18-51 **ಯೋಗ:** ಗಂಡ ಗಂ 6-16 ನಂತರ ವೃದ್ಧಿ ಗಂ 28-32 **ಕರಣ:** ಕೌಲವ ಗಂ. 10-04 ತುಲಾ ಮಾಸದ 14 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 3 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 - 12-00 **ಸೂರ್ಯೋದಯ:** 06-28 **ಸೂರ್ಯಾಸ್ತ:** 06-00, **ಮುಸ್ಲಿಂ ದಿನಾಂಕ:** 08 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ:** 5, 8

ಮೇಷ: ಇನ್ನೊಬ್ಬರಿಗೆ ಮೋಸ ಮಾಡುವ ಮನಸ್ಥಿತಿ ದೂರಮಾಡಿಕೊಂಡು ಜೀವನ ನಡೆಸಿ, ಅದರಿಂದಾಗಿ ನಿಮಗೆ ಶ್ರೇಯಸ್ಸು ಪ್ರಾಪ್ತಿಯಾಗುವುದು. ಸಜ್ಜನರ ಭೇಟಿಯಾಗಲಿದೆ. ಗೃಹ ನಿರ್ಮಾಣದ ಆರಂಭಕ್ಕೆ ದಿನ ನಿಶ್ಚಯ.

ವೃಷಭ: ಸವಿತೃ ಸೂರ್ಯ ನಾರಾಯಣನಿಗೆ ನಮಸ್ಕರಿಸುವುದರಿಂದ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದಗಳಿರುವುದಿಲ್ಲ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸಗಳು ದೊರೆಯಲಿವೆ.

ಮಿಥುನ: ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಮುಂದಾಳತ್ವವಿರುವ ಸಾಮಾಜಿಕ ಚಟುವಟಿಕೆಯಲ್ಲಿ ಅಡ್ಡಿ-ಆತಂಕಗಳು ಎದುರಾಗಲಿವೆ. ಗೆಳೆಯರ ಒತ್ತಾಯದಿಂದ ಸಂಘ-ಸಂಸ್ಥೆ ಅಥವಾ ರಾಜಕೀಯಕ್ಕೆ ಸೇರುವಿರಿ.

ಕರ್ಕಾಟಕ: ವಾಹನ ರಿಪೇರಿಯಂಥ ವಿಚಾರದಲ್ಲಿ ಅಧಿಕ ಖರ್ಚು ಸಂಭವಿಸಲಿದೆ. ವಿದ್ಯಾರ್ಥಿಗಳು ಉದಾಸೀನ ಮಾಡದೆ ಶಾಲಾ ತರಗತಿಯಲ್ಲಿ ಭಾಗವಹಿಸಿ. ಗುರುಗಳ ಮಾತನ್ನು ಮೀರುವುದರಲ್ಲಿ ಶ್ರೇಯಸ್ಸು ಇರುವುದಿಲ್ಲ.

ಸಿಂಹ: ಮಾತನ್ನು ತಿರಸ್ಕರಿಸಿ ಬೇರೆಯ ಮಾರ್ಗವನ್ನು ಹಿಡಿದಂಥ ಮಕ್ಕಳು ಪಶ್ಚಾತ್ತಾಪ ಪಡುವರು. ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ನೆಮ್ಮದಿ ಮೂಡುತ್ತದೆ. ನೂತನ ವಸ್ತ್ರ ಖರೀದಿಯ ಯೋಗವಿದೆ.

ಕನ್ಯಾ: ವೃತ್ತಿಯಲ್ಲಿ ಬದಲಾವಣೆ ಮಾಡುವವರು ಲಕ್ಷ್ಮಿ ಸಮೇತನಾದ ಶ್ರೀನಿವಾಸ ದೇವರ ಸೇವೆಯನ್ನು ಮಾಡುವುದರಿಂದ ಅಭಿವೃದ್ಧಿಯನ್ನು ಕಾಣಬಹುದು. ಮನೆಯಲ್ಲಿ ದೇವತಾಕಾರ್ಯ ಮಾಡುವ ತೀರ್ಮಾನ ಮಾಡಿರಿ.

ತುಲಾ: ಮಾತುಗಾರರಿಗೆ, ವಾಗ್ಮಿಗಳಿಗೆ, ಬೋಧಕ ವರ್ಗದವರಿಗೆ ವೃತ್ತಿಯಲ್ಲಿ ಮುಂಬಡ್ತಿ ಅಥವಾ ಸನ್ಮಾನಗಳು ದೊರಕಲಿವೆ. ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ವ್ಯಾಪಾರದಲ್ಲಿ ಮಿಶ್ರಫಲವಿರುವುದು.

ವೃಶ್ಚಿಕ: ಆನುವಂಶಿಕ ಬಹುಕಾಲದ ಬೇಡಿಕೆಯೊಂದು ಈಡೇರುವುದರಿಂದ ನೆಮ್ಮದಿ ಸಿಗಲಿದೆ. ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ. ನಂಬಿಕೆ ಪ್ರತಿಪಾದಿಸಲು ಅಂಜಿಕೆ ಬೇಡ.

ಧನು: ಸಂಪೂರ್ಣ ಜ್ಞಾನವನ್ನು ಹೊಂದದೆ ವಾದಿಸಿದ ವಿಷಯದಲ್ಲಿ ಹಾಸ್ಯಾಸ್ಪದರಾಗಬಹುದು. ವಸ್ತ್ರ ವಿನ್ಯಾಸ, ಚಿತ್ರಕಲೆ, ಕಥೆ-ಕವನಗಳ ಬರವಣಿಗೆಯಲ್ಲಿ ಆಸಕ್ತಿ ಮೂಡಲಿದೆ.

ಮಕರ: ಪ್ರಮುಖ ಗುರಿ ಸಾಧನೆಗಳಿಗೆ ಕುಟುಂಬ ವರ್ಗದವರಿಂದ ಒಳ್ಳೆಯ ಬೆಂಬಲ ಸಿಗುವುದು. ಮಲ್ಲಿಕಾರ್ಜುನನ ಅನುಗ್ರಹ ಸಂಪಾದಿಸಿದಲ್ಲಿ ಮತ್ತಷ್ಟು ಉತ್ತಮ ಫಲಗಳನ್ನು ಅನುಭವಿಸುವ ಯೋಗವಿದೆ.

ಕುಂಭ: ಸಣ್ಣ ಸಣ್ಣ ವಿಚಾರಗಳನ್ನು ದೊಡ್ಡ ದೊಡ್ಡ ಸಮಸ್ಯೆ ಮಾಡುವ ಮನಸ್ಥಿತಿಯನ್ನು ತಕ್ಷಣದಲ್ಲಿಯೇ ಬದಲಾಯಿಸಿಕೊಳ್ಳುವುದು ಉತ್ತಮ. ಕೆಲಸಗಳು ಮಂದಗತಿಯಲ್ಲಿ ಸಾಗಲಿವೆ.

ಮೀನ: ಕೃಷಿಕರು ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸುವ ಅವಕಾಶ ಬರಲಿದೆ. ಪೂರಕವಾದ ವಾತಾವರಣ ನಿರ್ಮಾಣವಾಗುವುದು. ಶ್ರಮಕ್ಕೆ ಹೋಲಿಸಿದರೆ ದುಪ್ಪಟ್ಟು ಸಂಪಾದನೆಯಾಗುವ ಯೋಗವಿದೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,053
ಇಂದಿನ ಅಂತ್ಯ:	25,877
ದಿನದ ಕನಿಷ್ಠ:	25,845
	176

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹595
	12 ಕ್ಕೆ	₹80
ಮೈಸೂರು:	100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1275 (1280)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29750
ಎಸಿ	₹15400
ಆರ್‌ಪಿ	₹19500
ಆರ್‌ಸಿ	₹11050

ಮುಂಬೈ ಧಾರಣೆ (ಶೇಂಗಾ)

30-10-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1273 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,19,500 (1,20,200)
ಬೆಳ್ಳಿ ಕೆ.ಜಿಗೆ	1,47,000 (1,46,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹402-644
ದ್ವಿತಳಿ (ಬಿ.ವಿ)	₹428-777

'ಅನಿಲ್ ಅಂಬಾನಿ ಉದ್ಯಮದಲ್ಲಿ ಅಕ್ರಮ'

ಹಣದ ಕಾನೂನು ಬಾಹಿರ ವರ್ಗಾವಣೆ ಮೊತ್ತ ₹41 ಸಾವಿರ ಕೋಟಿ: ಕೋಬ್ರಾಪೋಸ್ಟ್ ಆರೋಪ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಸಮೂಹವು ₹41,921 ಕೋಟಿಗೂ ಹೆಚ್ಚಿನ ಮೊತ್ತದ ಹಣಕಾಸಿನ ಅಕ್ರಮ ಎಸಗಿದೆ ಎಂದು ತನಿಖಾ ವರದಿಗಳನ್ನು ಪ್ರಕಟಿಸುವ 'ಕೋಬ್ರಾಪೋಸ್ಟ್' ಆರೋಪ ಹೊರಿಸಿದೆ.

ಸಮೂಹವು 2006ರಿಂದ ತನ್ನ ಕಂಪನಿಗಳಿಂದ ಹಣವನ್ನು ಬೇರೆಡೆ ವರ್ಗಾಯಿಸುವ ಮೂಲಕ ಅಕ್ರಮ ಎಸಗಿದೆ ಎಂದು ಕೋಬ್ರಾಪೋಸ್ಟ್ ದೂರಿದೆ. ಆದರೆ ಈ ಆರೋಪವನ್ನು ಸಮೂಹವು ಅಲ್ಲಗಳೆದಿದೆ. ಸಮೂಹದ ಕಂಪನಿಗಳ ಷೇರುಮೌಲ್ಯ ಕುಸಿಯುವಂತೆ ಮಾಡುವ ದುರುದ್ದೇಶದ ಆರೋಪ ಇದು ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಬ್ಯಾಂಕ್ ಸಾಲ, ಐಪಿಒ ಹಾಗೂ ಸಾಲಪತ್ರಗಳ ಮೂಲಕ ಸಂಗ್ರಹಿಸಿದ ಅಂದಾಜು ₹28,874 ಕೋಟಿಯನ್ನು ಸಮೂಹದ ಕಂಪನಿಗಳಾದ ರಿಲಯನ್ಸ್ ಕಮ್ಯೂನಿಕೇಷನ್ಸ್, ರಿಲಯನ್ಸ್ ಕ್ಯಾಪಿಟಲ್, ರಿಲಯನ್ಸ್ ಹೋಂ ಫೈನಾನ್ಸ್, ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಮತ್ತು ರಿಲಯನ್ಸ್ ಕಾರ್ಪೊರೇಟ್ ಅಡ್ವೈಸರಿ ಸರ್ವಿಸಸ್‌ನಿಂದ ಹೊರತೆಗೆದು, ಪ್ರವರ್ತಕರ ಜೊತೆ ನಂಟು ಹೊಂದಿರುವ ಕೆಲವು ಕಂಪನಿಗಳಿಗೆ ವರ್ಗಾಯಿಸಲಾಗಿದೆ ಎಂದು ವರದಿಯು ಹೇಳಿದೆ.

ಅನಿಲ್ ಅಂಬಾನಿ

₹13,047 ಕೋಟಿಯಷ್ಟು ಮೊತ್ತವನ್ನು ಸಿಂಗಪುರ, ಮಾರಿಷಸ್, ಸಿಪ್ರಸ್, ಬ್ರಿಟಿಷ್ ವರ್ಜಿನ್ ಐಲ್ಯಾಂಡ್ಸ್, ಅಮೆರಿಕ ಮತ್ತು ಬ್ರಿಟನ್‌ನಲ್ಲಿರುವ ಸಂಸ್ಥೆಗಳ ಮೂಲಕ 'ವಂಚನೆಯ ಬಗೆಯಲ್ಲಿ' ಭಾರತಕ್ಕೆ ತರಲಾಗಿದೆ ಎಂದು ಕೂಡ ವರದಿಯು ಹೇಳಿದೆ. ಈ ವರ್ಗಾವಣೆಯಲ್ಲಿ ಶೆಲ್ ಕಂಪನಿಗಳ ಬಳಕೆಯಾಗಿದೆ ಎಂದು ಅದು ಹೇಳಿದೆ.

ಸಿಂಗಪುರ ಮೂಲದ ಎಮರ್ಜಿಂಗ್ ಮಾರ್ಕೆಟ್ ಇನ್ವೆಸ್ಟ್‌ಮೆಂಟ್ ಆ್ಯಂಡ್ ಟ್ರೇಡಿಂಗ್ ಎಂಬ ಕಂಪನಿಯು 'ನಿಗೂಢವಾದ' ನೆಕ್ಸ್‌ಜೆನ್ ಕ್ಯಾಪಿಟಲ್ ಎಂಬ ಕಂಪನಿಯಿಂದ 750 ಮಿಲಿಯನ್ ಡಾಲರ್ (ಅಂದಾಜು ₹6,647 ಕೋಟಿ) ಪಡೆಯಿತು. ನಂತರ ಆ ಮೊತ್ತವನ್ನು ರಿಲಯನ್ಸ್ ಇನ್ನೊವೆಂಚರ್ಸ್‌ಗೆ ವರ್ಗಾಯಿಸಲಾಯಿತು. ಅದಾದ ನಂತರದಲ್ಲಿ ಸಿಂಗಪುರ ಮೂಲದ ಕಂಪನಿಯನ್ನು ಪರಿಸಮಾಪ್ತಿಗೊಳಿಸಲಾಯಿತು ಎಂದು ಕೋಬ್ರಾಪೋಸ್ಟ್ ಹೇಳಿದೆ. ಈ ವಹಿವಾಟು ಬಹುಶಃ ಹಣದ ಅಕ್ರಮ ವರ್ಗಾವಣೆ ಆಗಿರಬಹುದು ಎಂದು ಹೇಳಿದೆ.

ಕಾರ್ಪೊರೇಟ್ ಹಣವನ್ನು ವೈಯಕ್ತಿಕ ಬಳಕೆಯ ಐಷಾರಾಮಿ ಉತ್ಪನ್ನಗಳನ್ನು ಖರೀದಿಸಲು ಬಳಸಿಕೊಳ್ಳಲಾಗಿದೆ ಎಂದು ಕೂಡ ಆರೋಪಿಸಿದೆ.

ಆರೋಪಗಳನ್ನು ಅಲ್ಲಗಳೆದಿರುವ ರಿಲಯನ್ಸ್ ಸಮೂಹವು, 'ಇವೆಲ್ಲ ಸಿಬಿಐ, ಇ.ಡಿ, ಸೆಬಿ ಮತ್ತು ಇತರ ಸಂಸ್ಥೆಗಳು ಈಗಾಗಲೇ ಪರಿಶೀಲನೆ ನಡೆಸಿರುವ ಸಂಗತಿಗಳು. ನ್ಯಾಯಸಮ್ಮತವಾದ ವಿಚಾರಣೆಯೊಂದು ಪೂರ್ವಗ್ರಹ ಪೀಡಿತವಾಗುವಂತೆ ಮಾಡುವ ಸಂಘಟಿತ ಪ್ರಯತ್ನ ಇದು' ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಮುಖ್ಯಾಂಶಗಳು

- ಶೆಲ್ ಕಂಪನಿಗಳನ್ನು ಬಳಸಿ ಹಣ ವರ್ಗಾಯಿಸಿದ ಆರೋಪ
- ಆರೋಪಗಳನ್ನು ಅಲ್ಲಗಳೆದ ರಿಲಯನ್ಸ್ ಸಮೂಹ
- ವಿಚಾರಣೆಯ ಮೇಲೆ ಪ್ರಭಾವ ಬೀರುವ ಯತ್ನ ಇದು ಎಂದ ರಿಲಯನ್ಸ್

ಸುದ್ದಿ 2 ನಿಮಿಷ

ಐಟಿಸಿಗೆ ₹5,186 ಕೋಟಿ ಲಾಭ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಐಟಿಸಿ ಲಿಮಿಟೆಡ್‌ನ ನಿವ್ವಳ ಲಾಭದಲ್ಲಿ ಶೇ 2.6ರಷ್ಟು ಹೆಚ್ಚಳವಾಗಿದ್ದು, ಕಂಪನಿಯು ₹5,186 ಕೋಟಿ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹5,054 ಕೋಟಿ ಲಾಭ ಆಗಿತ್ತು ಎಂದು ಕಂಪನಿ ಷೇರುಪೇಟೆಗೆ ಗುರುವಾರ ತಿಳಿಸಿದೆ.

ಉತ್ಪನ್ನಗಳ ಮಾರಾಟದಲ್ಲಿ ಇಳಿಕೆಯಾಗಿದೆ. ಇದರಿಂದ ವರಮಾನದಲ್ಲಿ ಇಳಿಕೆ ಆಗಿದ್ದು, ₹21,047 ಕೋಟಿಯಷ್ಟಾಗಿದೆ. ಇದು ಕಳೆದ ಸೆಪ್ಟೆಂಬರ್‌ನಲ್ಲಿ ₹21,387 ಕೋಟಿಯಷ್ಟಾಗಿತ್ತು. ವೆಚ್ಚವು ₹15,415 ಕೋಟಿಯಿಂದ ₹15,016 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ಐಟಿಸಿಯ ಎಫ್‌ಎಂಸಿಜಿ ವಹಿವಾಟು ಶೇ 7ರಷ್ಟು ಬೆಳವಣಿಗೆ ಆಗಿದ್ದು, ₹5,473 ಕೋಟಿ ವರಮಾನ ಗಳಿಸಿದೆ. ಎಫ್‌ಎಂಸಿಜಿ ಹೊರತುಪಡಿಸಿದ ವಹಿವಾಟು ಶೇ 8.4ರಷ್ಟು ಪ್ರಗತಿ ಕಂಡಿದ್ದು, ₹6,059 ಕೋಟಿ ಗಳಿಸಿದೆ. ಕೃಷಿ ಸಂಬಂಧಿ ವಹಿವಾಟುಗಳು ಶೇ 31ರಷ್ಟು ಇಳಿಕೆ ಕಂಡಿದ್ದು, ₹4,037 ಕೋಟಿಯಾಗಿದೆ. ಪೇಪರ್ ಬೋರ್ಡ್, ಕಾಗದ ಮತ್ತು ಪ್ಯಾಕೇಜಿಂಗ್‌ನಿಂದ ವರಮಾನವು ₹2,220 ಕೋಟಿಯಾಗಿದ್ದು, ಕಳೆದ ಸೆಪ್ಟೆಂಬರ್‌ಗೆ ಹೋಲಿಸಿದರೆ ಶೇ 5ರಷ್ಟು ಹೆಚ್ಚಳ ಎಂದು ತಿಳಿಸಿದೆ.

ಕಂಪನಿಯು 2026ರ ಜನವರಿ 19ರಿಂದ ಜಾರಿಗೆ ಬರುವಂತೆ ಐದು ವರ್ಷದ ಅವಧಿಗೆ ನೀತಿ ಆಯೋಗದ ಮಾಜಿ ಸಿಇಒ ಅಮಿತಾಬ್ ಕಾಂತ್ ಅವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕ ಸ್ಥಾನಕ್ಕೆ ನೇಮಕಾತಿಗೆ ಅನುಮೋದನೆ ನೀಡಲು ಶಿಫಾರಸು ಮಾಡಿದೆ.

ಜಿಯೊ ಬಳಕೆದಾರರಿಗೆ ಗೂಗಲ್ ಎ.ಐ ಪ್ರೊ ಉಚಿತ

ಬೆಂಗಳೂರು: ಗೂಗಲ್ ಕಂಪನಿಯ ಎ.ಐ. ಪರಿಕರ 'ಗೂಗಲ್ ಎ.ಐ. ಪ್ರೊ' ಚಂದಾದಾರಿಕೆಯು ಅರ್ಹ ಜಿಯೊ ಬಳಕೆದಾರರಿಗೆ 18 ತಿಂಗಳು ಉಚಿತವಾಗಿ ಸಿಗಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಗುರುವಾರ ತಿಳಿಸಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಅಂಗಸಂಸ್ಥೆಯಾದ ರಿಲಯನ್ಸ್ ಇಂಟೆಲಿಜೆನ್ಸ್, ಗೂಗಲ್ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ. ಈ ಪಾಲುದಾರಿಕೆಯ ಮೂಲಕ ರಿಲಯನ್ಸ್, ಜಿಯೊ 5ಜಿ ಅನ್‌ಲಿಮಿಟೆಡ್ ಯೋಜನೆ ಹೊಂದಿರುವ ಬಳಕೆದಾರರಿಗೆ ಈ ಕೊಡುಗೆ ನೀಡಿದೆ. ಹಣಕಾಸಿನ ಮೌಲ್ಯದಲ್ಲಿ ಈ ಕೊಡುಗೆ ಬೆಲೆ ₹35,100 ಆಗಿದೆ ಎಂದು ಕಂಪನಿ ಹೇಳಿದೆ. ಆರಂಭಿಕವಾಗಿ 18–25 ವರ್ಷದ ನಡುವಿನವರಿಗೆ ಈ ಕೊಡುಗೆ ದೊರೆಯಲಿದೆ. ನಂತರ ಎಲ್ಲ ಬಳಕೆದಾರರಿಗೆ ಈ ಸೇವೆ ದೊರೆಯುವಂತೆ ಮಾಡಲಾಗುವುದು ಎಂದು ಕಂಪನಿ ತಿಳಿಸಿದೆ.

ಈ ಪ್ಲ್ಯಾನ್ ಜೊತೆಗೆ ಗೂಗಲ್ ಜೆಮಿನಿ 2.5 ಪ್ರೊ, ಇತ್ತೀಚಿನ ನ್ಯಾನೋ ಬನಾನಾ ಮತ್ತು ವಿಯೋ 3.1 ಮಾದರಿಗಳೊಂದಿಗೆ ಚಿತ್ರಗಳು ಮತ್ತು ವಿಡಿಯೋಗಳನ್ನು ಸೃಷ್ಟಿಸಲು ಬಳಕೆದಾರರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ.

ಅಧ್ಯಯನ ಮತ್ತು ಸಂಶೋಧನೆಗಾಗಿ ನೋಟ್‌ಬುಕ್ ಎಲ್‌ಎಂಗೆ ಹೆಚ್ಚಿನ ಅವಕಾಶ ಮತ್ತು 2 ಟಿಬಿ ಕ್ಲೌಡ್ ಸಂಗ್ರಹದ ಸೌಲಭ್ಯ ಕೂಡ ದೊರೆಯಲಿದೆ ಎಂದು ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

13ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಜಿ. ಚಂದ್ರಪ್ಪ

10ನೇ ವರ್ಷದ ಸವಿನೆನಪು

ಶ್ರೀ ಎನ್. ವೆಂಕಟೇಶ್ ರವರು
(ಜಮೀನ್ದಾರರು)
ನಿಧನ : ತಾ॥ 31-10-2015

ಚಿನ್ನಕ್ಕೆ ಬೇಡಿಕೆ ಇಳಿಕೆ

ನವದೆಹಲಿ (ಪಿಟಿಐ): ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ದೇಶದಲ್ಲಿ ಚಿನ್ನದ ಬೇಡಿಕೆಯು ತೂಕದ ಲೆಕ್ಕದಲ್ಲಿ ಶೇಕಡ 16ರಷ್ಟು ಕಡಿಮೆ ಆಗಿದೆ. ಈ ಅವಧಿಯಲ್ಲಿ ಚಿನ್ನದ ಬೆಲೆಯು ದುಬಾರಿ ಆಗಿದ್ದುದು ಬೇಡಿಕೆಯನ್ನು ತಗ್ಗಿಸಿದೆ.

ಆದರೆ ಈ ಅವಧಿಯಲ್ಲಿ ಹೂಡಿಕೆ ಉದ್ದೇಶದ ಚಿನ್ನವನ್ನು ಖರೀದಿಸುವುದು ಹೆಚ್ಚಾಗಿದೆ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ವರದಿಯೊಂದು ಗುರುವಾರ ಹೇಳಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಭಾರತದ ಗ್ರಾಹಕರಿಂದ ಒಟ್ಟು 209.4 ಟನ್ ಚಿನ್ನಕ್ಕೆ ಬೇಡಿಕೆ ಬಂದಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ 248.3 ಟನ್ ಆಗಿತ್ತು.

ಆದರೆ ಮೌಲ್ಯದ ಲೆಕ್ಕದಲ್ಲಿ ನೋಡಿದಾಗ ಚಿನ್ನದ ಬೇಡಿಕೆಯು ಶೇ 23ರಷ್ಟು ಜಾಸ್ತಿ ಆಗಿದೆ. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.65 ಲಕ್ಷ ಕೋಟಿ ಮೌಲ್ಯದ ಚಿನ್ನಕ್ಕೆ ಬೇಡಿಕೆ ಬಂದಿತ್ತು, ಅದು ಈ ಬಾರಿ ₹2.03 ಲಕ್ಷ ಕೋಟಿಗೆ ಹೆಚ್ಚಾಗಿದೆ. ಚಿನ್ನದ ಬೆಲೆಯು ತೀವ್ರ ಪ್ರಮಾಣದಲ್ಲಿ ಏರಿಕೆ ಕಂಡಿದ್ದುದು ಈ ಹೆಚ್ಚಳಕ್ಕೆ ಕಾರಣ.

ಚಿನ್ನಕ್ಕೆ ಬರುವ ಬೇಡಿಕೆಯಲ್ಲಿ ಆಭರಣದ ಪಾಲು ದೊಡ್ಡದು. ಸೆಪ್ಟೆಂಬರ್‌ನಲ್ಲಿ ಆಭರಣಕ್ಕಾಗಿ ಒಟ್ಟು 117.7 ಟನ್ ಚಿನ್ನಕ್ಕೆ ಬೇಡಿಕೆ ಬಂದಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ 171.6 ಟನ್ ಆಗಿತ್ತು.

ಹೂಡಿಕೆಯ ಉದ್ದೇಶದಿಂದ ಚಿನ್ನಕ್ಕೆ ಬರುವ ಬೇಡಿಕೆಯಲ್ಲಿ ಶೇಕಡ 20ರಷ್ಟು ಏರಿಕೆ ಆಗಿದ್ದು, ಒಟ್ಟು 91.6 ಟನ್ ಚಿನ್ನಕ್ಕೆ ಬೇಡಿಕೆ ಬಂದಿದೆ. ಮೌಲ್ಯದ ಲೆಕ್ಕದಲ್ಲಿ ಇದು ಶೇ 74ರಷ್ಟು ಏರಿಕೆ ಎಂದು ಸಮಿತಿಯು ಹೇಳಿದೆ.

'ಕೌಶಲ ಕೇಂದ್ರಕ್ಕೆ ಸರ್ಕಾರದಿಂದ ಜಮೀನು'

ಪ್ರಾಯೋಗಿಕ ತರಬೇತಿ ಕೇಂದ್ರ ಆರಂಭಿಸಲು ಸಚಿವ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೌಶಲ ತರಬೇತಿ ಕೇಂದ್ರ ಮತ್ತು ಪ್ರಯೋಗಾಲಯಗಳನ್ನು ಸ್ಥಾಪಿಸಲು ಇಚ್ಛಿಸುವವರಿಗೆ ರಾಜ್ಯ ಸರ್ಕಾರದಿಂದಲೇ ಅಗತ್ಯ ಜಮೀನು ಮಂಜೂರು ಮಾಡಲಾಗುವುದು' ಎಂದು ಕೌಶಲಾಭಿವೃದ್ಧಿ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಭಾರತೀಯ ಕೈಗಾರಿಕೆಗಳ ಒಕ್ಕೂಟವು ನಗರದಲ್ಲಿ ಗುರುವಾರ ಆಯೋಜಿಸಿದ್ದ 'ಕೌಶಲ ಶೃಂಗಸಭೆ–2025'ಯಲ್ಲಿ ಅವರು ಮಾತನಾಡಿದರು.

'ಪದವಿ, ವೃತ್ತಿಪರ ಕೋರ್ಸ್‌ಗಳನ್ನು ಮಾಡಿದ ವಿದ್ಯಾರ್ಥಿಗಳಲ್ಲಿ ಉದ್ಯೋಗಾವಕಾಶವನ್ನು ಹೆಚ್ಚಿಸುವ ಅಗತ್ಯವಿದೆ. ಇದಕ್ಕಾಗಿ ಉದ್ಯಮಗಳ ಸಹಯೋಗದಲ್ಲೇ ತರಬೇತಿ ಕೇಂದ್ರ ಅಥವಾ ಪ್ರಯೋಗಾಲಯಗಳನ್ನು ಸ್ಥಾಪಿಸಬೇಕಿದೆ. ಇದಕ್ಕೆ ಸರ್ಕಾರವು ಅಗತ್ಯ ನೆರವುಗಳನ್ನು ನೀಡಲಿದೆ' ಎಂದರು.

ಕೌಶಲ ಶೃಂಗಸಭೆಯಲ್ಲಿ ಶರಣ ಪ್ರಕಾಶ ಪಾಟೀಲ ಮಾತನಾಡಿದರು

'ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಬಜಾಜ್ ಕಂಪನಿಯು ಎಂಜಿನಿಯರಿಂಗ್ ಕೌಶಲ ತರಬೇತಿ ಕೇಂದ್ರವನ್ನು ಆರಂಭಿಸಿದೆ. ಖಾಸಗಿ–ಸರ್ಕಾರಿ ಸಹಯೋಗದಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಈ ಕೇಂದ್ರದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮೆಕಾಟ್ರಾನಿಕ್ಸ್, ರೊಬೊಟಿಕ್ಸ್ ಮೊದಲಾದ ಕ್ಷೇತ್ರಗಳಲ್ಲಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತಿದೆ. ರಾಜ್ಯದ ಹಲವೆಡೆ ಇಂತಹ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶಗಳಿವೆ' ಎಂದು ಹೇಳಿದರು.

'ಶೈಕ್ಷಣಿಕ ಕಲಿಕೆ ಮತ್ತು ಪ್ರಾಯೋಗಿಕ ತರಬೇತಿ ಎರಡಕ್ಕೂ ಅವಕಾಶವಿರುವ 'ಡ್ಯುಯಲ್ ಅಪ್ರೆಂಟಿಸ್‌ಶಿಪ್' ಕಾರ್ಯ-ಕ್ರಮವನ್ನು ರೂಪಿಸಲಾಗುತ್ತಿದೆ. ಈ ಯೋಜನೆಯನ್ನು ಸಾಕಾರಗೊಳಿಸಲು ಉದ್ಯಮರಂಗದ ಸಹಕಾರ ಅಗತ್ಯ. ಶಿಕ್ಷಣ–ಉದ್ಯಮ ಸಹಯೋಗವನ್ನು ಹೊಸ ಎತ್ತರಕ್ಕೆ ಒಯ್ಯೋಣ' ಎಂದು ಉದ್ಯಮಿಗಳಿಗೆ ಆಹ್ವಾನ ನೀಡಿದರು.

ಕೆನರಾ ಬ್ಯಾಂಕ್‌ಗೆ ₹4,774 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ನಿವ್ವಳ ಲಾಭ ಶೇಕಡ 19ರಷ್ಟು ಹೆಚ್ಚಳವಾಗಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹4,015 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹4,774 ಕೋಟಿ ನಿವ್ವಳ ಲಾಭ ಗಳಿಸಿದೆ. ಈ ಅವಧಿಯಲ್ಲಿ ಅನುತ್ಪಾದಕ ಸಾಲದ ಪ್ರಮಾಣ ಇಳಿಕೆ ಆಗಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ಒಟ್ಟು ವರಮಾನವು ₹38,598 ಕೋಟಿಗೆ ಹೆಚ್ಚಳವಾಗಿದೆ. ಬಡ್ಡಿ ವರಮಾನವು ₹31,544 ಕೋಟಿಯಷ್ಟಾಗಿದೆ. ಅನುತ್ಪಾದಕ ಸಾಲದ ಪ್ರಮಾಣ (ಎನ್‌ಪಿಎ) ಶೇ 3.73 ರಿಂದ ಶೇ 2.35ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.98 ರಿಂದ ಶೇ 0.54ಕ್ಕೆ ಕಡಿಮೆ ಆಗಿದೆ.

ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಅನುತ್ಪಾದಕ ಸಾಲದ ಪ್ರಮಾಣ ₹2,587 ಕೋಟಿಯಷ್ಟಿತ್ತು. ಅದು ಈ ಸೆಪ್ಟೆಂಬರ್ ವೇಳೆಗೆ ₹1,504 ಕೋಟಿಗೆ ಇಳಿದಿದೆ.

ಸತ್ಯನಾರಾಯಣ ರಾಜು

ಬ್ಯಾಂಕ್‌ನ ಒಟ್ಟು ವ್ಯವಹಾರವು ಶೇ 13.5ರಷ್ಟು ಹೆಚ್ಚಳವಾಗಿದ್ದು, ₹26,78,963 ಕೋಟಿಯಾಗಿದೆ. ಠೇವಣಿ ₹15,27,922 ಕೋಟಿಯಷ್ಟಾಗಿದ್ದು, ಬ್ಯಾಂಕ್ ₹11,51,041 ಕೋಟಿ ಸಾಲ ನೀಡಿದೆ. ಕಳೆದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಸಾಲ ನೀಡಿಕೆಯಲ್ಲಿ ಶೇ 13.7ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದರು.

ಜಿಎಸ್‌ಟಿ ಇಳಿಕೆಯಿಂದ ಸಾಲ ತೆಗೆದುಕೊಳ್ಳುತ್ತಿರುವವರ ಪ್ರಮಾಣ ಹೆಚ್ಚುತ್ತಿದೆ. ಅದರಲ್ಲೂ ಪ್ರಮುಖವಾಗಿ ವಾಹನ ಖರೀದಿಸಲು ಸಾಲ ಪಡೆಯುವವರು ಹೆಚ್ಚಾಗಿದ್ದಾರೆ. ಮುಂದಿನ ತ್ರೈಮಾಸಿಕಗಳಲ್ಲಿ ಈ ಹೆಚ್ಚಳದ ಸ್ಪಷ್ಟತೆ ಸಿಗಲಿದೆ ಎಂದರು.

ಅದೇ ದಿನ ಚೆಕ್ ಕ್ಲಿಯರೆನ್ಸ್ ಮಾಡುವ ವ್ಯವಸ್ಥೆಯಲ್ಲಿ ಆರಂಭದ ಕೆಲ ದಿನ ಮಾತ್ರ ಸಮಸ್ಯೆ ಉಂಟಾಗಿತ್ತು. ಈಗ ಸರಿಯಾಗಿದೆ. ನವೆಂಬರ್ ತಿಂಗಳಿನಲ್ಲಿ ಬ್ಯಾಂಕ್‌ನ ಸಂಸ್ಥಾಪನಾ ದಿನಾಚರಣೆ ನಡೆಯಲಿದೆ. ಈ ವೇಳೆ ಬ್ಯಾಂಕ್ ತನ್ನ 10 ಸಾವಿರನೇ ಶಾಖೆಯನ್ನು ಆರಂಭಿಸಲಿದೆ ಎಂದು ಹೇಳಿದರು.

ಬಿಎಸ್‌ಎನ್‌ಎಲ್ ವರಮಾನ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ ಲಿಮಿಟೆಡ್‌ನ (ಬಿಎಸ್‌ಎನ್‌ಎಲ್) ವರಮಾನವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹5,347 ಕೋಟಿಯಷ್ಟು ಆಗಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹5,740 ಕೋಟಿ ವರಮಾನ ಗಳಿಸುವ ಅಂದಾಜು ಮಾಡಲಾಗಿತ್ತು. ಈ ಪೈಕಿ ₹5,347 ಕೋಟಿ ಗಳಿಸಲಾಗಿದ್ದು, ಒಟ್ಟು ಗುರಿಯ ಶೇ 93ರಷ್ಟು ಸಾಧಿಸಲಾಗಿದೆ ಎಂದು ಗುರುವಾರ ತಿಳಿಸಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ನಿಗಮದ ವರಮಾನವು ₹11,134 ಕೋಟಿ ಆಗಿದೆ.

ಪ್ರಸಕ್ತ ಜೂನ್ ತ್ರೈಮಾಸಿಕ-ದಲ್ಲಿ ಬಿಎಸ್‌ಎನ್‌ಎಲ್, ತನ್ನ ಪ್ರತಿ ಗ್ರಾಹಕನಿಂದ ತಿಂಗಳೊಂದರಲ್ಲಿ ಪಡೆಯುತ್ತಿರುವ ಸರಾಸರಿ ವರಮಾನವು (ಎಆರ್‌ಪಿಯು) ₹81 ಇತ್ತು. ಅದು ಸೆಪ್ಟೆಂಬರ್ ತ್ರೈಮಾಸಿದಲ್ಲಿ ₹91ಕ್ಕೆ ಏರಿಕೆ ಆಗಿದ್ದು, ಶೇ 12ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರ, ಕೇರಳ, ಉತ್ತರ ಪ್ರದೇಶ (ಪೂರ್ವ), ಅಂಡಮಾನ್ ಮತ್ತು ನಿಕೋಬಾರ್, ಜಮ್ಮು ಮತ್ತು ಕಾಶ್ಮೀರದ ವಲಯದಲ್ಲಿ ಎಆರ್‌ಪಿಯು ಅತ್ಯಧಿಕ ₹214 ಇದೆ. ಆದರೆ, ಮಧ್ಯಪ್ರದೇಶ, ಜಾರ್ಖಂಡ್ ಮತ್ತು ಕೋಲ್ಕತ್ತದ ವಲಯದಲ್ಲಿ ₹60 ಇದೆ ಎಂದು ಹೇಳಿದ್ದಾರೆ.

ಒರ್ಕ್ಲಾ ಐಪಿಒ: ಅಷ್ಟೂ ಷೇರುಗಳಿಗೆ ಬಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬಗೆಯ ಆಹಾರ ಉತ್ಪನ್ನಗಳನ್ನು ತಯಾರಿಸುವ ಎಂಟಿಆರ್ ಬ್ರ್ಯಾಂಡ್ ಮಾಲೀಕತ್ವ ಹೊಂದಿರುವ ಒರ್ಕ್ಲಾ ಇಂಡಿಯಾ ಕಂಪನಿಯು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸಿರುವ ಅಷ್ಟೂ ಷೇರುಗಳಿಗೆ ಹೂಡಿಕೆದಾರರಿಂದ ಬಿಡ್ ಬಂದಿವೆ ಎಂದು ಕಂಪನಿಯ ಸಿಇಒ ಸಂಜಯ್ ಶರ್ಮಾ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒರ್ಕ್ಲಾ ಒಡೆತನದ ಎಂಟಿಆರ್ ಮತ್ತು ಈಸ್ಟರ್ನ್ ಬ್ರ್ಯಾಂಡ್ ಉತ್ಪನ್ನಗಳನ್ನು ಕರ್ನಾಟಕದ ಹಾಗೂ ಕೇರಳದ ಪ್ರತಿ 10 ಕುಟುಂಬಗಳ ಪೈಕಿ 9 ಕುಟುಂಬಗಳು ಬಳಸುತ್ತಿವೆ' ಎಂದು ಹೇಳಿದರು.

ಒರ್ಕ್ಲಾ ಕಂಪನಿಯು ಆರಂಭಿಕ ಹೂಡಿಕೆದಾರರಿಂದ ಸರಿಸುಮಾರು ₹500 ಕೋಟಿ ಸಂಗ್ರಹಿಸಿದೆ. ಕಂಪನಿಯು ಐಪಿಒ ಮೂಲಕ ₹1,667 ಕೋಟಿ ಸಂಗ್ರಹಿಸುತ್ತಿದೆ. ಐಪಿಒಗೆ ಬಿಡ್ ಸಲ್ಲಿಸಲು ಶುಕ್ರವಾರ ಕಡೆಯ ದಿನ. ಪ್ರತಿ ಷೇರಿನ ಬೆಲೆಯನ್ನು ₹695–730ಕ್ಕೆ ನಿಗದಿ ಮಾಡಲಾಗಿದೆ.

ಛಾಬಹಾರ್ ಬಂದರು: 6 ತಿಂಗಳು ವಿನಾಯಿತಿ

ನವದೆಹಲಿ (ಪಿಟಿಐ): ಭಾರತ ನಿರ್ವಹಿಸುತ್ತಿರುವ ಇರಾನ್‌ನ ಛಾಬಹಾರ್ ಬಂದರು ಯೋಜನೆ ಮೇಲೆ ಅಮೆರಿಕ ವಿಧಿಸಿರುವ ನಿರ್ಬಂಧಗಳಿಂದ ಆರು ತಿಂಗಳು ವಿನಾಯಿತಿ ದೊರೆತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾಹಿತಿ ನೀಡಿದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಅಕ್ಟೋಬರ್ 29ರಿಂದ ಜಾರಿಗೆ ಬರುವಂತೆ ಆರು ತಿಂಗಳವರೆಗೆ ವಿನಾಯಿತಿ ನೀಡಿ ಆದೇಶಿಸಿದ್ದಾರೆ ಎಂದು ಅವರು ಹೇಳಿದರು.

ಛಾಬಹಾರ್ ಬಂದರಿನ ಕಾರ್ಯ-ನಿರ್ವಹಣೆ ಕುರಿತು ಇರಾನ್ ಮತ್ತು ಭಾರತ ಸರ್ಕಾರ ಕಳೆದ ವರ್ಷ ಒಪ್ಪಂದ ಮಾಡಿಕೊಂಡಿವೆ. ಈ ಬಂದರು ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ಎರಡೂ ಸರ್ಕಾರಗಳು 2003, 2015 ಮತ್ತು 2017ರಲ್ಲಿ ಒಪ್ಪಂದ ಮಾಡಿಕೊಂಡಿದ್ದವು. 2018ರಿಂದ ಈ ಬಂದರನ್ನು ಭಾರತವೇ ನಿರ್ವಹಿಸುತ್ತಿದೆ. ಅದನ್ನು 10 ವರ್ಷಗಳಿಗೆ ವಿಸ್ತರಿಸಿ ಕಳೆದ ವರ್ಷ ಒಪ್ಪಂದ ಮಾಡಿಕೊಳ್ಳಲಾಗಿದೆ.

ತೈಲ ಖರೀದಿ– ಅಮೆರಿಕ ನಿರ್ಬಂಧ: ಪರಿಣಾಮಗಳ ಬಗ್ಗೆ ಭಾರತ ಅಧ್ಯಯನ

ರಷ್ಯಾದ ಬೃಹತ್ ತೈಲ ಕಂಪನಿಗಳಾದ 'ರೋಸ್ನೆಫ್ಟ್' ಮತ್ತು 'ಲುಕೋಯಿಲ್' ಮೇಲೆ ಇತ್ತೀಚೆಗೆ ಅಮೆರಿಕ ವಿಧಿಸಿರುವ ನಿರ್ಬಂಧದಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಭಾರತ ಅಧ್ಯಯನ ನಡೆಸುತ್ತಿದೆ ಎಂದು ರಣಧೀರ್ ಜೈಸ್ವಾಲ್ ಗುರುವಾರ ತಿಳಿಸಿದರು.

'ಭಾರತವು ಜಾಗತಿಕ ಮಾರುಕಟ್ಟೆಯ ಚಲನಶೀಲತೆಯನ್ನು ಆಧರಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ನಮ್ಮ 140 ಕೋಟಿ ಜನರ ಇಂಧನದ ಅಗತ್ಯಗಳನ್ನು ಪೂರೈಸಲು ವೈವಿಧ್ಯಮಯ ಮೂಲಗಳಿಂದ ಕೈಗೆಟುಕುವ ದರದಲ್ಲಿ ಇಂಧನ ಖರೀದಿಸಲು ಒತ್ತು ನೀಡುತ್ತದೆ' ಎಂದೂ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಭಾರತದ ತೈಲ ಖರೀದಿದಾರರು ರಷ್ಯಾದ ಕಚ್ಚಾ ತೈಲ ಖರೀದಿಯನ್ನು ನಿಧಾನವಾಗಿ ಕಡಿಮೆ ಮಾಡುತ್ತಿದ್ದಾರೆ ಮತ್ತು ಅಮೆರಿಕದಿಂದ ಪೆಟ್ರೋಲಿಯಂ ಉತ್ಪನ್ನಗಳ ಆಮದನ್ನು ಎದುರು ನೋಡುತ್ತಿದ್ದಾರೆ ಎಂಬ ಮಾಹಿತಿ ಬೆನ್ನಲ್ಲೇ ಜೈಸ್ವಾಲ್ ಅವರಿಂದ ಪ್ರತಿಕ್ರಿಯೆ ಬಂದಿದೆ.

ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಕಾರ್ಯದಲ್ಲಿ ಭಾರತ ಮತ್ತು ಅಮೆರಿಕ ನಿರತವಾಗಿವೆ ಎಂದು ಅವರು ಇದೇ ವೇಳೆ ಪ್ರತಿಕ್ರಿಯಿಸಿದರು.

ಅಫ್ಗಾನಿಸ್ತಾನದ ಸಾರ್ವಭೌಮತ್ವಕ್ಕೆ ಭಾರತ ಬದ್ಧ: ಪಾಕಿಸ್ತಾನ–ಅಫ್ಗಾನಿಸ್ತಾನ ಗಡಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಅಫ್ಗಾನಿಸ್ತಾನವನ್ನು ಬೆಂಬಲಿಸಿರುವ ಭಾರತವು, ಅಫ್ಗಾನಿಸ್ತಾನದ ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ಸ್ವಾತಂತ್ರ್ಯವನ್ನು ಪೂರ್ಣವಾಗಿ ಗೌರವಿಸುತ್ತದೆ ಮತ್ತು ಅದಕ್ಕೆ ಬದ್ಧವಾಗಿದೆ ಎಂದು ಪ್ರತಿಪಾದಿಸಿದೆ.

119 ಮಂದಿ ಹತ್ಯೆ: ಬ್ರೆಜಿಲ್‌ನಲ್ಲಿ ತೀವ್ರ ಪ್ರತಿಭಟನೆ

ರಿಯೊ ಡೆ ಜನೈರೊ (ಎಪಿ): ಮಾದಕವಸ್ತು ಕಳ್ಳಸಾಗಣೆ ಜಾಲದ ಬೆನ್ನತ್ತಿ ಬ್ರೆಜಿಲ್‌ನ ಪೊಲೀಸ್ ಪಡೆಗಳು ರಿಯೊ ನಗರದಲ್ಲಿ ನಡೆಸಿದ ದಾಳಿಯಲ್ಲಿ 119 ಮಂದಿ ಮೃತಪಟ್ಟ ಬೆನ್ನಲ್ಲೇ ಪೊಲೀಸರ ಕಾರ್ಯವೈಖರಿಯ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿದೆ. ಪೊಲೀಸರ ವಿರುದ್ಧ ಜನರು ಬೀದಿಗಿಳಿದು ಪ್ರತಿಭಟಿಸುತ್ತಿದ್ದು, ರಿಯೊ ಗವರ್ನರ್ ಅವರ ರಾಜೀನಾಮೆಗೂ ಆಗ್ರಹಿಸಿದ್ದಾರೆ.

'ರೆಡ್ ಕಮಾಂಡ್' ರೀತಿಯ ಅನೇಕ ಮಾದಕವಸ್ತು ಗ್ಯಾಂಗ್‌ಗಳ ಚಟುವಟಿಕೆಯನ್ನು ಗಮನಿಸಿ, ಆ ಗುಂಪುಗಳ ಸದಸ್ಯರನ್ನು ಗುರಿಯಾಗಿಸಿ ಪೊಲೀಸರು ಮಂಗಳವಾರ–ಬುಧವಾರ ಕಾರ್ಯಾಚರಣೆ ನಡೆಸಿದ್ದರು. ಈ ವೇಳೆ 115 ಮಂದಿ ಶಂಕಿತರನ್ನು ಹತ್ಯೆಗೈಯ್ಯಲಾಗಿದ್ದು, ಕಾರ್ಯಾಚರಣೆಯಲ್ಲಿ ನಾಲ್ವರು ಪೊಲೀಸರು ಕೂಡ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದರು.

ಆದರೆ, ಪೊಲೀಸರು ನಿರ್ದಾಕ್ಷಿಣ್ಯವಾಗಿ ನಿಂತಲ್ಲೇ ಜನರನ್ನು ಹತ್ಯೆಗೈದಿದ್ದಾರೆ. ಮಾದಕವಸ್ತು ಕಳ್ಳಸಾಗಣೆದಾರರನ್ನು ಮಾತ್ರವಲ್ಲದೇ ಅಮಾಯಕರನ್ನೂ ಹತ್ಯೆಗೈದಿದ್ದು, ಇದು ಅತಿದೊಡ್ಡ ಹತ್ಯಾಕಾಂಡ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಮೃತದೇಹಗಳನ್ನು ರಸ್ತೆಯ ಮೇಲೆ ಸಾಲಿನಲ್ಲಿರಿಸಿ, ಬ್ರೆಜಿಲ್‌ನ ಧ್ವಜಕ್ಕೆ ಕೆಂಪು ಬಣ್ಣ ಹಚ್ಚಿ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಶಿವಮೊಗ್ಗ		ಶಿರಸಿ	
ಆಪಿ	61229-61669	ಬೆಟ್ಟೆ	54000-77582	ಬೆಟ್ಟೆ	38599-48518
ಬೆಟ್ಟೆ	40019-40479	ಗೊರಬಲು	19019-45701	ಬಿಳಿಗೋಟು	31878-39599
ಕೆಂಪುಗೋಟು	34009-34410	ಹೊಸತು	48009-64509	ಚಾಲಿ	45308-50299
ರಾಶಿ	60739-61189	ರಾಶಿ	46009-66599	ಕೆಂಪುಗೋಟು	28609-35699
ಸಾಗರ		ಸರಕು	60599-84596	ರಾಶಿ	52618-58909
ಬಿಳಿಗೋಟು	12989-35099	**ಸಿದ್ದಾಪುರ**		**ಯಲ್ಲಾಪುರ**	
ಚಾಲಿ	26299-44100	ಬಿಳಿಗೋಟು	26119-37389	ಬಿಳಿಗೋಟು	19310-36989
ಕೋಕ	11099-36899	ಚಾಲಿ	41699-48639	ಚಾಲಿ	43009-50199
ಕೆಂಪುಗೋಟು	21399-40199	ಕೋಕ	23900-34819	ಕೋಕ	12099-30899
ರಾಶಿ	45599-63099	ಕೆಂಪುಗೋಟು	28119-37400	ಕೆಂಪುಗೋಟು	18019-37119
ಸಿಪ್ಪೆಗೋಟು	15099-24199	ರಾಶಿ	46999-60999	ರಾಶಿ	53009-64421
		ತಟ್ಟಿಬೆಟ್ಟೆ	38809-50199	ತಟ್ಟಿಬೆಟ್ಟೆ	37819-50921

ಭಾರತದ ಹಾರ್ಟ್ ಸ್ಟೆಂಟ್‌ಗೆ ಮನ್ನಣೆ

ಸ್ಯಾನ್‌ಫ್ರಾನ್ಸಿಸ್ಕೊ (ಪಿಟಿಐ): ಭಾರತದಲ್ಲಿ ತಯಾರಿಸಲಾದ ಹೊಸ ತಲೆಮಾರಿನ ಹಾರ್ಟ್ ಸ್ಟೆಂಟ್‌ಗ ಇಲ್ಲಿ ನಡೆದ ವಿಶ್ವಮಟ್ಟದ ಹೃದ್ರೋಗ ತಜ್ಞರ ಸಮ್ಮೇಳನದಲ್ಲಿ ವಿಶೇಷ ಮನ್ನಣೆಗೆ ಪಾತ್ರವಾಗಿವೆ.

ಹಾರ್ಟ್ ಸ್ಟೆಂಟ್‌ಗಳ ತಯಾರಿಕೆಯಲ್ಲಿ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವ ಅಮೆರಿಕದ ಕ್ರಿಯೆನ್ಸ್ ಕಂಪನಿಯ 'ಸುಪ್ರಾಫ್ಲೆಕ್ಸ್ ಕ್ರೂಜ್' ಸ್ಟೆಂಟ್‌ಗಳಿಗೆ ಹೋಲಿಸಿದರೆ, ಭಾರತದಲ್ಲಿ ತಯಾರಿಸಲಾದ 'ಟಕ್ಸೆಡೊ–2' ಸ್ಟೆಂಟ್‌ಗಳು ಹೆಚ್ಚಿನ ಗುಣಮಟ್ಟ ಹೊಂದಿದ್ದು, 'ಕಡಿಮೆ ವೈಫಲ್ಯ ದರ' ಹೊಂದಿವೆ ಎಂದು ಹೃದ್ರೋಗ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. 'ಮಧುಮೇಹ, ಬಹು ಅಂಗಾಂಗ ವೈಫಲ್ಯ ಸಮಸ್ಯೆ ಸೇರಿದಂತೆ ಹೆಚ್ಚಿನ ಅಪಾಯ ಇರುವ ರೋಗಿಗಳಲ್ಲೂ ಈ ಸ್ಟೆಂಟ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ' ಎಂದು ಹೃದ್ರೋಗ ತಜ್ಞರ ಸಮ್ಮೇಳನದಲ್ಲಿ ದೆಹಲಿಯ ಬಾತ್ರಾ ಆಸ್ಪತ್ರೆಯ ಡೀನ್ ಡಾ. ಉಪೇಂದ್ರ ಕೌಲ್ ಹೇಳಿದರು.

ಉದ್ಯೋಗ ಪರವಾನಗಿ: ಸ್ವಯಂಚಾಲಿತ ವಿಸ್ತರಣೆ ಸೌಲಭ್ಯ ನಿಲ್ಲಿಸಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾಕ್ಕಾಗಿ ಹೊಸದಾಗಿ ಸಲ್ಲಿಕೆಯಾಗುವ ಅರ್ಜಿಗೆ ಸಂಬಂಧಿಸಿದ ಶುಲ್ಕವನ್ನು ಹೆಚ್ಚಳ ಮಾಡಿದ್ದ ಅಮೆರಿಕ, ಈಗ ವಿದೇಶಿಗರ ಉದ್ಯೋಗ ಪರವಾನಗಿ ಅವಧಿ ಸ್ವಯಂಚಾಲಿತ-ವಾಗಿ ವಿಸ್ತರಣೆಯಾಗುವ ಸೌಲಭ್ಯವನ್ನು ಕೊನೆಗೊಳಿಸುತ್ತಿರುವುದಾಗಿ ಘೋಷಿಸಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಈ ನಡೆಯಿಂದ, ಅಮೆರಿಕದಲ್ಲಿ ಉದ್ಯೋಗದಲ್ಲಿರುವ ಭಾರಿ ಸಂಖ್ಯೆಯ ಭಾರತೀಯರಿಗೆ ತೊಂದರೆಯಾಗಲಿದೆ.

ಭದ್ರತಾ ಇಲಾಖೆಯು ಈ ಕುರಿತು ಬುಧವಾರ ಘೋಷಣೆ ಮಾಡಿದೆ. 'ವಿದೇಶಿಯರ ಉದ್ಯೋಗ ದೃಢೀಕರಣ ದಾಖಲೆಗಳ (ಇಎಡಿ) ಸಿಂಧುತ್ವವನ್ನು ವಿಸ್ತರಣೆ ಮಾಡುವುದಕ್ಕೂ ಮುನ್ನ ವ್ಯಾಪಕ ಪರಿಶೀಲನೆ ನಡೆಸಲಾಗುವುದು' ಎಂದು ಹೇಳಿದೆ.

'ಹೊಸ ನಿಯಮದ ಪ್ರಕಾರ, 2025ರ ಅಕ್ಟೋಬರ್ 30ರಂದು ಅಥವಾ ನಂತರ ತಮ್ಮ ಇಎಡಿ ನವೀಕರಣಕ್ಕೆ ಅರ್ಜಿ ಸಲ್ಲಿಸುವ ವಿದೇಶಿಯರ ಉದ್ಯೋಗ ಪರವಾನಗಿ ಅವಧಿಯು ಸ್ವಯಂಚಾಲಿತವಾಗಿ ವಿಸ್ತರಣೆ ಆಗುವುದಿಲ್ಲ' ಎಂದು ಇಲಾಖೆ ತಿಳಿಸಿದೆ.

'ಅಕ್ಟೋಬರ್ 30ರ ಒಳಗಾಗಿ, ಪರವಾನಗಿಯನ್ನು ಸ್ವಯಂಚಾಲಿತವಾಗಿ ವಿಸ್ತರಣೆ ಮಾಡಲಾಗಿರುವ ಇಎಡಿಗಳಿಗೆ ಈ ಮಧ್ಯಂತರ ನಿಯಮ ಅನ್ವಯಿಸದು' ಎಂದು ಸ್ಪಷ್ಟಪಡಿಸಿದೆ.

'ಇಎಡಿ ಅವಧಿ ಕೊನೆಗೊಳ್ಳು-ವುದಕ್ಕೂ 180 ದಿನಗಳ ಮೊದಲೇ ನವೀಕರಣಕ್ಕೆ ವಿದೇಶಿಯರು ಅರ್ಜಿ ಸಲ್ಲಿಸಬೇಕು' ಎಂದೂ ಇಲಾಖೆ ಸೂಚಿಸಿದೆ.

ಜೋ ಬೈಡನ್ ಅವರು ಅಧ್ಯಕ್ಷರಾಗಿದ್ದ ವೇಳೆ, ಇಎಡಿ ನವೀಕರಣ ಕೋರಿ ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸುವ ವಿದೇಶಿಯರ ಉದ್ಯೋಗ ಪರವಾನಗಿಯು ಸ್ವಯಂಚಾಲಿತವಾಗಿ 540 ದಿನಗಳಷ್ಟು ವಿಸ್ತರಣೆಯಾಗುತ್ತಿತ್ತು.

ದಕ್ಷಿಣ ಕೊರಿಯಾದಲ್ಲಿ ಡೊನಾಲ್ಡ್ ಟ್ರಂಪ್ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಭೇಟಿ

ಚೀನಾದ ಮೇಲಿನ ಸುಂಕ ಕಡಿತ: ಟ್ರಂಪ್

ಏರ್‌ಫೋರ್ಸ್ ಒನ್ (ಎಪಿ): ಅಪರೂಪದ ಖನಿಜಗಳ ರಫ್ತಿಗೆ ಚೀನಾ ಒಪ್ಪಿದರೆ ಮತ್ತು ಅಮೆರಿಕದಿಂದ ಸೋಯಾಬೀನ್ ಖರೀದಿ ಆರಂಭಿಸಿದರೆ, ಚೀನಾದ ಮೇಲೆ ಹೇರಿರುವ ಭಾರಿ ಪ್ರಮಾಣದ ಪ್ರತಿ ಸುಂಕವನ್ನು ಕಡಿತ ಮಾಡುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ದಕ್ಷಿಣ ಕೊರಿಯಾದಲ್ಲಿ ನಡೆದ ನೇರ ಮಾತುಕತೆ ವೇಳೆ ಟ್ರಂಪ್ ಸುಂಕ ಕಡಿತದ ಪ್ರಸ್ತಾವ ಇರಿಸಿದ್ದಾರೆ. ಆದರೆ, ಈ ಬಗ್ಗೆ ಚೀನಾ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಷಿ ಜಿನ್‌ಪಿಂಗ್ ಭೇಟಿಯ ಬೆನ್ನಲ್ಲೇ, ತಮ್ಮ ಸಾಮಾಜಿಕ ಜಾಲತಾಣ 'ಟ್ರುಥ್ ಸೋಷಿಯಲ್'ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, 'ಮುಂದಿನ ಏಪ್ರಿಲ್‌ನಲ್ಲಿ ಚೀನಾಕ್ಕೆ ಭೇಟಿ ನೀಡುತ್ತೇನೆ. ಜಿನ್‌ಪಿಂಗ್ ನಮ್ಮಲ್ಲಿಗೂ ಬರುತ್ತಾರೆ. ವಿಶ್ವದ ಎರಡು ಪ್ರಮುಖ ಆರ್ಥಿಕ ಶಕ್ತಿಗಳ ನಡುವಿನ ಪಾಲುದಾರಿಕೆ ಹೆಚ್ಚಲಿದೆ. ನಮ್ಮ ನಡುವೆ ಈಗ ಯಾವುದೇ ಅಡೆತಡೆ ಇಲ್ಲ. ಅತಿ ಶೀಘ್ರದಲ್ಲೇ ಚೀನಾದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಮತ್ತು ಷಿ ಜಿನ್‌ಪಿಂಗ್

ಅಪರೂಪದ ಖನಿಜಗಳ ರಫ್ತಿನ ಮೇಲೆ ಚೀನಾ ನಿರ್ಬಂಧ ಹೇರಿದ ಬೆನ್ನಲ್ಲೇ, ತಕ್ಷಣದಿಂದ ಜಾರಿಗೆ ಬರುವಂತೆ ಚೀನಾದ ಮೇಲೆ ಶೇ 100ರಷ್ಟು ಆಮದು ಸುಂಕ ವಿಧಿಸುವುದಾಗಿ ಟ್ರಂಪ್ ಅ.10ರಂದು ಹೇಳಿದ್ದರು. ಇದೀಗ ಈ ಸುಂಕವು ಮೊದಲಿನಂತೆ ಶೇ 47ರಷ್ಟೇ ಇರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

'ಚೀನಾಕ್ಕೆ ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿತ ಕಂಪ್ಯೂಟರ್ ಚಿಪ್‌ಗಳನ್ನು ರಫ್ತು ಮಾಡುವ ಬಗ್ಗೆಯೂ ಮಾತುಕತೆ ನಡೆಸಿದ್ದೇನೆ. ಈ ಬಗ್ಗೆ ಅಮೆರಿಕದ ಎನ್‌ವಿಡಿಯಾ ಕಂಪನಿ, ಚೀನಾದ ಅಧಿಕಾರಿಗಳ ಜತೆಗೆ ಮಾತುಕತೆ ನಡೆಸಲಿದೆ' ಎಂದು ಟ್ರಂಪ್ ಹೇಳಿದರು.

'ಕೆಲವು ಭಿನ್ನಾಭಿಪ್ರಾಯಗಳು ಅನಿವಾರ್ಯವಾದರೂ ಯಾವಾಗಲೂ ಘರ್ಷಣೆಯಲ್ಲಿ ತೊಡಗಿರಲು ಸಾಧ್ಯವಿಲ್ಲ' ಎಂದು ಜಿನ್‌ಪಿಂಗ್ ಹೇಳಿರುವುದಾಗಿ ಹಾಗೂ ಅಪರೂಪದ ಖನಿಜಗಳ ರಫ್ತಿನ ಮೇಲೆ ವಿಧಿಸಿರುವ ನಿರ್ಬಂಧ ಸಡಿಲಿಸುವ ಇಂಗಿತವನ್ನೂ ವ್ಯಕ್ತಪಡಿಸಿರುವುದಾಗಿ ಕ್ಸಿನ್ಹುವಾ ಸುದ್ದಿಸಂಸ್ಥೆ ವರದಿ ಮಾಡಿದೆ.

'ಟಿಕ್‌ಟಾಕ್' ನಿರ್ಬಂಧ ಸಡಿಲಿಕೆ?

ಬೂಸನ್ (ಎಪಿ); 'ಟಿಕ್‌ಟಾಕ್' ಮೇಲಿನ ನಿರ್ಬಂಧ ಸಡಿಲಗೊಳಿಸಲು ಅಮೆರಿಕದೊಂದಿಗೆ ಪ್ರಯತ್ನ ನಡೆದಿದೆ ಎಂದು ಚೀನಾದ ವಾಣಿಜ್ಯ ಸಚಿವಾಲಯ ಹೇಳಿದೆ.

ಚೀನಾದ 'ಬೈಟ್‌ಡ್ಯಾನ್ಸ್' ಕಂಪನಿಗೆ ಸೇರಿದ 'ಟಿಕ್‌ಟಾಕ್' ಅನ್ನು ಜೋ ಬೈಡನ್ ನೇತೃತ್ವದ ಹಿಂದಿನ ಸರ್ಕಾರವು ನಿಷೇಧಿಸಿತ್ತು. ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ, 'ಟಿಕ್‌ಟಾಕ್' ಮೇಲಿನ ನಿರ್ಬಂಧವನ್ನು ವಿಸ್ತರಿಸುವುದಾಗಿ ಹೇಳಿದ್ದರು.

ಇದೀಗ ಟ್ರಂಪ್ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವೆ ಮಾತುಕತೆ ನಡೆದಿರುವ ಬೆನ್ನಲ್ಲೇ, ಟಿಕ್‌ಟಾಕ್ ಮೇಲಿನ ನಿರ್ಬಂಧ ತೆರವುಗೊಳ್ಳುವ ಆಶಾವಾದ ಮೂಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
Wanted
General

ಉದ್ಯೋಗಾವಕಾಶ @ TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಲ್ಲಿ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯನ್ನುಸಾರವಾಗಿ) ವಸತಿಯುಳ್ಳದ್ದು. 9035710381

ಯುವಕ ಯುವತಿಯರು ಮನಾಪ್ ಮಾಡಲು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 16000-20000 ಸಾವಿರದವರೆಗೆ ವಿಳಾಸ: ಸೆಲೆಬ್ರಿಟಿ ವೆಲ್ಡರ್ಸ್, ಕಿರಣ ಅಪಾರ್ಟ್‌ಮೆಂಟ್ ಎದುರು ಆನಂದರಾವ್ ಸರ್ಕಲ್ ಹತ್ತಿರ ಶೇಷಾದ್ರಿಪುರಂ ಬೆಂಗಳೂರು. Ph:9019626612.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಿಯೋಟಾ, TVS,ಹಿಮಾಲಯ, ಬ್ರಿಟಾನಿಯಾಗಳಿಗೆ SSLC, PUC,Degree, ITI, Diplomaವರು.18,000/- ದಿಂದ 86,000/- (ವಿದ್ಯಾರ್ಹತೆಯನುಸಾರವಾಗಿ) ವಸತಿಯುಳ್ಳ. 9035075571

ಬೆಂಗಳೂರಿನ ಆಗ್ನೇಯ ಶಿಕ್ಷಣ ಸಂಸ್ಥೆಯೊಂದಕ್ಕೆ ನಗರದಲ್ಲಿರುವ ನಮ್ಮ ಕಚೇರಿಗೆ ಭೂ ದಾಖಲೆ ಕಾರ್ಯನಿರ್ವಹಣೆ ಹುದ್ದೆಗೆ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ತಾಲೂಕು ಕಚೇರಿ, ಎಸಿ ಕಚೇರಿ, ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿನ ಭೂ ದಾಖಲೆಗಳನ್ನು ಮತ್ತು ಕಂದಾಯ ದಾಖಲೆಗಳ ಜ್ಞಾನ ಮತ್ತು ಅನುಭವ ಕಡ್ಡಾಯವಾಗಿದೆ. ಸಂಪರ್ಕಿಸಿ: +919535486707

ತಕ್ಷಣ ಬೇಕಾಗಿದ್ದಾರೆ ಕಂಪನಿ ಮತ್ತು ಆಫೀಸ್ ಗಳಿಗೆ 7,10, ಪಿಯುಸಿ ಆದಂತಹ ಯುವಕ, ಯುವತಿಯರಿಗೆ ಸಂಬಳ 18000/- ವಸತಿಯೊಂದಿಗೆ 9916788422

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫೋನಿನಮೂಲಕ ಕೆಲಸ, ತಿಂಗಳಿಗೆ 15,000.ದಿಂದ 20,000. ಸಂಪರ್ಕಿಸಿ.'ಕಿರಿಯಾಸ್' ಸೊಲ್ಯೂಷನ್ಸ್. 8884777503, 8884777502.

ಪ್ರವಾಸ
Travel

ಮನೆಯಿಂದಲೇ ಕೆಲಸ Part Time/Full Time ವರ್ಕ್ ಗಳಿಗೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18,000/-25,000. ಕರಿಯರ್ ಸೊಲ್ಯೂಷನ್ಸ್ 8095043191

7ದಿನಗಳ ಕಾಶಿಯಾತ್ರೆ, 11ದಿನಗಳ ಗುಜರಾತ್, ರನ್ ಆಫ್ ಕಚ್, 12ದಿನಗಳ ಮಧ್ಯಪ್ರದೇಶ. ನಂದಿ ಹಾಲಿಡೇಸ್ ಬಸವನಗುಡಿ, ಬೆಂಗಳೂರು.04. 9980270467, 9740228186

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದುವು. ಆದರೆ, ಅವರಲ್ಲಿ ಪ್ರಕಾಶನದವರು ವಸ್ತು, ವಿಷಯ, ವಿಚಾರಗಳ ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆ. ... ಈ ಅಧ್ಯಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬುಡ್ಡಿ ದೀಪದ ಬೆಳಕಲ್ಲಿ ಅರಳಿದ ‘ಸೂರ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಗುರುವಾರ ನೇಮಕಗೊಂಡಿದ್ದಾರೆ.

ನ. 24ರಂದು ಇವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ಹೆಸರನ್ನು ಸಿಜೆಐ ಬಿ.ಆರ್. ಗವಾಯಿ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಈ ಬಗ್ಗೆ ಕೇಂದ್ರ ಕಾನೂನು ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಸಿಜೆಐ ಬಿ.ಆರ್. ಗವಾಯಿ ಅವರು ನ.23ರಂದು ನಿವೃತ್ತಿಯಾಗುತ್ತಿದ್ದಾರೆ. 2027ರ ಫೆಬ್ರುವರಿ 9ರವರೆಗೆ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸಿಜೆಐ ಆಗಿ ಮುಂದುವರಿಯಲಿದ್ದಾರೆ. ಹರಿಯಾಣದ ನ್ಯಾಯಮೂರ್ತಿಯೊಬ್ಬರು ಇದೇ ಮೊದಲ ಬಾರಿಗೆ ಸರ್ವೋಚ್ಚ ನ್ಯಾಯಾಲಯದ ಹುದ್ದೆಗೆ ಏರಿದ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ.

ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಹರಿಯಾಣದ ಹಿಸ್ಸಾರ್‌ನ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದವರು. ಎಸ್ಸೆಸ್ಸೆಲ್ಸಿವರೆಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದಿದ್ದಾರೆ.

ಹಳ್ಳಿಯ ಶಿಕ್ಷಕರೊಬ್ಬರ ಪುತ್ರರಾಗಿರುವ ಸೂರ್ಯ ಕಾಂತ್, ಮೊದಲ ಬಾರಿಗೆ ಸಣ್ಣ ಪಟ್ಟಣವೊಂದನ್ನು ನೋಡಿದ್ದು ಎಸ್ಸೆಸ್ಸೆಲ್ಸಿಯಲ್ಲಿ ಇದ್ದಾಗ. ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ಸಲುವಾಗಿ ಹಿಸ್ಸಾರ್‌ನ ಹನ್ಸಿ ಪಟ್ಟಣಕ್ಕೆ ಪ್ರಯಾಣ ಬೆಳೆಸಿದ್ದರು.

‘ನನ್ನ ಶಾಲಾ ಶಿಕ್ಷಣ ಸರ್ಕಾರಿ ಶಾಲೆಯಲ್ಲೇ ಆಗಿತ್ತು. ಶಾಲೆ ಬಿಟ್ಟ ನಂತರ ಬಿಡುವಿನ ಅವಧಿಯಲ್ಲಿ ಗದ್ದೆಗಳಲ್ಲಿ ದುಡಿಯುತ್ತಿದ್ದೆ’ ಎಂದು ಅವರು ಇತ್ತೀಚೆಗೆ ನೆನಪಿಸಿಕೊಂಡಿದ್ದರು. ಕೃಷಿ ಕ್ಷೇತ್ರದಲ್ಲಿ ಗ್ರಾಮಸ್ಥರೊಂದಿಗೆ ನಿಕಟವಾಗಿ ಕೆಲಸ ಮಾಡಿದ್ದರಿಂದ ಜೀವನದ ಬಗ್ಗೆ ಅನೇಕ ಪಾಠಗಳನ್ನು ಕಲಿಯಲು ಸಾಧ್ಯವಾಯಿತು’ ಎಂದು ಹೇಳಿಕೊಂಡಿದ್ದರು.

ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಲ್ಲಿ ಕೆಲ ಸಮಯದ ಹಿಂದೆ ಉಪನ್ಯಾಸ ನೀಡಿದ್ದ ನ್ಯಾ. ಸೂರ್ಯ ಕಾಂತ್ ಅವರು ಹಳ್ಳಿಯ ಕಷ್ಟದ ಜೀವನದ ಬಗ್ಗೆ ತಿಳಿಸಿದ್ದರು.

‘ಏಳನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದ ಹಳ್ಳಿಯ ಶಾಲೆಯಲ್ಲಿ ಸರಿಯಾದ ಬೆಂಚುಗಳೇ ಇರಲಿಲ್ಲ. ಗ್ರಾಮದಲ್ಲಿ ವಿದ್ಯುತ್ ಸೌಲಭ್ಯವೂ ಸಮರ್ಪಕ ಆಗಿರಲಿಲ್ಲ. ಬುಡ್ಡಿ ದೀಪದ ಬೆಳಕಿನಲ್ಲಿ ಗೆಳೆಯರ ಜತೆಗೂಡಿ ಅಧ್ಯಯನ ನಡೆಸುತ್ತಿದ್ದೆ. ಸರ್ಕಾರಿ ಉದ್ಯೋಗ ಪಡೆಯುವುದೇ ನಮ್ಮೆಲ್ಲರ ಗುರಿಯಾಗಿತ್ತು’ ಎಂದು ನೆನಪಿಸಿಕೊಂಡಿದ್ದರು.

ನ್ಯಾ. ಸೂರ್ಯ ಕಾಂತ್ ಪರಿಚಯ

- ಹಿಸ್ಸಾರ್ ಜಿಲ್ಲೆಯ ಪೆಟ್ವಾರ್ ಗ್ರಾಮದಲ್ಲಿ 1962ರ ಫೆಬ್ರುವರಿ 10ರಂದು ಜನನ
- ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಲ್ಲಿ 1984ರಲ್ಲಿ ಎಲ್‌ಎಲ್‌ಬಿ ಪದವಿ
- ಆರಂಭದಲ್ಲಿ ಹಿಸ್ಸಾರ್‌ನ ನ್ಯಾಯಾಲಯದಲ್ಲಿ ವಕೀಲಿಕೆ. ಬಳಿಕ ಪಂಜಾಬ್ ಹಾಗೂ ಹರಿಯಾಣ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ
- 38ನೇ ವಯಸ್ಸಿನಲ್ಲೇ ಹರಿಯಾಣದ ಅಡ್ವೊಕೇಟ್ ಜನರಲ್ ಆಗಿ ಕಾರ್ಯನಿರ್ವಹಣೆ
- 42ನೇ ವಯಸ್ಸಿನಲ್ಲಿ ಪಂಜಾಬ್ ಹಾಗೂ ಹರಿಯಾಣ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ. ಅಲ್ಲಿ 14 ವರ್ಷಗಳ ಸೇವೆ
- 2018ರ ಅಕ್ಟೋಬರ್ 5ರಂದು ಹಿಮಾಚಲ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ
- 2019ರ ಮೇ 4ಕ್ಕೆ ‘ಸುಪ್ರೀಂ’ ನ್ಯಾಯಮೂರ್ತಿಯಾಗಿ ಬಡ್ತಿ

ಪ್ರಮುಖ ತೀರ್ಪುಗಳು

- ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಸೂರ್ಯ ಕಾಂತ್ ಹಲವು ಮಹತ್ವದ ತೀರ್ಪುಗಳನ್ನು ನೀಡಿದ್ದಾರೆ. ಇವುಗಳಲ್ಲಿ ವಾಕ್ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಭ್ರಷ್ಟಾಚಾರ, ಪರಿಸರ ಹಾಗೂ ಲಿಂಗ ಸಮಾನತೆ ಪ್ರಕರಣಗಳು ಸೇರಿವೆ
- ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಿದ್ದ ಕೇಂದ್ರ ಸರ್ಕಾರದ ನಿರ್ಧಾರವನ್ನು ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್ ಪೀಠದ ಭಾಗವಾಗಿದ್ದರು. ವಸಾಹತು ಯುಗದ ದೇಶದ್ರೋಹ ಕಾನೂನಿಗೆ ತಡೆ ನೀಡಿದ್ದ ಪೀಠದಲ್ಲಿದ್ದರು
- ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಸಮಯದಲ್ಲಿ ಕರಡು ಮತದಾರರ ಪಟ್ಟಿಯಿಂದ ಹೊರಗಿಡಲಾದ 65 ಲಕ್ಷ ಹೆಸರುಗಳ ವಿವರಗಳನ್ನು ಬಹಿರಂಗಪಡಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದ್ದರು
- ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಸೇರಿದಂತೆ ಬಾರ್ ಅಸೋಸಿಯೇಷನ್‌ಗಳಲ್ಲಿ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂದು ನಿರ್ದೇಶಿಸಿದ ಕೀರ್ತಿಯೂ ನ್ಯಾ. ಸೂರ್ಯ ಕಾಂತ್ ಅವರಿಗೆ ಸಲ್ಲುತ್ತದೆ

ಚುಟುಕೆ ಸುದ್ದಿ

‘ಆಂಧ್ರ ಪ್ರದೇಶಕ್ಕೆ ₹5,265 ಕೋಟಿ ನಷ್ಟ’

ಅಮರಾವತಿ (ಪಿಟಿಐ): ಮೊಂಥಾ ಚಂಡಮಾರುತದಿಂದಾಗಿ ಆಂಧ್ರಪ್ರದೇಶಕ್ಕೆ ₹5,265 ಕೋಟಿ ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಗುರುವಾರ ಹೇಳಿದ್ದಾರೆ.

ಚಂದ್ರಬಾಬು ನಾಯ್ಡು

ಮೊಂಥಾದಿಂದಾಗಿ ರಸ್ತೆ ಮತ್ತು ಕಟ್ಟಡ ಇಲಾಖೆಗೆ ₹2,079 ಕೋಟಿ ನಷ್ಟವಾಗಿದೆ. ಕೃಷಿ ಕ್ಷೇತ್ರಕ್ಕೆ ₹829 ಕೋಟಿ, ತೋಟಗಾರಿಕೆ ಕ್ಷೇತ್ರಕ್ಕೆ ₹40 ಕೋಟಿ, ರೇಷ್ಮೆ ಕ್ಷೇತ್ರಕ್ಕೆ ₹65 ಲಕ್ಷ ನಷ್ಟವಾಗಿದೆ’ ಎಂದು ತಿಳಿಸಿದ್ದಾರೆ.

ಸಿಬಿಎಸ್‌ಇ 10, 12ನೇ ತರಗತಿ ಫೆ. 17ರಿಂದ ಪರೀಕ್ಷೆ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಪ್ರಸಕ್ತ ಶೈಕ್ಷಣಿಕ ವರ್ಷದ 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳನ್ನು 2026ರ ಫೆಬ್ರುವರಿ 17ರಿಂದ ನಡೆಸಲಿದೆ.

ಮಂಡಳಿ ಪ್ರಕಟಿಸಿರುವ ಅಂತಿಮ ವೇಳಾಪಟ್ಟಿ ಪ್ರಕಾರ, 10ನೇ ತರಗತಿಯ ಪರೀಕ್ಷೆಗಳು ಮಾರ್ಚ್ 10ಕ್ಕೆ ಮತ್ತು 12ನೇ ತರಗತಿಯ ಪರೀಕ್ಷೆಗಳು ಏಪ್ರಿಲ್ 9ಕ್ಕೆ ಮುಕ್ತಾಯಗೊಳ್ಳಲಿವೆ.

ಸಿಬಿಎಸ್‌ಇ ಈ ಬಾರಿ 110 ದಿನಗಳು ಮುಂಚಿತವಾಗಿಯೇ ಅಂತಿಮ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಕಳೆದ ತಿಂಗಳು ತಾತ್ಕಾಲಿಕ ವೇಳಾಪಟ್ಟಿಯನ್ನು ಮಂಡಳಿ ಪ್ರಕಟಿಸಿತ್ತು.

ಇದೇ ಮೊದಲ ಬಾರಿಗೆ ಮಂಡಳಿಯು 10ನೇ ತರಗತಿಗೆ ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಿದೆ. 10ನೇ ತರಗತಿಯ ಬೋರ್ಡ್ ಪರೀಕ್ಷೆಯ ಎರಡನೇ ಆವೃತ್ತಿಯನ್ನು 2026ರ ಮೇ 15ರಿಂದ ಜೂನ್ 1ರವರೆಗೆ ನಿಗದಿಪಡಿಸಲಾಗಿದೆ ಎಂದು ಸಿಬಿಎಸ್‌ಇ ಪರೀಕ್ಷಾ ಸಂಚಾಲಕರಾದ ಸನ್ಯಾಮ್ ಭಾರದ್ವಾಜ್ ತಿಳಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಛತಿ ಮೈಯಾಗೆ ಅವಮಾನ: ಮೋದಿ

ಓಲೈಕೆ ರಾಜಕಾರಣ: ‘ಕೈ’, ಆರ್‌ಜೆಡಿ ನಾಯಕರ ವಿರುದ್ಧ ಪ್ರಧಾನಿ ಆರೋಪ

ಛಪ್ರಾ/ಮುಜಫ್ಫರಪುರ (ಬಿಹಾರ) (ಪಿಟಿಐ): ‘ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಆರ್‌ಜೆಡಿ ನಾಯಕರು ಬಿಹಾರದಲ್ಲಿ ‘ಛತಿ ಮೈಯಾ’ಗೆ (ಛತಿ ದೇವಿ) ಅವಮಾನಿಸುತ್ತಿದ್ದಾರೆ. ರಾಜ್ಯದ ಜನತೆ ಇವರನ್ನು ಕ್ಷಮಿಸುವುದಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

‘ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಈ ಎರಡು ಪಕ್ಷಗಳು ವಿರೋಧಿಸಿದ್ದವು. ಈಗ, ಓಲೈಕೆ ಮತ್ತು ಮತಬ್ಯಾಂಕ್ ರಾಜಕಾರಣಕ್ಕಾಗಿ ನುಸುಳುಕೋರರನ್ನು ರಕ್ಷಿಸುತ್ತಿದ್ದಾರೆ’ ಎಂದೂ ಅವರು ವಾಗ್ದಾಳಿ ನಡೆಸಿದರು.

ಛಪ್ರಾ ಮತ್ತು ಮುಜಫ್ಫರಪುರ ಪಟ್ಟಣಗಳಲ್ಲಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಗಳಲ್ಲಿ ಮಾತನಾಡಿದ ಅವರು, ‘ಮತಗಳಿಗಾಗಿ ಈ ಜನರು (ಕಾಂಗ್ರೆಸ್ ಹಾಗೂ ಆರ್‌ಜೆಡಿ ನಾಯಕರು) ಎಂತಹ ಕೀಳು ಮಟ್ಟಕ್ಕೂ ಹೋಗುತ್ತಾರೆ. ಶತಮಾನಗಳಿಂದಲೂ ಬಿಹಾರದಲ್ಲಿ ನಡೆಯುತ್ತಿರುವ ಛತ್ ಪೂಜೆಗೆ ಅವಮಾನ ಮಾಡುತ್ತಿದ್ದಾರೆ’ ಎಂದರು.

ಛತ್ ಪೂಜೆ ಅಂಗವಾಗಿ ಪ್ರಧಾನಿ ಮೋದಿ ಯಮುನಾ ನದಿಯಲ್ಲಿ ಸ್ನಾನ ಮಾಡಲು ಉದ್ದೇಶಿಸಿದ್ದರು. ನದಿಯು ಕಲುಷಿತಗೊಂಡಿದ್ದರಿಂದ ಮೋದಿ ಅವರಿಗಾಗಿ ಶುದ್ಧನೀರಿನ ಕೊಳವೊಂದನ್ನು ನಿರ್ಮಿಸಲಾಗಿತ್ತು. ಇದು ಬಹಿರಂಗಗೊಂಡ ಬಳಿಕ, ಮೋದಿ ಅವರು ನದಿಯಲ್ಲಿ ಸ್ನಾನ ಮಾಡುವ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿತ್ತು. ಈ ವಿಚಾರ ಮುಂದಿಟ್ಟುಕೊಂಡು ಮೋದಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ವಾಗ್ದಾಳಿ ನಡೆಸಿದ್ದರು.

‘ಯಮುನಾ ನದಿಯಲ್ಲಿ ಸ್ನಾನ ಮಾಡಲು ಮೋದಿ ಯೋಜಿಸಿದ್ದರು. ನದಿ ಕಲುಷಿತವಾಗಿದ್ದರಿಂದ ತಮ್ಮ ಯೋಜನೆ ಕೈಬಿಟ್ಟರು. ಇದೆಲ್ಲಾ ನಾಟಕ. ಮತಗಳಿಗಾಗಿ ಮೋದಿ ಏನೆಲ್ಲಾ ಮಾಡುತ್ತಾರೆ’ ಎಂದು ಟೀಕಿಸಿದ್ದರು.

ಇದಕ್ಕೆ ಪ್ರತಿಯಾಗಿ, ಮೋದಿ ಅವರು ವಿಪಕ್ಷಗಳ ನಾಯಕರ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

‘ಆರ್‌ಜೆಡಿ, ಕಾಂಗ್ರೆಸ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ ನಾಯಕರು ಓಲೈಕೆ ಮತ್ತು ಮತಬ್ಯಾಂಕ್ ರಾಜಕಾರಣ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಇದಕ್ಕಾಗಿಯೇ ಅವರು ನುಸುಳುಕೋರರನ್ನು ರಕ್ಷಿಸುತ್ತಿದ್ದಾರೆ’ ಎನ್ನುವ ಮೂಲಕ, ವಿಪಕ್ಷಗಳು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ವಿರೋಧಿಸುತ್ತಿರುವುದನ್ನು ಸೂಚ್ಯವಾಗಿ ಪ್ರಸ್ತಾಪಿಸಿದರು.

ಭಾಷಣದ ಪ್ರಮುಖ ಅಂಶಗಳು

- ಈ ಚುನಾವಣೆಯಲ್ಲಿ ಆರ್‌ಜೆಡಿ ನೇತೃತ್ವದ ಮೈತ್ರಿಕೂಟ ಹೀನಾಯವಾಗಿ ಸೋಲಲಿದೆ ಎಂದು ಬಹುತೇಕ ಸಮೀಕ್ಷೆಗಳು ಹೇಳುತ್ತಿವೆ. ಇದೇ ಕಾರಣಕ್ಕೆ ಮೈತ್ರಿಕೂಟವು ವಾಸ್ತವವಲ್ಲದ ಭರವಸೆಗಳನ್ನು ನೀಡುತ್ತಿದೆ
- ಆರ್‌ಜೆಡಿ ರ‍್ಯಾಲಿಗಳಲ್ಲಿ ಡ್ಯಾಗರ್, ದುನಾಲಿ (ಡಬಲ್ ಬ್ಯಾರಲ್ ಗನ್), ಪುತ್ರಿಯರ ಹಾಗೂ ಸಹೋದರಿಯರ ಅಪಹರಣ ಕುರಿತ ಹಾಡುಗಳನ್ನು ಬಿತ್ತರಿಸಲಾಗುತ್ತಿದೆ
- ಆರ್‌ಜೆಡಿ ಅಧಿಕಾರದ ಅವಧಿಯಲ್ಲಿ ಬಿಹಾರದಲ್ಲಿ 35 ಸಾವಿರದಿಂದ 40 ಸಾವಿರ ಅಪಹರಣಗಳು ನಡೆದಿವೆ
- ಆರ್‌ಜೆಡಿ ಆಡಳಿತವಿದ್ದಾಗ ಮುಖ್ಯಮಂತ್ರಿಗಳ ಕಚೇರಿಯು ಮಾಫಿಯಾಗಳ ಪಾಲಿಗೆ ಸ್ವರ್ಗವಾಗಿತ್ತು

ಬಿಹಾರ ವಿಧಾನಸಭೆ ಚುನಾವಣೆ ಪ್ರಯುಕ್ತ ಮುಜಫ್ಫರಪುರ ಪಟ್ಟಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಲ್ಲಿ ಬಿಜೆಪಿ ಬೆಂಬಲಿಗರು ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಪ್ರದರ್ಶಿಸಿದರು ಪಿಟಿಐ ಚಿತ್ರ

‘ಛತ್ ಪೂಜೆಗೆ ಯುನೆಸ್ಕೊ ಮಾನ್ಯತೆಗೆ ಪ್ರಯತ್ನ’

‘ಛತ್ ಪೂಜೆಯು ಶ್ರದ್ಧೆ, ಭಕ್ತಿಯ ಹಬ್ಬ ಮಾತ್ರವಲ್ಲ. ಇದು ಸಮಾನತೆ ಸಾರುವ ಉತ್ಸವ. ಇದೇ ಕಾರಣಕ್ಕೆ ಛತ್ ಪೂಜೆಗೆ ಯುನೆಸ್ಕೊ ಪಾರಂಪರಿಕ ಮಾನ್ಯತೆ ಪಡೆಯುವುದಕ್ಕೆ ನಮ್ಮ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ಮೋದಿ ಹೇಳಿದರು.

‘ಪ್ರವಾಸದ ಸಂದರ್ಭದಲ್ಲಿ ನಾನು ಛತ್ ಹಬ್ಬದ ಹಾಡುಗಳನ್ನು ಕೇಳುತ್ತೇನೆ. ನಾಗಾಲ್ಯಾಂಡ್‌ನ ಬಾಲಕಿಯೊಬ್ಬರು ಛತ್ ಹಾಡು ಹಾಡಿದ್ದನ್ನು ಕೇಳಿ ಖುಷಿಯಾಯಿತು. ಇಂತಹ ಹಬ್ಬಕ್ಕೆ ಸಿಗಬೇಕಾದ ಗೌರವ ಸಿಗುವಂತೆ ಮಾಡಲು ನಿಮ್ಮ ಈ ಪುತ್ರ ಶ್ರಮಿಸುತ್ತಿದ್ದಾನೆ. ಆದರೆ, ಕಾಂಗ್ರೆಸ್–ಆರ್‌ಜೆಡಿ ನಾಯಕರು ಇದನ್ನು ನಾಟಕ ಎನ್ನುವ ಮೂಲಕ ಛತ್ ಹಬ್ಬ ಕುರಿತು ಅಪಹಾಸ್ಯ ಮಾಡುತ್ತಿದ್ದಾರೆ’ ಎಂದು ಯಾವುದೇ ಪಕ್ಷದ ನಾಯಕರ ಹೆಸರು ಉಲ್ಲೇಖಿಸದೇ ಟೀಕಿಸಿದರು.

> **ವಿಪಕ್ಷಗಳ ನಾಯಕರಿಗೆ ನಮ್ಮ ಸಾಂಸ್ಕೃತಿಕ ಪರಂಪರೆ ಕುರಿತು ಸಮಸ್ಯೆ ಇದ್ದಂತಿದೆ. ಅವರು ವಿದೇಶಗಳಿಗೆ ಭೇಟಿ ನೀಡುತ್ತಾರೆ. ಆದರೆ, 500 ವರ್ಷಗಳ ಹೋರಾಟದ ಬಳಿಕ ನಿರ್ಮಿಸಿರುವ ರಾಮ ಮಂದಿರಕ್ಕೆ ಹೋಗುವುದಿಲ್ಲ**
>
> **ನರೇಂದ್ರ ಮೋದಿ,** ಪ್ರಧಾನಿ

‘ಬಿಹಾರವನ್ನು ಮತ್ತೊಮ್ಮೆ ಶೈಕ್ಷಣಿಕ ಕೇಂದ್ರವನ್ನಾಗಿ ಮಾಡುತ್ತೇವೆ’

ಪ್ರಜಾವಾಣಿ ವಾರ್ತೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಪಟ್ನಾ: ‘ಉದ್ಯೋಗ ಮತ್ತು ಅಭಿವೃದ್ಧಿಯ ಕುರಿತು ಟೊಳ್ಳು ಭರವಸೆಗಳನ್ನು ನೀಡಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರದ ಯುವಕರಿಗೆ ಮೋಸ ಮಾಡಿದ್ದಾರೆ. ಬಿಹಾರದ ಜನರಿಗೆ ಶಿಕ್ಷಣ ಬೇಕು. ವಲಸೆ ತಡೆಯಲು ಉದ್ಯೋಗವೂ ಬೇಕು’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ರಾಹುಲ್ ಗಾಂಧಿ

ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಸ್ವಕ್ಷೇತ್ರವಾದ ನಳಂದದಲ್ಲಿ ರಾಹುಲ್ ಗುರುವಾರ ಪ್ರಚಾರ ನಡೆಸಿದರು.

‘ನಳಂದದಲ್ಲಿ ನಾವು ವಿಶ್ವ ದರ್ಜೆಯ ವಿಶ್ವವಿದ್ಯಾಲಯವನ್ನು ನೀಡುತ್ತೇವೆ. ಗತಕಾಲದಲ್ಲಿ ಜಪಾನ್, ಚೀನಾ ಮತ್ತು ಯುರೋಪ್‌ಗಳಿಂದ ವಿದ್ಯಾರ್ಥಿಗಳು ನಳಂದ ವಿಶ್ವವಿದ್ಯಾಲಯಕ್ಕೆ ಬರುತ್ತಿದ್ದರು. ನಾವು ಮತ್ತೊಮ್ಮೆ ಬಿಹಾರವನ್ನು ಶೈಕ್ಷಣಿಕ ಕೇಂದ್ರವನ್ನಾಗಿ ಮಾಡುತ್ತೇವೆ’ ಎಂದರು.

‘ಬಿಹಾರಕ್ಕೆ ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವ ಅನ್ವರ್ಥ ಅಂಟಿಕೊಂಡಿದೆ. ಇದು ಬಿಹಾರದ ಯುವಕರ ಭವಿಷ್ಯವನ್ನು ಹಾಳು ಮಾಡಿದೆ. ಈ ಕಾರಣಕ್ಕಾಗಿಯೇ ಇಲ್ಲಿನ ಯುವಕರು ಉದ್ಯೋಗ ಅರಸಿ ವಲಸೆ ಹೋಗುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದರೆ, ವಲಸೆ ಸಮಸ್ಯೆ ಬಗೆಹರಿಸುತ್ತೇವೆ’ ಎಂದರು.

ರಾಹುಲ್ ಹೇಳಿದ್ದು...

- ನಿತೀಶ್ ಅವರ ಆಡಳಿತವು ಸತ್ತು ಹೋಗಿದೆ. ನರೇಂದ್ರ ಮೋದಿ, ಅಮಿತ್ ಶಾ ಮತ್ತು ನಾಗ್ಪುರವು ಬಿಹಾರವನ್ನು ನಡೆಸುತ್ತಿದ್ದಾರೆ ಎಂದು ನನಗೆ ಯಾರೋ ಹೇಳಿದರು
- ಮತಗಳ್ಳರ ಬಗ್ಗೆ ಎಚ್ಚರಿಕೆಯಿಂದ ಇರಿ. ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಮತಗಳ್ಳತನ ಮಾಡಿದವರೇ ಬಿಹಾರದಲ್ಲಿಯೂ ಮಾಡಲು ಯತ್ನಿಸುತ್ತಾರೆ
- ‘ಆಪರೇಷನ್ ಸಿಂಧೂರ ನಿಲ್ಲಿಸಿದೆ’ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಹಲವು ಬಾರಿ ಹೇಳಿದ್ದಾರೆ. ‘ಇದು ಸುಳ್ಳು’ ಎಂದು ಹೇಳಲು ಪ್ರಧಾನಿ ಮೋದಿ ಅವರಿಗೆ ಧೈರ್ಯವಿಲ್ಲ. ಪ್ರಧಾನಿ ಆದವರು ಹೇಗಿರಬೇಕು ಎಂದರೆ, ನೀವು ಇಂದಿರಾ ಗಾಂಧಿ ಅವರನ್ನು ನೋಡಬೇಕು. 1971ರಲ್ಲಿ ಅವರು ಅಮೆರಿಕಕ್ಕೆ ‘ನಾವು ನಿಮಗೆ ಹೆದರುವುದಿಲ್ಲ’ ಎಂದಿದ್ದರು. ಇಂದಿರಾ ಅವರು ಧೈರ್ಯವಂತ ನಾಯಕಿ

ಎ.ಐ. ಪಠ್ಯಕ್ರಮಕ್ಕೆ ಸಮಿತಿ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ವಿಷಯಾಧಾರಿತ ಪಠ್ಯ ರೂಪಿಸಲು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಐಐಟಿ ಮದ್ರಾಸ್‌ನ ಪ್ರಾಧ್ಯಾಪಕ ಕಾರ್ತಿಕ್ ರಮಣ್ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿದೆ.

2026–27ರ ಶೈಕ್ಷಣಿಕ ವರ್ಷದಿಂದ ತನ್ನ ವ್ಯಾಪ್ತಿಯ ಎಲ್ಲ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಎ.ಐ ಪಠ್ಯಕ್ರಮವನ್ನು ಅಳವಡಿಸುವ ಪ್ರಯತ್ನದ ಭಾಗವಾಗಿ ಸಮಿತಿ ರಚಿಸಲಾಗಿದೆ.

‘ಸಿಬಿಎಸ್‌ಇ, ಎನ್‌ಸಿಇಆರ್‌ಟಿ, ಕೆವಿಎಸ್, ಎನ್‌ವಿಎಸ್ ತಜ್ಞರು ಮತ್ತು ಬಾಹ್ಯ ತಜ್ಞರೊಂದಿಗೆ ಮಂಡಳಿಯ ಪ್ರಮುಖರು ಬುಧವಾರ ಸಮಾಲೋಚನೆ ನಡೆಸಿದರು. ಸಭೆಯಲ್ಲಿ ಮದ್ರಾಸ್ ಐಐಟಿಯ ದತ್ತಾಂಶ ವಿಜ್ಞಾನ (ಡೇಟಾ ಸೈನ್ಸ್) ಮತ್ತು ಎ.ಐ ವಿಭಾಗದ ಪ್ರಾಧ್ಯಾಪಕ ಕಾರ್ತಿಕ್ ರಮಣ್ ನೇತೃತ್ವದಲ್ಲಿ ಪಠ್ಯಕ್ರಮ ರಚನಾ ಸಮಿತಿ ರಚಿಸಲಾಯಿತು’ ಎಂದು ಶಾಲಾ ಶಿಕ್ಷಣ ಕಾರ್ಯದರ್ಶಿ ಸಂಜಯ್ ಕುಮಾರ್ ತಿಳಿಸಿದ್ದಾರೆ.

‘ವಿಶಾಲವಾದ, ಸಮಗ್ರವಾದ ಮತ್ತು ಶಾಲಾ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಸ್ವರೂಪದ (ಎನ್‌ಸಿಎಫ್–ಎಸ್‌ಇ) ಪರಿಧಿಯಲ್ಲಿ ಎಐ ಪಠ್ಯಕ್ರಮ ರಚಿಸಲಾಗುತ್ತದೆ. ಪ್ರತಿಯೊಂದು ಮಗುವಿನ ವಿಶಿಷ್ಟ ಸಾಮರ್ಥ್ಯ ನಮ್ಮ ಆದ್ಯತೆ’ ಎಂದು ಹೇಳಿದರು.

ಪ್ರಸ್ತುತ, ದೇಶದ 18,000 ಸಿಬಿಎಸ್‌ಇ ಶಾಲೆಗಳು 6ನೇ ತರಗತಿ ನಂತರ ಕೃತಕ ಬುದ್ಧಿಮತ್ತೆಯನ್ನು ಕೌಶಲ ವಿಷಯದ ರೂಪದಲ್ಲಿ 15 ಗಂಟೆಗಳಷ್ಟು ಕಾಲ ಬೋಧಿಸುತ್ತಿವೆ. 9ರಿಂದ 12ನೇ ತರಗತಿವರೆಗೆ ಇದು ಐಚ್ಛಿಕ ವಿಷಯವಾಗಿದೆ.

ಒತ್ತೆ ಇದ್ದ 17 ಮಕ್ಕಳ ರಕ್ಷಣೆ: ಆರೋಪಿ ಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ಮುಂಬೈನ ಪವಾಯಿ ಪ್ರದೇಶದಲ್ಲಿ ವ್ಯಕ್ತಿಯೊಬ್ಬ ವೆಬ್ ಸರಣಿಗಾಗಿ ಆಡಿಷನ್ ನಡೆಸುವುದಾಗಿ ಹೇಳಿ ಒತ್ತೆಯಾಗಿ ಇಟ್ಟುಕೊಂಡಿದ್ದ, 17 ಮಕ್ಕಳು ಸೇರಿ 19 ಜನರನ್ನು ಪೊಲೀಸರು ಗುರುವಾರ ರಕ್ಷಿಸಿದ್ದಾರೆ.

ಒತ್ತೆಯಾಳುಗಳ ರಕ್ಷಣೆಗಾಗಿ ನಡೆಸಿದ ಕಾರ್ಯಾಚರಣೆ ವೇಳೆ ಗುಂಡೇಟಿನಿಂದ ಗಾಯಗೊಂಡಿದ್ದ ವ್ಯಕ್ತಿ, ನಂತರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ರೋಹಿತ್ ಆರ್ಯ(50), ಪೊಲೀಸರ ಗುಂಡು ತಾಗಿ ಮೃತಪಟ್ಟ ವ್ಯಕ್ತಿ. ರಕ್ಷಿಸಿದವರಲ್ಲಿ ಒಬ್ಬ ಹಿರಿಯ ನಾಗರಿಕರೂ ಇದ್ದಾರೆ.

‘ಎಲ್ಲ ಮಕ್ಕಳು ಸುರಕ್ಷಿತವಾಗಿದ್ದಾರೆ’ ಎಂದು ಜಂಟಿ ಪೊಲೀಸ್ ಕಮಿಷನರ್ (ಕಾನೂನು ಮತ್ತು ಸುವ್ಯವಸ್ಥೆ) ಸತ್ಯನಾರಾಯಣನ್ ಹೇಳಿದ್ದಾರೆ.

> **ಇದೊಂದು ಸವಾಲಿನ ಕಾರ್ಯಾಚರಣೆಯಾಗಿತ್ತು. ಆತನಗೊಂದಿಗೆ ನಡೆಸಿದ ಮಾತುಕತೆ ಸಕಾರಾತ್ಮಕ ಫಲಿತಾಂಶ ನೀಡುವ ಖಾತ್ರಿ ಇದ್ದಿಲ್ಲ. ಆದರೆ, ಮಕ್ಕಳ ರಕ್ಷಣೆ ನಮ್ಮ ಆದ್ಯತೆಯಾಗಿತ್ತು**
>
> **ದತ್ತ ನಲವಡೆ ಡಿಸಿಪಿ,** ಮುಂಬೈ

ವೆಬ್ ಸರಣಿಗಾಗಿ ರೋಹಿತ್ ಆರ್ಯ ಕೈಗೊಂಡಿದ್ದ ಆಡಿಷನ್‌ನಲ್ಲಿ 15 ವರ್ಷ ವಯೋಮಾನದ ಬಾಲಕ ಮತ್ತು ಬಾಲಕಿಯರು ಪಾಲ್ಗೊಂಡಿದ್ದರು. ಕಳೆದ ಎರಡು ದಿನಗಳಿಂದ ಆಡಿಷನ್ ನಡೆಯುತ್ತಿತ್ತು.

‘ಮಧ್ಯಾಹ್ನ 1.30ರ ವೇಳೆಗೆ, ಮಹಾವೀರ್ ಕ್ಲಾಸಿಕ್ ಕಟ್ಟಡದಲ್ಲಿರುವ ಆರ್.ಎ.ಸ್ಟುಡಿಯೊದಲ್ಲಿ ಒಬ್ಬ ವ್ಯಕ್ತಿ 17 ಮಕ್ಕಳನ್ನು ಒತ್ತೆಯಾಗಿಟ್ಟುಕೊಂಡಿದ್ದಾನೆ ಎಂಬ ಮಾಹಿತಿಯನ್ನು ಪವಾಯಿ ಪೊಲೀಸ್ ಠಾಣೆಗೆ ನೀಡಲಾಯಿತು. ತಕ್ಷಣವೇ ಪೊಲೀಸರು, ಕ್ಷಿಪ್ರ ಸ್ಪಂದನೆ ತಂಡ(ಕ್ಯೂಆರ್‌ಟಿ), ಬಾಂಬ್ ಪತ್ತೆ ಹಾಗೂ ನಿಷ್ಕ್ರಿಯ ದಳದೊಂದಿಗೆ ಕಾರ್ಯಾಚರಣೆ ನಡೆಸಿ ಮಕ್ಕಳನ್ನು ರಕ್ಷಿಸಿದರು’ ಎಂದು ಡಿಸಿಪಿ ದತ್ತ ನಲವಡೆ ಹೇಳಿದರು.

ಪೊಲೀಸರು ಮಹಾವೀರ ಕ್ಲಾಸಿಕ್ ಕಟ್ಟಡ ತಲುಪುವುದಕ್ಕೂ ಮುನ್ನ, ರೋಹಿತ್ ಬಿಡುಗಡೆ ಮಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ, ಆತಂಕ ಸೃಷ್ಟಿಸಿತ್ತು.

‘ನಾನು ಕೆಲ ಜನರಿಗೆ ಪ್ರಶ್ನೆಗಳನ್ನು ಕೇಳಬೇಕಿದೆ’ ಎಂಬ ಹೇಳಿಕೆ ಇದ್ದ ವಿಡಿಯೊವೊಂದನ್ನು ರೋಹಿತ್ ಬಿಡುಗಡೆ ಮಾಡಿದ್ದ.

‘ಆತ್ಮಹತ್ಯೆ ಮಾಡಿಕೊಳ್ಳುವ ಬದಲು ನಾನು ಯೋಜನೆಯೊಂದನ್ನು ರೂಪಿಸಿರುವೆ. ಅದರಂತೆ, ಕೆಲ ಮಕ್ಕಳನ್ನು ಒತ್ತೆಯಾಳಾಗಿ ಇಟ್ಟುಕೊಂಡಿದ್ದೇನೆ. ನನ್ನ ಬೇಡಿಕೆಗಳು ಬಹಳ ಸರಳವಾಗಿದ್ದು, ಕೆಲ ಪ್ರಶ್ನೆಗಳನ್ನೂ ಕೇಳಬೇಕಾಗಿದೆ ಎಂದು ರೋಹಿತ್ ಹೇಳಿರುವುದು ವಿಡಿಯೊದಲ್ಲಿತ್ತು’ ಎಂದು ನಲವಡೆ ಹೇಳಿದರು.

‘ನಾನು ಭಯೋತ್ಪಾದಕ ಅಲ್ಲ. ನಾನು ಹಣಕ್ಕಾಗಿಯೂ ಬೇಡಿಕೆ ಇಡುತ್ತಿಲ್ಲ. ಕೆಲ ಜನರೊಂದಿಗೆ ನಾನು ಮಾತನಾಡಬೇಕು. ಅವರು ನೀಡುವ ಉತ್ತರಕ್ಕೆ ಪ್ರತಿಯಾಗಿ ಮತ್ತೆ ಪ್ರಶ್ನೆಗಳು ಉದ್ಭವಿಸಿದಲ್ಲಿ ಅವುಗಳಿಗೂ ನಾನು ಉತ್ತರ ಬಯಸುತ್ತೇನೆ ಎಂದೂ ಆತ ಹೇಳಿದ್ದಾನೆ’ ಎಂದು ತಿಳಿಸಿದರು.

‘ನಿಮ್ಮ ಕಡೆಯಿಂದ ಏನಾದರೂ ಸಣ್ಣ ತಪ್ಪಾದಲ್ಲಿ, ನಾನು ಇಡೀ ಕಟ್ಟಡಕ್ಕೆ ಬೆಂಕಿ ಇಡುತ್ತೇನೆ. ನಾನು ಸಾಯುತ್ತೇನೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಮಕ್ಕಳಿಗೆ ಅನಗತ್ಯ ಹಾನಿಯಾಗುತ್ತದೆ. ಅವರು ಆತಂಕಗೊಳ್ಳುವುದು ಖಚಿತ. ಈ ರೀತಿ ಏನಾದರೂ ಆದಲ್ಲಿ ನನ್ನನ್ನು ಹೊಣೆ ಮಾಡಬಾರದು ಎಂದು ರೋಹಿತ್ ಹೇಳಿರುವುದು ವಿಡಿಯೊದಲ್ಲಿದೆ’ ಎಂದರು.

‘ಆತನೊಂದಿಗೆ ನಡೆಸಿದ ಮಾತುಕತೆಗಳು ಫಲಪ್ರದವಾಗುವುದಿಲ್ಲ ಎಂಬುದು ಖಚಿತವಾದ ಬಳಿಕ, ಪೊಲೀಸರು ಶೌಚಾಲಯ ಮೂಲಕ ಸ್ಟುಡಿಯೊ ಪ್ರವೇಶಿಸಿದರು’.

‘ಆತನ ಬಳಿ ಏರ್ ಗನ್ ಹಾಗೂ ರಾಸಾಯನಿಕ ಪದಾರ್ಥಗಳಿದ್ದವು. ಏರ್ ಗನ್‌ನಿಂದ ಮಕ್ಕಳಿಗೆ ಅಪಾಯ ಉಂಟು ಮಾಡಲು ಪ್ರಯತ್ನಿಸುತ್ತಿದ್ದ ವೇಳೆ ಪೊಲೀಸರು ಗುಂಡು ಹಾರಿಸಿದರು. ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸಂಜೆ 5.15ಕ್ಕೆ ರೋಹಿತ್ ಮೃತಪಟ್ಟ’ ಎಂದು ನಲವಡೆ ಹೇಳಿದರು.

ಪೊಪೊವ್‌ಗೆ ಆಘಾತ ನೀಡಿದ ಕಿರಣ್ ಜಾರ್ಜ್

ಸಾರ್‌ಬ್ರುಕೆನ್ (ಜರ್ಮನಿ), (ಪಿಟಿಐ): ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಟೋಮಾ ಜೂನಿಯರ್ ಪೊಪೊವ್ ಅವರಿಗೆ ಆಘಾತ ನೀಡಿದ ಭಾರತದ ಕಿರಣ್ ಜಾರ್ಜ್ ಅವರು ಹೈಲೊ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟರು.



ಮಾಜಿ ರಾಷ್ಟ್ರೀಯ ಚಾಂಪಿಯನ್ ಜಾರ್ಜ್ ಥಾಮಸ್ ಅವರ ಪುತ್ರನಾಗಿರುವ ಕಿರಣ್, ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ 18–21, 21–18, 21–19 ರಿಂದ ಎಂಟನೇ ಶ್ರೇಯಾಂಕದ ಫ್ರಾನ್ಸ್‌ನ ಪೊಪೊವ್ ಅವರನ್ನು ಹಿಮ್ಮೆಟ್ಟಿಸಿದರು. 69 ನಿಮಿಷಗಳ ಸೆಣಸಾಟದಲ್ಲಿ ಕಿರಣ್ ಮೊದಲ ಸೆಟ್ ಕಳೆದುಕೊಂಡ ಬಳಿಕ ಚೇತರಿಸಿಕೊಳ್ಳುವಲ್ಲಿ ಯಶಸ್ವಿ ಆದರು.

ಇದಕ್ಕೆ ಮೊದಲು ಲಕ್ಷ್ ಸೇನ್ 21–14, 21–11 ರಿಂದ ಸ್ವದೇಶದ ಎಸ್.ಸುಬ್ರಮಣಿಯನ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು. ಲಕ್ಷ್ಯ ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಲಿನ್ ಕ್ರಿಸ್ಟೋಫರ್‌ಸೆನ್ ಅವರನ್ನು ಎದುರಿಸಲಿದ್ದಾರೆ.

ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ರಕ್ಷಿತಾ ರಮೇಶ್ 19–21, 21–8, 21–13 ರಿಂದ ಸ್ವದೇಶದ ಶ್ರೀಯಾನ್ಶಿ ವಲಿಶೆಟ್ಟಿ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು

ಯೂತ್ ಏಷ್ಯನ್ ಕ್ರೀಡಾಕೂಟ: ಭಾರತದ ಪದಕ 41ಕ್ಕೆ ಏರಿಕೆ

ಬಹರೇನ್ (ಪಿಟಿಐ): ಭಾರತದ ಸ್ಪರ್ಧಿಗಳು ಗುರುವಾರ ಯೂತ್ ಏಷ್ಯನ್ ಕ್ರೀಡಾಕೂಟದಲ್ಲಿ ಅದ್ಭುತ ಪ್ರದರ್ಶನ ಮುಂದುವರಿಸಿದರು. ಬಾಕ್ಸಿಂಗ್‌ನಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಹಾಗೂ ಬೀಚ್ ಕುಸ್ತಿಯಲ್ಲಿ ಮೂರು ಚಿನ್ನ, ಎರಡು ಬೆಳ್ಳಿ ಪದಕ ಗೆದ್ದು ಪಾರಮ್ಯ ಮೆರೆದರು.

12 ಚಿನ್ನ, 15 ಬೆಳ್ಳಿ ಮತ್ತು 14 ಕಂಚು ಸೇರಿದಂತೆ 41 ಪದಕ ಗೆದ್ದ ಭಾರತ ಪದಕಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಚೀನಾ (136 ಪದಕ) ಅಗ್ರಸ್ಥಾನದಲ್ಲಿದೆ.

ಮಹಿಳಾ ಬಾಕ್ಸರ್‌ಗಳಾದ ಖುಷಿ ಚಂದ್, ಅಹಾನಾ ಶರ್ಮಾ ಮತ್ತು ಚಂದ್ರಿಕಾ ಪೂಜಾರಿ ಅವರು ಚಿನ್ನಕ್ಕೆ ಕೊರಳೊಡ್ಡಿದರು. ಪುರುಷರ ವಿಭಾಗದಲ್ಲಿ ಲ್ಯಾಂಚೆನ್ಬಾ ಸಿಂಗ್ ಬೆಳ್ಳಿ ಪದಕವನ್ನು ಜಯಿಸಿದರು.

46 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಖುಷಿ 4–1ರಿಂದ ಚೀನಾದ ಲುವೊ ಜಿನ್ಸಿಯು ವಿರುದ್ಧ ಗೆಲುವು ಸಾಧಿಸಿದರು. ಚಂದ್ರಿಕಾ 54 ಕೆಜಿ ವಿಭಾಗದಲ್ಲಿ 5–0ಯಿಂದ ಉಜ್ಬೇಕಿಸ್ತಾನದ ಮುಹಮ್ಮದೋವಾ ಕುಮ್ರಿನಿಸೊ ಅವರನ್ನು ಮಣಿಸಿದರು. ಅಹಾನಾ 50 ಕೆ.ಜಿ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಆರ್‌ಎಸ್‌ಸಿ ಆಧಾರದಲ್ಲಿ ಮಾ ಜೊಂಗ್ ಹಯಾಂಗ್ ವಿರುದ್ಧ ಜಯ ಗಳಿಸಿದರು.

ಬೀಚ್ ಕುಸ್ತಿಯಲ್ಲಿ ಐದು ಪದಕ: ಬೀಚ್ ಕುಸ್ತಿಯಲ್ಲಿ ಅರ್ಜುನ್ ರುಹಿಲ್ (ಬಾಲಕರ 90 ಕೆಜಿ), ಸಾನಿ ಸುಭಾಷ್ ಫುಲ್ಮಾಲಿ (ಬಾಲಕರ 60 ಕೆಜಿ), ಅಂಜಲಿ (ಬಾಲಕಿಯರ 55 ಕೆಜಿ) ಚಿನ್ನದ ಸಾಧನೆ ಮಾಡಿದರು.

ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿ

ಎಂಟರ ಘಟ್ಟಕ್ಕೆ ತುಷಾರ್, ಸನೀತ್, ರುಜುಲಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ತುಷಾರ್ ಸುವೀರ್, ಸನೀತ್ ದಯಾನಂದ ಹಾಗೂ ರುಜುಲಾ ರಾಮು ಅವರು ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ಕ್ವಾರ್ಟರ್ ಫೈನಲ್ ತಲುಪಿದರು.

ತುಷಾರ್ ಮತ್ತು ಸನೀತ್ ಪುರುಷರ ಸಿಂಗಲ್ಸ್‌ನಲ್ಲಿ, ರುಜುಲಾ ರಾಮು ಮಹಿಳೆಯರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿದರು.

ನಗರದ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಸನೀತ್ 21–16, 21–9ರಿಂದ ಊರ್ಜಿತ್ ಛಾಲಿಯಾ ವಿರುದ್ಧ ಜಯಗಳಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಕರ್ನಾಟಕದ ನೆಯ್ಸಾ ಕಾರ್ಯಪ್ಪ ಎ. ಅನಘಾ ಅರವಿಂದ ಪೈ ಜೋಡಿಯ ಆಟದ ವೈಖರಿ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

12ನೇ ಶ್ರೇಯಾಂಕದ ತುಷಾರ್ 21–16, 21–10 ರಿಂದ ನಿಕೋಲಸ್ ರಾಜ್ ಅವರನ್ನು ಹಿಮ್ಮೆಟ್ಟಿಸಿದರು.

ಅಗ್ರ ಶ್ರೇಯಾಂಕದ ಋತ್ವಿಕ್ ಸಂಜೀವಿ ಸತೀಶ್ ಕುಮಾರ್ 21–13, 21–12ರಲ್ಲಿ ಪ್ರಣಯ್ ಕಟ್ಟಾ ಅವರನ್ನು ಮಣಿಸಿದರು. ಆರ್ಯಮಾನ್ ಟಂಡನ್ ಮೂರು ಗೇಮ್‌ಗಳ ಪಂದ್ಯದಲ್ಲಿ 12–21, 21–15, 21–14ರಿಂದ ನುಮೇರ್ ಶೇಖ್‌ಗೆ ಸೋಲುಣಿಸಿದರು.

ಮಹಿಳೆಯರ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ರುಜುಲಾ ರಾಮು 21–20, 21–19 ರಿಂದ ಆರನೇ ಶ್ರೇಯಾಂಕದ ಅದಿತಾ ರಾವ್ ಅವರನ್ನು ಸೋಲಿಸಿದರು. ಅಗ್ರ ಶ್ರೇಯಾಂಕದ ಇಷಿಕಾ ಜೈಸ್ವಾಲ್ (ಅಮೆರಿಕ) ಗೆಲುವಿನ ಓಟ ಮುಂದುವರಿಸಿದ್ದು, ಡಯಾಂಕ್ ವಾಲ್ದಿಯಾ ಅವರನ್ನು 21–10, 21–15 ರಿಂದ ಮಣಿಸಿದರು. ತನ್ವಿ ಪತ್ರಿ 21–15, 21–15ರಿಂದ ನವ್ಯಾ ಖಂಡೇರಿ ವಿರುದ್ಧ ಗೆದ್ದರು.

ಕರ್ನಾಟಕದ ರಶ್ಮಿ ಗಣೇಶ್–ಸಾನಿಯಾ ಸಿಕಂದರ್, ನೆಯ್ಸಾ ಕಾರ್ಯಪ್ಪ–ಎ.ಅನಘಾ ಅರವಿಂದ ಪೈ, ಅಶ್ವಿನಿ ಭಟ್ –ಶಿಖಾ ಗೌತಮ್ ಜೋಡಿಗಳು ಮಹಿಳೆಯರ ಡಬಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿದವು.

ಪ್ರಶಸ್ತಿಗೆ ಪುಣೇರಿ– ಡೆಲ್ಲಿ ಸೆಣಸಾಟ

ನವದೆಹಲಿ (ಪಿಟಿಐ): ಹಾಲಿ ಆವೃತ್ತಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ದಬಂಗ್ ಡೆಲ್ಲಿ ಮತ್ತು ಪುಣೇರಿ ಪಲ್ಟನ್ ತಂಡಗಳು ಶುಕ್ರವಾರ ಇಲ್ಲಿನ ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿರುವ ಪ್ರೊ ಕಬಡ್ಡಿ ಲೀಗ್‌ನ ಫೈನಲ್‌ನಲ್ಲಿ ಮುಖಾಮುಖಿಯಾಗುತ್ತಿವೆ.

ಲೀಗ್ ಹಂತದಲ್ಲಿ ಮೊದಲೆರಡು ಸ್ಥಾನ ಪಡೆದ ಪುಣೇರಿ ಮತ್ತು ಡೆಲ್ಲಿ ತಂಡಗಳು ಪ್ಲೇಆಫ್ ಹಂತದಲ್ಲೂ ಉತ್ತಮ ಪ್ರದರ್ಶನ ನೀಡಿ ನಿರೀಕ್ಷೆಯಂತೆ ಪ್ರಶಸ್ತಿ ಸುತ್ತು ಪ್ರವೇಶಿಸಿವೆ. ಕಳೆದ 11 ಆವೃತ್ತಿಗಳಲ್ಲಿ ತಲಾ ಒಂದೊಂದು ಬಾರಿ ಚಾಂಪಿಯನ್ ಆಗಿರುವ ಉಭಯ ತಂಡಗಳು, ಇದೀಗ ಎರಡನೇ ಬಾರಿ ಕಿರೀಟ ಮುಡಿಗೇರಿಸಿಕೊಳ್ಳುವ ಛಲದಲ್ಲಿವೆ.

ಟ್ರೋಫಿಯೊಂದಿಗೆ ಡೆಲ್ಲಿ ತಂಡದ ನಾಯಕ ಆಶು ಮಲಿಕ್ ಮತ್ತು ಪುಣೇರಿ ತಂಡದ ನಾಯಕ ಅಸ್ಲಾಂ ಇನಾಮದಾರ್ –ಎಕ್ಸ್ ಚಿತ್ರ

2023ರ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದಿರುವ ಪುಣೇರಿ ಮತ್ತು 2021–22ರ ಚಾಂಪಿಯನ್ ಡೆಲ್ಲಿ ತಂಡಗಳು ಹಾಲಿ ಆವೃತ್ತಿಯಲ್ಲಿ ಮೂರು ಬಾರಿ ಮುಖಾಮುಖಿಯಾಗಿವೆ. ವಿಶೇಷವೆಂದರೆ ಮೂರೂ ಬಾರಿ ನಿಗದಿತ ಅವಧಿಯಲ್ಲಿ ಪಂದ್ಯಗಳು ಟೈ ಆಗಿದ್ದವು. ಗೋಲ್ಡನ್ ರೇಡ್‌ನಲ್ಲಿ ಫಲಿತಾಂಶ ನಿರ್ಧಾರವಾಗಿತ್ತು. ಇದೀಗ ನಾಲ್ಕನೇ ಮುಖಾಮುಖಿಗೆ ವೇದಿಕೆ ಸಜ್ಜಾಗಿದೆ.

ಮೊದಲ ಕ್ವಾಲಿಫೈಯರ್‌ನಲ್ಲಿ ಈ ತಂಡಗಳು ಮುಖಾಮುಖಿಯಾಗಿದ್ದ ವೇಳೆ ನಿಗದಿತ ಅವಧಿಯಲ್ಲಿ 34–34ರಿಂದ ಸಮಬಲವಾಗಿತ್ತು. ಟೈಬ್ರೇಕರ್‌ನಲ್ಲಿ ದಬಂಗ್ ತಂಡವು 6–4ರಿಂದ ಗೆದ್ದು ಫೈನಲ್ ಟಿಕೆಟ್ ಪಡೆದಿತ್ತು. ಎರಡನೇ ಕ್ವಾಲಿಫೈಯರ್‌ನಲ್ಲಿ ಪುಣೇರಿ 50–45 ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿತ್ತು.

ನಾಯಕ ಆಶು ಮಲಿಕ್ ನೇತೃತ್ವದ ದಬಂಗ್ ತಂಡವು ಉತ್ತಮ ಲಯದಲ್ಲಿದೆ. ಹಾಲಿ ಆವೃತ್ತಿಯಲ್ಲಿ 19 ಪಂದ್ಯಗಳಲ್ಲಿ 15 ಜಯ ಸಾಧಿಸಿದೆ. ಮಲಿಕ್ ರೇಡಿಂಗ್‌ನಲ್ಲಿ 13 ಪಂದ್ಯಗಳಿಂದ 150 ಅಂಕ ಗಳಿಸಿ, ತಂಡದ ಪರ ಗರಿಷ್ಠ ಸ್ಕೋರರ್ ಎನಿಸಿದ್ದಾರೆ.

ಅಸ್ಲಾಂ ಇನಾಮದಾರ್ ಸಾರಥ್ಯದ ಪಲ್ಟನ್ ತಂಡವು ಕಳೆದ ನಾಲ್ಕು ಋತುಗಳಲ್ಲಿ ಮೂರನೇ ಸಲ ಫೈನಲ್ ಪ್ರವೇಶಿಸಿದೆ. ಈ ಬಾರಿ 20 ಪಂದ್ಯಗಳಲ್ಲಿ 14 ಅನ್ನು ಗೆದ್ದಿದೆ. ಆದಿತ್ಯ ತುಷಾರ್ ಶಿಂಧೆ 17 ಪಂದ್ಯಗಳಲ್ಲಿ 149 ಅಂಕ ಗಳಿಸಿ, ತಂಡದ ಯಶಸ್ವಿ ರೇಡರ್ ಎನಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

The Printers (Mysore) Pvt. Ltd
Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

ALUMINUM WASTE FOR SALE

Sealed Tenders are invited for the disposal of the following Scrapped Aluminum wastes from our Press at Bangalore, Dharwad, Mangalore, Harihara, Mysore, Gulbarga and Hospet.

Details	Location - wise quantity in Kgs per month						
	Bangalore	Dharwad	Mangalore	Harihara	Mysore	Gulbarga	Hospet
Scrapped Aluminum Sheets	4-5 Tons	2-3 Tons	1-2 Tons	1-2 Tons	2 Tons	1-2 Tons	1-2 Tons

For clarification, contact Procurement Head at babu.v@printersmysore.co.in, venu.tl@printersmysore.co.in, 25880340 /430 Mob: 9900042650. Sealed Tenders/e-mail may be addressed within 7 days from the date of this advertisement.

ಜೆಮಿಮಾ ಸಾಹಸ, ಗೆಲುವಿನ ಮಂದಹಾಸ

ವಿಶ್ವದಾಖಲೆ ಮೊತ್ತ ಬೆನ್ನಟ್ಟಿ ಗೆದ್ದ ಭಾರತ ತಂಡ ಫೈನಲ್‌ಗೆ • ಬಲಿಷ್ಠ ಆಸ್ಟ್ರೇಲಿಯಾಕ್ಕೆ ಆಘಾತ • ಫಲನೀಡದ ಲಿಚ್‌ಫೀಲ್ಡ್ ಶತಕ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ನವಿ ಮುಂಬೈ (ಪಿಟಿಐ): ಫೇವರಿಟ್ ಆಸ್ಟ್ರೇಲಿಯಾ ಒಡ್ಡಿದ್ದ 339 ರನ್‌ಗಳ ದೊಡ್ಡ ಮೊತ್ತವನ್ನು ಸೇರಿಗೆ ಸವ್ವಾಸೇರು ಎನ್ನುವಂತೆ ಬೆನ್ನಟ್ಟಿದ ಭಾರತ ತಂಡದವರು ಐದು ವಿಕೆಟ್‌ಗಳಿಂದ ಗೆದ್ದು ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ತಲುಪಿದರು. ಆಕರ್ಷಕ ಆಟವಾಡಿದ ಜೆಮಿಮಾ ರಾಡ್ರಿಗಸ್ ಅಜೇಯ ಶತಕ (127*, 134ಎಸೆತ, 14x4) ಬಾರಿಸಿ ಆತಿಥೇಯ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ, ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ 49.5 ಓವರುಗಳಲ್ಲಿ 338 ರನ್‌ಗಳ ದೊಡ್ಡ ಮೊತ್ತ ಪೇರಿಸಿತ್ತು. ಆದರೆ, ಅನುಭವಿಗಳಾದ ಜೆಮಿಮಾ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (89, 88ಎ,) ಅವರು ಮೂರನೇ ವಿಕೆಟ್‌ಗೆ ಸೇರಿಸಿದ 167 ರನ್‌ಗಳ ಜೊತೆಯಾಟದ ನೆರವಿನಿಂದ ಭಾರತ ಇನ್ನೂ 9 ಎಸೆತಗಳಿರುವಂತೆ ಜಯಗಳಿಸಿ ಸಂಭ್ರಮಿಸಿತು.

ಇದು ಏಕದಿನ ಕ್ರಿಕೆಟ್‌ನಲ್ಲಿ ದಾಖಲೆ ಚೇಸ್. ಇದರೊಂದಿಗೆ ಭಾರತ ಮೂರನೇ ಬಾರಿ ಫೈನಲ್ ತಲುಪಿತು. ಈ ಹಿಂದೆ 2005 ಮತ್ತು 2017ರಲ್ಲಿ ಪ್ರಶಸ್ತಿ ಸುತ್ತು ತಲುಪಿತ್ತು. ಆತಿಥೇಯ ಭಾರತ ತಂಡವು, ಭಾನುವಾರ ನಡೆಯುವ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಇದರೊಂದಿಗೆ ಹೊಸ ಚಾಂಪಿಯನ್ ತಂಡ ಉದಯವಾಗಲಿದೆ.

ಮಹತ್ವದ ಘಟ್ಟದಲ್ಲಿ ಎದುರಾದ ಸೋಲಿನೊಂದಿಗೆ, ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತಂಡದ ಸತತ 15 ಪಂದ್ಯಗಳ ಗೆಲುವಿನ ಓಟಕ್ಕೆ ತೆರೆಬಿತ್ತು.

ಆರಂಭ ಆಟಗಾರ್ತಿಯರಾದ ಶಫಾಲಿ ವರ್ಮಾ (10) ಮತ್ತು ಸ್ಮೃತಿ ಮಂದಾನ (24) ಅವರು 59 ರನ್‌ಗಳಾಗುವುದರೊಳಗೆ ನಿರ್ಗಮಿಸಿದ್ದರು. ಈ ವೇಳೆ ಜೆಮಿಮಾ ಜೊತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಅವರು ಪಂದ್ಯ ಭಾರತದ ಕೈತಪ್ಪದಂತೆ ನೋಡಿಕೊಂಡರು.

ಒಂದೆಡೆ ಜೆಮಿಮಾ ಇನಿಂಗ್ಸ್‌ಗೆ ಲಂಗರು ಹಾಕಿದರೆ, ದೀಪ್ತಿ ಶರ್ಮಾ (26, 17ಎ), ರಿಚಾ ಘೋಷ್ (24, 16ಎ), ಅಮನ್ಜೋತ್ ಕೌರ್ (ಅಜೇಯ 15, 8ಎ) ಅವರು ಅನುಭವಿ ಆಟಗಾರ್ತಿಯರ ಶ್ರಮ ವ್ಯರ್ಥವಾಗದಂತೆ ನೋಡಿಕೊಂಡರು. ಮಂದಾನ 24 ರನ್ ಗಳಿಸುವ ಹಾದಿಯಲ್ಲಿ ಕ್ಯಾಲೆಂಡರ್ ವರ್ಷವೊಂದರಲ್ಲಿ ಏಕದಿನ ಕ್ರಿಕೆಟ್‌ನಲ್ಲಿ 1000 ರನ್ ಪೂರೈಸಿದ ವಿಶ್ವದ ಮೊದಲ ಆಟಗಾರ್ತಿ ಎನಿಸಿದರು.

ಲಿಚ್‌ಫೀಲ್ಡ್ ಶತಕ: ಇದಕ್ಕೆ ಮೊದಲು ಆರಂಭ ಆಟಗಾರ್ತಿ ಫೋಬಿ ಲಿಚ್‌ಫೀಲ್ಡ್ ಅವರ ಶತಕದ ಜೊತೆಗೆ ಎಲಿಸ್ ಪೆರಿ (77, 88ಎ) ಮತ್ತು ಆಲ್‌ರೌಂಡರ್ ಆ್ಯಶ್ಲೆ ಗಾರ್ಡನರ್ (63) ಅವರ ಅರ್ಧ ಶತಕಗಳ ಬಲದಿಂದ ಆಸ್ಟ್ರೇಲಿಯಾ ತಂಡ ಸವಾಲಿನ ಮೊತ್ತ ಗಳಿಸಿತ್ತು. 22 ವರ್ಷ ವಯಸ್ಸಿನ ಲಿಚ್‌ಫೀಲ್ಡ್ ಅವರಿಗೆ ಏಕದಿನ ಪಂದ್ಯಗಳಲ್ಲಿ ಮೂರನೇ ಶತಕ. ಅವರು ಎರಡನೇ ವಿಕೆಟ್‌ಗೆ ಎಲಿಸ್ ಪೆರಿ ಜೊತೆಗೆ 155 ರನ್ ಸೇರಿಸಿ ದೊಡ್ಡ ಮೊತ್ತಕ್ಕೆ ಅಡಿಪಾಯ ಹಾಕಿಕೊಟ್ಟರು.

ಕೊನೆಯ ಹಂತದಲ್ಲಿ ಎಡಗೈ ಸ್ಪಿನ್ನರ್ ಶ್ರೀಚರಣಿ ಅವರ ಬಿಗುವಾದ ಮೂರನೇ ಸ್ಪೆಲ್ (3-0-9-2) ನಿಂದಾಗಿ ಆಸ್ಟ್ರೇಲಿಯಾ ಅಬ್ಬರದ ಆಟಕ್ಕೆ ಕೊಂಚ ಕಡಿವಾಣ ಬಿತ್ತು. ಉತ್ತಮ ಲಯದಲ್ಲಿರುವ ಬೆತ್ ಮೂನಿ (24) ಮತ್ತು ಅನ್ನಾಬೆಲ್ ಸದರ್‌ಲ್ಯಾಂಡ್ (3) ವಿಕೆಟ್‌ಗಳನ್ನು ಚರಣಿ ಕಬಳಿಸಿದರು. ಇದರಿಂದಾಗಿ ಒಂದು ಹಂತದಲ್ಲಿ 2 ವಿಕೆಟ್‌ಗೆ 220 ರನ್ ಗಳಿಸಿದ್ದ ಆಸ್ಟ್ರೇಲಿಯಾ 265 ರನ್‌ಗಳಾಗುವಷ್ಟರಲ್ಲಿ 6 ವಿಕೆಟ್‌ಗಳನ್ನು ಕಳೆದುಕೊಂಡು ವೇಗ ಕಳೆದುಕೊಂಡಿತು. ಆ್ಯಶ್ಲೆ ಗಾರ್ಡನರ್ 45 ಎಸೆತಗಳಲ್ಲಿ 63 ರನ್ ಬಾರಿಸಿದ್ದರಿಂದ ತಂಡ 300ರ ಗಡಿಯನ್ನು ದಾಟಿತು.

ಭಾರತ ತಂಡದ ಗೆಲುವಿನ ರೂವಾರಿ ಜೆಮಿಮಾ ರಾಡ್ರಿಗಸ್ ಅವರು ಸಹ ಆಟಗಾರ್ತಿಯರೊಂದಿಗೆ ಭಾವುಕರಾದ ಕ್ಷಣ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ: 338 (49.5 ಓವರುಗಳಲ್ಲಿ)
ಅಲಿಸಾ ಬಿ ಕ್ರಾಂತಿ ಗೌಡ್ 5 (15ಎ)
ಲಿಚ್‌ಫೀಲ್ಡ್ ಬಿ ಅಮನ್ಜೋತ್ 119 (93ಎ, 4x17, 6x3)
ಎಲಿಸ್ ಪೆರಿ ಬಿ ರಾಧಾ 77 (88ಎ, 4x6, 6x2)
ಬೆತ್ ಮೂನಿ ಸಿ ಜೆಮಿಮಾ ಬಿ ಶ್ರೀಚರಣಿ 24 (22ಎ, 4x3)
ಅನ್ನಾಬೆಲ್ ಸಿ ಮತ್ತು ಬಿ ಶ್ರೀಚರಣಿ 3 (6ಎ)
ಆ್ಯಶ್ಲೆ ಗಾರ್ಡನರ್ ರನೌಟ್ (ಗೌಡ್/ ಘೋಷ್) 63 (45ಎ, 4x4, 6x4)
ತಹ್ಲಿಯಾ ರನೌಟ್ (ಜೆಮಿಮಾ/ ಘೋಷ್) 12 (7ಎ, 4x2)
ಕಿಮ್ ಗಾರ್ತ್ ರನೌಟ್ (ಅಮನ್ಜೋತ್/ ಘೋಷ್) 17 (17ಎ)
ಅಲನಾ ಸಿ ಘೋಷ್ ಬಿ ದೀಪ್ತಿ 4 (4ಎ, 4x1)
ಸೋಫಿ ಬಿ ದೀಪ್ತಿ 0 (1ಎ)
ಮೇಘನ್ ಔಟಾಗದೇ 1 (1ಎ)
ಇತರೆ: 13 (ಲೆಗ್‌ಬೈ 2, ವೈಡ್ 11)
ವಿಕೆಟ್ ಪತನ: 1-25 (ಅಲಿಸಾ ಹೀಲಿ, 5.1), 2-180 (ಫೋಬಿ ಲಿಚ್‌ಫೀಲ್ಡ್, 27.2),3-220 (ಬೆತ್ ಮೂನಿ, 33.6), 4-228 (ಅನ್ನಾಬೆಲ್ ಸದರ್‌ಲ್ಯಾಂಡ್, 35.5), 5-243 (ಎಲಿಸ್ ಪೆರಿ, 39.2), 6-265 (ತಹ್ಲಿಯಾ ಮೆಕ್‌ಗ್ರಾ, 41.4), 7-331 (ಆ್ಯಶ್ಲೆ ಗಾರ್ಡನರ್, 48.3), 8-336 (ಅಲನಾ ಕಿಂಗ್, 49.2), 9-336 (ಸೋಫಿ ಮೊಲಿನೆಕ್ಸ್, 49.4), 10-338 (ಕಿಮ್ ಗಾರ್ತ್, 49.5).
ಬೌಲಿಂಗ್: ರೇಣುಕಾ ಸಿಂಗ್ 8-0-39-0; ಕ್ರಾಂತಿ ಗೌಡ್ 6-0-58-1; ಶ್ರೀಚರಣಿ 10-0-49-2; ದೀಪ್ತಿ ಶರ್ಮಾ 9.5-0-73-2; ಅಮನ್ಜೋತ್ ಕೌರ್ 8-0-51-1; ರಾಧಾ ಯಾದವ್ 8-0-66-1

ಭಾರತ 5 ವಿಕೆಟ್‌ಗೆ 341 (48.3 ಓವರ್‌ಗಳಲ್ಲಿ)
ಶಫಾಲಿ ಎಲ್‌ಬಿಡಬ್ಲ್ಯು ಬಿ ಗಾರ್ತ್ 10 (5ಎ, 4x2)
ಮಂದಾನ ಸಿ ಹೀಲಿ ಬಿ ಗಾರ್ತ್ 24 (24ಎ, 4x2, 6x1)
ಜೆಮಿಮಾ ರಾಡ್ರಿಗಸ್ ಔಟಾಗದೇ 127 (134ಎ, 4x14)
ಕೌರ್ ಸಿ ಗಾರ್ಡನರ್ ಬಿ ಸದರ್‌ಲ್ಯಾಂಡ್ 89 (88ಎ, 4x10, 6x2)
ದೀಪ್ತಿ ರನ್‌ಔಟ್ (ಗಾರ್ತ್/ಹೀಲಿ) 24 (17ಎ, 4x3)
ರಿಚಾ ಸಿ ಗಾರ್ತ್ ಬಿ ಸದರ್‌ಲ್ಯಾಂಡ್ 26 (16ಎ, 4x2, 6x2)
ಅಮನ್ಜೋತ್ ಕೌರ್ ಔಟಾಗದೇ 15 (8ಎ, 4x2)
ಇತರೆ: 26 (ಬೈ 4, ಲೆಗ್‌ಬೈ 6, ನೋಬಾಲ್ 1, ವೈಡ್ 15)
ವಿಕೆಟ್ ಪತನ: 1-13 (ಶಫಾಲಿ ವರ್ಮಾ, 1.3), 2-59 (ಸ್ಮೃತಿ ಮಂದಾನ, 9.2), 3-226 (ಹರ್ಮನ್‌ಪ್ರೀತ್ ಕೌರ್, 35.2), 4-264 (ದೀಪ್ತಿ ಶರ್ಮಾ, 40.5), 5-310 (ರಿಚಾ ಘೋಷ್, 45.6)
ಬೌಲಿಂಗ್: ಮೇಗನ್ ಶುಟ್ 6-0-40-0, ಕಿಮ್ ಗಾರ್ತ್ 7-0-46-2, ಆ್ಯಶ್ಲೆ ಗಾರ್ಡನರ್ 8-0-55-0, ಸೋಫಿ ಮೊಲಿನೆಕ್ಸ್ 6.3-0-44-0, ಅನ್ನಾಬೆಲ್ ಸದರ್‌ಲ್ಯಾಂಡ್ 10-0-69-2, ಅಲನಾ ಕಿಂಗ್ 9-0-58-0, ತಹ್ಲಿಯಾ ಮೆಕ್‌ಗ್ರಾ 2-0-19-0
ಪಂದ್ಯದ ಆಟಗಾರ್ತಿ: ಜೆಮಿಮಾ ರಾಡ್ರಿಗಸ್

ಫಲಿತಾಂಶ: ಭಾರತಕ್ಕೆ ಐದು ವಿಕೆಟ್‌ಗಳ ಗೆಲುವು, ಫೈನಲ್ ಪ್ರವೇಶ

ಚೆಂಡು ಬಡಿದು ಯುವ ಕ್ರಿಕೆಟಿಗ ಸಾವು

ಮೆಲ್ಬರ್ನ್ (ಎಎಫ್‌ಪಿ): ಆಸ್ಟ್ರೇಲಿಯಾದ 17 ವರ್ಷ ವಯಸ್ಸಿನ ಆಟಗಾರ ಬೆನ್ ಆಸ್ಟಿನ್ ಅವರು ಬ್ಯಾಟಿಂಗ್ ಅಭ್ಯಾಸದ ವೇಳೆ ಚೆಂಡು ಬಡಿದ ಪರಿಣಾಮ ಸಾವಿಗೀಡಾಗಿದ್ದಾರೆ.

ಮಂಗಳವಾರ ಟಿ20 ಪಂದ್ಯಕ್ಕೆ ಮುನ್ನ ನೆಟ್ಸ್‌ನಲ್ಲಿ ಚೆಂಡೆಸುವ ಯಂತ್ರದ ಎದುರು ಅಭ್ಯಾಸ ನಡೆಸುವ ವೇಳೆ ಎಸೆತವೊಂದು ಅವರ ಕುತ್ತಿಗೆಗೆ ಬಡಿದಿದೆ. ಅವರನ್ನು ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು. ಜೀವನ್ಮರಣ ಹೋರಾಟದಲ್ಲಿದ್ದ ಅವರು ಗುರುವಾರ ಮೃತಪಟ್ಟಿದ್ದಾರೆ.

ಫೆರ್ನ್‌ಟ್ರೀ ಗಲಿ ತಂಡ ಪ್ರತಿನಿಧಿಸುತ್ತಿದ್ದ ಅವರು ಹೆಲ್ಮೆಟ್ ಧರಿಸಿದ್ದರು. ಆದರೆ ಕುತ್ತಿಗೆಗೆ ರಕ್ಷಣೆ ನೀಡುವ 'ಸ್ಟೆಮ್ ಗಾರ್ಡ್' ಧರಿಸಿರಲಿಲ್ಲ ಎಂದು ಎಬಿಸಿ ವರದಿ ಮಾಡಿದೆ.

ಈ ಘಟನೆಯು 2014ರಲ್ಲಿ ಆಸ್ಟ್ರೇಲಿಯಾ ತಂಡದ ಆಟಗಾರ ಫಿಲಿಪ್ ಹ್ಯೂಸ್ (25) ಅವರು ಚೆಂಡುಬಡಿದು ಸಾವಿಗೀಡಾದ ದುರಂತವನ್ನು ನೆನಪಿಸಿತು. ನ್ಯೂಸೌತ್ ವೇಲ್ಸ್ ವಿರುದ್ಧ ಪ್ರಥಮ ದರ್ಜೆ ಪಂದ್ಯದಲ್ಲಿ ದಕ್ಷಿಣ ಆಸ್ಟ್ರೇಲಿಯಾ ಪರ ಬ್ಯಾಟಿಂಗ್ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಕಿವಿಯ ಭಾಗದಲ್ಲಿ ಚೆಂಡು ಅಪ್ಪಳಿಸಿತ್ತು. 'ಬೆನ್ ನಿಧನದಿಂದ ನಾವು ಆಘಾತಗೊಂಡಿದ್ದೇವೆ. ಅವರ ನಿಧನ ಇಡೀ ಕ್ರಿಕೆಟ್ ಸಮುದಾಯಕ್ಕೆ ಶೋಕದಲ್ಲಿ ಮುಳುಗಿಸಿದೆ' ಎಂದು ಫೆರ್ನ್‌ಟ್ರೀ ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ.

ಸಂತಾಪ: ಗುರುವಾರ ಮಹಿಳಾ ಏಕದಿನ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ಆಟಗಾರ್ತಿಯರು ತೋಳಿಗೆ ಕಪ್ಪುಪಟ್ಟಿ ಧರಿಸಿ ಅವರಿಗೆ ಸಂತಾಪ ಸೂಚಿಸಿದರು.

ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್: ಶಾ– ಕ್ರಿಸ್ಟಿ ಚರ್ಚೆ

ನವದೆಹಲಿ (ಪಿಟಿಐ): 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಸ್ಪರ್ಧೆ ಮರು ಸೇರ್ಪಡೆಯಾದ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಜಯ್ ಶಾ ಅವರು ಅಂತರ ರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ ಅವರನ್ನು ಲೂಸಾನ್‌ನಲ್ಲಿ ಭೇಟಿಯಾಗಿ ಚರ್ಚಿಸಿದರು.

1900ರ ಪ್ಯಾರಿಸ್ ಕೂಟದಲ್ಲಿ ಮೊದಲ ಬಾರಿ ಕ್ರಿಕೆಟ್ ಆಡಿಸಿ, ನಂತರ ಕೈಬಿಡಲಾಗಿತ್ತು. 128 ವರ್ಷಗಳ ನಂತರ ಕ್ರಿಕೆಟ್ ಮತ್ತೆ ಸೇರ್ಪಡೆಯಾಗಿದೆ. ಈ ವರ್ಷದ ಆರಂಭದಲ್ಲಿ ಶಾ ಅವರು ಬ್ರಿಸ್ಬೇನ್‌ನಲ್ಲಿ ಕೊವೆಂಟ್ರಿ ಅವರನ್ನು ಭೇಟಿಯಾಗಿದ್ದರು.

'ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರಳುವ ಕುರಿತು ಐಒಸಿ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ ಅವರನ್ನು ಭೇಟಿಯಾಗಿ ಚರ್ಚಿಸಲಾಯಿತು. ಕ್ರಿಕೆಟ್ ಈತನಕ ಸಾಧಿಸಿದ ಪ್ರಗತಿ ಮತ್ತು ಒಲಿಂಪಿಕ್ ಆಂದೋಲನದಲ್ಲಿ ಕ್ರಿಕೆಟ್ ವಹಿಸಬಹುದಾದ ಪಾತ್ರದ ಕುರಿತು ಸಮಾಲೋಚನೆ ನಡೆಸಿದೆವು' ಎಂದು ಶಾ ಎಕ್ಸ್‌ನಲ್ಲಿ ಬರೆದಿದ್ದಾರೆ.

ಐಸಿಸಿ ಅಧ್ಯಕ್ಷ ಜಯ್ ಶಾ ಮತ್ತು ಐಒಸಿ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ

ತನುಷ್ ಕೋಟ್ಯಾನ್ ಸ್ಪಿನ್ ಮೋಡಿ

ದಕ್ಷಿಣ ಆಫ್ರಿಕಾ ಎ ತಂಡದ ಜುಬೇರ್, ಹರ್ಮನ್ ಸಹೋದರರ ಚೆಂದದ ಆಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಸ್ಪಿನ್ ಬೌಲರ್‌ಗಳಿಗೆ ಅಷ್ಟೇನೂ ನೆರವು ಸಿಗದ ಅಂಗಣದಲ್ಲಿಯೂ ಆಫ್‌ಸ್ಪಿನ್ನರ್ ತನುಷ್ ಕೋಟ್ಯಾನ್ ಮೋಡಿ ಮಾಡಿದರು. ದಕ್ಷಿಣ ಆಫ್ರಿಕಾ ಎ ತಂಡವು ಗುರುವಾರ ಆರಂಭವಾದ 'ಟೆಸ್ಟ್' ಪಂದ್ಯದಲ್ಲಿ ಬೃಹತ್ ಮೊತ್ತ ಗಳಿಸುವುದನ್ನೂ ತಡೆದರು.

ನಗರದ ಹೊರವಲಯದಲ್ಲಿರುವ ಬಿಸಿಸಿಐ–ಸಿಒಇ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಭಾರತ ಎ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ದಿನದಾಟದ ಒಂದು ಹಂತದಲ್ಲಿ ಬ್ಯಾಟರ್‌ಗಳು ಪೂರ್ಣವಾಗಿ ಹಿಡಿತ ಸಾಧಿಸುವಂತೆ ಕಂಡಿದ್ದರು. ಆದರೆ ತನುಷ್ (83ಕ್ಕೆ4) ತಮ್ಮ ಕೈಚಳಕದ ಮೂಲಕ ರನ್ ಗಳಿಕೆಗೆ ಕಡಿವಾಣ ಹಾಕಿದರು. ಅದರಿಂದಾಗಿ ಪ್ರವಾಸಿ ತಂಡವು ದಿನದಾಟದ ಮುಕ್ತಾಯಕ್ಕೆ 85.2 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 299 ರನ್ ಗಳಿಸಿತು.

ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿಯೇ ಲೆಸೆಗೊ ಸೆನೆಕ್ವಾನೆ ವಿಕೆಟ್ ಪಡೆಯುವಲ್ಲಿ ಅನ್ಷುಲ್ ಕಂಬೋಜ್ ಯಶಸ್ವಿಯಾದರು. ಆದರೆ ಜೋರ್ಡಾನ್ ಹರ್ಮನ್ (71; 140ಎ, 4X8) ಮತ್ತು ಜುಬೇರ್ ಹಮ್ಜಾ (66; 109ಎ, 4X9, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿದರು. ಪಿಚ್ ಕೂಡ ಬ್ಯಾಟಿಂಗ್ ಸ್ನೇಹಿಯಾಗಿತ್ತು. ಇದರಿಂದಾಗಿ ಪಂತ್ ಫೀಲ್ಡಿಂಗ್ ನಿರ್ಧಾರ ತಪ್ಪಾಯಿತೇನೋ ಎಂಬ ಸಂಶಯ ಕೂಡ ಸುಳಿದಿತ್ತು. ಆದರೂ ಎದೆಗುಂದದ ರಿಷಭ್ ಬೌಲರ್‌ಗಳ ನಿಯೋಜನೆ ಮತ್ತು ಬದಲಾವಣೆಯಲ್ಲಿ ಚಾಣಾಕ್ಷತೆ ಮೆರೆದರು. ಇದರಿಂದಾಗಿ ಊಟದ ವಿರಾಮದ ನಂತರ ಫಲ ಸಿಕ್ಕಿತು.

ನಾಲ್ಕು ವಿಕೆಟ್ ಪಡೆದ ಭಾರತ ಎ ತಂಡದ ಸ್ಪಿನ್ನರ್ ತನುಷ್ ಕೋಟ್ಯಾನ್ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಗುರ್ನೂರ್ ಬ್ರಾರ್ ಹಾಕಿದ ಓವರ್‌ನಲ್ಲಿ ಜುಬೇರ್ ಅವರ ಕ್ಯಾಚ್ ಪಡೆದು ವಿಕೆಟ್‌ಕೀಪರ್ ರಿಷಭ್ ಸಂಭ್ರಮಿಸಿದರು. ಇದರ ನಂತರ ಮುಂಬೈ ಹುಡುಗ ತನುಷ್ ಬೇಟೆ ಆರಂಭವಾಯಿತು. ತಮ್ಮ ಎರಡನೇ ಸ್ಪೆಲ್‌ನಲ್ಲಿ ಜೋರ್ಡನ್ ಹರ್ಮನ್ ಮತ್ತು ರುಬಿನ್ ಹರ್ಮನ್ (54; 87ಎ) ಸಹೋದರರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಜೋರ್ಡನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದ ತನುಷ್ ಅವರು, ರುಬಿನ್ ಅವರನ್ನು ಬೌಲ್ಡ್ ಮಾಡಿದರು.

ಪ್ರವಾಸಿ ಬಳಗದ ನಾಯಕ ಮಾರ್ಕಸ್ ಎಕರ್‌ಮನ್ (18 ರನ್) ಅವರಿಗೂ ಪೆವಿಲಿಯನ್ ದಾರಿ ತೋರಿಸುವಲ್ಲಿ ತನುಷ್ ಯಶಸ್ವಿಯಾದರು. ದಿನದ ಕೊನೆಯ ಅವಧಿಯಲ್ಲಿ ಪ್ರೆನೆಲನ್ ಸುಬರೇಯನ್ ಅವರ ವಿಕೆಟ್ ಕೂಡ ಉರುಳಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ ಎ: 85.2 ಓವರ್‌ಗಳಲ್ಲಿ 9ಕ್ಕೆ299 (ಜೋರ್ಡಾನ್ ಹರ್ಮನ್ 71, ಝುಬೇರ್ ಹಂಜಾ 66, ರುಬಿನ್ ಹರ್ಮನ್ 54, ಟಿಯಾನ್ ವ್ಯಾನ್ ವಿವುರ್ನ್ 46, ಮಾನವ್ ಸುತಾರ್ 62ಕ್ಕೆ2, ತನುಷ್ ಕೋಟ್ಯಾನ್ 83ಕ್ಕೆ4) ವಿರುದ್ಧ ಭಾರತ ಎ.

ರಿಷಭ್ ಲವಲವಿಕೆ

ಸುಮಾರು ಮೂರು ತಿಂಗಳುಗಳ ನಂತರ ಕ್ರಿಕೆಟ್ ಅಂಗಳಕ್ಕೆ ಮರಳಿರುವ ರಿಷಭ್ ಪಂತ್ ಫಿಟ್‌ನೆಸ್ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ದಕ್ಷಿಣ ಆಫ್ರಿಕಾ ಎ ತಂಡದ ಎದುರಿನ ಪಂದ್ಯದಲ್ಲಿ ಭಾರತ ಎ ತಂಡಕ್ಕೆ ನಾಯಕತ್ವ ವಹಿಸಿದ್ದಾರೆ.

28 ವರ್ಷದ ಪಂತ್ ವಿಕೆಟ್‌ಕೀಪಿಂಗ್ ಮಾಡುವಾಗ ಚಟಾಕಿ ಹಾರಿಸುವ ಪ್ರವೃತ್ತಿಯನ್ನು ಇಲ್ಲಿಯೂ ಮುಂದುವರಿಸಿದ್ದಾರೆ. ಚುರುಕಾಗಿ ಡೈವ್ ಮತ್ತು ಕ್ಯಾಚಿಂಗ್ ಮಾಡುವಲ್ಲೂ ಯಶಸ್ವಿಯಾದರು.

ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವಾಗ ಚೆಂಡು ಅವರ ಪಾದಕ್ಕೆ ಅಪ್ಪಳಿಸಿ ಗಾಯವಾಗಿತ್ತು.

ಆಸ್ಟ್ರೇಲಿಯಾ ವಿರುದ್ಧ ಎರಡನೇ ಟಿ20 ಕ್ರಿಕೆಟ್ ಪಂದ್ಯ ಇಂದು

ಆತ್ಮವಿಶ್ವಾಸದಲ್ಲಿ ಸೂರ್ಯಕುಮಾರ್ ಪಡೆ

ಮೆಲ್ಬರ್ನ್ (ಪಿಟಿಐ): ನಾಯಕ ಸೂರ್ಯಕುಮಾರ್ ಯಾದವ್ ಅವರು ಲಯಕ್ಕೆ ಮರಳಿರುವುದರಿಂದ ಭಾರತ ತಂಡ ಶುಕ್ರವಾರ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಹೆಚ್ಚಿನ ವಿಶ್ವಾಸದೊಡನೆ ಎದುರಿಸಲಿದೆ.

ಅಭಿಷೇಕ್ ಶರ್ಮಾ, ತಿಲಕ್ ವರ್ಮಾ ಮತ್ತು ಶಿವಂ ದುಬೆ ಅಂಥ ಪವರ್‌ಹಿಟರ್ ಗಳ ಮೂಲಕ ಭಾರತದ ಯುವ ಪಡೆ ಇತ್ತೀಚಿನ ವರ್ಷಗಳಲ್ಲಿ ಟಿ20 ಕ್ರಿಕೆಟ್‌ನ ವ್ಯಾಖ್ಯಾನ ಬದಲಾಯಿಸಿದೆ.

ಕೆನ್‌ಬೆರಾದಲ್ಲಿ ನಡೆದ ಐದು ಪಂದ್ಯಗಳ ಸರಣಿಯ ಮೊದಲ ಪಂದ್ಯ ಮಳೆಯ ಪಾಲಾಗಿತ್ತು. ಆದರೆ ಮಳೆಗಿಂತ ಮೊದಲು 'ಬೆಳಗಿದ' ಸೂರ್ಯಕುಮಾರ್ (ಅಜೇಯ 39, 24ಎ) ಸತತ ವೈಫಲ್ಯಗಳಿಂದ ಹೊರಬರುವ ಸಂಕೇತ ರವಾನಿಸಿದ್ದಾರೆ. ಜೋಶ್ ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಅವರು ಎತ್ತಿದ ಸಿಕ್ಸರ್ ನೆನಪಿನಲ್ಲಿ ಉಳಿಯುವಂಥದ್ದು. ಭಾರತ ಕೇವಲ 9.4 ಓವರುಗಳಲ್ಲಿ 97 ರನ್ ಬಾಚಿತ್ತು. ನಾಯಕನಿಗೆ, ಆರಂಭ ಆಟಗಾರ ಶುಭಮನ್ ಗಿಲ್ (ಅಜೇಯ 37, 20ಎ) ಸಮರ್ಥ ಬೆಂಬಲ ನೀಡಿದ್ದರು.

ಶುಕ್ರವಾರದ ಪಂದ್ಯಕ್ಕೂ ಮಳೆ ಯಾಗುವ ಮುನ್ಸೂಚನೆಯಿಂದೆ. ಆದರೆ ಮೊದಲ ಪಂದ್ಯದಲ್ಲಿ ಆಡಿದ ಆಟದಿಂದ ಭಾರತ ತಂಡ ಹೆಚ್ಚಿನ ಉಮೇದಿನಲ್ಲಿದೆ.

ಸೂರ್ಯ ಅವರು ಆಡಿದ ರೀತಿ ತಂಡದಲ್ಲಿ ಸಂತಸ ಮೂಡಿಸಿದೆ. 'ಹೈ ರಿಸ್ಕ್, ಹೈ ರಿವಾರ್ಡ್' ಸಿದ್ಧಾಂತದಲ್ಲಿ ನಂಬಿಕೆಯಿಟ್ಟಿರುವ ಕೋಚ್ ಗೌತಮ್ ಗಂಭೀರ್ ಅವರು ತಮ್ಮ ತಂಡ ಪ್ರತಿಯೊಂದು ಪಂದ್ಯದಲ್ಲಿ 250–260ಕ್ಕಿಂತ ಹೆಚ್ಚು ಮೊತ್ತ ಗಳಿಸಬೇಕೆಂದು ಬಯಸುವವರು. ಮುಂದಿನ ವರ್ಷದ ಫೆಬ್ರುವರಿ–ಮಾರ್ಚ್‌ನಲ್ಲಿ ನಿಗದಿಯಾಗಿರುವ ಟಿ20 ವಿಶ್ವಕಪ್‌ಗೆ ತಂಡ ಸಜ್ಜುಗೊಳಿಸುವ ಗುರಿಯಲ್ಲಿ ಅವರು ಇದ್ದಾರೆ.

ಮಳೆಯ ಪರಿಣಾಮ ಭಾರತಕ್ಕೆ ಬೌಲಿಂಗ್ ಅವಕಾಶ ದೊರೆಯಲಿಲ್ಲ. ಆದರೆ ಜಸ್‌ಪ್ರೀತ್ ಬೂಮ್ರಾ ಅವರ ಗುಣಮಟ್ಟದ ವೇಗದ ಬೌಲಿಂಗ್ ಜೊತೆಗೆ, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಅವರ ಸ್ಪಿನ್ ವೈವಿಧ್ಯ ಎದುರಾಳಿಗಳಿಗೆ ಸವಾಲಾಗಬಲ್ಲದು. ಬೀಸಾಟವಾಡುವ ಮಿಚೆಲ್ ಮಾರ್ಷ್ ಮತ್ತು ಟ್ರಾವಿಸ್ ಹೆಡ್ ಅವರನ್ನು ನಿಯಂತ್ರಿಸುವ ಸವಾಲೂ ತಂಡದ ಮುಂದಿದೆ.

ಭಾರತ ತಂಡದ ಕೋಚ್ ಗೌತಮ್ ಗಂಭೀರ್ ಮತ್ತು ನಾಯಕ ಸೂರ್ಯಕುಮಾರ್ ಯಾದವ್

ಚೇತರಿಸುತ್ತಿದ್ದೇನೆ: ಶ್ರೇಯಸ್ ಅಯ್ಯರ್

ಸಿಡ್ನಿ (ಪಿಟಿಐ): ದಿನ ಕಳೆದಂತೆ ತಮ್ಮ ಆರೋಗ್ಯ ಸುಧಾರಣೆ ಕಾಣುತ್ತಿದೆ ಎಂದು ಭಾರತ ತಂಡದ ಪ್ರಮುಖ ಬ್ಯಾಟರ್ ಶ್ರೇಯಸ್ ಅಯ್ಯರ್ ಹೇಳಿದ್ದಾರೆ.

ಹೋದ ಶನಿವಾರ ನಡೆದ ಮೂರನೇ ಏಕದಿನ ಪಂದ್ಯದ ವೇಳೆ, ಅಲೆಕ್ಸ್ ಕ್ಯಾರಿ ಅವರ ಕ್ಯಾಚ್ ಪಡೆಯುವಾಗ ಅಯ್ಯರ್ ಅವರ ಪಕ್ಕೆಲುಬಿನ ಭಾಗ ನೆಲಕ್ಕೆ ಉಜ್ಜಿತ್ತು. ಗುಲ್ಮಕ್ಕೂ ಗಾಯವಾಗಿತ್ತು.

'ನಾನು ಚೇತರಿಕೆಯ ಹಾದಿಯಲ್ಲಿದ್ದೇನೆ. ದಿನ ಕಳೆದಂತೆ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ' ಎಂದು ಗಾಯಾಳಾದ ನಂತರ ಅವರು ಮೊದಲ ಬಾರಿ 'ಎಕ್ಸ್' ಮತ್ತು ಇನ್‌ಸ್ಟಾಗ್ರಾಮ್‌ನಲ್ಲಿ ಸಂದೇಶ ಹಾಕಿದ್ದಾರೆ.

'ನನಗೆ ಸಿಗುತ್ತಿರುವ ಎಲ್ಲ ರೀತಿಯ ಹಾರೈಕೆ ಮತ್ತು ಬೆಂಬಲಗಳಿಂದ ವಿನೀತನಾಗಿದ್ದೇನೆ. ನಿಮ್ಮ ಮನಸ್ಸಿನಲ್ಲಿ ನೀಡಿರುವ ಸ್ಥಾನಕ್ಕೆ ಕೃತಜ್ಞತೆಗಳು' ಎಂದೂ ಬರೆದಿದ್ದಾರೆ.

ಅಭಿಷೇಕ್ ನಾಯರ್ ಕೆಕೆಆರ್ ಹೆಡ್ ಕೋಚ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಸಹಾಯಕ ಕೋಚ್ ಅಭಿಷೇಕ್ ನಾಯರ್ ಅವರನ್ನು ನಿರೀಕ್ಷೆಯಂತೆ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಹೆಡ್ ಕೋಚ್ ಆಗಿ ನೇಮಕ ಮಾಡಿದೆ.

ಮೂರು ಋತುಗಳ ಕಾಲ ಹೆಡ್ ಕೋಚ್ ಆಗಿದ್ದ ಚಂದ್ರಕಾಂತ್ ಪಂಡಿತ್ ಅವರ ಸ್ಥಾನಕ್ಕೆ ನಾಯರ್ ನೇಮಕಗೊಂಡಿದ್ದಾರೆ.

2018ರಿಂದ ನಾಯರ್ ಅವರು ಕೆಕೆಆರ್ ಜೊತೆ ತರಬೇತಿ ಸಿಬ್ಬಂದಿಯಾಗಿ ಗುರುತಿಸಿಕೊಂಡಿದ್ದರು. ರಾಷ್ಟ್ರೀಯ ತಂಡದ ಹೆಡ್ ಕೋಚ್ ಗೌತಮ್ ಗಂಭೀರ್ ಜೊತೆ 9 ತಿಂಗಳ ಕಾಲ ಸಹಾಯಕ ತರಬೇತುದಾರರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಗೆದ್ದ ನಂತರ ಅವರನ್ನು ತಂಡದಿಂದ ತೆಗೆದುಹಾಕಲಾಗಿತ್ತು.